ಶನಿವಾರ, ಜೂನ್ 25, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಟ್ರೇಲರ್ ಬಿಡುಗಡೆ
ಮುಂಬೈನಲ್ಲಿ ಶುಕ್ರವಾರ ‘ಶಮ್‌ಶೇರಾ’ ಹಿಂದಿ ಸಿನಿಮಾದ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ವಾಣಿ ಕಪೂರ್ ಭಾಗವಹಿಸಿದ್ದರು





ವಸತಿ ಸೌಲಭ್ಯ ಕಲ್ಪಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಲೈಂಗಿಕ ಕಾರ್ಯಕರ್ತೆಯರು ಶುಕ್ರವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಕಗ್ಗಲೀಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಬೆಂಗಳೂರು: ಯಶವಂತಪುರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಕಗ್ಗಲೀಪುರ ಗ್ರಾಮ ಪಂಚಾಯಿತಿಗೆ ಕಾಂಗ್ರೆಸ್ ಬೆಂಬಲಿತ ಕೆ.ಎಸ್.ಪರ್ವೀಜ್ ಅವರು 27 ಮತ ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರು.

ಬಿಜೆಪಿ ಬೆಂಬಲಿತ ರಾಜೇಶ್ ಅವರು 10 ಮತ ಪಡೆದು ಪರಾಭವಗೊಂಡರು. ಉಪಾಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಸುಮಲತಾ ಕೃಷ್ಣಮೂರ್ತಿ ಅವಿರೋಧವಾಗಿ ಆಯ್ಕೆಯಾದರು. ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿತ್ತು. ಉಪಾಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿ ಮಹಿಳೆಗೆ ಮೀಸಲಾಗಿತ್ತು.

ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ರಾಮಲಕ್ಷ್ಮಣ ಅವರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆಯನ್ನು ಘೋಷಣೆ ಮಾಡಿದರು.

ನೂತನ ಅಧ್ಯಕ್ಷ ಕೆ.ಎಸ್.ಪರ್ವೀಜ್ ಮಾತನಾಡಿ, 'ಕಗ್ಗಲೀಪುರ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತೇನೆ' ಎಂದರು.

ಎಲ್‌ಎಲ್‌ಬಿ ಕೋರ್ಸ್‌ಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿರುವ ಕಾನೂನು ಮಹಾವಿದ್ಯಾಲಯದಲ್ಲಿ 2022– 23ನೇ ಶೈಕ್ಷಣಿಕ ಸಾಲಿನ ಐದು ವರ್ಷದ ಬಿ.ಎ. ಎಲ್‌ಎಲ್‌ಬಿ (ಆನರ್ಸ್ ಕೋರ್ಸ್) ಪದವಿಯ ಮೊದಲ ಸೆಮಿಸ್ಟರ್ ಕೋರ್ಸ್‌ನ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ದ್ವಿತೀಯ ಪಿಯುಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಸಾಮಾನ್ಯ ವರ್ಗದವರು ಕನಿಷ್ಠ ಶೇ 45 ಅಂಕಗಳನ್ನು ಗಳಿಸಿರಬೇಕು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಶೇ 40ರಷ್ಟು ಹಾಗೂ ಹಿಂದುಳಿದ ವರ್ಗದವರು ಶೇ 42ರಷ್ಟು (ಕರ್ನಾಟಕದ ಅಭ್ಯರ್ಥಿಗಳಿಗೆ ಮಾತ್ರ) ಅಂಕಗಳನ್ನು ಗಳಿಸಿರುವವರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರು. ಗರಿಷ್ಠ ವಯೋಮಿತಿ ಸಾಮಾನ್ಯ ವರ್ಗಕ್ಕೆ 20 ವರ್ಷಗಳು ಮತ್ತು ಪರಿಶಿಷ್ಟರು, ಹಿಂದುಳಿದ ವರ್ಗಗಳು ಹಾಗೂ ವಿದೇಶಿ ವಿದ್ಯಾರ್ಥಿಗಳಿಗೆ 22 ವರ್ಷಗಳನ್ನು ನಿಗದಿಪಡಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕವೇ ಜುಲೈ 15ರ ಒಳಗೆ ಅರ್ಜಿಗಳನ್ನು ಸಲ್ಲಿಸಬೇಕು.

ಅರ್ಜಿ ನಮೂನೆ ಮತ್ತು ವಿವರಗಳು www.bangaloreuniversity.ac.in ಅಥವಾ www.ulc.bangalore.com ವೆಬ್‌ಸೈಟ್‌ನಲ್ಲಿ ಲಭ್ಯ.

ಆನ್‌ಲೈನ್ ಮೂಲಕ ಭರ್ತಿ ಮಾಡಿದ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಂಡು ಜುಲೈ 20ರ ಒಳಗೆ ಪ್ರಾಂಶುಪಾಲರು, ವಿಶ್ವವಿದ್ಯಾಲಯ, ಕಾನೂನು ಕಾಲೇಜು, ಜ್ಞಾನಭಾರತಿ ಆವರಣ, ಬೆಂಗಳೂರು– 560056 ಇವರಿಗೆ ಸಲ್ಲಿಸಲು ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗೆ: 080– 23392384, 22961174, 22961172

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
‘ಕೊರೊನಾ’ ಸಂಕಷ್ಟದಲ್ಲಿ ಪರಸ್ಪರ ನೆರವಾಗುವುದಕ್ಕಾಗಿ ರಚಿತವಾದ ರೂಪನಗರ ಮಹಿಳೆಯರ ವಾಟ್ಸ್ಆ್ಯಪ್ ಗುಂಪು, ಈಗ ‘ಬಡಾವಣೆಯ ಅಭಿವೃದ್ಧಿಗೂ’ ಜೊತೆಯಾಗಿದೆ



ಚರ್ಚೆ
ಏಕರೂಪ ತೆರಿಗೆ ಪದ್ಧತಿ ಜಿಎಸ್‌ಟಿ ಜಾರಿಗೆ ಬಂದು ಐದು ವರ್ಷದ ಸಂದರ್ಭದಲ್ಲಿ ಎರಡು ಚಿಂತನೆ

ವಯನಾಡ್: ರಾಹುಲ್ ಗಾಂಧಿ ಕಚೇರಿ ಧ್ವಂಸ 9

ಕಾಪಸೆಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 5


ಸೆನ್ಸೆಕ್ಸ್	ನಿಫ್ಟಿ	₹/$
52,727 ▲	15,699 ▲	78.33 ▼

ಕಾನೂನು ಸಮರಕ್ಕೆ ಉದ್ಧವ್ ಸಿದ್ಧ

ಎಂವಿಎ ಸರ್ಕಾರಕ್ಕೆ ಬಹುಮತ ಇದೆ ಎಂದು ಪುನರುಚ್ಚರಿಸಿದ ಅಜಿತ್: ರಂಗಕ್ಕಿಳಿದ ಶರದ್ ಪವಾರ್

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ನೇತೃತ್ವದ ಮಹಾ ವಿಕಾಸ ಆಘಾಡಿ (ಎಂವಿಎ) ಸರ್ಕಾರವು ತನಗೆ ಬಹುಮತ ಇದೆ ಎಂದು ಶುಕ್ರವಾರ ಪುನರುಚ್ಚರಿಸಿದೆ. ಉದ್ಧವ್ ವಿರುದ್ಧ ಬಂಡಾಯ ಎದ್ದಿರುವ ಪ್ರಭಾವಿ ಮುಖಂಡ ಏಕನಾಥ ಶಿಂಧೆ ಅವರು ‘ನಿಜವಾದ ಶಿವಸೇನಾ ನಮ್ಮದು’ ಎಂದಿದ್ದಾರೆ. ಹಾಗಾಗಿ, ಕಾನೂನು ಹೋರಾಟಕ್ಕೆ ಮುಂದಾಗಲು ಉದ್ಧವ್ ನೇತೃತ್ವದ ಪಕ್ಷವು ನಿರ್ಧರಿಸಿದೆ. ಇದರಿಂದಾಗಿ, ಬಿಜೆಪಿ ಆತುರದಲ್ಲಿ ಯಾವುದೇ ಕ್ರಮ ಕೈಗೊಳ್ಳದೆ, ಕಾಯ್ದು ನೋಡುವ ತಂತ್ರ ಅನುಸರಿಸಬಹುದು ಎನ್ನಲಾಗಿದೆ.



ಉದ್ಧವ್

ಗುವಾಹಟಿಯ ಪಂಚತಾರಾ ಹೋಟೆಲ್‌ನಲ್ಲಿ ತಂಗಿರುವ ಶಿಂಧೆ ಮತ್ತು ಇತರ ಶಾಸಕರು ದಣಿಯುವಂತೆ ಮಾಡುವುದು ಉದ್ಧವ್ ನೇತೃತ್ವದ ಶಿವ ಸೇನಾದ ಉದ್ದೇಶ. ಅವರಲ್ಲಿ ಉದ್ವಿಗ್ನತೆ ಉಂಟಾಗಿ, ಅವರು ಮಹಾರಾಷ್ಟ್ರಕ್ಕೆ ಹಿಂದಿರುಗುವಂತೆ ಮಾಡುವುದು ಸೇನಾದ ತಂತ್ರ ಎನ್ನಲಾಗಿದೆ.

ಪಕ್ಷದಲ್ಲಿ ಉಂಟಾದ ಬಂಡಾಯದಿಂದ ಉದ್ಧವ್ ಕಂಗೆಟ್ಟಿದ್ದಾರೆ. ಹಾಗಾಗಿ, ಎಂವಿಎಯ ರೂವಾರಿ ಶರದ್ ಪವಾರ್ ಅವರೇ ರಂಗಕ್ಕೆ ಇಳಿದಿದ್ದಾರೆ. ಅವರು ಹಲವು ಜನರಿಗೆ ಕರೆ ಮಾಡಿ ಮಾತನಾಡಿದ್ದಾರೆ ಎಂದು ಮೂಲಗಳು ಹೇಳಿವೆ.

ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಮತ್ತು ಉಪ ಸ್ಪೀಕರ್ ನರಹರಿ ಝಿರ್ವಾಳ್ ಅವರು ಯಾವ ಕ್ರಮ ಕೈಗೊಳ್ಳುತ್ತಾರೆ ಎಂಬುದರ ಮೇಲೆ ಮುಂದಿನದೆಲ್ಲವೂ ಅವಲಂಬಿತವಾಗಿದೆ.

‘ಅವರು (ಬಂಡಾಯ ಗುಂಪು) ತಮ್ಮದೇ ನಿಜವಾದ ಶಿವಸೇನಾ ಎಂದು ಹೇಳುತ್ತಿದ್ದಾರೆ... ಶಿವಸೇನಾ, ಎನ್‌ಸಿಪಿ ಮತ್ತು ಕಾಂಗ್ರೆಸ್ ಜತೆಗೂಡಿ ಎಂವಿಎ ಮೈತ್ರಿಕೂಟ ರಚಿಸಲಾಗಿದೆ. ಎಂವಿಎಗೆ ಬಹುಮತ ಇದೆ’ ಎಂದು ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಹೇಳಿದ್ದಾರೆ.

‘ಬಂಡಾಯ ಗುಂಪಿಗೆ ಬೆಂಬಲ ಇದೆ ಎಂಬುದು ಈವರೆಗೆ ಕಾಗದದಲ್ಲಿ ಮಾತ್ರ ಇದೆ. ಅವರು ಮುಂಬೈಗೆ ಬಂದೇ ಇಲ್ಲ. ಅವರು ಬಂದ ಬಳಿಕ ಸಂಖ್ಯೆಗಳು ಬದಲಾಗಲಿವೆ’ ಎಂದು ಶಿವಸೇನಾದ ಮುಖ್ಯ ವಕ್ತಾರ ಸಂಜಯ ರಾವುತ್ ಹೇಳಿದ್ದಾರೆ.

8ನೇ ಪುಟ ನೋಡಿ

ರಾಷ್ಟ್ರೀಯ ಪಕ್ಷ ಜತೆಗಿಲ್ಲ: ಏಕನಾಥ ಶಿಂಧೆ

‘ಯಾವುದೇ ರಾಷ್ಟ್ರೀಯ ಪಕ್ಷವು ನಮ್ಮೊಂದಿಗೆ ಸಂಪರ್ಕದಲ್ಲಿ ಇಲ್ಲ. ದೊಡ್ಡ ಶಕ್ತಿ ನಮ್ಮ ಬೆಂಬಲಕ್ಕೆ ಇದೆ ಎಂದು ನಾನು ಹೇಳಿದ್ದು ಬಾಳಾಸಾಹೇಬ್ ಠಾಕ್ರೆ ಮತ್ತು ಆನಂದ್ ದಿಘೆ ಅವರನ್ನು ಉದ್ದೇಶಿಸಿ’ ಎಂದು ಶಿವಸೇನಾದ ಬಂಡಾಯ ಶಾಸಕರ ನಾಯಕ ಏಕನಾಥ ಶಿಂಧೆ ಶುಕ್ರವಾರ ಹೇಳಿದ್ದಾರೆ. ಶಿವಸೇನಾದ ಬಂಡಾಯ ಶಾಸಕರ ಗುಂಪಿಗೆ ಬಿಜೆಪಿಯ ಬೆಂಬಲ ಇದೆಯೇ ಎಂಬ ಪ್ರಶ್ನೆಗೆ ಅವರು ಹೀಗೆ ಉತ್ತರಿಸಿದ್ದಾರೆ. ಪ್ರಭಾವಿ ರಾಷ್ಟ್ರೀಯ ಪಕ್ಷವೊಂದು ತಮಗೆ ಬೆಂಬಲ ನೀಡಿದೆ ಎಂದು ಶಿಂಧೆ ಅವರು ಗುರುವಾರ ಹೇಳಿದ್ದರು.

ಕಟ್ಟೆಚ್ಚರ: ಶಿಂಧೆ ಅವರ ಬಂಡಾಯದ ವಿರುದ್ಧ ಶಿವಸೇನಾ ಕಾರ್ಯಕರ್ತರು ಬೀದಿಗಿಳಿಯುವ ಸಾಧ್ಯತೆ ಇರುವುದರಿಂದ ಮಹಾರಾಷ್ಟ್ರದಾದ್ಯಂತ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ. ಬಂಡಾಯ ಶಾಸಕರಿಗೆ ಸಂಬಂಧಿಸಿದ ಫಲಕಗಳನ್ನು ಸೇನಾ ಕಾರ್ಯಕರ್ತರು ಕಿತ್ತೆಸೆದ ಒಂದೆರಡು ಘಟನೆಗಳು ವರದಿಯಾಗಿವೆ.

ಪವಾರ್–ಉದ್ಧವ್ ಭೇಟಿ: ಶರದ್ ಪವಾರ್ ಅವರು ಉದ್ಧವ್ ಠಾಕ್ರೆ ಅವರನ್ನು ಶುಕ್ರವಾರ ಸಂಜೆ ಭೇಟಿಯಾಗಿದ್ದಾರೆ. ಎನ್‌ಸಿಪಿ ರಾಜ್ಯ ಘಟಕದ ಅಧ್ಯಕ್ಷ ಜಯಂತ್ ಪಾಟೀಲ್, ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು ಪವಾರ್ ಜತೆಗಿದ್ದರು.

‘ಉಪ ಸ್ಪೀಕರ್‌ಗೆ ಅಧಿಕಾರವಿಲ್ಲ’: ಉಪ ಸ್ಪೀಕರ್ ನರಹರಿ ಝಿರ್ವಾಳ್ ಅವರ ವಿರುದ್ಧ ಈಗಾಗಲೇ ಅವಿಶ್ವಾಸ ನಿರ್ಣಯ ಮಂಡಿಸಲಾಗಿದೆ. ಹೀಗಾಗಿ ಅವರು ಶಿವಸೇನಾದ ಬಂಡಾಯ ಶಾಸಕರನ್ನು ಅನರ್ಹಗೊಳಿಸುವ ಕುರಿತು ಕಾನೂನು ಕ್ರಮ ತೆಗೆದುಕೊಳ್ಳಲು ಬರುವುದಿಲ್ಲ ಎಂದು ಪಕ್ಷೇತರ ಶಾಸಕರಾದ ಮಹೇಶ್ ಬಾಲ್ದಿ ಮತ್ತು ವಿನೋದ್ ಅಗ್ರವಾಲ್ ಅವರು ಉಪ ಸ್ಪೀಕರ್ ಮತ್ತು ಮಹಾರಾಷ್ಟ್ರ ವಿಧಾನಸಭೆ ಕಾರ್ಯದರ್ಶಿಗೆ ಪತ್ರ ರವಾನಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಅರುಣಾಚಲ ಪ್ರದೇಶದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಆದೇಶವನ್ನೂ ಅವರು ಉಲ್ಲೇಖಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮೋದಿಗೆ ಕ್ಲೀನ್ ಚಿಟ್ ಸುಪ್ರೀಂ ಕೋರ್ಟ್ ಅಸ್ತು

ನವದೆಹಲಿ (ಪಿಟಿಐ): ಗುಜರಾತ್‌ನಲ್ಲಿ 2002ರಲ್ಲಿ ನಡೆದಿದ್ದ ಗಲಭೆ, ಹಿಂಸಾಕೃತ್ಯಗಳ ತನಿಖೆ ನಡೆಸಿದ್ದ ವಿಶೇಷ ತನಿಖಾ ತಂಡವು (ಎಸ್‌ಐಟಿ) ಗುಜರಾತ್‌ನ ಅಂದಿನ ಮುಖ್ಯಮಂತ್ರಿ ನರೇಂದ್ರ ಮೋದಿ ಮತ್ತು ಇತರ 63 ಜನರನ್ನು ಆರೋಪ ಮುಕ್ತಗೊಳಿಸಿದ್ದನ್ನು (ಕ್ಲೀನ್ ಚಿಟ್) ಸುಪ್ರೀಂ ಕೋರ್ಟ್ ಶುಕ್ರವಾರ ಎತ್ತಿಹಿಡಿದಿದೆ.

ಗಲಭೆ, ಹಿಂಸಾಕೃತ್ಯಗಳ ಹಿಂದೆ ದೊಡ್ಡ ಸಂಚು ನಡೆದಿತ್ತು ಎಂದು ಆರೋಪಿಸಿ, ಹತ್ಯೆಗೀಡಾಗಿದ್ದ ಕಾಂಗ್ರೆಸ್ ನಾಯಕ ಎಹಸಾನ್ ಜಾಫ್ರಿ ಅವರ ಪತ್ನಿ ಝಕಿಯಾ ಅವರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾ ಮಾಡಿತು. ಈ ಮೂಲಕ ಹಿಂಸಾಕೃತ್ಯ ಕುರಿತಂತೆ ತನಿಖೆಯನ್ನು ಪುನರಾರಂಭಿಸುವ ಸಾಧ್ಯತೆಗಳಿಗೆ ಕೋರ್ಟ್ ತೆರೆ ಎಳೆದಿದೆ.



3D ಪುಟ ನೋಡಿ

ಎಲೆಕ್ಟ್ರಾನಿಕ್ ಸಿಟಿ, ಅತ್ತಿಬೆಲೆ ರಸ್ತೆ ಟೋಲ್ ಶುಲ್ಕ ಶೇ 20ರಷ್ಟು ಹೆಚ್ಚಳ

ಬೆಂಗಳೂರು: ನಗರದ ಎಲೆಕ್ಟ್ರಾನಿಕ್ ಸಿಟಿ ಹಾಗೂ ಅತ್ತಿಬೆಲೆ ರಸ್ತೆ ಬಳಕೆ ಶುಲ್ಕವನ್ನು (ಟೋಲ್) ಶೇ 20ರಷ್ಟು ಹೆಚ್ಚಳ ಮಾಡಲಾಗಿದ್ದು, ಜುಲೈ 1ರಿಂದ ಪರಿಷ್ಕೃತ ಶುಲ್ಕ ಜಾರಿಗೆ ಬರಲಿದೆ.

‘ಒಪ್ಪಂದದ ಪ್ರಕಾರ ರಸ್ತೆ ಬಳಕೆ ಶುಲ್ಕ ಹೆಚ್ಚಳ ಮಾಡಲಾಗಿದೆ. ಈ ಶುಲ್ಕವು 2023ರ ಜೂನ್ 30ರವರೆಗೆ ಜಾರಿಯಲ್ಲಿರಲಿದೆ’ ಎಂದು ಬೆಂಗಳೂರು ಎಲಿವೇಟೆಡ್ ಟೋಲ್‌ವೇ ಕಂಪನಿ ಅಧಿಕಾರಿಯೊಬ್ಬರು ತಿಳಿಸಿದರು. 'ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಎಲೆಕ್ಟ್ರಾನಿಕ್ ಸಿಟಿ ಹಾಗೂ ಅತ್ತಿಬೆಲೆ ಎರಡೂ ಟೋಲ್‌ಗೇಟ್‌ಗಳಿಗೂ ಪರಿಷ್ಕೃತ ಶುಲ್ಕ ಅನ್ವಯವಾಗಲಿದೆ’ ಎಂದು ಹೇಳಿದರು.

ಶುಲ್ಕ ಹೆಚ್ಚಳಕ್ಕೆ ವಿರೋಧ: ಸಿಲ್ಕ್ ಬೋರ್ಡ್ ವೃತ್ತದಿಂದ ಅತ್ತಿಬೆಲೆವರೆಗಿನ ರಸ್ತೆಯ ಅಕ್ಕ–ಪಕ್ಕದ ಪ್ರದೇಶಗಳಲ್ಲಿ ಐಟಿ ಹಾಗೂ ಇತರೆ ಕಂಪನಿಗಳು ಹೆಚ್ಚಿವೆ. ನಿತ್ಯವೂ ಸಾವಿರಾರು ಮಂದಿ ಈ ರಸ್ತೆಯಲ್ಲಿ ಸಂಚರಿಸುತ್ತಾರೆ. ಕೋವಿಡ್ ನಂತರ ನಿಧಾನವಾಗಿ ಆರ್ಥಿಕ ಚಟುವಟಿಕೆಗಳು ಚೇತರಿಸಿಕೊಳ್ಳುತ್ತಿದ್ದು, ಇಂಥ ಸಂದರ್ಭದಲ್ಲಿ ಏಕಾಏಕಿ ಶುಲ್ಕ ಹೆಚ್ಚಳ ಮಾಡಿರುವುದಕ್ಕೆ ಸಾರ್ವಜನಿಕರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ.

3D ಪುಟ ನೋಡಿ

ರಾಷ್ಟ್ರೋತ್ಥಾನ ಪುಸ್ತಕ ಖರೀದಿಗೆ ಆದೇಶ

ಬೆಂಗಳೂರು: ರಾಷ್ಟ್ರೋತ್ಥಾನ ಸಾಹಿತ್ಯ ಪ್ರಕಟಿಸಿರುವ 'ಭಾರತ–ಭಾರತಿ' ಮಾಲಿಕೆಗಳ ಪುಸ್ತಕಗಳನ್ನು ಖರೀದಿಸಲು ಶಿಕ್ಷಣ ಇಲಾಖೆಗೆ ಆದೇಶಿಸಲಾಗಿದೆ. ₹2 ಕೋಟಿ ಮೌಲ್ಯದಷ್ಟು ಪುಸ್ತಕಗಳನ್ನು ಖರೀದಿಸಿ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ವಿತರಿಸುವಂತೆ ಸೂಚಿಸಲಾಗಿದೆ. ಈ ಹಿಂದೆಯೂ ₹5 ಕೋಟಿ ಮೊತ್ತದ ಪುಸ್ತಕಗಳನ್ನು ರಾಷ್ಟ್ರೋತ್ಥಾನ ಸಾಹಿತ್ಯದಿಂದ ಖರೀದಿಸಲು ಸೂಚಿಸಲಾಗಿತ್ತು. ಆದರೆ, ಸಕಾಲದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಪುಸ್ತಕ ಸರಬರಾಜು ಪೂರ್ಣಗೊಳಿಸಲಿಲ್ಲ ಎಂದು ತಿಳಿಸಿದೆ.

ಉಳಿದ ರಸ್ತೆಗಳೂ ಸರಿಹೋಗಲಿ

ರಾಜರಾಜೇಶ್ವರಿನಗರ: ಡಾಂಬರೀಕರಣಗೊಳ್ಳದ ರಸ್ತೆ



ಗುಂಡಿ ಬಿದ್ದ ರಸ್ತೆಗಳು. ಎಲ್ಲಿ ನೋಡಿದರೂ ಕಸದ ರಾಶಿ... ಇದು ಮೈಸೂರು ರಸ್ತೆಯ ಪಕ್ಕದಲ್ಲಿರುವ ರಾಜರಾಜೇಶ್ವರಿ ನಗರದ ಕೆಲವು ಬಡಾವಣೆಗಳ ಕಥೆ. ರಸ್ತೆಗಳಂತೂ ಡಾಂಬರೀಕರಣವಾಗದೆ ವರ್ಷಗಳೇ ಕಳೆದಿವೆ. ನಿತ್ಯ ಮಗನನ್ನು ಶಾಲೆಗೆ ಕಳುಹಿಸಲು, ಕರೆತರಲು ಓಡಾಡುವ ನಾನು ರಸ್ತೆಗುಂಡಿಗಳನ್ನು ತಪ್ಪಿಸಿ ದ್ವಿಚಕ್ರ ವಾಹನ ಚಲಾಯಿಸುವುದೇ ಸಾಹಸ.

ಜನಪ್ರತಿನಿಧಿಗಳು ಒಮ್ಮೆ ಮಾತ್ರ ಹಾದುಹೋಗುವ ರಸ್ತೆಗಳು ಮದುವಣಗಿತ್ತಿಯಂತೆ ಸಿಂಗಾರಗೊಳ್ಳುತ್ತವೆ. ಸಾರ್ವಜನಿಕರ ಗೋಳಾಟ ಕೇಳುವವರಾರು? ಎಲ್ಲೆಡೆ ಜೀರೋ ಟ್ರಾಫಿಕ್‌ನಲ್ಲಿ ಚಂದದ ರಸ್ತೆಗಳಲ್ಲಿ ಸಂಚರಿಸುವ ಜನಪ್ರತಿನಿಧಿಗಳಿಗೆ 40 ತಿಂಗಳಲ್ಲಿ ಸಂಪೂರ್ಣ ಅಭಿವೃದ್ಧಿ ಸಾಧ್ಯ ಎಂಬ ಭ್ರಮೆ ಸಹಜವೇ ಸರಿ!

ರಮ್ಯಾ ಕವೀಶ್, ರಾಜರಾಜೇಶ್ವರಿ ನಗರ

ಜಾಲಹಳ್ಳಿ: ನಿತ್ಯ ದೂಳಿನ ಮಜ್ಜನ



ನಾನು 25 ರಿಂದ 30 ವರ್ಷಗಳಿಂದ ಸುಂಕದಕಟ್ಟೆ ಪೀಣ್ಯ 2ನೇ ಹಂತ– ಜಾಲಹಳ್ಳಿ ಕ್ರಾಸ್ ಮಾರ್ಗವಾಗಿ ಬಿಎಂಟಿಸಿ ಬಸ್‌ಗಳಲ್ಲಿ ಸಂಚರಿಸುತ್ತಿದ್ದೇನೆ. ರಸ್ತೆ ಸಂಪೂರ್ಣ ತಗ್ಗು ಗುಂಡಿಗಳಿಂದ ಕೂಡಿದೆ. ಈ ಭಾಗದಲ್ಲಿ ವಾಸಿಸುವ ಜನ ಬಹುತೇಕ ಪೀಣ್ಯ ಕೈಗಾರಿಕಾ ಪ್ರದೇಶದ ಉದ್ಯೋಗಿಗಳಾಗಿದ್ದಾರೆ.

ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಸಚಿವರಾದ ಎಸ್‌.ಟಿ.ಸೋಮಶೇಖರ್, ಮುನಿರತ್ನ, ಶಾಸಕ ಮಂಜುನಾಥ ಪ್ರತಿನಿಧಿಸಿದರು. ರಸ್ತೆಗಳು ಮಾತ್ರ ಅಭಿವೃದ್ಧಿಗೊಂಡಿಲ್ಲ. ಪ್ರತಿನಿತ್ಯ ದೂಳಿನ ಮಜ್ಜನವಾಗುತ್ತದೆ. ಇದರಿಂದ ಉಸಿರಾಟದ ಸಮಸ್ಯೆ, ಅಸ್ತಮಾದಂತಹ ಕಾಯಿಲೆಗಳಿಗೆ ಒಳಗಾಗುತ್ತಿದ್ದೇವೆ. ಹಲವಾರು ಬಾರಿ ಮನವಿ ಸಲ್ಲಿಸಿದರೂ ಅಧಿಕಾರಿಗಳು ಸ್ಪಂದಿಸಿಲ್ಲ. ಪ್ರಧಾನಿ ನರೇಂದ್ರ ಮೋದಿಯವರು ಮುಂದಿನ ಬಾರಿ ಈ ರಸ್ತೆ ಮೂಲಕ ಸಂಚರಿಸಿದರೆ ಉತ್ತಮ ರಸ್ತೆಗಳು ನಿರ್ಮಾಣವಾಗಬಹುದು.

ಎನ್‌.ಶ್ರೀನಿವಾಸ, ಜಾಲಹಳ್ಳಿ ನಿವಾಸಿ

ಕೆಸರು ಗದ್ದೆಯಾದ ರಸ್ತೆ



ಯಶವಂತಪುರ ವಿಧಾನಸಭೆ ವ್ಯಾಪ್ತಿಯ ದೊಡ್ಡಬಿದರಕಲ್ಲು (ವಾರ್ಡ್ 40) ನವಿಲುನಗರದಿಂದ ಚಕ್ರನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹಾಳಾಗಿದೆ. ಮಳೆ ಬಂದರೆ ಕೆಸರು ಗದ್ದೆಯಾಗುವ ರಸ್ತೆಯಲ್ಲಿ ಮಕ್ಕಳು, ವೃದ್ಧರು ಸಂಚರಿಸುವುದೇ ಕಷ್ಟ. ದ್ವಿಚಕ್ರ ವಾಹನ ಸವಾರರು ಬಹಳಷ್ಟು ಸಲ ಬಿದ್ದ ನಿದರ್ಶನಗಳಿವೆ. ಬೇಸಿಗೆಯಲ್ಲಿ ನಿತ್ಯ ದೂಳಿನ ಮಜ್ಜನವಾಗುತ್ತದೆ. ರಸ್ತೆ ದುರಸ್ತಿಗೊಳಿಸುವಂತೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ತ್ಯಾಗರಾಜ್‌.ಸಿ, ಸ್ಥಳೀಯ



ನವಿಲುನಗರದಿಂದ ಚಕ್ರನಗರಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆ ಕೆಸರು ಗದ್ದೆಯಾಗಿರುವುದು

ನಗರದಲ್ಲಿ ಇಂದು

ವಿದ್ಯಾಧೀಶತೀರ್ಥರ 141ನೇ ಆರಾಧನಾ ಮಹೋತ್ಸವ: ಬೆಳಿಗ್ಗೆ: 6ಕ್ಕೆ ಕೃಷ್ಣ ಮುಖ್ಯಪ್ರಾಣರಿಗೆ ಮಹಾಪೂಜೆ ಮತ್ತು ಯತಿಗಳಿಗೆ ಹಸ್ತೋದಕ, ಸಂಜೆ: 6ಕ್ಕೆ ರಂಗಪೂಜೆ ಮತ್ತು ಭಜನೆ, ಆಯೋಜಕರು: ಕೃಷ್ಣ ಪ್ರಜ್ಞ ಪ್ರತಿಷ್ಠಾನ, ಸ್ಥಳ: ಶ್ರೀಗಳವರ ಮೂಲ ವೃಂದಾವನ, ಶ್ರೀಕೃಷ್ಣಮಂದಿರ, ಗುಂಡೋಪಂತರ ರಸ್ತೆ

ರಾಷ್ಟ್ರೀಯ ಬಿಕ್ಕಟ್ಟು–ನಾಗರಿಕ ಸಮಾಜದ ಪಾತ್ರ: ಉದ್ಘಾಟನೆ: ಎಚ್‌.ಎನ್‌. ನಾಗಮೋಹನ ದಾಸ್, ಅಧ್ಯಕ್ಷತೆ: ಡಾ.ಟಿ.ಆರ್‌. ಚಂದ್ರಶೇಖರ್, ಅತಿಥಿಗಳು: ಆನಂದ್ ಕುಮಾರ್ ಪ್ರೆಸಿಡೆಂಟ್, ಎನ್‌.ಡಿ. ಪಾಂಚೋಲಿ, ಎಸ್‌.ಆರ್‌. ಹಿರೇಮಠ, ರಾಘವೇಂದ್ರ ಕುಷ್ಟಗಿ, ಆಯೋಜಕರು: ಜನಸಂಗ್ರಾಮ ಪರಿಷತ್–ಜನತಂತ್ರ ಪ್ರಯೋಗ ಶಾಲೆ ಜನಾಂದೋಲನ ಮಹಾಮೈತ್ರಿ, ಸಿಟಿಜನ್ ಫಾರ್ ಡೆಮಾಕ್ರಸಿ, ಸೊಸೈಟಿ ಫಾರ್ ಕಮ್ಯೂನಲ್ ಹಾರ್ಮನಿ, ಸಂಯುಕ್ತ ಹೋರಾಟ, ಸ್ಥಳ: ಗಾಂಧಿಭವನ, ಶಿವಾನಂದ ಸರ್ಕಲ್ ಹತ್ತಿರ, ಬೆಳಿಗ್ಗೆ: 10

ಹಳ್ಳಿ ಹಬ್ಬ–2022 ಪುರಷ ಮತ್ತು ಮಹಿಳಾ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿಗಳು : ಉದ್ಘಾಟನೆ: ಬಿ.ಎ. ಬೈರತಿ ಬಸವರಾಜ, ಉಪಸ್ಥಿತಿ: ಹರೀಶ್, ಅಶೋಕ ಛಲವಾದಿ, ಜಾನ್‌ಹಾರ್, ಚಿದಂಬರಂ, ಆಯೋಜಕರು: ಚಿಕ್ಕಣ್ಣ ಮತ್ತು ರಾಮಕ್ಕ ಸೇವಾ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಆಟದ ಮೈದಾನ ನೈಸ್‌ಫೇರ್ ಹಿಂಭಾಗ, ರಾಮಮೂರ್ತಿ ನಗರ, ಸಂಜೆ: 6

ಬೃಹತ್ ಸಸಿ ನೆಡುವ ಕಾರ್ಯಕ್ರಮ: ಸಾನ್ನಿಧ್ಯ: ಅಭಯಾನಂದ ಮಹಾರಾಜ್, ಚಾಲನೆ: ಎಸ್‌.ಟಿ. ಸೋಮಶೇಖರ್, ಅತಿಥಿಗಳು: ರಮೇಶ್‌.ಎಚ್‌.ಜಿ, ರಮೇಶ್, ರಾಮೇಗೌಡ, ಆಯೋಜಕರು: ವಿದ್ಯುತ್‌ವಾಣಿ ಮತ್ತು ಬೆಸ್ಕಾಂ ಸಹಭಾಗಿತ್ವ, ಸ್ಥಳ: ಅನುಪಮಾ ಶಾಲಾ ಆವರಣ, ಸಾಯಿಬಾಬಾ ನಗರ, ಅಂದ್ರಹಳ್ಳಿ ಮುಖ್ಯ ರಸ್ತೆ, ಬೆಳಿಗ್ಗೆ: 10

ಎಚ್‌.ಎಸ್‌.ವಿ ಬುದ್ಧಚರಣ ಕುರಿತ ಬರಹಗಳ ಬಿಡುಗಡೆ ಸಮಾರಂಭ: ಅತಿಥಿಗಳು: ಪ್ರೊ.ಮಲ್ಲೇಪುರಂ. ಜಿ. ವೆಂಕಟೇಶ್, ಡಾ.ಆರ್. ಲಕ್ಷ್ಮೀನಾರಾಯಣ, ಶ್ರೀನಿವಾಸ ಪ್ರಭು, ಆಯೋಜಕರು: ಅಂಕಿತ ಪುಸ್ತಕ ಮತ್ತು ಎಚ್‌.ಎಸ್‌.ವಿ ಕುಟುಂಬ, ಸ್ಥಳ: 97 ಸಖಿ, ಪುಷ್ಪಗಿರಿನಗರ, ಹೊಸಕೆರೆಹಳ್ಳಿ, ಕೆರೆಕೋಡಿ, ಬನಶಂಕರಿ, 3ನೇ ಹಂತ, ಬೆಳಿಗ್ಗೆ: 10.30

ಡಾ.ಸಿದ್ದಲಿಂಗಯ್ಯನವರ ಸಂಸ್ಮರಣೆ ಮತ್ತು ಕೃತಿ ಬಿಡುಗಡೆ ಕಾರ್ಯಕ್ರಮ:



ಉದ್ಘಾಟನೆ: ಶೂದ್ರ ಶ್ರೀನಿವಾಸ, ಅಧ್ಯಕ್ಷತೆ: ಡಾ. ಬೈರಮಂಗಲ ರಾಮೇಗೌಡ, ಕೃತಿ ಬಿಡುಗಡೆ: ಡಾ.ದೊಡ್ಡರಂಗೇಗೌಡ, ಅತಿಥಿಗಳು: ಡಾ.ಮಾನಸ ಸಿದ್ದಲಿಂಗಯ್ಯ, ಡಾ.ಪ್ರಮೀಳಾ ಮಾಧವ್, ಬೇಲೂರು ರಾಮಮೂರ್ತಿ, ದೊಡ್ಡೇಗೌಡ, ಶಾಂತರಾಜು, ಮಂಜುನಾಥ್. ಡಿ.ಎಸ್, ವತ್ಸಲಾ ಸುರೇಶ್, ಆಯೋಜಕರು: ಸಾಧನಕೇರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್‌.ಆರ್‌. ಕಾಲೊನಿ, ಬೆಳಿಗ್ಗೆ: 10.30

ಸಾಹಿತಿ ಸುಧಾಮೂರ್ತಿ ಅವರನ್ನು ಭೇಟಿಯಾಗಿ, ಶುಭಾಶಯ ಕೋರಿ: ಆಯೋಜಕರು: ಸ್ವಪ್ನಾ ಬುಕ್ ಹೌಸ್, ಸ್ಥಳ: ಎಸ್‌ಬಿಐ ಬ್ಯಾಂಕ್ ಹತ್ತಿರ, ಜವಾಹರ್‌ಲಾಲ್ ನೆಹರೂ ರಸ್ತೆ, ಚನ್ನಸಂದ್ರ, ರಾಜರಾಜೇಶ್ವರಿ ನಗರ, ಬೆಳಿಗ್ಗೆ: 11

ತುರ್ತು ಪರಿಸ್ಥಿತಿಯ ನೆನಪಿನಲ್ಲಿ ಸಂವಿಧಾನ ಅವಲೋಕನ ರಾಷ್ಟ್ರೀಯ ವಿಚಾರಸಂಕಿರಣ: ಪ್ರಾಸ್ತಾವಿಕ ನುಡಿ: ಪ.ಮಲ್ಲೇಶ್, ಅಧ್ಯಕ್ಷತೆ: ಚುಕ್ಕಿ ನಂಜುಂಡಸ್ವಾಮಿ, ಅತಿಥಿಗಳು: ಎಚ್‌.ಎನ್‌. ನಾಗಮೋಹನ ದಾಸ್, ಮಂಗ್ಳೂರು ವಿಜಯ, ರವಿವರ್ಮಕುಮಾರ್, ಆಯೋಜಕರು: ಡಾ. ರಾಮಮನೋಹರ್ ಲೋಹಿಯಾ ಸಮತಾ ವಿದ್ಯಾಲಯ, ಸ್ಥಳ: ಕಸ್ತೂರ್‌ಬಾ ಸಭಾಂಗಣ, ಗಾಂಧಿ ಭವನ, ಕುಮಾರ ಪಾರ್ಕ್, ಬೆಳಿಗ್ಗೆ: 11

ಅಖಿಲ ಭಾರತ ಅಂಚೆ ನೌಕರರ ಒಕ್ಕೂಟ ಗುಂಪು ಸಿ ಪೋಸ್ಟ್‌ಮ್ಯಾನ್ ಮತ್ತು ಎಂಟಿಎಸ್ ಅವರ 33ನೇ ಜಂಟಿ ಸಮ್ಮೇಳನ: ಉದ್ಘಾಟನೆ: ಜಿ.ಜಾನಕಿರಾಮ, ಅಧ್ಯಕ್ಷತೆ: ರವಿಶಂಕರ್‌.ಡಿ, ಪಿ.ಮಲ್ಲಿಕಾರ್ಜುನ, ಹಿಮಾಂಶು ಚೌಧರಿ, ಅಮಿತ್ ಕುಮಾರ್ ಝಾ, ಕೆ.ರಾಧಾಕೃಷ್ಣ, ಚಂದ್ರ ಸ್ವಾಮಿ, ಬಿ.ವಿಜಯ ನಾಯರ್, ಆರ್. ಶ್ರೀನಿವಾಸ್, ವಿ.ಕೃಷ್ಣಮೂರ್ತಿ, ಎಸ್. ಎಸ್.ಮಂಜುನಾಥ, ಆಯೋಜಕರು: ನ್ಯಾಷನಲ್ ಫೆಡರೇಷನ್ ಆಫ್ ಪೋಸ್ಟಲ್ ಎಂಪ್ಲಾಯ್ಸ್, ಸ್ಥಳ: ಬಿ.ಜಿ., ಜಿ.ಪಿ.ಒ., ರಾಜಭವನ ರಸ್ತೆ, ಸಂಜೆ: 4

ಹೊರಗೆ ಹೋಗುವಾಗ ಮುಖಗವಸು ಧರಿಸಿ

ದ್ವಿಚಕ್ರ ವಾಹನ ಜಪ್ತಿ

ಬೆಂಗಳೂರು: ದ್ವಿಚಕ್ರ ವಾಹನ ಕಳ್ಳತನ ಪ್ರಕರಣ ಭೇದಿಸಲು ನಗರದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿದ ಪಶ್ಚಿಮ ವಿಭಾಗದ ಪೊಲೀಸರು, ದಾಖಲೆ ಇಲ್ಲದ 217 ವಾಹನಗಳನ್ನು ಶುಕ್ರವಾರ ಜಪ್ತಿ ಮಾಡಿದ್ದಾರೆ.

'ಬಸವೇಶ್ವರನಗರ, ವಿಜಯನಗರ, ಕಾಮಾಕ್ಷಿಪಾಳ್ಯ ಸೇರಿದಂತೆ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ 54 ನಾಕಾಬಂದಿಗಳನ್ನು ನಿರ್ಮಿಸಲಾಗಿತ್ತು. ಪ್ರತಿಯೊಂದು ದ್ವಿಚಕ್ರ ವಾಹನವನ್ನು ತಡೆದು ದಾಖಲೆಗಳ ಪರಿಶೀಲನೆ ನಡೆಸಲಾಯಿತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಸೂಕ್ತ ದಾಖಲೆ ಹಾಜರುಪಡಿಸದ ಹಾಗೂ ಅನುಮಾನಾಸ್ಪದ 217 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿ, ಆಯಾ ಠಾಣೆಗಳ ವ್ಯಾಪ್ತಿಯಲ್ಲಿ ನಿಲ್ಲಿಸಲಾಗಿದೆ. ದಾಖಲೆ ಹಾಜರುಪಡಿಸಿ ವಾಹನ ಪಡೆಯುವಂತೆ ಮಾಲೀಕರಿಗೆ ಸೂಚಿಸಲಾಗಿದೆ. ದಾಖಲೆ ಹಾಜರುಪಡಿಸದವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು' ಎಂದು ತಿಳಿಸಿದರು.

ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಭರವಸೆ

‘ವಿಶ್ವಕರ್ಮ ಸಮುದಾಯದ ಕುಲಶಾಸ್ತ್ರ ಅಧ್ಯಯನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ವಿಶ್ವಕರ್ಮ ಸಮುದಾಯದ ಕುಲಶಾಸ್ತ್ರದ ಬಗ್ಗೆ ಅಧ್ಯಯನ ನಡೆಸಲು ಆದೇಶ ಹೊರಡಿಸಲಾಗುವುದು’ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಭರವಸೆ ನೀಡಿದರು.

ವಿಶ್ವಕರ್ಮ ಸಮಾಜದ ಸ್ವಾಮೀಜಿಗಳು ಹಾಗೂ ಮುಖಂಡರ ಸಮ್ಮುಖದಲ್ಲಿ ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು. ‘ಸಮುದಾಯದ ಆರ್ಥಿಕ, ರಾಜಕೀಯ, ಶೈಕ್ಷಣಿಕ, ಸಾಂಸ್ಕೃತಿಕ ಸ್ಥಿತಿಗತಿ ಬಗ್ಗೆ ಅಧ್ಯಯನ ನಡೆಸಲಾಗುವುದು. ಈ ಸಮಾಜ ನಡೆದು ಬಂದ ಬಗೆ, ಸಮಾಜ ಮುನ್ನಡೆಸಿದವರ ಮಾಹಿತಿ ಒಳಗೊಂಡಂತೆ ಸಮಗ್ರ ಅಧ್ಯಯನಕ್ಕೆ ಆದೇಶ ನೀಡಲಾಗುವುದು. ತಾಲ್ಲೂಕು ಕೇಂದ್ರಗಳಲ್ಲಿ ಸಮುದಾಯ ಭವನ ನಿರ್ಮಿಸಲು ನಿವೇಶನದ ಸಮಸ್ಯೆಯಿದೆ. ಸರ್ಕಾರಿ ನಿವೇಶನಗಳು ಲಭ್ಯವಿದ್ದರೆ ಭವನ ನಿರ್ಮಾಣಕ್ಕೆ ಕ್ರಮವಹಿಸಲಾಗುವುದು. ಜಿಲ್ಲಾ ಕೇಂದ್ರಗಳಲ್ಲಿ ಭವನ ನಿರ್ಮಿಸುವ ಪ್ರಸ್ತಾವ ಸರ್ಕಾರದ ಮುಂದಿದೆ’ ಎಂದು ಹೇಳಿದರು.

‘ಬೆಂಗಳೂರಿನಲ್ಲಿ ಬೃಹತ್ ವಿಶ್ವಕರ್ಮ ಭವನ ನಿರ್ಮಾಣಕ್ಕೆ ಎರಡು ಎಕರೆ ಜಾಗ ಬೇಕಾಗುತ್ತದೆ. ನಿವೇಶನ ಗುರುತಿಸಿದಲ್ಲಿ ನನ್ನ ಅಧಿಕಾರಾವಧಿಯಲ್ಲಿಯೇ ಭವನದ ಶಂಕುಸ್ಥಾಪನೆಗೆ ಕ್ರಮವಹಿಸುತ್ತೇನೆ. ಕಲಬುರ್ಗಿಯಲ್ಲಿ ಎಂ.ಎಸ್. ಪಂಡಿತ್ ಅವರ ಹೆಸರಿನಲ್ಲಿ ಶಿಲ್ಪಕಲಾ ಕೇಂದ್ರ ನಿರ್ಮಾಣದ ಬಗ್ಗೆ ಮುಖ್ಯಮಂತ್ರಿ ಅವರಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು. ಮಠಗಳ ಅಭಿವೃದ್ಧಿಗೆ ಅನುದಾನ ನೀಡುವ ಬಗ್ಗೆಯೂ ಕ್ರಮವಹಿಸಲಾಗುವುದು’ ಎಂದು ಹೇಳಿದರು.

‘ಮಠಗಳಿಗೆ ಆರ್ಥಿಕ ನೆರವು ನೀಡಿ’

‘ವಿಶ್ವಕರ್ಮ ಸಮುದಾಯ ಭಾರತೀಯ ಸಂಸ್ಕೃತಿಗೆ ದೊಡ್ಡ ಕೊಡುಗೆ ನೀಡಿದೆ. ವಿದೇಶಿಗರು ಇಲ್ಲಿನ ಶಿಲ್ಪ ಕ ಲಾ ಕೇಂದ್ರ ನೋಡಲು ಬರುತ್ತಾರೆ. ಈ ಸಮುದಾಯದವರಿಗೆ ಶೈಕ್ಷಣಿಕ ತರಬೇತಿ, ಮಾರುಕಟ್ಟೆ ನಿರ್ಮಾಣ ಸೇರಿದಂತೆ ವಿವಿಧ ಕಾರ್ಯಯೋಜನೆಯನ್ನು ಸರ್ಕಾರ ಹಮ್ಮಿಕೊಳ್ಳಬೇಕು. ಆಗ ಭಾರತೀಯ ಸಂಸ್ಕೃತಿಗೆ ಇನಷ್ಟು ಕೊಡುಗೆ ಸಿಗಲಿದೆ’ ಎಂದು ಅರೇಮಾದನಹಳ್ಳಿಯ ವಿಶ್ವಕರ್ಮ ಜಗದ್ಗುರು ಪೀಠದ ಶಿವಸುಜ್ಞಾನ ತೀರ್ಥ ಸ್ವಾಮೀಜಿ ಹೇಳಿದರು.

‘ಸಮುದಾಯದ ಬಹುತೇಕ ಮಠಗಳು ಆರ್ಥಿಕವಾಗಿ ಸಬಲವಾಗಿಲ್ಲ. ಅಂತಹ ಮಠಗಳಿಗೆ ಸರ್ಕಾರ ಆರ್ಥಿಕ ನೆರವು ನೀಡಬೇಕು. ಮಠಗಳ ಮೂಲಕ ಸಮುದಾಯದ ಅಭಿವೃದ್ಧಿ ಸಾಧ್ಯ. ಸಮುದಾಯದ ಮಠ ಇರುವ ಕಡೆ ಜಿಲ್ಲಾ ಕೇಂದ್ರದಲ್ಲಿ ಮಠಾಧಿಪತಿಗಳಿಗೆ ಕನಿಷ್ಠ ಒಂದು ಎಕರೆ ನಿವೇಶನ ನೀಡಬೇಕು. ಅಲ್ಲಿ ಶಿಕ್ಷಣ, ತರಬೇತಿ ಕೇಂದ್ರ ನಿರ್ಮಾಣಕ್ಕೆ ಸರ್ಕಾರ ಅನುವು ಮಾಡಿಕೊಡಬೇಕು’ ಎಂದರು.

ಸಮುದಾಯದ ಬೇಡಿಕೆಗಳ ಪತ್ರವನ್ನು ಸಚಿವ ಕೋಟ ಶ್ರೀನಿವಾಸ ಪೂಜಾರಿಗೆ ಹಸ್ತಾಂತರಿಸಿದ ನಿಗಮದ ಅಧ್ಯಕ್ಷ ಬಾಬು ಪತ್ತಾರ್, ‘ನಮ್ಮದು ಚಿಕ್ಕ ಸಮಾಜವಾದರೂ ವಾಸ್ತುಶಿಲ್ಪ ಕ್ಷೇತ್ರಕ್ಕೆ ವಿಶ್ವಕರ್ಮ ಸಮಾಜದ ಕೊಡುಗೆ ಅನನ್ಯ. ರಾಮ ಮಂದಿರ ನಿರ್ಮಾಣಕ್ಕೂ ಸಮುದಾಯದವರು ದೊಡ್ಡ ಕೊಡುಗೆ ನೀಡುತ್ತಿದ್ದಾರೆ. ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕು. ಜ್ಯುವೆಲ್ಲರಿ ಪಾರ್ಕ್ ನಿರ್ಮಾಣಕ್ಕೆ ಸಚಿವ ಸಂಪುಟದ ಅನುಮೋದನೆ ದೊರೆತಿದೆ. ಅದರ ನಿರ್ವಹಣೆಯನ್ನು ನಿಗಮಕ್ಕೆ ನೀಡಬೇಕು. ಉತ್ತರ ಕರ್ನಾಟಕ ಭಾಗದಲ್ಲಿ ಕಲಾ ಪ್ರದರ್ಶನ ಆಯೋಜನೆ, ರೈಲ್ವೆ ನಿಲ್ದಾಣ ಹಾಗೂ ವಿವಿಧೆಡೆ ವಸ್ತು ಪ್ರದರ್ಶನ ಗಳನ್ನು ಸರ್ಕಾರ ಹಮ್ಮಿಕೊಳ್ಳಬೇಕು’ ಎಂದು ಅವರು ಆಗ್ರಹಿಸಿದರು.



ಕೋಟ ಶ್ರೀನಿವಾಸ ಪೂಜಾರಿ ಅವರು ವಿಶ್ವಕರ್ಮ ಸಮಾಜದ ಸ್ವಾಮೀಜಿಗಳು ಹಾಗೂ ಮುಖಂಡರ ಜತೆಗೆ ಸಮಾಲೋಚನೆ ನಡೆಸಿದರು. ವಿಜಯಪುರದ ಮೂರುಜಾವದ ಮಠದ ಮಹೇಂದ್ರ ಸ್ವಾಮೀಜಿ, ಬಾಬು ಪತ್ತಾರ್, ನಿಟ್ಟರಹಳ್ಳಿ ವಿಶ್ವಕರ್ಮ ಸಂಪನ್ಮೂಲ ಮಠದ ಪೀಠಾಧಿಪತಿ ನೀಲಕಂಠಾಚಾರ್ಯ ಸ್ವಾಮೀಜಿ, ಶಿವಸುಜ್ಞಾನ ತೀರ್ಥ ಸ್ವಾಮೀಜಿ, ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ (ಒಬಿಸಿ) ಮೋರ್ಚಾದ ಅಧ್ಯಕ್ಷ ನೆ.ಲ.ನರೇಂದ್ರಬಾಬು ಇದ್ದಾರೆ.– ಪ್ರಜಾವಾಣಿ ಚಿತ್ರ

ಮೆಟ್ರೊ ರೈಲು ತಾತ್ಕಾಲಿಕ ಸ್ಥಗಿತ

ಬೆಂಗಳೂರು: ಮೆಟ್ರೊ ರೈಲು ನೇರಳೆ ಮಾರ್ಗದಲ್ಲಿ ನಿರ್ವಹಣಾ ಕಾಮಗಾರಿಯನ್ನು ಬಿಎಂಆರ್‌ಸಿಎಲ್ ಕೈಗೆತ್ತಿಕೊಂಡಿದ್ದು, ಎಂ.ಜಿ. ರಸ್ತೆಯಿಂದ ಬೈಯಪ್ಪನಹಳ್ಳಿ ತನಕ ರೈಲುಗಳ ಸಂಚಾರ ಶನಿವಾರ ರಾತ್ರಿ 9.30ರ ನಂತರ ತಾತ್ಕಾಲಿಕವಾಗಿ ಸ್ಥಗಿತಗೊಳ್ಳಲಿದೆ.

ಎಂ.ಜಿ.ರಸ್ತೆ ಮತ್ತು ಟ್ರಿನಿಟಿ ಮೆಟ್ರೊ ನಿಲ್ದಾಣಗಳ ನಡುವೆ ಕಾಮಗಾರಿ ನಿರ್ವಹಿಸಲಾಗುತ್ತಿದೆ. ಬೈಯಪ್ಪನಹಳ್ಳಿಯಿಂದ ಅಂದು ಕೊನೆಯ ರೈಲು ರಾತ್ರಿ 9.30ಕ್ಕೆ ಹೊರಡಲಿದೆ. ಬೈಯಪ್ಪನಹಳ್ಳಿ ತನಕ ಹೋಗುವ ಕೊನೆಯ ರೈಲು ಕೆಂಗೇರಿ ಮೆಟ್ರೊ ನಿಲ್ದಾಣದಿಂದಲೂ 8.40ಕ್ಕೆ ಹೊರಡಲಿದೆ.

ರಾತ್ರಿ 9.30ರ ನಂತರ ಕೆಂಗೇರಿಯಿಂದ ಎಂ.ಜಿ.ರಸ್ತೆ ತನಕ ಮಾತ್ರ ರೈಲುಗಳು ಸಂಚರಿಸಲಿವೆ. ಭಾನುವಾರ ಬೆಳಿಗ್ಗೆ ವೇಳೆಗೆ ಕಾಮಗಾರಿ ಪೂರ್ಣಗೊಳ್ಳಲಿದ್ದು, ಬೆಳಿಗ್ಗೆ 7 ಗಂಟೆಯಿಂದ ವೇಳಾಪಟ್ಟಿಯಂತೆ ಎಲ್ಲ ಮಾರ್ಗಗಳಲ್ಲೂ ರೈಲುಗಳ ಸಂಚಾರ ಪುನರ್ ಆರಂಭವಾಗಲಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಸೇವಾವಧಿ ಐದು ವರ್ಷಕ್ಕೆ ಇಳಿಕೆ

ಬೆಂಗಳೂರು: ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಪೊಲೀಸ್ ಕಾನ್‌ಸ್ಟೆಬಲ್‌ಗಳ ವರ್ಗಾವಣೆ ನಿಯಮ ತಿದ್ದುಪಡಿ ಮಾಡಲಾಗಿದ್ದು, ಒಂದು ಸ್ಥಳದಲ್ಲಿ ಕೆಲಸ ಮಾಡುವ ಕನಿಷ್ಠ ಸೇವಾವಧಿಯನ್ನು 5 ವರ್ಷಕ್ಕೆ ಇಳಿಸಲಾಗಿದೆ.

ಈ ಬಗ್ಗೆ ಆಡಳಿತ ವಿಭಾಗದ ನಿಶಾ ಜೇಮ್ಸ್ ಆದೇಶ ಹೊರಡಿಸಿದ್ದಾರೆ.

‘ಒಂದೇ ಸ್ಥಳದಲ್ಲೇ ಹಲವು ವರ್ಷಗಳಿಂದ ಕಾನ್‌ಸ್ಟೆಬಲ್‌ಗಳು ಕೆಲಸ ಮಾಡುತ್ತಿದ್ದರು. ಇದು, ಆಡಳಿತದ ಮೇಲೆ ಪರಿಣಾಮ ಬೀರಿತ್ತು. ಹೀಗಾಗಿ, ಕನಿಷ್ಠ ಸೇವಾವಧಿಯನ್ನು 6 ವರ್ಷದಿಂದ 5 ವರ್ಷಕ್ಕೆ ಇಳಿಸಲಾಗಿದೆ. ಈ ಹೊಸ ನಿಯಮದನ್ವಯ ಸದ್ಯದಲ್ಲೇ ವರ್ಗಾವಣೆಯೂ ಆಗಲಿದೆ’ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಹಲವೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ತುರ್ತು ಕಾರ್ಯನಿರ್ವಹಣೆ ಕೈಗೊಂಡಿರುವುದರಿಂದ ಇದೇ 25ರಂದು ನಗರದ ಜಾಲಹಳ್ಳಿ ವಿಭಾಗದ ಹಲವೆಡೆ ಮಧ್ಯಾಹ್ನ 12ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಸ್ಥಳಗಳು: ಗಂಗಮ್ಮ ಸರ್ಕಲ್, ಎಚ್‌ಎಂಟಿ ಪ್ರದೇಶ, ನಾಗಲ್ಯಾಂಡ್ ಸರ್ಕಲ್, ಬೆಲ್ ಕ್ವಾರ್ಟರ್ಸ್, ದೊಡ್ಡಬೊಮ್ಮಸಂದ್ರ ಮುಖ್ಯ ರಸ್ತೆ, ಮುನೇಶ್ವರಸ್ವಾಮಿ ಬ್ಲಾಕ್, ಬ್ಲೂಮ್ ಫೀಲ್ಡ್ ಗಾರ್ಡನ್, ಪಟೇಲ್ ಪಿಳ್ಳೆಗೌಡ ಬಡಾವಣೆ, ದೇವಪ್ಪ ಬಡಾವಣೆ, ಜಾಲಹಳ್ಳಿ ಗ್ರಾಮ, ಎಂಇಎಸ್ ರಸ್ತೆ, ಬಾಹುಬಲಿ ನಗರ, ಶಾರದಾಂಭ ನಗರ, ಮುತ್ಯಾಲನಗರ, ರೇಣುಕಾಂಬ ಟೆಂಟ್ ಹೌಸ್, ಮುತ್ಯಾಲಮ್ಮ ದೇವಸ್ಥಾನ, ಚಾಮುಂಡೇಶ್ವರಿ ಬಡಾವಣೆ, ನಂಜಪ್ಪ ಸರ್ಕಲ್, ಮೂವನ್‌ಪಿಕ್ ಹೊಟೆಲ್, ಡಿಆರ್‌ಡಿಒ ಸಂಶೋಧನಾ ಕೇಂದ್ರ ಸುತ್ತ ಪ್ರದೇಶ.

ಚಿಕ್ಕಬಳ್ಳಾಪುರ ಹೂವು ಬೆಳೆಗಾರರ ಅರ್ಜಿ: ಎಪಿಎಂಸಿಯೇ ಸೂಕ್ತ ಎಂದ ಹೈಕೋರ್ಟ್

‘ಕೆ.ವಿ.ಕ್ಯಾಂಪಸ್ ಬಳಿ ವ್ಯಾಪಾರ–ವಹಿವಾಟು ಸಲ್ಲ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಚಿಕ್ಕಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ (ಎಪಿಎಂಸಿ) ಪ್ರಾಂಗಣದಲ್ಲಿ ನಮ್ಮ ವ್ಯಾಪಾರ–ವಹಿವಾಟು ನಡೆಸುವುದಿಲ್ಲ. ಬದಲಿಗೆ ಕೆ.ವಿ. ಕ್ಯಾಂಪಸ್ ಬಳಿಯೇ ನಡೆಸುತ್ತೇವೆ, ಅದಕ್ಕೆ ಅನುಮತಿ ನೀಡಬೇಕು’ ಎಂದು ಕೋರಿದ್ದ ಅರ್ಜಿದಾರರ ಮನವಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಎಪಿಎಂಸಿ ‘ರವಿ ಫ್ಲವರ್ ಸ್ಟಾಲ್’ನ ಕೆ.ರವೀಂದ್ರ ಸೇರಿದಂತೆ ಒಟ್ಟು ಐವರು ಸಲ್ಲಿಸಿದ್ದ ಅರ್ಜಿಯನ್ನು ಶುಕ್ರವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಅರ್ಜಿದಾರರ ಮನವಿ ವಿಚಾರಣೆಗೆ ಯೋಗ್ಯವಾಗಿಲ್ಲ’ ಎಂದು ಅಭಿಪ್ರಾಯಪಟ್ಟಿದೆ.

ಇದೇ ಪ್ರಕರಣದಲ್ಲಿ ಮಧ್ಯಂತರ ಅರ್ಜಿ ಸಲ್ಲಿಸಿದ್ದ ಜಿ.ಎಂ.ಶ್ರೀಧರ, ಕ್ಯಾತಪ್ಪ, ನವೀನ್ ಕುಮಾರ್ ಮತ್ತು ರಮೇಶ್ ರೆಡ್ಡಿ ಮನವಿಯನ್ನು ಮಾನ್ಯ ಮಾಡಿರುವ ನ್ಯಾಯಪೀಠವು, ‘ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟು ನಡೆಸಲು ಪರವಾನಗಿ ಪಡೆದು ಬೇರೊಂದು ಜಾಗದಲ್ಲಿ ನಿಮ್ಮ ವ್ಯಾಪಾರ ನಡೆಸುತ್ತೀರಿ ಎಂದಾದರೆ ನಿಮ್ಮ ಪರವಾನಗಿಯನ್ನು ಯಾಕೆ ರದ್ದುಗೊಳಿಸಬಾರದು’ ಎಂದು ಕೆ.ರವೀಂದ್ರ ಸೇರಿದಂತೆ ಐವರು ಅರ್ಜಿದಾರರನ್ನು ತರಾಟೆಗೆ ತೆಗೆದುಕೊಂಡಿತು.

ವಿಚಾರಣೆ ವೇಳೆ ಜಿ.ಎಂ.ಶ್ರೀಧರ ಮತ್ತಿತರರ ಪರ ವಾದ ಮಂಡಿಸಿದ ವಕೀಲ ಎಂ.ಶಿವಪ್ರಕಾಶ್, ‘ಅರ್ಜಿದಾರ ಕೆ.ರವೀಂದ್ರ ಮತ್ತಿತರರು, ಕೆ.ವಿ. ಕ್ಯಾಂಪಸ್ ಬಳಿ ವ್ಯಾಪಾರ ನಡೆಸುತ್ತೇವೆ ಎಂಬ ತೀರ್ಮಾನವು ರಾಜಕೀಯ ಪ್ರೇರಿತವಾಗಿದೆ. ಅದಕ್ಕೆ ಅವಕಾಶ ನೀಡಬಾರದು. ಈ ಅರ್ಜಿ ವಿಚಾರಣೆಗೆ ಯೋಗ್ಯವಲ್ಲ ಎಂಬ ಅಂಶವನ್ನು ನ್ಯಾಯಪೀಠ ಗಂಭೀರವಾಗಿ ಪರಿಗಣಿಸಬೇಕು’ ಎಂದು ಮನವಿ ಮಾಡಿದರು.

‘ಒಂದು ವೇಳೆ ಅರ್ಜಿದಾರರು ಎಪಿಎಂಸಿಯಿಂದ ಹೊರಗೆ ವಹಿವಾಟು ನಡೆಸಿದರೆ ಸರ್ಕಾರದ ಬೊಕ್ಕಸಕ್ಕೆ ಬರುವ ಆದಾಯಕ್ಕೆ ಹೊಡೆತ ಬೀಳುತ್ತದೆ. ಅಷ್ಟೇ ಅಲ್ಲ, ಎಪಿಎಂಸಿಯಲ್ಲಿ 17 ಎಕರೆ ಪ್ರದೇಶದಷ್ಟು ವಿಶಾಲ ಜಾಗದಲ್ಲಿ ಹೂವು ಮಾರಾಟ ರೈತರಿಗೆ ಎಲ್ಲ ಸೌಲಭ್ಯಗಳು ಇದ್ದಾಗ್ಯು ಹೊರಗೆ ವಹಿವಾಟು ನಡೆಸಲು ಅಡ್ಡಿಪಡಿಸಬಾರದು ಎಂಬ ಮನವಿ ಯುಕ್ತವಲ್ಲ’ ಎಂದು ಪ್ರತಿಪಾದಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಪರವಾನಗಿ ಹೊಂದಿದ ರೈತರು ಎಪಿಎಂಸಿಯಲ್ಲೇ ವ್ಯಾಪಾರ ವಹಿವಾಟು ನಡೆಸುವಂತೆ ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿತು.

ಸುತ್ತೋಲೆ ಪ್ರಶ್ನೆ: ಇತ್ತೀಚೆಗಷ್ಟೇ ಚಿಕ್ಕಬಳ್ಳಾಪುರ ಎಪಿಎಂಸಿ ಕಾರ್ಯದರ್ಶಿ, ’ಪರವಾನಗಿ ಪಡೆದಿರುವ ವರ್ತಕರು ಮಾರುಕಟ್ಟೆ ಪ್ರಾಂಗಣದಲ್ಲಿ ಪರವಾನಗಿ ಮತ್ತು ನಿಯಮಗಳಿಗೆ ಅನ್ವಯವಾಗಿ ವ್ಯಾಪಾರ, ವಹಿವಾಟು ನಡೆಸಲು ಆದೇಶಿಸಲಾಗಿರುತ್ತದೆ’ ಎಂದು ಸುತ್ತೋಲೆ ಹೊರಡಿಸಿದ್ದರು.

‘ಕೆ.ವಿ.ಕ್ಯಾಂಪಸ್ ಬಳಿಯಿರುವ ತಾತ್ಕಾಲಿಕ ಹೂವಿನ ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿರುವ ಎಲ್ಲ ಹೂವಿನ ವರ್ತಕರು, ದಲ್ಲಾಲರು, ಎಪಿಎಂಸಿ ಕಾಯ್ದೆ–1966ರ ಕಲಂ 72ರ ಅಡಿಯಲ್ಲಿ ಸಮಿತಿಯಿಂದ ಪಡೆದಿರುವ ಪರವಾನಗಿ ಮತ್ತು ಷರತ್ತುಗಳಿಗೆ ಒಳಪಟ್ಟು ಎಪಿಎಂಸಿ ಪ್ರಾಂಗಣದಲ್ಲೇ ವ್ಯಾಪಾರ ವಹಿವಾಟು ನಡೆಸಲು ತಿಳಿಯಪಡಿಸಿದೆ’ ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿತ್ತು.

ಈ ಸುತ್ತೋಲೆಯನ್ನು ಪ್ರಶ್ನಿಸಿ ಕೆ.ರವೀಂದ್ರ ಮತ್ತಿತರರು ರಿಟ್ ಅರ್ಜಿ ಸಲ್ಲಿಸಿ, ‘ಕೆ.ವಿ.ಕ್ಯಾಂಪಸ್ ಬಳಿ ನಡೆಸುತ್ತಿರುವ ವ್ಯಾಪಾರ ವಹಿವಾಟಿಗೆ ಅಡ್ಡಿಪಡಿಸಬಾರದು’ ಎಂದು ಮನವಿ ಮಾಡಿದ್ದರು.

ಕೋರ್ಟ್ ಆದೇಶದ ಪ್ರಕಾರ ಸುತ್ತೋಲೆ

‘ಕೋವಿಡ್ ಮಾರ್ಗಸೂಚಿ ನೆಪದಲ್ಲಿ ನಮ್ಮ ದೈನಂದಿನ ವ್ಯಾಪಾರಕ್ಕೆ ಅನುಮತಿ ನೀಡದೇ ಅಡ್ಡಿಪಡಿಸಿ ಪೊಲೀಸ್ ನೋಟಿಸ್ ನೀಡಲಾಗಿದೆ’ ಎಂದು ಆಕ್ಷೇಪಿಸಿ ಚಿಕ್ಕಬಳ್ಳಾಪುರ ತಿರುಮಲ ಫ್ಲವರ್ ಸ್ಟಾಲ್ ಮಾಲೀಕ ಜಿ.ಎಂ. ಶ್ರೀಧರ ಹಾಗೂ ಕರಿಗನಪಾಳ್ಯದ ರಮೇಶ್ ರೆಡ್ಡಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ 2022ರ ಏಪ್ರಿಲ್ 19ರಂದು ಮಾನ್ಯ ಮಾಡಿತ್ತು.

‘ಪರವಾನಗಿ ಹೊಂದಿದ ಹೂವು ವ್ಯಾಪಾರಸ್ಥರು ತಮ್ಮ ಚಟುವಟಿಕೆಯನ್ನು ಎಂದಿನಂತೆ ಕಾನೂನುಬದ್ಧವಾಗಿ ಮುಂದುವರಿಸಬಹುದು’ ಎಂಬ ಚಿಕ್ಕಬಳ್ಳಾಪುರ ಎಪಿಎಂಸಿ ಹೆಚ್ಚುವರಿ ನಿರ್ದೇಶಕ (ಯೋಜನಾ ವಿಭಾಗ) ಕೆ.ಎಂ.ನಾಗೇಶ್ ಸಲ್ಲಿಸಿದ್ದ ಜ್ಞಾಪನಾ ಪತ್ರಕ್ಕೆ ನ್ಯಾಯಪೀಠ ಪುರಸ್ಕಾರದ ಮುದ್ರೆ ಒತ್ತಿತ್ತು.

ಇದರನ್ವಯ ಎಪಿಎಂಸಿ ಕಾರ್ಯದರ್ಶಿ 2022ರ ಏಪ್ರಿಲ್ 22ರಂದು ಸುತ್ತೋಲೆ ಹೊರಡಿಸುವ ಮೂಲಕ, ಸರ್ ಎಂ.ವಿಶ್ವೇಶ್ವರಯ್ಯ ಹೂವಿನ ವರ್ತಕರ ಸಂಘ, ಚಿಕ್ಕಬಳ್ಳಾಪುರ ಹೂವಿನ ವರ್ತಕರ ಸಂಘಕ್ಕೆ ತಿಳಿವಳಿಕೆ ನೀಡಿ, ‘ಪರವಾನಗಿ ಹೊಂದಿದ ರೈತರು ಎಪಿಎಂಸಿ ಮಾರುಕಟ್ಟೆಯಲ್ಲೇ ನಿಮ್ಮ ವಹಿವಾಟು ನಡೆಸಿ’ ಎಂದು ಸೂಚಿಸಿತ್ತು.

‘ಆರು ವಾರಗಳ ಬಳಿಕ ₹ 5 ಚಿಕಿತ್ಸೆ’

ಹೃದಯಾಘಾತದಿಂದ ಚೇತರಿಸಿಕೊಂಡ ಡಾ.ಎಸ್.ಸಿ.ಶಂಕರೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೃದಯಾಘಾತದಿಂದ ಚೇತರಿಸಿಕೊಂಡಿದ್ದು, ವೈದ್ಯರ ಸಲಹೆ ಮೇರೆಗೆ ಆರು ವಾರಗಳು ವಿಶ್ರಾಂತಿ ಪಡೆದುಕೊಳ್ಳುತ್ತಿದ್ದೇನೆ. ಬಳಿಕ ಹಿಂದಿನಂತೆ ₹ 5 ಚಿಕಿತ್ಸೆಯನ್ನು ಮುಂದುವರೆಸುತ್ತೇನೆ’ ಎಂದು ಮಂಡ್ಯದ ಚರ್ಮರೋಗ ತಜ್ಞ ಡಾ.ಎಸ್.ಸಿ.ಶಂಕರೇಗೌಡ ತಿಳಿಸಿದರು.

ಶುಕ್ರವಾರ ಇಲ್ಲಿ ಫೋರ್ಟಿಸ್ ಆಸ್ಪತ್ರೆ ಆಯೋಜಿಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ತಿಂಗಳ ಹಿಂದೆ ಹೃದಯದಲ್ಲಿ ರಕ್ತದ ನಾಳಗಳು ಬ್ಲಾಕ್ ಆಗಿದ್ದ ಕಾರಣ ಹೃದಯಾಘಾತ ಸಂಭವಿಸಿತ್ತು. ಫೋರ್ಟಿಸ್ ಆಸ್ಪತ್ರೆ ವೈದ್ಯರು ನೀಡಿದ ಚಿಕಿತ್ಸೆಯಿಂದ ಈಗ ಗುಣಮುಖನಾಗಿದ್ದೇನೆ. 42 ವರ್ಷಗಳಿಂದ ಮಂಡ್ಯದಲ್ಲಿ ಚಿಕಿತ್ಸೆ ನೀಡುತ್ತಾ ಬಂದಿರುವುದು ನನಗೆ ಆತ್ಮತೃಪ್ತಿ ನೀಡಿದೆ. ಈ ವೃತ್ತಿ ಮುಂದುವರೆಸಿಕೊಂಡು ಹೋಗಲಿದ್ದೇನೆ. ರಾಜಕೀಯಕ್ಕೆ ಕಾಲಿಟ್ಟಮೇಲೂ ಜನರಿಗೆ ಉಚಿತವಾಗಿ ಚಿಕಿತ್ಸೆ ನೀಡುವ ಕಸುಬು ಬಿಡಲಿಲ್ಲ’ ಎಂದರು.



ಡಾ.ಎಸ್.ಸಿ.ಶಂಕರೇಗೌಡ ಅವರಿಗೆ ಡಾ. ವಿವೇಕ್ ಜವಳಿ ಅವರು ಶುಭ ಹಾರೈಸಿದರು

ಹೃದಯ ತಜ್ಞ ಡಾ.ವಿವೇಕ್ ಜವಳಿ, ‘67 ವರ್ಷದ ಶಂಕರೇಗೌಡ ಅವರ ಹೃದಯವು ಹೆಚ್ಚಿನ ಹಾನಿಗೆ ಒಳಗಾಗಿತ್ತು. ಮೊದಲು ಮೈಸೂರಿನಲ್ಲಿ ಆಸ್ಪತ್ರೆಗೆ ದಾಖಲಾಗಿ, ಚಿಕಿತ್ಸೆ ಪಡೆದುಕೊಂಡಿದ್ದರು. ಎದೆನೋವು ಹೆಚ್ಚಳವಾದ್ದರಿಂದ ಅವರನ್ನು ಇಲ್ಲಿಗೆ ಸ್ಥಳಾಂತರಿಸಲಾಗಿತ್ತು. ಸೂಕ್ತ ಸಮಯದಲ್ಲಿ ಸೂಕ್ತ ಚಿಕಿತ್ಸೆ ನೀಡುವ ಮೂಲಕ ಅವರನ್ನು ಪ್ರಾಣಾಪಾಯದಿಂದ ರಕ್ಷಿಸಲಾಗಿದೆ’ ಎಂದು ಹೇಳಿದರು.

ಯೆಮೆನ್ ಮಗುವಿಗೆ ನಗರದಲ್ಲಿ ಶಸ್ತ್ರಚಿಕಿತ್ಸೆ

ಬೆಂಗಳೂರು: ಮಿದುಳಿನ ರಕ್ತನಾಳಕ್ಕೆ ಸಂಬಂಧಿಸಿದ ಸಂಕೀರ್ಣ ಸಮಸ್ಯೆಯಿಂದ ಬಳಲುತ್ತಿದ್ದ ಯೆಮೆನ್‌ನ ಒಂದು ವರ್ಷದ ಹೆಣ್ಣುಮಗುವಿಗೆ ನಗರದ ಸ್ಪರ್ಶ್ ಆಸ್ಪತ್ರೆ ವೈದ್ಯರು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

‘ಈ ಸಮಸ್ಯೆಯನ್ನು ವೈದ್ಯರ ತಂಡ ‘ವೈನ್ ಆಫ್ ಗ್ಯಾಲನ್ ಮಾಲ್ಫಾರ್ಮೇಷನ್’ ಕಾಯಿಲೆ ಎಂದು ಗುರುತಿಸಿದೆ. ಇದು ಜನ್ಮಜಾತ ಕಾಯಿಲೆಯಾಗಿದೆ. ಈ ಸಮಸ್ಯೆಯಿಂದ ರಕ್ತನಾಳದಲ್ಲಿ ರಕ್ತದ ಹರಿಯುವಿಕೆಯಲ್ಲಿ ವ್ಯತ್ಯಾಸವಾಗಿತ್ತು. ಶಸ್ತ್ರಚಿಕಿತ್ಸೆಯಿಂದ ಮಗುವಿನ ಸಮಸ್ಯೆ ದೂರವಾಗಿದೆ. ಚೇತರಿಸಿಕೊಂಡ ಮಗುವನ್ನು ಮನೆಗೆ ಕಳುಹಿಸಲಾಗಿದೆ’ ಎಂದು ಆಸ್ಪತ್ರೆಯ ತಜ್ಞವೈದ್ಯ ಡಾ.ಎಂ.ವಿ. ಭಾಸ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಸರ: ಅಪರೂಪದ ರೊಬೊಟಿಕ್ ಶಸ್ತ್ರಚಿಕಿತ್ಸೆ ಆಸ್ಪತ್ರೆ

ಬೆಂಗಳೂರು: ‘ಆಸರ ಸಮೂಹ ಆಸ್ಪತ್ರೆ ಸಂಪೂರ್ಣ ರೊಬೊಟಿಕ್ ಶಸ್ತ್ರ ಚಿಕಿತ್ಸಾ ಕೇಂದ್ರವಾಗಿದೆ. ಯಾವುದೇ ಲೋಪಗಳಿಲ್ಲದೆ ನಿಖರವಾದ ಶಸ್ತ್ರಚಿಕಿತ್ಸೆಯನ್ನು ಕೈಗೆಟಕುವ ದರದಲ್ಲಿ ಲಭಿಸುವಂತೆ ಮಾಡುವುದು ಆಸ್ಪತ್ರೆಯ ಉದ್ದೇಶ’ ಎಂದು ಪ್ರಕಟಣೆ ಹೇಳಿಕೊಂಡಿದೆ.

‘ರಾಜ್ಯದಲ್ಲಿ ಮೆಕೋ ರೊಬೊಟಿಕ್-ಆರ್ಮ್ ಅಸಿಸ್ಟೆಡ್ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ಹೆಗ್ಗಳಿಕೆ ಆಸ್ಪತ್ರೆಯದ್ದಾಗಿದೆ’ ಎಂದು ಆಸ್ಪತ್ರೆ ಸಂಸ್ಥಾಪಕ ಮತ್ತು ಸಿಇಒ ಡಾ.ಜಗದೀಶ.ಜೆ. ಹಿರೇಮಠ ಹೇಳಿದರು.

‘ಆಸರ ಸಮೂಹ ಆಸ್ಪತ್ರೆಯಲ್ಲಿ ರೊಬೊಟಿಕ್ಸ್ ನೆರವಿನಿಂದ ಇಂಟೆಲಿಜೆಂಟ್ ರೊಬೊಟಿಕ್ ವೆಂಟಿಲೇಷನ್ ವ್ಯವಸ್ಥೆ, ಅಡ್ವಾನ್ಸ್ಡ್ ಕಂಪ್ಯೂಟರ್ ನೆರವಿನ ಚಿಕಿತ್ಸೆಗಳು, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆಧಾರಿತ ಸಾಫ್ಟ್‌ವೇರ್ ಪ್ಲಾಟ್ ಫಾರ್ಮ್ ಶಸ್ತ್ರಚಿಕತ್ಸೆ, ಆರೈಕೆಗಾಗಿ ನೂತನ ತಂತ್ರಜ್ಞಾನ ಲಭ್ಯ ಇವೆ’ ಎಂದು ತಿಳಿಸಿದರು.

ಗಂಟಲಿಗೆ ಸಿಲುಕಿದ ಲೋಹದ ಮೂರ್ತಿ, ಕೆಎಲ್‌ಇ ವೈದ್ಯರ ಯಶಸ್ವಿ ಶಸ್ತ್ರಚಿಕಿತ್ಸೆ

ಬೆಳಗಾವಿ: ಗಂಟಲಿನಲ್ಲಿ ಲೋಹದ ಕೃಷ್ಣನ ಚಿಕ್ಕಮೂರ್ತಿ ಸಿಕ್ಕಿಕೊಂಡು, ಪ್ರಾಣಾಪಾಯಕ್ಕೆ ಸಿಲುಕಿದ್ದ ವ್ಯಕ್ತಿಯೊಬ್ಬರಿಗೆ ಇಲ್ಲಿನ ಕೆಎಲ್‌ಇ ಸಂಸ್ಥೆಯ ಡಾ.ಪ್ರಭಾಕರ ಕೋರೆ ಆಸ್ಪತ್ರೆಯ ವೈದ್ಯರು ಯಶಸ್ವಿ ಶಸ್ತ್ರಚಿಕಿತ್ಸೆ ಮಾಡಿದ್ದಾರೆ.

ಈ ಅಪರೂಪದ ಶಸ್ತ್ರಚಿಕಿತ್ಸೆಯಲ್ಲಿ ವ್ಯಕ್ತಿ ಪ್ರಾಣಾಪಾಯದಿಂದ ಪಾರಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ.

45 ವರ್ಷದ ವ್ಯಕ್ತಿಯೊಬ್ಬರು ಪ್ರತಿದಿನ ಕೃಷ್ಣನ ಪೂಜೆ ಮಾಡಿದ ಬಳಿಕ, ಪುಟ್ಟ ಮೂರ್ತಿಯನ್ನು ಕೈಯಲ್ಲಿ ಇಟ್ಟುಕೊಂಡು ತೀರ್ಥ ಸೇವಿಸುವ ರೂಢಿ ಬೆಳೆಸಿಕೊಂಡಿದ್ದರು. ಈಚೆಗೆ ತೀರ್ಥ ಸೇವಿಸುವಾಗ ಅದರ ಜತೆಗೆ 5 ಸೆ.ಮೀ ಉದ್ದದ ಕೃಷ್ಣನ ಮೂರ್ತಿಯೂ ಗಂಟಲಿಗೆ ಇಳಿದಿತ್ತು. ಕೆಲ ದಿನಗಳ ನಂತರ ಗಂಟಲಿನಲ್ಲಿ ಊತ ಉಂಟಾಗಿ, ನೋವು ಕಾಣಿಸಿಕೊಂಡಿತು. ವೈದ್ಯರನ್ನು ಸಂಪರ್ಕಿಸಿ, ಎಕ್ಸ್–ರೇ ತೆಗೆಸಿ ನೋಡಿದಾಗ ಗಂಟಲಲ್ಲಿ ಲೋಹದ ಮೂರ್ತಿ ಸಿಲುಕಿದ್ದು ಕಂಡುಬಂತು.




ಗಂಟಲಿನಿಂದ ಹೊರತೆಗೆದ ಕೃಷ್ಣನ ಲೋಹದ ಮೂರ್ತಿ

ಬಳಿಕ ಅವರನ್ನು ಡಾ.ಪ್ರಭಾಕರ ಕೋರೆ ಆಸ್ಪತ್ರೆಯಲ್ಲಿನ ತಜ್ಞವೈದ್ಯರು ಎಂಡೊಸ್ಕೋಪಿ ಮೂಲಕ ಪರಿಶೀಲಿಸಿದಾಗ, ಮೂರ್ತಿಯ ಎಡಗಾಲು ವ್ಯಕ್ತಿಯ ಅನ್ನನಾಳದಲ್ಲಿ ಸಿಲುಕಿದ್ದು ಗೊತ್ತಾಯಿತು. ಹೀಗಾಗಿ, ಇದನ್ನು ಹೊರತೆಗೆಯುವುದು ದೊಡ್ಡ ಸವಾಲಾಗಿ ಪರಿಣಮಿಸಿತ್ತು.

ಆಸ್ಪತ್ರೆಯ ಇಎನ್‌ಟಿ ವಿಭಾಗದ ವೈದ್ಯರಾದ ಡಾ.ಪ್ರೀತಿ ಹಜಾರೆ, ಡಾ.ವಿನಿತಾ ಮೆಟಗುಟ್ಟಮಠ, ಅರಿವಳಿಕೆ ತಜ್ಞ ಡಾ.ಚೈತನ್ಯ ಕಾಮತ್ ಹಾಗೂ ಶುಶ್ರೂಷಕರ ತಂಡ ಶ್ರಮಪಟ್ಟು ಯಶಸ್ವಿ ಶಸ್ತಚಿಕಿತ್ಸೆ ನೆರವೇರಿಸಿತು. ವೈದ್ಯರು, ಸಿಬ್ಬಂದಿಯ ಈ ಕಾರ್ಯ ಕೌಶಲಕ್ಕೆ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪಿಯುಸಿ ಸಾಧಕರು



ಪ್ರತೀಕ್ಷಾ ಮರಕಿಣಿ (ವಾಣಿಜ್ಯ ವಿಭಾಗ: ಶೇ 97.83) ಶೇಷಾದ್ರಿಪುರಂ ಕಾಂಪೋಸಿಟ್ ಪಿ.ಯು. ಕಾಲೇಜು

ಸ್ಫೂರ್ತಿ ಜಿ.ಎಸ್. (ವಾಣಿಜ್ಯ ವಿಭಾಗ: ಶೇ 95) ಪಿಇಎಸ್ ಪಿಯು ಕಾಲೇಜು, ಹನುಮಂತನಗರ

ಎಸ್. ಅಕ್ಷತಾ (ವಿಜ್ಞಾನ ವಿಭಾಗ: ಶೇ 98.83) ಪ್ರೆಸಿಡೆನ್ಸಿ ಪಿಯು ಕಾಲೇಜು

ಜಿ. ಕಾರ್ತಿಕ್ (ವಿಜ್ಞಾನ ವಿಭಾಗ: ಶೇ 96)ಕುಮಾರನ್ಸ್ ಚಿಲ್ಡ್ರನ್ಸ್ ಹೋಮ್ ಕಂಪೋಸಿಟ್ ಜೂನಿಯರ್ ಕಾಲೇಜು


ಪ್ರಜ್ವಲ್ ಎಂ. ವಣರೊಟ್ಟಿ (ವಿಜ್ಞಾನ ವಿಭಾಗ: ಶೇ 96.66)ಸಿ. ಕದಂಬಿ ಪಿಯು ಕಾಲೇಜು

ಕೊವೊವ್ಯಾಕ್ಸ್ ತುರ್ತು ಬಳಕೆ ಅನುಮತಿಗೆ ತಜ್ಞರ ಸಮಿತಿ ಶಿಫಾರಸು

ನವದೆಹಲಿ (ಪಿಟಿಐ): 7ರಿಂದ 11 ವರ್ಷದೊಳಗಿನ ಮಕ್ಕಳಿಗೆ ಪುಣೆ ಮೂಲದ ಸೀರಂ ಇನ್‌ಸ್ಟಿಟ್ಯೂಟ್ (ಎಸ್‌ಐಐ) ತಯಾರಿಸಿರುವ ಕೊವೊವ್ಯಾಕ್ಸ್ ಲಸಿಕೆಯ ತುರ್ತು ಬಳಕೆಯ ಅನುಮತಿಗೆ ಕೇಂದ್ರ ಔಷಧ ಪ್ರಾಧಿಕಾರದ ತಜ್ಞರ ಸಮಿತಿ ಶುಕ್ರವಾರ ಶಿಫಾರಸು ಮಾಡಿದೆ.

ನಿಧನ ವಾರ್ತೆ

ಉಲಗನಾಥನ್



ಬೆಂಗಳೂರು: ‘ಡೆಕ್ಕನ್ ಹೆರಾಲ್ಡ್’ ಪತ್ರಿಕೆಯ ನಿವೃತ್ತ ಸುದ್ದಿ ಸಂಪಾದಕ ಉಲಗನಾಥನ್ (64) ಗುರುವಾರ ರಾತ್ರಿ ಹೃದಯಾಘಾತದಿಂದ ಇಂದಿರಾನಗರದ ನಿವಾಸದಲ್ಲಿ ನಿಧನರಾದರು.

ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರಿದ್ದಾರೆ. ಅಮೆರಿಕದಲ್ಲಿರುವ ಒಬ್ಬ ಪುತ್ರಿ ಬೆಂಗಳೂರಿಗೆ ಮರಳಿದ ನಂತರ ಕಾಕ್ಸ್ ಟೌನ್‌ನ ಕಲ್ಲಹಳ್ಳಿ ಚಿತಾಗಾರದಲ್ಲಿ ಭಾನುವಾರ ಅಂತಿಮ ಸಂಸ್ಕಾರ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ರಂಗಕರ್ಮಿ ಎಚ್.ವಿ. ವೇಣುಗೋಪಾಲ್



ಬೆಂಗಳೂರು: ಬಸವನಗುಡಿ ನ್ಯಾಷನಲ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಮತ್ತು ರಂಗಕರ್ಮಿ ಎಚ್.ವಿ. ವೇಣುಗೋಪಾಲ್ (ಎಚ್‌ವಿವಿ) (66) ಶುಕ್ರವಾರ ಸಂಜೆ ಹೃದಯಸ್ತಂಭನದಿಂದ ನಿಧನರಾದರು.

ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ. ವೇಣುಗೋಪಾಲ್ ಅವರು ‘ಸಮುದಾಯ’ ರಂಗ ಸಂಘಟನೆಯಲ್ಲಿ ಸಕ್ರಿಯರಾಗಿದ್ದರು. ಕಾಲೇಜು ವಿದ್ಯಾರ್ಥಿಗಳನ್ನು ರಂಗಭೂಮಿಯತ್ತ ಸೆಳೆದು ಪ್ರೋತ್ಸಾಹ ನೀಡಿದ್ದರು.

ಭದ್ರಾವತಿ ಮೂಲದ ಅವರು, ಗೌರಿಬಿದನೂರು ನ್ಯಾಷನಲ್ ಕಾಲೇಜಿನಿಂದ ವೃತ್ತಿ ಆರಂಭಿಸಿದ್ದರು. 1995ರಿಂದ ಬೆಂಗಳೂರಿನ ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದರು.

‘ಸುತ್ತಿಕೊಂಡರೆ ಸರ್ಪ’, ‘ನಮೋ ವೆಂಕಟೇಶ’, ‘ಅಭಿನವ ಬೃಹನ್ನಳ ವಿಲಾಸ’ ನಾಟಕಗಳನ್ನು ಕನ್ನಡಕ್ಕೆ ರೂಪಾಂತರ ಮಾಡಿದ್ದರು. ವೇಣುಗೋಪಾಲ್ ಅವರಿಗೆ ಸಂಸ ಪ್ರಶಸ್ತಿ ಮತ್ತು ನಾಟಕ ಅಕಾಡೆಮಿ ಪ್ರಶಸ್ತಿಗಳು ಸಂದಿದ್ದವು. ಬನಶಂಕರಿ ಚಿತಾಗಾರದಲ್ಲಿ ಶನಿವಾರ ಬೆಳಿಗ್ಗೆ 9.30ಕ್ಕೆ ಅಂತಿಮ ಸಂಸ್ಕಾರ ನಡೆಯಲಿದೆ.

ನಗರದಲ್ಲಿ 5 ಸಾವಿರದತ್ತ ಸಕ್ರಿಯ ಪ್ರಕರಣ

ಬೆಂಗಳೂರು: ನಗರದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಳದಿಂದ ಸಕ್ರಿಯ ಪ್ರಕರಣಗಳ ಸಂಖ್ಯೆ 5 ಸಾವಿರದ ಗಡಿ (4,929) ಸಮೀಪಿಸಿದೆ.

ಬೆಂಗಳೂರಿನಲ್ಲಿ 776 ಸೇರಿದಂತೆ ರಾಜ್ಯದಲ್ಲಿ 816 ಪ್ರಕರಣಗಳು ಶುಕ್ರವಾರ ವರದಿಯಾಗಿವೆ. ಮರಣ ಪ್ರಕರಣ ಹೊಸದಾಗಿ ವರದಿಯಾಗಿಲ್ಲ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ 665 ಮಂದಿ ಒಳಗೊಂಡಂತೆ ರಾಜ್ಯದಲ್ಲಿ 703 ಮಂದಿ ಹೊಸದಾಗಿ ಚೇತರಿಸಿಕೊಂಡಿದ್ದಾರೆ. ನಗರದಲ್ಲಿ ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 17.99 ಲಕ್ಷಕ್ಕೆ ಏರಿಕೆಯಾಗಿದೆ. ಸೋಂಕಿತರಲ್ಲಿ ಈವರೆಗೆ 17.77 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ. ಸದ್ಯ 59 ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ. 47 ಮಂದಿ ಸಾಮಾನ್ಯ ಹಾಸಿಗೆ, 10 ಮಂದಿ ಐಸಿಯು ಹಾಸಿಗೆ ಹಾಗೂ ಇಬ್ಬರು ಎಚ್‌ಡಿಯು ಹಾಸಿಗೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ದೈನಂದಿನ ಕೋವಿಡ್ ಪರೀಕ್ಷೆಗಳ ಸಂಖ್ಯೆ 17 ಸಾವಿರ ಸಮೀಪಿಸಿದೆ. ಸೋಂಕು ದೃಢ ಪ್ರಮಾಣ ಶೇ 4ರ ಗಡಿ ದಾಟಿದೆ. ವಾರದಲ್ಲಿ 1.01 ಲಕ್ಷ ಪರೀಕ್ಷೆಯನ್ನು ನಡೆಸಲಾಗಿದ್ದು, 4,552 ಮಂದಿಗೆ ಕೋವಿಡ್ ದೃಢ ಪಟ್ಟಿದೆ. ಈ ಅವಧಿಯಲ್ಲಿ 3,931 ಮಂದಿ ಚೇತರಿಸಿಕೊಂಡಿದ್ದಾರೆ. ಇಬ್ಬರು ಮೃತಪಟ್ಟಿರುವುದು ದೃಢಪಟ್ಟಿದೆ. ಈ ತಿಂಗಳ ಮೊದಲ ವಾರದಲ್ಲಿ ಸೋಂಕು ದೃಢ ಪ್ರಮಾಣ ಶೇ 2ರ ಗಡಿಯೊಳಗಿತ್ತು. ಈಗ ಅದು ಐದರ ಗಡಿ ಸಮೀಪಿಸಿದೆ. ಒಂದು ವಾರದಿಂದ ಪ್ರತಿನಿತ್ಯ ಸರಾಸರಿ 650 ಪ್ರಕರಣಗಳು ವರದಿಯಾಗುತ್ತಿವೆ.

ಅಧಿಕ ಸಕ್ರಿಯ ಪ್ರಕರಣಗಳನ್ನು ಹೊಂದಿರುವ ಮಹಾನಗರಗಳಲ್ಲಿ ಬೆಂಗಳೂರು 3ನೇ ಸ್ಥಾನದಲ್ಲಿದೆ. ಮುಂಬೈನಲ್ಲಿ 13 ಸಾವಿರಕ್ಕೂ ಅಧಿಕ ಸೋಂಕಿತರಿದ್ದಾರೆ. ನವದೆಹಲಿಯಲ್ಲಿ ಈ ಸಂಖ್ಯೆ 5 ಸಾವಿರದ ಗಡಿ ದಾಟಿದೆ. ಚೆನ್ನೈನಲ್ಲಿ 2 ಸಾವಿರಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿವೆ.

ಕೋವಿಡ್: ದೇಶದಲ್ಲಿ 17,336 ಹೊಸ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿದ್ದು, ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಅಂತ್ಯಗೊಂಡಂತೆ 24 ತಾಸುಗಳ ಅವಧಿಯಲ್ಲಿ ಹೊಸದಾಗಿ 17,336 ಪ್ರಕರಣಗಳು ದೃಢಪಟ್ಟಿವೆ.

ಇದು ಕಳೆದ ನಾಲ್ಕು ತಿಂಗಳ (124 ದಿನ) ಅವಧಿಯಲ್ಲಿ ಒಂದು ದಿನದಲ್ಲಿ ಪತ್ತೆಯಾದ ಗರಿಷ್ಠ ಸಂಖ್ಯೆಯಾಗಿದೆ. ದೈನಂದಿನ ಪ್ರಕರಣಗಳಲ್ಲಿ ಶೇ 30ರಷ್ಟು ಏರಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಇದೇ ಅವಧಿಯಲ್ಲಿ 13 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ದೇಶದಲ್ಲಿ ಒಟ್ಟು ಕೋವಿಡ್‌ಪೀಡಿತರ ಸಂಖ್ಯೆ 4,33,62,294ಕ್ಕೆ ತಲುಪಿದೆ. ಮೃತರ ಸಂಖ್ಯೆ 5,24,954ಕ್ಕೆ ತಲುಪಿದೆ.

ಹೊಸ ಪ್ರಕರಣಗಳೂ ಸೇರಿ ಸಕ್ರಿಯ ಪ್ರಕರಣಗಳ ಸಂಖ್ಯೆ 88,284ಕ್ಕೆ ಏರಿಕೆಯಾಗಿದೆ. ಚೇತರಿಕೆ ಪ್ರಮಾಣ ಶೇ 98.59 ರಷ್ಟಿದೆ. ದೈನಂದಿನ ಪಾಸಿಟಿವಿಟಿ ದರ ಶೇ 4.32ಕ್ಕೆ ಏರಿಕೆಯಾಗಿದೆ.

ಈ ನಡುವೆ ದೇಶದಾದ್ಯಂತ 196.77 ಕೋಟಿ ಡೋಸ್ ಲಸಿಕೆ ವಿತರಣೆ ಮಾಡಲಾಗಿದೆ.

ಹಳ್ಳದಲ್ಲಿ ಏಳು ಭ್ರೂಣಗಳು ಪತ್ತೆ

ಮೂಡಲಗಿ (ಬೆಳಗಾವಿ ಜಿಲ್ಲೆ): ಮೂಡಲಗಿ ಪಟ್ಟಣದ ಬಸ್ ನಿಲ್ದಾಣದ ಬಳಿಯ ಹಳ್ಳದಲ್ಲಿ, ಹತ್ಯೆ ಮಾಡಲಾದ 7 ಭ್ರೂಣಗಳು ಶುಕ್ರವಾರ ಪತ್ತೆಯಾಗಿವೆ.

ಬಟ್ಟೆ ತೊಳೆಯಲು ಬಂದ ಜನರಿಗೆ ಪ್ಲಾಸ್ಟಿಕ್ ಡಬ್ಬಗಳು ಕಂಡವು. ಹತ್ತಿರ ಹೋಗಿ ನೋಡಿದಾಗ ಅದರಲ್ಲಿ ಭ್ರೂಣಗಳನ್ನು ಹಾಕಿ, ಮುಚ್ಚಳ ಮುಚ್ಚಿದ್ದು ಗೊತ್ತಾಯಿತು. ಚಾಕೊಲೇಟ್ ಮಾರಾಟಕ್ಕೆ ಬಳಸುವ ಐದು ಡಬ್ಬಗಳಲ್ಲಿ ಏಳು ಭ್ರೂಣಗಳನ್ನು ಹಾಕಲಾಗಿತ್ತು.

ಸ್ಥಳಕ್ಕೆ ಬಂದ ಆರೋಗ್ಯ ಇಲಾಖೆ ಸಿಬ್ಬಂದಿ, ಪೊಲೀಸರು ಭ್ರೂಣಗಳಿದ್ದ ಡಬ್ಬಗಳನ್ನು ವಶಕ್ಕೆ ಪಡೆದರು. ಠಾಣೆಯಲ್ಲಿ ದೂರು ದಾಖಲಾದ ಬಳಿಕ ಅವುಗಳನ್ನು ಬೆಳಗಾವಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಸಾಗಿಸಲಾಯಿತು.



ದೇವನಹಳ್ಳಿಯ ವಿಮಾನ ನಿಲ್ದಾಣದಲ್ಲಿ ನಿರ್ಮಾಣ ಹಂತದಲ್ಲಿರುವ ಕೆಂಪೇಗೌಡರ ಕಂಚಿನ ಪುತ್ಥಳಿ ಕಾಮಗಾರಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪರಿಶೀಲಿಸಿದರು. ಸಚಿವ ಡಾ.ಅಶ್ವತ್ಥನಾರಾಯಣ, ಶಾಸಕ ರಾಜೂ ಗೌಡ ಸೇರಿದಂತೆ ಇತರರು ಉಪಸ್ಥಿತರಿದ್ದರು.

‘ಕೆಂಪೇಗೌಡರ ಪ್ರತಿಮೆ ಶೀಘ್ರವೇ ಅನಾವರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2 ಉದ್ಘಾಟನೆಯ ಸಂದರ್ಭದಲ್ಲೇ ನಾಡಪ್ರಭು ಕೆಂಪೇಗೌಡರ ಕಂಚಿನ ಪ್ರತಿಮೆ ಅನಾವರಣ ಮಾಡಲು ಉದ್ದೇಶಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ದೆಹಲಿಯಿಂದ ಶುಕ್ರವಾರ ರಾತ್ರಿ ಹಿಂದಿರುಗಿದ ಅವರು ವಿಮಾನ ನಿಲ್ದಾಣದ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಕೆಂಪೇಗೌಡರ ಬೃಹತ್ ಪ್ರತಿಮೆಯ ಸ್ಥಳಕ್ಕೆ ಭೇಟಿ ನೀಡಿದ ನಂತರ ಸುದ್ದಿಗಾರರ ಜತೆ ಮಾತನಾಡಿದರು.

‘ಪ್ರತಿಮೆ ನಿರ್ಮಾಣ ಕಾರ್ಯ ಅಂತಿಮಘಟ್ಟಕ್ಕೆ ಬಂದಿದೆ. ಉಕ್ಕು ಮತ್ತು ಕಂಚಿನಿಂದ ಮಾಡಲಾಗಿರುವ ಸುಮಾರು 108 ಅಡಿ ಎತ್ತರದ ಪ್ರತಿಮೆ 220 ಟನ್ ತೂಕವಿದೆ. ಕೆಂಪೇಗೌಡರ ಇಷ್ಟು ದೊಡ್ಡ ಪ್ರತಿಮೆ ಇನ್ನೆಲ್ಲಿಯೂ ಇಲ್ಲ. ಇದರ ಜೊತೆಗೆ ಸುತ್ತಲಿನ ಪ್ರದೇಶದ ಸೌಂದರ್ಯೀಕರಣವನ್ನೂ ಮಾಡಲಾಗುತ್ತಿದೆ. ಆದಷ್ಟೂ ಶೀಘ್ರದಲ್ಲಿ ಇದರ ಅನಾವರಣ ಮಾಡಬೇಕೆನ್ನುವುದು ನಮ್ಮೆಲ್ಲರ ಆಶಯ’ ಎಂದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಶಾಸಕ ರಾಜುಗೌಡ ಅವರೂ ಇದ್ದರು.

ಅಂತರನಿಗಮ ವರ್ಗ: ಸಂಭವನೀಯ ಪಟ್ಟಿ ಪ್ರಕಟ

ಬೆಂಗಳೂರು: ಸಾರಿಗೆ ಸಂಸ್ಥೆಗಳ ದರ್ಜೆ–3 ಮೇಲ್ವಿಚಾರಕೇತರ ಮತ್ತು ದರ್ಜೆ–4 ನೌಕರರ ಅಂತರ ನಿಗಮ ಸಂಭವನೀಯ ವರ್ಗಾವಣೆ ಪಟ್ಟಿ ಶುಕ್ರವಾರ ಪ್ರಕಟಗೊಂಡಿದ್ದು, ಆಕ್ಷೇಪಣೆ ಸಲ್ಲಿಸಲು ಜೂನ್ 28ರ ಸಂಜೆ 5.30 ತನಕ ಅವಕಾಶ ಕಲ್ಪಿಸಲಾಗಿದೆ.

ನಾಲ್ಕೂ ನಿಗಮಗಳಿಂದ ಒಟ್ಟಾರೆ 862 ನೌಕರರು ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿದ್ದು, 712 ನೌಕರರು ಸಂಭವನೀಯ ಪರಸ್ಪರ ವರ್ಗಾವಣೆ ಪಟ್ಟಿಯಲ್ಲಿ ಸೇರ್ಪಡೆಯಾಗಿದ್ದಾರೆ.

ksrtc.karnataka.gov.in ವೆಬ್‌ಸೈಟ್‌ನಲ್ಲಿ ಪಟ್ಟಿ ಪ್ರಕಟಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಮೂರೇ ದಿನದಲ್ಲಿ ಕಿತ್ತು ಹೋದ ಟಾರ್ ರೋಡ್ • ವಿವರಣೆ ಕೇಳಿದ ಪ್ರಧಾನಿ ಕಚೇರಿ

ಕೊಮ್ಮಘಟ್ಟ: ರಸ್ತೆ ಗುಂಡಿಗೆ ಮತ್ತೆ ತೇಪೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಭೇಟಿಗಾಗಿ ಅಭಿವೃದ್ಧಿಪಡಿಸಿದ್ದ ರಸ್ತೆ ಮೂರೇ ದಿನದಲ್ಲಿ ಕಿತ್ತುಹೋಗಿದೆ ಎಂಬ ಟ್ವೀಟ್ ಆಧರಿಸಿ ಪ್ರಧಾನಿ ಕಚೇರಿಯಿಂದ ವಿವರಣೆ ಕೇಳಿರುವ ಗುಂಡಿಗೆ ಈಗ ಮತ್ತೆ ತೇಪೆ ಹಾಕಲಾಗಿದೆ.

ಕೊಮ್ಮಘಟ್ಟದಿಂದ ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವ 100 ಅಡಿ ಲಿಂಕ್ ರಸ್ತೆಯಲ್ಲಿ ಈ ಗುಂಡಿ ಬಿದ್ದಿತ್ತು. ಮೋದಿ ಅವರು ಭಾಗವಹಿಸಿದ್ದ ಕಾರ್ಯಕ್ರಮ ನಡೆದ ಸುಮಾರು 500 ಮೀಟರ್ ದೂರದಲ್ಲಿ ಗುಂಡಿ ನಿರ್ಮಾಣವಾಗಿತ್ತು.

ಕಾವೇರಿ ಕುಡಿಯುವ ನೀರು ಸರಬರಾಜು 4ನೇ ಹಂತದ ಯೋಜನೆಯಡಿ ನೈಸ್ ರಸ್ತೆ ಜಂಕ್ಷನ್ ಸಮೀಪದ ಹೊಸ ಬೈರೋಹಳ್ಳಿ ಬಳಿ ನಿರ್ಮಾಣ ಆಗಲಿರುವ 25 ಲಕ್ಷ ಲೀಟರ್ ಸಾಮರ್ಥ್ಯದ ಜಲಸಂಗ್ರಹ ಕೇಂದ್ರದಿಂದ ಯಲಹಂಕ ತನಕ 65 ಕಿಲೋ ಮೀಟರ್ ಉದ್ದದ ಪೈಪ್‌ಲೈನ್ ಇದೇ ಮಾರ್ಗದಲ್ಲಿ ಹಾದುಹೋಗಿದೆ.

'ಈ ಪೈಪ್‌ಲೈನ್ ಹಾದುಹೋಗಿರುವ ಒಂದು ಜಾಗದಲ್ಲಿ ನೀರು ಸೋರಿಕೆ ಉಂಟಾಗಿದ್ದು, ರಸ್ತೆಯಲ್ಲಿ ಗುಂಡಿ ಬಿದ್ದಿತ್ತು. ಪ್ರಧಾನ ಮಂತ್ರಿ ಬರುವ ಕಾರ್ಯಕ್ರಮ ಇದ್ದಿದ್ದರಿಂದ ಈ ಗುಂಡಿಗೆ ತೇಪೆ ಹಾಕಲಾಗಿತ್ತು. ಕಾರ್ಯಕ್ರಮ ಮುಗಿದ ಬಳಿಕ ನೀರು ಸೋರಿಕೆಗೆ ಕಾರಣ ಹುಡುಕಿ ಸರಿಪಡಿಸುವ ಕಾಮಗಾರಿ ಆರಂಭಿಸಲಾಗಿತ್ತು' ಎಂದು ಬಿಬಿಎಂಪಿ ಅಧಿಕಾರಿಗಳು ಹೇಳುತ್ತಿದ್ದಾರೆ.

ಕೊಮ್ಮಘಟ್ಟದಿಂದ ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವ 100 ಅಡಿ ರಸ್ತೆ ಸಂಪೂರ್ಣ ಹಾಳಾಗಿ ವಾಹನ ಸಂಚಾರ ದುಸ್ತರವಾಗಿತ್ತು. ಕಾರ್ಯಕ್ರಮ ಮುಗಿದ ಬಳಿಕವೂ ಈ ರಸ್ತೆಯಲ್ಲಿ ಡಾಂಬರ್ ಹಾಕುವ ಕಾಮಗಾರಿ ಮುಂದುವರಿದಿದೆ. 'ಪ್ರಧಾನಿ ಬಂದು ಹೋದ ಕಾರಣಕ್ಕಾದರೂ ನಮ್ಮ ರಸ್ತೆಗಳು ಅಭಿವೃದ್ಧಿ ಕಂಡಿರುವುದು ಸಂತಸದ ವಿಷಯ' ಎನ್ನುತ್ತಾರೆ ಕೊಮ್ಮಘಟ್ಟದ ನಿವಾಸಿಗಳು.



ಕೊಮ್ಮಘಟ್ಟ ಬಳಿ ರಸ್ತೆಯಲ್ಲಿ ಬಿದ್ದಿದ್ದ ಗುಂಡಿಯನ್ನು ಬಿಬಿಎಂಪಿ ಮುಚ್ಚಿ ಡಾಂಬರ್ ತೇಪೆ ಹಾಕಿರುವುದು – ಪ್ರಜಾವಾಣಿ ಚಿತ್ರ

ಎಂಜಿನಿಯರ್‌ಗಳಿಗೆ ಶೋಕಾಸ್ ನೋಟಿಸ್

ಮರಿಯಪ್ಪನಪಾಳ್ಯ ರಸ್ತೆಯಲ್ಲಿ ಕಳಪೆ ಕಾಮಗಾರಿ ನಡೆದಿದೆ ಎಂಬ ವರದಿಗಳನ್ನು ಆಧರಿಸಿ ಮೂವರು ಎಂಜಿನಿಯರ್‌ಗಳಿಗೆ ಬಿಬಿಎಂಪಿ ನೋಟಿಸ್ ನೀಡಿದೆ.

'ಡಾಂಬರ್ ಪದರಗಳನ್ನು ಕೈಯಿಂದ ಕೀಳಬಹುದಾದ ದೃಶ್ಯಗಳನ್ನು ಗಮನಿಸಿದರೆ ಯಾವುದೇ ಪ್ರಮಾಣಿತ ಕಾರ್ಯವಿಧಾನ(ಎಸ್‌ಒಪಿ) ಅನುಸರಿಸಿಲ್ಲ ಎಂಬುದು ಗೊತ್ತಾಗುತ್ತಿದೆ' ಎಂದು ಮುಖ್ಯ ಎಂಜಿನಿಯರ್(ರಸ್ತೆ ಮೂಲಸೌಕರ್ಯ) ನೋಟಿಸ್‌ನಲ್ಲಿ ತಿಳಿಸಿದ್ದಾರೆ.

ಗುಂಡಿ ಬಿದ್ದಿರುವುದು ಹೊಸ ರಸ್ತೆಯಲ್ಲಿ ಅಲ್ಲ: ಬಿಬಿಎಂಪಿ ವರದಿ

'ಕೊಮ್ಮಘಟ್ಟದಲ್ಲಿ ಗುಂಡಿ ಬಿದ್ದಿದೆ ಎಂದು ಹೇಳಲಾಗುತ್ತಿರುವ ರಸ್ತೆ ಪ್ರಧಾನಿ ಬಂದ ಕಾರಣಕ್ಕೆ ಅಭಿವೃದ್ಧಿಪಡಿಸಿದ ರಸ್ತೆಗಳ ಪಟ್ಟಿಯಲ್ಲಿ ಇರಲಿಲ್ಲ. ಇದನ್ನು 2021ರ ನವೆಂಬರ್‌ನಲ್ಲೇ ಅಭಿವೃದ್ಧಿಪಡಿಸಲಾಗಿತ್ತು' ಎಂದು ರಾಜ್ಯ ಸರ್ಕಾರಕ್ಕೆ ಬಿಬಿಎಂಪಿ ವರದಿ ಸಲ್ಲಿಸಿದೆ.

ಕೊಮ್ಮಘಟ್ಟದಲ್ಲಿ ಗುಂಡಿ ಬಿದ್ದಿರುವ ರಸ್ತೆ ಬಗ್ಗೆ ತನಿಖೆ ನಡೆಸಿ ವರದಿ ನೀಡಲು ವಿಶೇಷ ಆಯುಕ್ತ(ಯೋಜನೆ) ಎನ್.ಬಿ. ರವೀಂದ್ರ ನೇತೃತ್ವದಲ್ಲಿ ತಂಡ ರಚಿಸಲಾಗಿತ್ತು. ಆ ಸಮಿತಿ ವರದಿ ಸಲ್ಲಿಸಿದೆ ಎಂದು ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸಲ್ಲಿಸಿರುವ ವಿವರಣೆಯಲ್ಲಿ ತಿಳಿಸಿದ್ದಾರೆ.

'ನಿರ್ದಿಷ್ಟ ಜಾಗದಲ್ಲಿ ರಸ್ತೆ ಕುಸಿದು ಗುಂಡಿಯಾಗಿರುವ ಬಗ್ಗೆ ಮೇ ತಿಂಗಳಿನಲ್ಲಿ ವರದಿಯಾಗಿತ್ತು. ಪೈಪ್‌ಲೈನ್ ಸೋರಿಕೆ ನಿಂತಿದ್ದರಿಂದ ಬಿಬಿಎಂಪಿಯಿಂದ ಜೂನ್ 12ರಂದು ಗುಂಡಿ ಮುಚ್ಚಲಾಗಿತ್ತು. ಆದರೆ, ಅದು ಮತ್ತೆ ಕುಸಿದಿತ್ತು. ಅದನ್ನು ಅಗೆದಾಗ ಹಳೆಯ ಪೈಪ್‌ಲೈನ್‌ನಲ್ಲಿ ಸೋರಿಕೆ ಕಂಡು ಬಂದಿತ್ತು' ಎಂದು ವಿವರಿಸಿದ್ದಾರೆ.

'ಎಲ್ಲವನ್ನೂ ಸರಿಪಡಿಸಿ ರಸ್ತೆ ಅಭಿವೃದ್ಧಿಪಡಿಸಲಾಗಿದೆ. ಪ್ರಧಾನ ಮಂತ್ರಿಯವರು ಬರುವ ಕಾರಣಕ್ಕೆ ₹6 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಿದ ರಸ್ತೆಗಳ ಪಟ್ಟಿಯಲ್ಲಿ ಈ ರಸ್ತೆ ಇಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

'ಜ್ಞಾನಭಾರತಿ ಆವರಣದ ಮರಿಯಪ್ಪನಪಾಳ್ಯದಲ್ಲಿ ಗುಂಡಿ ಬಿದ್ದಿರುವ ರಸ್ತೆಗಳೂ ಪ್ರಧಾನಿ ಹಾದು ಹೋಗುವ ರಸ್ತೆಗಳ ಪಟ್ಟಿಯಲ್ಲಿ ಇರಲಿಲ್ಲ. ಟ್ವೀಟ್‌ಗಳನ್ನು ಆಧರಿಸಿ ಪ್ರಧಾನ ಮಂತ್ರಿ ಕಚೇರಿಯಿಂದ ವಿವರಣೆ ಕೇಳಿರುವುದರಿಂದ ತನಿಖೆ ನಡೆಸಿ ವರದಿ ನೀಡಲು ತಿಳಿಸಿದ್ದೇನೆ. ವರದಿ ಬಂದ ಕೂಡಲೇ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಮೂಲಕ ಪ್ರಧಾನಿ ಕಚೇರಿಗೆ ವಿವರಣೆ ಸಲ್ಲಿಕೆಯಾಗಲಿದೆ' ಎಂದು ತುಷಾರ್ ಗಿರಿನಾಥ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಕಳಪೆ ಕಾಮಗಾರಿ ಎಂಬುದು ಖಚಿತವಾದರೆ ಗುತ್ತಿಗೆದಾರರು ಮತ್ತು ಪಾಲಿಕೆ ಎಂಜಿನಿಯರ್‌ಗಳ ವಿರುದ್ಧ ಕ್ರಮ ಜರುಗಿಸಲಾಗುವುದು. ವರದಿ ಬರುವ ತನಕ ಏನನ್ನೂ ಹೇಳಲು ಸಾಧ್ಯವಿಲ್ಲ' ಎಂದು ಹೇಳಿದರು.

ಸುದ್ದಿ 2 ನಿಮಿಷ

ನಗರದ 27 ಕ್ಷೇತ್ರಗಳಲ್ಲಿ ಇಂದು ಪ್ರತಿಭಟನೆ: ರಾಮಲಿಂಗಾ ರೆಡ್ಡಿ

ಬೆಂಗಳೂರು: ಅಗ್ನಿಪಥ ಯೋಜನೆ ವಿರೋಧಿಸಿ ಬೆಂಗಳೂರಿನ 27 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಲಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ದೇಶದಲ್ಲಿ ಕೋಟ್ಯಂತರ ಉದ್ಯೋಗಗಳು ನಷ್ಟವಾಗಿವೆ. ಈಗ ಯುವಜನರನ್ನು ದಿಕ್ಕುತಪ್ಪಿಸಲು ಈಗ ಅಗ್ನಿಪಥ ಯೋಜನೆ ತಂದಿದ್ದಾರೆ. ಸೇನೆಯಲ್ಲಿ ಗುತ್ತಿಗೆ ನೌಕರಿ ಪದ್ಧತಿ ಜಾರಿಗೊಳಿಸಲು ಹೊರಟಿರುವುದನ್ನು ವಿರೋಧಿಸಿ ಪ್ರತಿಭಟನೆ ಮಾಡುತ್ತೇವೆ' ಎಂದರು.

ತಪ್ಪಿದ್ದರೆ ಪ್ರಶ್ನಿಸುವುದು: ಬಿಬಿಎಂಪಿ ವಾರ್ಡ್ ಮರುವಿಂಗಡಣೆ ಕರಡು ಪಟ್ಟಿ ಪ್ರಕಟವಾಗಿರುವ ಕುರಿತು ಪ್ರತಿಕ್ರಿಯಿಸಿದ ಅವರು, 'ವಾರ್ಡ್ ಮರುವಿಂಗಡಣೆಗೆ ಸಂಬಂಧಿಸಿದ ಕರಡು ಪಟ್ಟಿಯ ಅಧಿಸೂಚನೆಯ ಪ್ರತಿ ನಮಗೆ ಲಭ್ಯವಾಗಿಲ್ಲ. ಯಾವುದೇ ಕ್ಷೇತ್ರದಲ್ಲಿ ಲೋಪವಾಗಿರುವುದು ಕಂಡುಬಂದರೆ ಪ್ರಶ್ನಿಸುವುದು ಖಚಿತ' ಎಂದು ತಿಳಿಸಿದರು.

'ವಾರ್ಡ್‌ಗಳ ಮರು ವಿಂಗಡಣೆ ಕುರಿತ ಪ್ರಕ್ರಿಯೆ ಕಂದಾಯ ಇಲಾಖೆ ಕಚೇರಿಯಲ್ಲಿ ನಡೆದಿಲ್ಲ. ಬಿಜೆಪಿ ಕಚೇರಿ, ಕೇಶವಕೃಪಾ, ಶಾಸಕರು ಮತ್ತು ಸಂಸದರ ಕಚೇರಿಗಳಲ್ಲಿ ಎಲ್ಲವೂ ನಿರ್ಧಾರವಾಗಿದೆ. ಅವರು ಸಿದ್ಧಪಡಿಸಿದ ವರದಿಗೆ ಅಧಿಕಾರಿಗಳು ಮುದ್ರೆಯೊತ್ತಿದ್ದಾರೆ ಎಂದು ದೂರಿದರು.



ನ್ಯಾಷನಲ್ ಲಾ ಸ್ಕೂಲ್ ಆದೇಶಕ್ಕೆ ತಡೆ

ಬೆಂಗಳೂರು: 'ನಿಮ್ಮ ಸೇವೆಯನ್ನು ಇದೇ 30ರ ನಂತರ ನವೀಕರಿಸಲು ಆಗದು' ಎಂದು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಅವರು ವಿಶ್ವವಿದ್ಯಾಲಯದ 20 ನೌಕರರಿಗೆ ನೀಡಿದ್ದ ಆದೇಶದ ಅನುಷ್ಠಾನಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಕುರಿತಂತೆ ಎಸ್.ರಾಧಾಕೃಷ್ಣ ಸೇರಿದಂತೆ ವಿಶ್ವವಿದ್ಯಾಲಯದ ಒಟ್ಟು 20 ನೌಕರರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಜ್ಯೋತಿ ಮೂಲಿಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಾಜರಾದ ವಕೀಲೆ ವೈಶಾಲಿ ಹೆಗಡೆ, 'ಅರ್ಜಿದಾರರು ವಿಶ್ವವಿದ್ಯಾಲಯದ ಕ್ಯಾಂಟೀನ್, ಮೆಸ್ ಹಾಗೂ ಹೌಸ್ ಕೀಪಿಂಗ್ ವಿಭಾಗದಲ್ಲಿ ಹದಿನೈದು ವರ್ಷಗಳಿಂದಲೂ ನಿರಂತರವಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ಇವರಿಗೆ ಇದೇ 6 ಮತ್ತು 7ರಂದು ಪತ್ರ ಬರೆದಿರುವ ರಿಜಿಸ್ಟ್ರಾರ್, ನಿಮ್ಮ ಸೇವೆಯನ್ನು ನವೀಕರಿಸಲು ಆಗದು ಎಂದು ಪತ್ರಮುಖೇನ ಆದೇಶಿಸಿದ್ದಾರೆ. ಇದು ಏಕಪಕ್ಷೀಯ ಮತ್ತು ಕಾನೂನುಬಾಹಿರವಾಗಿದೆ. ಆದ್ದರಿಂದ ಇದನ್ನು ರದ್ದುಗೊಳಿಸಲು ನಿರ್ದೇಶಿಸಬೇಕು' ಎಂದು ಕೋರಿದರು.

ಪ್ರತಿವಾದಿ ರಿಜಿಸ್ಟ್ರಾರ್ ಮತ್ತು ಭಾರತೀಯ ವಕೀಲರ ಪರಿಷತ್ ಅಧ್ಯಕ್ಷರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಸೈಬರ್ ವಂಚನೆ: ಮೂವರ ಸೆರೆ

ಬೆಂಗಳೂರು: ಬ್ಯಾಂಕ್ ಪ್ರತಿನಿಧಿಗಳು ಸೇರಿ ನಾನಾ ಸೋಗಿನಲ್ಲಿ ಜನರಿಗೆ ಕರೆ ಮಾಡಿ ಖಾತೆ ವಿವರ ಸಂಗ್ರಹಿಸಿ ವಂಚಿಸುತ್ತಿದ್ದ ಜಾಲವನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಪೊಲೀಸರು ಭೇದಿಸಿದ್ದು, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

'ಆಫ್ರಿಕಾದ ಫಾಸೊಯಿನ್ ಅವಲೋಹೋ ಅಡೇಯಿಂಕಾ (32), ಆಡ್ಬೆ ಅಂಗೇ ಆಲ್ಫ್ರೇಡ್ (23) ಹಾಗೂ ತ್ರಿಪುರಾದ ಮೋನಿಕುಮಾರ್ ಕಾಯ್‌ಪೇಂಗ್(23) ಬಂಧಿತರು. ಇವರಿಂದ ಸಿಮ್‌ಕಾರ್ಡ್‌ಗಳು, ಡೆಬಿಟ್ ಕಾರ್ಡ್ ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಯಲಹಂಕದಲ್ಲಿ ವಾಸವಿದ್ದ ಫಾಸೊಯಿನ್ ಹಾಗೂ ಆಡ್ಬೆ, ಸಂಚು ರೂಪಿಸಿ ಕೃತ್ಯ ಎಸಗುತ್ತಿದ್ದರು. ವೀಸಾ ಅವಧಿ ಮುಗಿದರೂ ತಮ್ಮ ದೇಶಕ್ಕೆ ವಾಪಸು ಹೋಗಿರಲಿಲ್ಲ. ಇನ್ನೊಬ್ಬ ಆರೋಪಿ ಮೋನಿಕುಮಾರ್, ತನ್ನ ತಂಡದ ಮೂಲಕ ಸೈಬರ್ ವಂಚನೆಯಲ್ಲಿ ತೊಡಗಿದ್ದ. ಪ್ರಕರಣವೊಂದರ ತನಿಖೆ ಕೈಗೊಂಡು ಮೂವರ ಮಾಹಿತಿ ಸಂಗ್ರಹಿಸಿ ಇತ್ತೀಚೆಗೆ ಬಂಧಿಸಲಾಗಿದೆ' ಎಂದೂ ತಿಳಿಸಿದರು.

ನಾನಾ ಆಮಿಷ: 'ಸಾರ್ವಜನಿಕರಿಗೆ ಕರೆ ಮಾಡುತ್ತಿದ್ದ ಆರೋಪಿಗಳು ಉದ್ಯೋಗ, ಸಾಲ, ಉಡುಗೊರೆ, ಲಾಟರಿ ಸೇರಿದಂತೆ ನಾನಾ ಆಮಿಷವೊಡ್ಡುತ್ತಿದ್ದರು. ಅವರ ಮಾತು ನಂಬಿ ಹಲವರು ಬ್ಯಾಂಕ್ ಖಾತೆ ವಿವರ ಹಾಗೂ ಒಟಿಪಿ ನೀಡುತ್ತಿದ್ದರು. ಬಳಿಕ, ಖಾತೆಗಳಿಂದ ಹಣ ವರ್ಗಾಯಿಸಿಕೊಂಡು ಆರೋಪಿಗಳು ನಾಪತ್ತೆಯಾಗುತ್ತಿದ್ದರ' ಎಂದು ಹೇಳಿದರು.

ಬುಡಕಟ್ಟಿನವರ ದಾಖಲೆ: 'ತ್ರಿಪುರಾದ ಮಧ್ಯವರ್ತಿಗಳ ಜೊತೆ ಸಂಪರ್ಕವಿಟ್ಟುಕೊಂಡಿದ್ದ ಆರೋಪಿಗಳು, ಅಲ್ಲಿಯ ಬುಡಕಟ್ಟು ಜನಾಂಗದವರಿಗೆ ₹2 ಸಾವಿರದಿಂದ ₹3 ಸಾವಿರ ನೀಡಿ ವೈಯಕ್ತಿಕ ದಾಖಲೆಗಳನ್ನು ಪಡೆಯುತ್ತಿದ್ದರು. ಅವುಗಳನ್ನು ಬಳಸಿಕೊಂಡು ಸಿಮ್‌ಕಾರ್ಡ್ ಖರೀದಿಸುತ್ತಿದ್ದರು. ಸಾರ್ವಜನಿಕರ ಖಾತೆಯಿಂದ ಬುಡಕಟ್ಟು ಜನಾಂಗದವರ ಖಾತೆಗೆ ಹಣ ವರ್ಗಾಯಿಸಿಕೊಳ್ಳುತ್ತಿದ್ದ ಆರೋಪಿಗಳು, ಅದನ್ನು ಡ್ರಾ ಮಾಡಿಕೊಂಡು ಐಷಾರಾಮಿ ಜೀವನ ನಡೆಸುತ್ತಿದ್ದರು' ಎಂದೂ ತಿಳಿಸಿದರು.

ಆನ್‌ಲೈನ್ ಗೆಳತಿ ಬೆನ್ನುಬಿದ್ದ ಪೊಲೀಸರು

₹5.62 ಕೋಟಿ ವಂಚನೆ ಪ್ರಕರಣ • ಬ್ಯಾಂಕ್ ವ್ಯವಸ್ಥಾಪಕ ಪೊಲೀಸ್ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಠೇವಣಿದಾರರ ಗಮನಕ್ಕೆ ಬಾರದಂತೆ ಅವರ ಹೆಸರಿನಲ್ಲಿ ₹ 5.62 ಕೋಟಿ ಸಾಲ ಮಂಜೂರು ಮಾಡಿಸಿಕೊಂಡು ವಂಚಿಸಿದ್ದ ಪ್ರಕರಣದಲ್ಲಿ ಬಂಧಿಸಿರುವ ಇಂಡಿಯನ್ ಬ್ಯಾಂಕ್ ವ್ಯವಸ್ಥಾಪಕ ಹರಿಶಂಕರ್, ಎಲ್ಲ ಹಣವನ್ನು ತಮ್ಮ ಆನ್‌ಲೈನ್ ಗೆಳತಿಗೆ ನೀಡಿರುವ ಸಂಗತಿ ತನಿಖೆಯಿಂದ ಗೊತ್ತಾಗಿದೆ.

'ಹನುಮಂತನಗರ ಶಾಖೆ ವ್ಯವಸ್ಥಾಪಕ ಹರಿಶಂಕರ್ ಅವರನ್ನು ವಂಚನೆ ಪ್ರಕರಣದಲ್ಲಿ ಬಂಧಿಸಲಾಗಿದೆ. ಹೆಚ್ಚಿನ ವಿಚಾರಣೆಗಾಗಿ ಅವರನ್ನು 10 ದಿನಗಳವರೆಗೆ ಕಸ್ಟಡಿಗೆ ಪಡೆಯಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಡೇಟಿಂಗ್ ಆ್ಯಪ್‌ವೊಂದರಲ್ಲಿ ಖಾತೆ ತೆರೆದಿದ್ದ ಹರಿಶಂಕರ್, ತಮ್ಮ ಫೋಟೊ ಹಾಗೂ ವೈಯಕ್ತಿಕ ವಿವರಗಳನ್ನು ಪೋಸ್ಟ್ ಮಾಡಿದ್ದರು. ಅದನ್ನು ಗಮನಿಸಿದ್ದ ಯುವತಿಯೊಬ್ಬಳು ರಿಕ್ವೆಸ್ಟ್ ಕಳುಹಿಸಿದ್ದಳು. ತನ್ನ ಹೆಸರು ಪ್ರಿಯಾಂಕಾ ಎಂಬುದಾಗಿ ಹೇಳಿ ಪರಿಚಯಿಸಿಕೊಂಡಿದ್ದಳು.'

'ಹರಿಶಂಕರ್ ಅವರನ್ನು ಲೈಂಗಿಕವಾಗಿ ಪ್ರಚೋದಿಸುವ ರೀತಿಯಲ್ಲಿ ಯುವತಿ ಸಂದೇಶ ಕಳುಹಿಸುತ್ತಿದ್ದಳು. ಹರಿಶಂಕರ್ ಸಹ ಆಕೆಯ ಜೊತೆ ನಿತ್ಯವೂ ಚಾಟಿಂಗ್ ಮಾಡುತ್ತಿದ್ದರು. ಪರಸ್ಪರ ಭೇಟಿ ಬಗ್ಗೆಯೂ ಇಬ್ಬರೂ ಚರ್ಚಿಸಿದ್ದರು.

ಆರ್ಥಿಕ ತೊಂದರೆ ನೆಪದಲ್ಲಿ ₹12 ಲಕ್ಷ: 'ತನಗೆ ಆರ್ಥಿಕ ತೊಂದರೆ ಇರುವುದಾಗಿ ಹೇಳಿದ್ದ ಯುವತಿ, ಎಲ್ಲಾದರೂ ಸಾಲ ಕೊಡಿಸುವಂತೆ ಹರಿಶಂಕರ್ ಅವರನ್ನು ಕೋರಿದ್ದರು. ಸಲುಗೆ ಮಾತುಗಳಿಂದ ಪ್ರಚೋದನೆಗೆ ಒಳಗಾಗಿದ್ದ ಹರಿಶಂಕರ್, ಆಕೆ ಹೇಳಿದ್ದ ಬ್ಯಾಂಕ್ ಖಾತೆಗೆ ₹12 ಲಕ್ಷ ಹಾಕಿಸಿಕೊಂಡಿದ್ದಳು. ₹12 ಲಕ್ಷ ಸಾಲುವುದಿಲ್ಲವೆಂದು ಹೇಳಿದ್ದ ಯುವತಿ, ಮತ್ತಷ್ಟು ಹಣ ನೀಡುವಂತೆ ಕೋರಿದ್ದಳು. ಆಗಲೇ ಹರಿಶಂಕರ್, ತಮ್ಮ ಇಂಡಿಯನ್ ಬ್ಯಾಂಕ್‌ನ ಠೇವಣಿದಾರರೊಬ್ಬರ ಹೆಸರಿನಲ್ಲಿ ಹಂತ ಹಂತವಾಗಿ ₹5.62 ಕೋಟಿ ಸಾಲ ಪಡೆದು ಯುವತಿಗೆ ನೀಡಿದ್ದರು. ಇದಕ್ಕಾಗಿ ಸಹಾಯಕ ವ್ಯವಸ್ಥಾಪಕ ಹಾಗೂ ಸಿಬ್ಬಂದಿ ಸಹಾಯ ಪಡೆದಿದ್ದರು' ಎಂದು ತಿಳಿಸಿದರು.

'ಯುವತಿಗೆ ಹಣ ನೀಡಿದ್ದ ಸಂಗತಿಯನ್ನು ಆರೋಪಿ ಯಾರಿಗೂ ಹೇಳಿರಲಿಲ್ಲ. ಇತ್ತೀಚೆಗೆ ಬ್ಯಾಂಕ್ ಲೆಕ್ಕ ತಪಾಸಣೆ ವೇಳೆ, ಠೇವಣಿದಾರರ ಹೆಸರಿನಲ್ಲಿ ವ್ಯವಸ್ಥಾಪಕ ಹರಿಶಂಕರ್ ಸಾಲ ಮಂಜೂರು ಮಾಡಿಸಿಕೊಂಡಿದ್ದ ಮಾಹಿತಿ ಪತ್ತೆಯಾಗಿತ್ತು. ಇಂಡಿಯನ್ ಬ್ಯಾಂಕ್ ವಲಯ ಪ್ರಬಂಧಕ ಡಿ.ಎಸ್. ಮೂರ್ತಿ ಅವರು ಹರಿಶಂಕರ್ ಹಾಗೂ ಇತರರ ಮೇಲೆ ದೂರು ನೀಡಿದ್ದರು. ಇದೀಗ, ಆನ್‌ಲೈನ್ ಗೆಳತಿ ಪ್ರಿಯಾಂಕಾ ಪಾತ್ರದ ಬಗ್ಗೆ ಮಾಹಿತಿ ಸಿಕ್ಕಿದೆ. ಆಕೆಗಾಗಿ ಶೋಧ ಮುಂದುವರಿದಿದೆ' ಎಂದೂ ಹೇಳಿದರು.

'36 ಖಾತೆಗಳಿಗೆ ಹಣ ವರ್ಗಾವಣೆ'

'ಇಂಡಿಯನ್ ಬ್ಯಾಂಕ್‌ನ 8 ಖಾತೆಗಳು ಸೇರಿದಂತೆ ವಿವಿಧ ಬ್ಯಾಂಕ್‌ಗಳ 36 ಖಾತೆಗಳಿಗೆ ಹಣ ವರ್ಗಾವಣೆ ಆಗಿರುವುದು ತನಿಖೆಯಿಂದ ಗೊತ್ತಾಗಿದೆ. ಇವೆಲ್ಲ ಖಾತೆಗಳ ಮಾಹಿತಿಯನ್ನು ಯುವತಿ, ಹರಿಶಂಕರ್‌ಗೆ ನೀಡಿದ್ದಳು. ಆದರೆ, ಖಾತೆಗಳು ಯಾರ ಹೆಸರಿನಲ್ಲಿವೆ ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಮಹಿಳೆಗೆ ಲಾಂಗ್ ತೋರಿಸಿ ಸರ ಕಳವು

ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ ಮಹಿಳೆಗೆ ಲಾಂಗ್ ತೋರಿಸಿ ಬೆದರಿಸಿ ಚಿನ್ನದ ಸರ ಕಿತ್ತೊಯ್ಯಲಾಗಿದ್ದು, ಈ ಸಂಬಂಧ ಅಮೃತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸ್ಥಳೀಯ ಮಹಿಳೆಯೊಬ್ಬರು ಕೆಲಸ ನಿಮಿತ್ತ ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದರು. ಟಿವಿಎಸ್ ಮೊಪೆಡ್ ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು, ಕೃತ್ಯ ಎಸಗಿ ಪರಾರಿಯಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಲಾಂಗ್ ತೋರಿಸಿ ಬೆದರಿಸಿದ್ದ ಆರೋಪಿಗಳು, ಚಿನ್ನದ ಸರ ಕಿತ್ತುಕೊಳ್ಳಲು ಯತ್ನಿಸಿದ್ದರು. ಮಹಿಳೆ ಪ್ರತಿರೋಧವೊಡ್ಡಿದ್ದರು. ಅವಾಗಲೇ ಆರೋಪಿಗಳು, ಮಹಿಳೆಯನ್ನು ರಸ್ತೆಯಲ್ಲೆಲ್ಲ ಎಳೆದಾಡಿ ಗಾಯವನ್ನುಂಟು ಮಾಡಿ ಸರ ಕಿತ್ತೊಯ್ದಿದ್ದಾರೆ. ಈ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ' ಎಂದೂ ತಿಳಿಸಿವೆ.

ಪಿಎಸ್‌ಐ ಅಕ್ರಮ: ನೇಮಕಾತಿ ಡಿವೈಎಸ್ಪಿ ಸಿಐಡಿ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು, ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತಕುಮಾರ್ ಅವರನ್ನು ಹೆಚ್ಚಿನ ವಿಚಾರಣೆಗಾಗಿ ಜೂನ್ 29ರವರೆಗೆ ಕಸ್ಟಡಿಗೆ ಪಡೆದಿದ್ದಾರೆ.

'ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ 5ನೇ ರ‍್ಯಾಂಕ್ ಪಡೆದಿದ್ದ ದರ್ಶನ್ ಗೌಡ, ಲಕ್ಷಾಂತರ ರೂಪಾಯಿ ಕೊಟ್ಟು ಒಎಂಆರ್ ಪ್ರತಿ ತಿದ್ದಿಸಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿತ್ತು. ಈತನ ವಿರುದ್ಧ ಯಲಹಂಕ ನ್ಯೂ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇದೇ ಪ್ರಕರಣದಲ್ಲಿ ಶಾಂತಕುಮಾರ್ ಅವರ ಪಾತ್ರದ ಬಗ್ಗೆಯೂ ಸುಳಿವು ಸಿಕ್ಕಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ನ್ಯಾಯಾಂಗ ಬಂಧನದಲ್ಲಿದ್ದ ಶಾಂತಕುಮಾರ್, ವಿಭಾಗದ ನೌಕರರಾದ ಶ್ರೀಧರ್, ಶ್ರೀನಿವಾಸ್ ಅವರನ್ನು ಯಲಹಂಕ ನ್ಯೂ ಟೌನ್ ಪ್ರಕರಣದಲ್ಲಿ ಬಾಡಿ ವಾರೆಂಟ್ ಮೇಲೆ ಕಸ್ಟಡಿಗೆ ಪಡೆಯಲಾಗಿದೆ. ವಿಚಾರಣೆ ನಡೆಯುತ್ತಿದೆ' ಎಂದು ತಿಳಿಸಿವೆ.

ಅಗತ್ಯವಿದ್ದರೆ ಮತ್ತೊಮ್ಮೆ ನೋಟಿಸ್: 'ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಆಗಿದ್ದ ಅಮೃತ್ ಪೌಲ್ ಅವರನ್ನು ಗುರುವಾರ ವಿಚಾರಣೆ ನಡೆಸಿ ಹೇಳಿಕೆ ಪಡೆದು ಕಳುಹಿಸಲಾಗಿದೆ. ಅಗತ್ಯವಿದ್ದರೆ, ಮತ್ತೊಮ್ಮೆ ವಿಚಾರಣೆಗಾಗಿ ನೋಟಿಸ್ ನೀಡಲಾಗುವುದು' ಎಂದು ಸಿಸಿಬಿ ಮೂಲಗಳು ಹೇಳಿವೆ.

ಮೋಜು – ಮಸ್ತಿಗೆ ಕಳ್ಳತನ: ಇಬ್ಬರ ಬಂಧನ

ಬೆಂಗಳೂರು: ಮೋಜು–ಮಸ್ತಿಗಾಗಿ ಹಣ ಹೊಂದಿಸಲು ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ಬ್ಯಾಟರಾಯನಪುರ ಪೊಲೀಸರು ಬಂಧಿಸಿದ್ದಾರೆ.

'ಸುನೀಲ್ ಹಾಗೂ ಅವಿನಾಶ್ ಬಂಧಿತರು. ಇವರಿಂದ ₹11 ಲಕ್ಷ ಮೌಲ್ಯದ 10 ದ್ವಿಚಕ್ರ ವಾಹನ ಹಾಗೂ 125 ಗ್ರಾಂ ತೂಕದ ಚಿನ್ನದ ಸರಗಳನ್ನು ಜಪ್ತಿ ಮಾಡಲಾಗಿದೆ. ಮೈಸೂರು ರಸ್ತೆಯ ನ್ಯೂ ಟಿಂಬರ್ ಯಾರ್ಡ್ ಬಡಾವಣೆಯ ಮನೆಯೊಂದರ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ಫೆಬ್ರುವರಿ 23ರಂದು ಕಳ್ಳತನವಾಗಿತ್ತು. ಈ ಬಗ್ಗೆ ತನಿಖೆ ಕೈಗೊಂಡು, ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಹೇಳಿಕೆ

'₹78 ಲಕ್ಷ ಕೋಟಿ ಡಿಜಿಟಲ್ ಆರ್ಥಿಕತೆ'

ಬೆಂಗಳೂರು: 'ದೇಶದ ಡಿಜಿಟಲ್ ಆರ್ಥಿಕತೆಯು 2025ರ ವೇಳೆಗೆ ಒಂದು ಟ್ರಿಲಿಯನ್ ಡಾಲರ್ (₹78.29 ಲಕ್ಷ ಕೋಟಿ) ತಲುಪುವ ನಿರೀಕ್ಷೆ ಇದೆ' ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್, ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದರು.

ನಗರದಲ್ಲಿ ಶುಕ್ರವಾರ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ), ಭಾರತೀಯ ರಾಷ್ಟ್ರೀಯ ಬಾಹ್ಯಾಕಾಶ ಉತ್ತೇಜನ ಕೇಂದ್ರ ('ಇನ್-ಸ್ಪೇಸ್'), ನ್ಯೂ ಸ್ಪೇಸ್ ಇಂಡಿಯಾ ಲಿಮಿಟೆಡ್ (ಎನ್‌ಎಸ್‌ಐಎಲ್) ಹಾಗೂ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಸಹಯೋಗದಲ್ಲಿ ಭಾರತೀಯ ಖಗೋಳ ಸೊಸೈಟಿ(ಎಎಸ್‌ಐ) ಆಯೋಜಿಸಿದ್ದ 'ಭಾರತದಲ್ಲಿ ಬಾಹ್ಯಾಕಾಶ ನವೋದ್ಯಮಗಳ ಅಭಿವೃದ್ಧಿ' ಕುರಿತ ರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ದೇಶದ ಆರ್ಥಿಕತೆಯ ಕೇಂದ್ರ ಬಿಂದುವಾಗುತ್ತಿರುವ ನವೋದ್ಯಮಗಳು ವೇಗವಾಗಿ ಬೆಳೆಯುತ್ತಿವೆ. ಬಾಹ್ಯಾಕಾಶ ಸೇರಿ ಎಲ್ಲ ವಲಯಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ನವೋದ್ಯಮಗಳು ಈಗ ಆರ್ಥಿಕತೆಗೆ ಹೊಸ ಚೈತನ್ಯ ತುಂಬುತ್ತಿವೆ' ಎಂದರು.

'ಸರ್ಕಾರ ಡಿಜಿಟಲೀಕರಣಕ್ಕೆ ಆದ್ಯತೆ ನೀಡಿದೆ. ಹಣಕಾಸು ವಲಯವನ್ನು ಸಂಪೂರ್ಣವಾಗಿ ಡಿಜಿಟಲೀಕರಣಗೊಳಿಸುವ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸಲಾಗಿದೆ. ಇದರಿಂದಾಗಿಯೇ ಎನ್‌ಪಿಸಿಐ, ಯುಪಿಐಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ' ಎಂದರು.

'ದಶಕಗಳ ಕಾಲ ದೇಶದ ಆರ್ಥಿಕತೆಯು ಕೆಲವೇ ಕಂಪನಿಗಳ ಮೇಲೆ ಅವಲಂಬಿತವಾಗಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಉದ್ಯಮಗಳನ್ನು ಸ್ಥಾಪಿಸಲು ಅವಕಾಶಗಳನ್ನು ಸೃಷ್ಟಿಸಲಾಗಿದೆ. ಕೃತಕ ಬುದ್ಧಿಮತ್ತೆ, ಮಷಿನ್ ಲರ್ನಿಂಗ್ ಮುಂತಾದ ಹೊಸ ಕ್ಷೇತ್ರಗಳಲ್ಲಿ ವಿಪುಲ ಅವಕಾಶಗಳಿವೆ' ಎಂದರು.

ಭಾರತೀಯ ರಾಷ್ಟ್ರೀಯ ಬಾಹ್ಯಾಕಾಶ ಉತ್ತೇಜನ ಕೇಂದ್ರದ ('ಇನ್-ಸ್ಪೇಸ್') ಅಧ್ಯಕ್ಷ ಡಾ. ಪವನ್ ಕುಮಾರ್ ಗೋಯೆಂಕಾ, 'ಬಾಹ್ಯಾಕಾಶ ತಂತ್ರಜ್ಞಾನ ಜನಸಾಮಾನ್ಯರಿಗೆ ತಲುಪಬೇಕು. ಬಾಹ್ಯಾಕಾಶ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಸಂಪೂರ್ಣ ಸಹಕಾರ ನೀಡಿದೆ. ರಾಜಕೀಯ ಇಚ್ಛಾಶಕ್ತಿಯ ಬಗ್ಗೆ ಅನುಮಾನ ಬೇಡ. ಈ ಕ್ಷೇತ್ರದಲ್ಲಿ ಸಂಪೂರ್ಣ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಸಾಗಬೇಕಾಗಿದೆ' ಎಂದು ಸಲಹೆ ನೀಡಿದರು.

ಬಾಹ್ಯಾಕಾಶ ಇಲಾಖೆಯ ಕಾರ್ಯದರ್ಶಿ ಎಸ್. ಸೋಮನಾಥ್ , 'ಬಾಹ್ಯಾಕಾಶ ಕ್ಷೇತ್ರದಲ್ಲಿ ಸರ್ಕಾರೇತರ ಸಂಸ್ಥೆಗಳಿಗೆ ಹೆಚ್ಚಿನ ಅವಕಾಶಗಳನ್ನು ಸೃಷ್ಟಿಸಲು ಆದ್ಯತೆ ನೀಡಲಾಗುವುದು. ಬಾಹ್ಯಾಕಾಶ ಕ್ಷೇತ್ರದಲ್ಲಿ ಸದ್ಯ 100ಕ್ಕೂ ಹೆಚ್ಚು ನವೋದ್ಯಮಗಳು ಕಾರ್ಯನಿರ್ವಹಿಸುತ್ತಿವೆ. ಈ ಉದ್ಯಮಗಳಿಗೆ ಬೆಂಬಲ ಅಗತ್ಯ' ಎಂದು ಹೇಳಿದರು.



ಬೆಂಗಳೂರಿನಲ್ಲಿ ಶುಕ್ರವಾರ ನಡೆದ 'ಭಾರತದಲ್ಲಿ ಬಾಹ್ಯಾಕಾಶ ನವೋದ್ಯಮಗಳ ಅಭಿವೃದ್ಧಿ' ಕುರಿತ ಸಮ್ಮೇಳನದಲ್ಲಿ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಮತ್ತು 'ಇನ್–ಸ್ಪೇಸ್' ಅಧ್ಯಕ್ಷ ಡಾ. ಪವನ್ ಕುಮಾರ್ ಗೋಯೆಂಕಾ ಜತೆ ಚರ್ಚಿಸಿದರು – ಪ್ರಜಾವಾಣಿ ಚಿತ್ರ

ದೂರು ಸಲ್ಲಿಸಲು ವಿಳಂಬ: ಎಫ್‌ಐಆರ್ ರದ್ದು

ಬೆಂಗಳೂರು: ದೂರು ಸಲ್ಲಿಸಲು 45 ದಿನ ವಿಳಂಬ ಮಾಡಲಾಗಿದೆ ಎಂಬ ಅಂಶವನ್ನು ಪರಿಗಣಿಸಿರುವ ಹೈಕೋರ್ಟ್, ಹಣಕಾಸಿನ ವ್ಯವಹಾರದಲ್ಲಿ ಹಲ್ಲೆ ನಡೆಸಿ ಜೀವ ಬೆದರಿಕೆ ಆರೋಪ ಎದುರಿಸುತ್ತಿದ್ದ ವ್ಯಕ್ತಿಯೊಬ್ಬರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ರದ್ದುಪಡಿಸಿದೆ.

'ನನ್ನ ವಿರುದ್ಧ ಹಲಸೂರು ಗೇಟ್ ಠಾಣಾ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಆರೋಪಿ ದುರ್ಗಾರಾಮ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ್ ಚಂದನ ಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಘಟನೆ ನಡೆದ ಒಂದೂವರೆ ತಿಂಗಳ ನಂತರ ದೂರುದಾರರು ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಈ ವಿಳಂಬ ಮಾಡಿರುವುದಕ್ಕೆ ಸೂಕ್ತ ಕಾರಣ ಹಾಗೂ ವಿವರಣೆ ನೀಡಿಲ್ಲ. ಅಂತೆಯೇ, ಅರ್ಜಿದಾರರು ಹಲ್ಲೆ ನಡೆಸಿರುವುದರಿಂದ ದೂರುದಾರಿಗೆ ಯಾವುದೇ ಗಾಯ ಉಂಟಾಗಿರುವ ಬಗ್ಗೆ ವೈದ್ಯಕೀಯ ದಾಖಲೆಗಳನ್ನೂ ಪೊಲೀಸರು ಸಲ್ಲಿಸಿಲ್ಲ. ಹಾಗಾಗಿ, ಇದು ದುರುದ್ದೇಶದಿಂದ ದಾಖಲಿಸಿರುವ ದೂರು ಎಂಬುದು ಮೇಲ್ನೋಟಕ್ಕೇ ಕಂಡುಬರುತ್ತದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ದೂರುದಾರರನ್ನು ನಿಂದಿಸಲು ಅರ್ಜಿದಾರರು ಅವಾಚ್ಯ ಶಬ್ದ ಬಳಕೆ ಮಾಡಿದ್ದಾರೆ ಎನ್ನಲಾಗಿದೆ. ಆದರೆ, ಆ ಪದಗಳು ಸಾರ್ವಜನಿಕ ಶಾಂತಿಗೆ ಯಾವುದೇ ರೀತಿ ಭಂಗ ತಂದಿಲ್ಲ. ಇಂತಹ ಸಂದರ್ಭದಲ್ಲಿ ಅರ್ಜಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ಮುಂದುವರಿಸಿದರೆ ಅದು ಕಾನೂನಿನ ದುರ್ಬಳಕೆಯಾಗುತ್ತದೆ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: 'ತುಳಸಿರಾಮ್ ನನ್ನಿಂದ ₹ 66 ಲಕ್ಷ ಪಡೆದು ಹಿಂದಿರುಗಿಸದೆ ಸತಾಯಿಸುತ್ತಿದ್ದಾರೆ. ಈ ಕುರಿತು ಮಾತುಕತೆ ನಡೆಸಲು ನಗರದ ಪ್ರಕಾಶ್ ಕೆಫೆಯಲ್ಲಿ ತುಳಸಿರಾಮ್ ಮತ್ತು ಆತನ ಸ್ನೇಹಿತ ದುರ್ಗಾರಾಮ್ ನನ್ನನ್ನು ಭೇಟಿಯಾಗಿದ್ದರು. ಈ ವೇಳೆ ಇಬ್ಬರೂ ನನ್ನ ಹಲ್ಲೆ ನಡೆಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಅವಮಾನಿಸಿದ್ದಾರೆ' ಎಂದು ಆರೋಪಿಸಿ ಬಾಬುಲಾಲ್ ಎಂಬುವರು ಹಲಸೂರು ಗೇಟ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಇದರನ್ವಯ ತನಿಖೆ ನಡೆಸಿದ್ದ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. 1ನೇ ಎಸಿಎಂಎಂ ಕೋರ್ಟ್ ಆರೋಪಿಗಳಿಗೆ ಸಮನ್ಸ್ ಜಾರಿಗೆ ಆದೇಶಿಸಿತ್ತು. ಪ್ರಕರಣದ ಎರಡನೇ ಆರೋಪಿಯಾದ ದುರ್ಗಾರಾಮ್ ಎಫ್‌ಐಆರ್ ರದ್ದುಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಫ್ಲ್ಯಾಟ್‌ಗೆ ನುಗ್ಗಿ ಕಳ್ಳತನ: ಪೊಲೀಸರ ವಿಚಾರಣೆ

ಬೆಂಗಳೂರು: ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲ್ಯಾಟ್‌ಗಳಿಗೆ ನುಗ್ಗಿ ಕಳ್ಳತನ ಮಾಡುತ್ತಿದ್ದ ಆರೋಪದಡಿ ಸೈರಾಜ್ ಎಂಬುವರನ್ನು ಸಂಪಿಗೆಹಳ್ಳಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. 'ತಮಿಳುನಾಡಿನ ಸೈರಾಜ್, ತನ್ನ ಸಹಚರರ ಜೊತೆ ನಗರಕ್ಕೆ ಆಗಾಗ ಬಂದು ಕಳ್ಳತನ ಮಾಡುತ್ತಿದ್ದ. ಈತನ ಬಗ್ಗೆ ಮಾಹಿತಿ ಸಂಗ್ರಹಿಸಿ ವಶಕ್ಕೆ ಪಡೆಯಲಾಗಿದ್ದು, ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

₹ 25.60 ಕೋಟಿ ಮೌಲ್ಯದ ಡ್ರಗ್ಸ್ ನಾಶ?

ಬೆಂಗಳೂರು: ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ಕಾರ್ಯಾಚರಣೆ ನಡೆಸಿದ್ದ ರಾಜ್ಯದ ಪೊಲೀಸರು, ಆರೋಪಿಗಳಿಂದ ಜಪ್ತಿ ಮಾಡಲಾದ ₹ 25.60 ಕೋಟಿ ಮೌಲ್ಯದ ಮಾದಕ ವಸ್ತುವನ್ನು ನಾಶಪಡಿಸಲು ಸಿದ್ಧತೆ ನಡೆಸುತ್ತಿದ್ದಾರೆ.

ಅಂತರರಾಷ್ಟ್ರೀಯ ಮಾದಕದ್ರವ್ಯ ವ್ಯಸನ ಹಾಗೂ ಕಳ್ಳಸಾಗಣೆ ವಿರುದ್ಧದ ದಿನವನ್ನು ಜೂನ್ 26ರಂದು ಆಚರಿಸಲಿರುವ ಪೊಲೀಸರು, ಅಂದೇ ಡ್ರಗ್ಸ್ ನಾಶಪಡಿಸಲು ಯೋಚಿಸಿದ್ದಾರೆ.

'ರಾಜ್ಯದ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ 12 ತಿಂಗಳಿನಲ್ಲಿ 8,505 ಪ್ರಕರಣ ದಾಖಲಿಸಿಕೊಳ್ಳಲಾಗಿದೆ. 7,846 ಆರೋಪಿಗಳನ್ನು ಬಂಧಿಸಲಾಗಿದೆ. ಇವರಿಂದ ಜಪ್ತಿ ಮಾಡಲಾದ ಎಲ್ಲ ಪ್ರಕಾರದ ಮಾದಕ ವಸ್ತುವನ್ನು ನಾಶಪಡಿಸುವ ಸಂಬಂಧ ನ್ಯಾಯಾಲಯದಿಂದ ಒಪ್ಪಿಗೆ ಪಡೆಯಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಜುಲೈ 2ಕ್ಕೆ ಹೆದ್ದಾರಿ ತಡೆ

ಬೆಂಗಳೂರು: ಪರಿಶಿಷ್ಟ ಜಾತಿಯೊಳಗೆ ಒಳ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ರಚಿಸಲಾಗಿದ್ದ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ವರದಿ ಅನುಷ್ಠಾನಗೊಳಿಸುವಲ್ಲಿ ಸರ್ಕಾರದ ವಿಳಂಬ ನೀತಿ ಖಂಡಿಸಿ ಜುಲೈ 2ರಂದು ರಾಜ್ಯದಾದ್ಯಂತ ರಾಷ್ಟ್ರೀಯ ಹೆದ್ದಾರಿಗಳ ತಡೆ ನಡೆಸಲಾಗುವುದು ಎಂದು ಮಾದಿಗ ದಂಡೋರ ಮಾದಿಗ ಮೀಸಲಾತಿ ಹೋರಾಟ ಸಮಿತಿ ರಾಜ್ಯ ಘಟಕದ ಉಪಾಧ್ಯಕ್ಷ ಎಂ.ಸಿ. ಶ್ರೀನಿವಾಸ್ ತಿಳಿಸಿದರು.

ಡ್ರಗ್ಸ್ ಮಾರಿ ಹಣ ಸಂಪಾದನೆ: ಬಂಧನ

ಬೆಂಗಳೂರು: ವಿದ್ಯಾರ್ಥಿ ವೀಸಾದಡಿ ನಗರಕ್ಕೆ ಬಂದು ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ನೈಜೀರಿಯಾದ ಇಬ್ಬರು ಪ್ರಜೆಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಖಲಿಫಾ ಅಬುದುಲಿಹಿ ಹಾಗೂ ಡಿನೈಲ್ ಬಂಧಿತರು. ಇವರಿಂದ ₹ 8 ಲಕ್ಷ ಮೌಲ್ಯದ ಎಂಡಿಎಂಎ ಮಾತ್ರೆ ಹಾಗೂ ಮೊಬೈಲ್ ಅನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

'ಆಫ್ರಿಕಾದ ಪೆಡ್ಲರ್ ಒಬ್ಬರಿಂದ ಡ್ರಗ್ಸ್ ಖರೀದಿಸುತ್ತಿದ್ದ ಆರೋಪಿಗಳು, ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳಿಗೆ ಪ್ರತಿ ಗ್ರಾಂಗೆ ₹5 ಸಾವಿರದಿಂದ ₹ 6 ಸಾವಿರಕ್ಕೆ ಮಾರುತ್ತಿದ್ದರು. ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

ಅಗ್ನಿಪಥ: ಯುವ ಕಾಂಗ್ರೆಸ್ ಪ್ರತಿಭಟನೆ

ಬೆಂಗಳೂರು: ಕೇಂದ್ರ ಸರ್ಕಾರವು ಘೋಷಿಸಿರುವ 'ಅಗ್ನಿಪಥ' ಯೋಜನೆ ವಿರೋಧಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು. ರಾಜಭವನಕ್ಕೆ ಮುತ್ತಿಗೆ ಹಾಕಲು ಪ್ರಯತ್ನಿಸಿದ ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದು ಕರೆದೊಯ್ದರು.

ರೇಸ್ ಕೋರ್ಸ್ ರಸ್ತೆಯ ಕಾಂಗ್ರೆಸ್ ಭವನದ ಮುಂಭಾಗದಲ್ಲಿ ಪ್ರತಿಭಟನಾ ಸಭೆ ನಡೆಸಿದ ಕಾರ್ಯಕರ್ತರು, ಅಗ್ನಿಪಥ ಯೋಜನೆಯನ್ನು ಹಿಂಪಡೆಯುವಂತೆ ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು. 'ಉದ್ಯೋಗ ನಷ್ಟದಿಂದ ಕಂಗೆಟ್ಟಿರುವ ದೇಶದ ಯುವಜನರನ್ನು ದಿಕ್ಕು ತಪ್ಪಿಸಲು ಕೇಂದ್ರ ಸರ್ಕಾರ ಈ ಯೋಜನೆ ಜಾರಿಗೊಳಿಸಲು ಹೊರಟಿದೆ' ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಯುವ ಕಾಂಗ್ರೆಸ್ ಸಮಿತಿ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್, ರಾಷ್ಟ್ರೀಯ ಯುವ ಕಾಂಗ್ರೆಸ್ ಸಮಿತಿ ಜಂಟಿ ಕಾರ್ಯದರ್ಶಿ ಕೃಷ್ಣ ಅಲ್ಲಾವರ್, ರಾಜ್ಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮೊಹಮ್ಮದ್ ನಲಪಾಡ್, ಉಪಾಧ್ಯಕ್ಷ ಮಂಜುನಾಥ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ಡಯಾಲಿಸಿಸ್: ಮುಷ್ಕರ ಕೈಬಿಟ್ಟ ಸಿಬ್ಬಂದಿ

ಬೆಂಗಳೂರು: ವೇತನ ಪಾವತಿ ಸಮಸ್ಯೆ ನಿವಾರಣೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವುದಾಗಿ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ಡಯಾಲಿಸಿಸ್ ಘಟಕಗಳ ಸಿಬ್ಬಂದಿಗೆ ಶುಕ್ರವಾರ ಭರವಸೆ ನೀಡಿದರು. ಇದರಿಂದಾಗಿ ಸಿಬ್ಬಂದಿ ಮುಷ್ಕರ ಕೈಬಿಟ್ಟಿದ್ದಾರೆ.

ಕಾರ್ಮಿಕರ ಆರೋಗ್ಯ ವಿಮೆ (ಇಎಸ್‌ಐ) ಮತ್ತು ಭವಿಷ್ಯ ನಿಧಿಗೆ (ಪಿಎಫ್) ಹಣ ಪಾವತಿಸದಿರುವುದು ಹಾಗೂ ವೇತನ ವಿಳಂಬವನ್ನು ವಿರೋಧಿಸಿ, ಡಯಾ ಲಿಸಿಸ್ ಘಟಕಗಳ ಸಿಬ್ಬಂದಿ ಗುರುವಾರ ಮುಷ್ಕರ ಕೈಗೊಂಡಿದ್ದರು. ಇಲಾಖೆ ಆಯುಕ್ತ ಡಿ. ರಂದೀಪ್ ಅವರ ಜತೆಗೆ ಮಾತುಕತೆ ನಡೆಸಿದ ಸಿಬ್ಬಂದಿ ನಿಯೋಗ, ಲಿಖಿತ ರೂಪದಲ್ಲಿ ಭರವಸೆ ನೀಡದಿದ್ದರೆ ಮುಷ್ಕರ ಮುಂದುವರೆಸುವುದಾಗಿ ಎಚ್ಚರಿಸಿದ್ದರು.

ಬೇಡಿಕೆಗಳ ಈಡೇರಿಕೆಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಡಾ.ಕೆ. ಸುಧಾಕರ್ ಅವರು ಸಿಬ್ಬಂದಿ ನಿಯೋಗಕ್ಕೆ ಶುಕ್ರವಾರ ಭರವಸೆ ನೀಡಿದ್ದರಿಂದ ಸಿಬ್ಬಂದಿ ಕರ್ತವ್ಯಕ್ಕೆ ಮರಳಿದರು.

ಸ್ವಪಕ್ಷದ ವಿರುದ್ಧವೇ ಅಸಮಾಧಾನ • ಮುಂದಿನ ಹೆಜ್ಜೆ ಕುರಿತು ಸಭೆ

ತಿಂಗಳ ಕಾಲ ಕಾಯಲು ಸೀತಾರಾಂ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಮುಂದಿನ ರಾಜಕೀಯ ನಡೆ ಕುರಿತು ಒಂದು ತಿಂಗಳ ಬಳಿಕ ಅಂತಿಮ ತೀರ್ಮಾನ ಕೈಗೊಳ್ಳಲು ಕೆಪಿಸಿಸಿ ಉಪಾಧ್ಯಕ್ಷ ಎಂ.ಆರ್. ಸೀತಾರಾಂ ನಿರ್ಧರಿಸಿದ್ದಾರೆ.

ಕಾಂಗ್ರೆಸ್ ಪಕ್ಷದಲ್ಲಿ ತಮ್ಮನ್ನು ಕಡೆಗಣಿಸಲಾಗುತ್ತಿದೆ ಎಂದು ಅಸಮಾಧಾನಗೊಂಡಿರುವ ಅವರು, ಮುಂದಿನ ರಾಜಕೀಯ ಹೆಜ್ಜೆ ಕುರಿತು ಬೆಂಬಲಿಗರ ಜತೆ ನಗರದ ಅರಮನೆ ಮೈದಾನದಲ್ಲಿ ಶುಕ್ರವಾರ ಸಭೆ ನಡೆಸಿದರು. ಹಲವು ಮುಖಂಡರ ಅಭಿಪ್ರಾಯ ಆಲಿಸಿದ ಅವರು, ತಿಂಗಳ ಬಳಿಕ ಮತ್ತೊಂದು ಸಮಾವೇಶ ನಡೆಸಿ ನಿರ್ಧಾರ ಪ್ರಕಟಿಸುವುದಾಗಿ ಹೇಳಿದರು.

ಭದ್ರಾವತಿ ಶಾಸಕ ಬಿ.ಕೆ. ಸಂಗಮೇಶ್ವರ, ಕೆಪಿಸಿಸಿ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಎಂ.ಡಿ. ಲಕ್ಷ್ಮೀನಾರಾಯಣ, ಮಾಜಿ ಶಾಸಕಿ ಅನಸೂಯಮ್ಮ, ರಾಜ್ಯ ಬಲಿಜ ಸಂಘದ ಅಧ್ಯಕ್ಷ ವೇಣುಗೋಪಾಲ್, ಭಾರತೀಯ ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ, ಮಾಜಿ ಮೇಯರ್ ಜೆ. ಹುಚ್ಚಪ್ಪ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಶಫಿಉಲ್ಲಾ, ಮುಖಂಡರಾದ ಎಲ್.ಎನ್. ಮೂರ್ತಿ, ಹೆಜ್ಜೆ ವೆಂಕಟೇಶ್ ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೂರು ಗಂಟೆಗೂ ಹೆಚ್ಚು ಕಾಲ ಚರ್ಚೆ ನಡೆಯಿತು. ಕಾಂಗ್ರೆಸ್ ತೊರೆಯುವಂತೆ ಕೆಲವರು ಸಲಹೆ ಮಾಡಿದರು. ಪಕ್ಷದಲ್ಲೇ ಮುಂದುವರಿಯುವಂತೆ ಇನ್ನು ಕೆಲವರು ಸಲಹೆ ನೀಡಿದರು. ರಾಜ್ಯದಾದ್ಯಂತ ಪ್ರವಾಸ ಮಾಡಿ, ಒಂದು ತಿಂಗಳ ಬಳಿಕ ಅಂತಿಮ ನಿರ್ಧಾರ ಕೈಗೊಳ್ಳುವುದಾಗಿ ಸೀತಾರಾಂ ಪ್ರಕಟಿಸಿದರು. ಅವರು ಕೈಗೊಳ್ಳುವ ನಿರ್ಧಾರವನ್ನು ಬೆಂಬಲಿಸುವುದಾಗಿ ಸಭೆಯಲ್ಲಿದ್ದ ಬಹುತೇಕರು ಹೇಳಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸೀತಾರಾಂ, 'ಪಕ್ಷದ ನಾಯಕರಿಂದ ನಮಗೆ ನಾಲ್ಕು ಬಾರಿ ಅನ್ಯಾಯವಾಗಿದೆ. 2008ರಲ್ಲಿ ಕಾಂಗ್ರೆಸ್ ಸೋಲಿಗೆ ಪಕ್ಷದ ನಾಯಕರೇ ಕಾರಣ. 2009ರ ಲೋಕಸಭಾ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರದ ಟಿಕೆಟ್ ನನಗೆ ಅಂತಿಮಗೊಂಡಿತ್ತು. ದೆಹಲಿಯಿಂದ ಹಾರಿಬಂದ ವೀರಪ್ಪ ಮೊಯಿಲಿ ಸ್ಪರ್ಧಿಸಿದರು. 2014ರ ಲೋಕಸಭಾ ಚುನಾವಣೆ ಟಿಕೆಟ್ ನೀಡುವುದಾಗಿ ನಂಬಿಸಿ, ಮತ್ತೆ ಅವರೇ ಸ್ಪರ್ಧಿಸಿದರು' ಎಂದು ದೂರಿದರು.

'ವಿಧಾನ ಪರಿಷತ್ ಚುನಾವಣೆಯಲ್ಲೂ ಅವಕಾಶ ನೀಡಲಿಲ್ಲ. ನನ್ನ ಮಗ ರಕ್ಷಾ ರಾಮಯ್ಯನನ್ನು ಒಂದೇ ವರ್ಷಕ್ಕೆ ರಾಜ್ಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿದರು. ಇನ್ನೊಂದು ಸಮಾವೇಶ ನಡೆಸಿ ಮುಂದಿನ ನಿರ್ಧಾರಕ್ಕೆ ಬರುತ್ತೇನೆ' ಎಂದರು.



ಕೆಪಿಸಿಸಿ ಉಪಾಧ್ಯಕ್ಷ ಎಂ.ಆರ್. ಸೀತಾರಾಂ ಬೆಂಗಳೂರಿನಲ್ಲಿ ಶುಕ್ರವಾರ ಕರೆದಿದ್ದ ಸಭೆಯಲ್ಲಿ ಪಾಲ್ಗೊಂಡಿದ್ದ ಅವರ ಬೆಂಬಲಿಗರು ಬೃಹತ್ ಹೂವಿನ ಹಾರ ಹಾಕಿ ಗೌರವಿಸಿದರು. ಭದ್ರಾವತಿ ಶಾಸಕ ಬಿ.ಕೆ. ಸಂಗಮೇಶ್ವರ, ಕೆಪಿಸಿಸಿ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಎಂ.ಡಿ. ಲಕ್ಷ್ಮೀನಾರಾಯಣ, ಯುವ ಕಾಂಗ್ರೆಸ್ ಸಮಿತಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ಇದ್ದರು. – ಪ್ರಜಾವಾಣಿ ಚಿತ್ರ

ಬಸವಣ್ಣ, ಡಾ.ರಾಜ್, ರಾಯಣ್ಣ, ಮಾಸ್ತಿ ಪಾಠ ಸೇರ್ಪಡೆ ಕಮ್ಯುನಿಸ್ಟ್ ಹೇಗೆ?

ಶಿಕ್ಷಣಕ್ಕೆ ನಿಷ್ಠರಾಗಿ ಪರಿಷ್ಕರಣೆ: ಬರಗೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಂದಾಯ ಸಚಿವ ಆರ್.ಅಶೋಕ ಅವರು ಪಠ್ಯಪುಸ್ತಕ ಪರಿಷ್ಕರಣೆ ಕುರಿತು ಅಸತ್ಯ ಹೇಳಿದ್ದಾರೆ. ನಾವು ಕಮ್ಯುನಿಸ್ಟ-ರಾಗಿ ಪಠ್ಯಪುಸ್ತಕ ಪರಿಷ್ಕರಣೆ ಮಾಡಿಲ್ಲ. ಶಿಕ್ಷಣಕ್ಕೆ ನಿಷ್ಠರಾಗಿ ಮಾಡಿದೆವು. ಸಚಿವರು ಇನ್ನಾದರೂ ಮಿಥ್ಯಾರೋಪಗಳನ್ನು ನಿಲ್ಲಿಸಲಿ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದ್ದಾರೆ.



ಬರಗೂರು ರಾಮಚಂದ್ರಪ್ಪ

'ಮರು ಪರಿಷ್ಕರಣೆಯನ್ನು ವಿರೋಧಿಸುತ್ತಿರುವ ಸಾಹಿತಿಗಳು ಮತ್ತು ಸಂಘಟನೆಗಳನ್ನು ಮಾತುಕತೆಗೆ ಕರೆದು ಪ್ರಜಾಸತ್ತಾತ್ಮಕ ನಡೆಗೆ ಮುಂದಾಗಬೇಕು' ಎಂದೂ ಅವರು ಮುಖ್ಯಮಂತ್ರಿಯವರನ್ನು ಆಗ್ರಹಿಸಿದ್ದಾರೆ.

'ನಾವು ಬಸವಣ್ಣ, ಸಂಗೊಳ್ಳಿ ರಾಯಣ್ಣ, ಡಾ.ರಾಜ್‌ಕುಮಾರ್ ಅವರ ಪಾಠ ಸೇರಿಸಿದರೆ ಅದು ಕಮ್ಯುನಿಸ್ಟ್ ಪಠ್ಯವೇ? ಮಾಸ್ತಿ, ಅಡಿಗ, ಗೊರೂರು, ಮೂರ್ತಿರಾಯರು, ಲಂಕೇಶ್, ಸಾರಾ ಅಬೂಬಕ್ಕರ್, ಚೆನ್ನಣ್ಣ ವಾಲೀಕಾರ ಮುಂತಾದವರ ಬರಹಗಳನ್ನು ಹೊಸದಾಗಿ ಸೇರಿಸಿ ಸಮತೋಲನ ಸಾಧಿಸಿದರೆ ಅದು ಕಮ್ಯುನಿಸ್ಟ್ ಸಿದ್ಧಾಂತವೇ' ಎಂದು ಬರಗೂರು ಪ್ರಶ್ನಿಸಿದ್ದಾರೆ.

ಬರಗೂರು ಸ್ಪಷ್ಟನೆ:

- ಮೈಸೂರು ಒಡೆಯರ ಕಾಲದ ವಿವರಗಳನ್ನು ನಾವು ಬಿಟ್ಟಿದ್ದೇವೆ ಎಂದು ಸಚಿವರು ಹೇಳಿದ್ದಾರೆ. ವಾಸ್ತವದಲ್ಲಿ 6 ನೇ ತರಗತಿಯ ಸಮಾಜ ವಿಜ್ಞಾನದಲ್ಲಿದ್ದ ಪಾಠವನ್ನು ಹೆಚ್ಚು ವಿವರಗಳ ಸಮೇತ 7ನೇ ತರಗತಿಯ (ಭಾಗ–1 ಪುಟ 45 ರಿಂದ 58) ಪಠ್ಯಕ್ಕೆ ನಾವು ವರ್ಗಾಯಿಸಿದ್ದೆವು. ಇಡೀ ಅಧ್ಯಾಯವನ್ನು ಮರು ಪರಿಷ್ಕರಣೆಯಲ್ಲಿ ತೆಗೆದುಹಾಕಿ ನಮ್ಮ ಮೇಲೆ ಆರೋಪ ಹೊರಿಸುತ್ತಿದ್ದಾರೆ. ನಮ್ಮ ಪಾಠದಲ್ಲಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್, ಸರ್. ಎಂ.ವಿಶ್ವೇಶ್ವರಯ್ಯ ಮತ್ತು ಮಿರ್ಜಾ ಇಸ್ಮಾಯಿಲ್ ಅವರ ಪೂರ್ಣ ವಿವರವನ್ನು ಮರುಪರಿಷ್ಕರಣೆಯಲ್ಲಿ ಕೈ ಬಿಟ್ಟಿದ್ದಾರೆ.
- ನಾಡಪ್ರಭು ಕೆಂಪೇಗೌಡರ ಪಾಠ ನಮ್ಮ ಪರಿಷ್ಕರಣೆ ಪಠ್ಯದಲ್ಲಿ ಇರಲಿಲ್ಲ ಎಂಬುದು ಸುಳ್ಳು. ನಾವು 7ನೇ ತರಗತಿಯ ಸಮಾಜ ವಿಜ್ಞಾನ (ಭಾಗ–1 ಪುಟ 43–44) ರಲ್ಲಿ ಎರಡು ಪುಟಗಳ ವಿವರಗಳನ್ನು ಕೊಟ್ಟಿದ್ದೆವು. ಮರು ಪರಿಷ್ಕರಣೆಯಲ್ಲಿ ಒಂದು ಪುಟಕ್ಕೆ ಇಳಿಸಿದ್ದಲ್ಲದೇ, ಕೆಂಪೇಗೌಡರ ಆಡಳಿತಕ್ಕೆ ರಾಮನಗರ, ಕೋಲಾರ ಮತ್ತು ತುಮಕೂರು ಭಾಗಗಳು ಒಳಪಟ್ಟಿದ್ದವೆಂದು ನಾವು ಕೊಟ್ಟಿದ್ದ ವಿವರವನ್ನು ತೆಗೆದು ಹಾಕಿದ್ದಾರೆ.
- ಪೋರ್ಚುಗೀಸರ ವಿರುದ್ಧ ಹೋರಾಡಿದ ರಾಣಿ ಅಬ್ಬಕ್ಕ ಪಾಠವನ್ನು ತೆಗೆದುಹಾಕಿದ್ದಾರೆ. ನಾವು 7 ನೇ ತರಗತಿಯ ಸಮಾಜ ವಿಜ್ಞಾನದಲ್ಲಿ ಹೊಸದಾಗಿ ಸೇರಿಸಿದ್ದ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರನ್ನು ಕುರಿತ ಅಧ್ಯಾಯವನ್ನು ಕೈಬಿಟ್ಟಿದ್ದಾರೆ. ಇದರಲ್ಲಿ ರಾಣಿ ಅಬ್ಬಕ್ಕ, ಯಶೋಧರ ದಾಸಪ್ಪ, ಬಳ್ಳಾರಿ ಸಿದ್ದಮ್ಮ, ಕಮಲಾದೇವಿ ಚಟ್ಟೋಪಾಧ್ಯಾಯ, ಉಮಾಬಾಯಿ ಕುಂದಾಪುರ ಅವರ ಎಲ್ಲ ವಿವರಗಳನ್ನು ತೆಗೆದಿದ್ದಾರೆ.
- 7 ನೇ ತರಗತಿಯ ಸಮಾಜ ವಿಜ್ಞಾನ ಭಾಗ–1 ರಲ್ಲಿ ಭಕ್ತಿಪಂಥ ಮತ್ತು ಸೂಫಿ ಪರಂಪರೆಯೆಂಬ ಅಧ್ಯಾಯದಲ್ಲಿದ್ದ ಅಕ್ಕಮಹಾದೇವಿ, ಶಿಶುನಾಳ ಶರೀಫ, ಪುರಂದರದಾಸ, ಕನಕದಾಸ ಎಲ್ಲ ವಿವರಗಳನ್ನು ತೆಗೆದು ಉತ್ತರ ಭಾರತದವರನ್ನು ಮಾತ್ರ ಉಳಿಸಿಕೊಂಡಿದ್ದಾರೆ. ಇದು ಕರ್ನಾಟಕದ ಅಸ್ಮಿತೆಗೆ ಮಾಡಿದ ಅನ್ಯಾಯ.
- ತಾವು ಮಾಡಿದ ಅಪಚಾರಗಳನ್ನು ಮರೆ ಮಾಚಲು ಕುವೆಂಪು ಅವರ 10 ಪಾಠಗಳನ್ನು ಹಾಕಿರುವುದನ್ನು ಮುಂದೆ ಮಾಡುತ್ತಿದ್ದಾರೆ. ನಾವು ಕುವೆಂಪು ಅವರು ಪ್ರತಿಪಾದಿಸಿದ ಅಖಂಡ ಕರ್ನಾಟಕತ್ವ ಮತ್ತು ಸರ್ವಜನಾಂಗದ ಶಾಂತಿಯ ತೋಟವೆಂಬ ಆದರ್ಶಕ್ಕೆ ಅನುಗುಣವಾಗಿ ಕರ್ನಾಟಕದ ಎಲ್ಲ ಭಾಗಗಳ ಬರಹಗಾರರನ್ನು ಪ್ರಾತಿನಿಧಿಕವಾಗಿ ಸೇರಿಸಿದ್ದೇವೆ.
- ವೇದಕಾಲದ ಸಂಸ್ಕೃತಿ ಎಂಬ ಪಾಠವನ್ನು ತೆಗೆದುಹಾಕಿರುವ ಇವರು ಭಾರತೀಯ ಪರಂಪರೆಯ ಬಗ್ಗೆ ಮಾತನಾಡುವುದೇ ಒಂದು ವಿಚಿತ್ರ.
- ಡಾ.ಅಂಬೇಡ್ಕರ್ ಅವರ ವಿಚಾರಧಾರೆಗೆ ಸಾಕಷ್ಟು ಕತ್ತರಿ ಪ್ರಯೋಗ ಮಾಡಿದ್ದಾರೆ. ಅಂಬೇಡ್ಕರ್ ಮತ್ತು ಬುದ್ಧನ ಕುರಿತ ಪದ್ಯವನ್ನು ತೆಗೆದಿದ್ದಾರೆ.

ಸಿದ್ಧಗಂಗೆ, ಚುಂಚನಗಿರಿ ಮಠ ವಿವರಕ್ಕೆ ಕತ್ತರಿ

- ಸಿದ್ದಗಂಗೆ ಮತ್ತು ಆದಿಚುಂಚನಗಿರಿ ಮಠಗಳ ವಿವರಗಳನ್ನೂ ಒಂದೇ ಸಾಲಿಗೆ ಇಳಿಸಿ ಅನ್ಯಾಯ ಮಾಡಿದ್ದಾರೆ.
- ಹಯಿಲಗೋಳ ನಾರಾಯಣರಾಯರು, ದೇವೇಗೌಡರು, ದೇವನೂರ ಮಹಾದೇವ ಅವರ ಚಿತ್ರಗಳನ್ನು ಕೈಬಿಟ್ಟಿದ್ದಾರೆ.
- ಕರ್ನಾಟಕದ ಏಕೀಕರಣ ವಿಷಯ ತಿಳಿಸುವಾಗ ಕುವೆಂಪು ಚಿತ್ರ ತೆಗೆದುಹಾಕಿದ್ದಾರೆ.

ಶಿಕ್ಷಣ ಸಚಿವ ಅಸಮರ್ಥರೆಂಬುದು ಸಾಬೀತಾಗಿದೆ: ಬಿ.ಕೆ.ಹರಿಪ್ರಸಾದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಠ್ಯಪುಸ್ತಕ ಪರಿಷ್ಕರಣೆಯಲ್ಲಿನ ತಪ್ಪುಗಳ ಕುರಿತು ಶಿಕ್ಷಣ ಸಚಿವರ ಬದಲಿಗೆ ಕಂದಾಯ ಸಚಿವರು ಸಮಜಾಯಿಷಿ ನೀಡಿದ್ದಾರೆ. ಇದರಿಂದ ನಮ್ಮ ಶಿಕ್ಷಣ ಸಚಿವರು ಅಸಮರ್ಥರೆಂಬುದು ಸಾಬೀತಾಗಿದೆ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ.

ಶುಕ್ರವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಪಠ್ಯಪುಸ್ತಕ ಪರಿಷ್ಕರಣೆ ಹೆಸರಿನಲ್ಲಿ ಆಗಿರುವ ಲೋಪಗಳನ್ನು ಸರಿಪಡಿಸುವಂತೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಸೇರಿದಂತೆ ಹಿರಿಯ ನಾಯಕರು, ಶಿಕ್ಷಣ ತಜ್ಞರು, ಸಾಹಿತಿಗಳು ಮುಖ್ಯಮಂತ್ರಿ ಮತ್ತು ಶಿಕ್ಷಣ ಸಚಿವರಿಗೆ ಪತ್ರ ಬರೆಯುತ್ತಲೇ ಇದ್ದಾರೆ. ಅವರೊಂದಿಗೆ ಸಭೆ ನಡೆಸುವ ಸೌಜನ್ಯವನ್ನು ಮುಖ್ಯಮಂತ್ರಿ ತೋರಿಸಿಲ್ಲ. ಇದು ಪ್ರಜಾಪ್ರಭುತ್ವ ವಿರೋಧಿ ನಡೆ' ಎಂದು ಟೀಕಿಸಿದ್ದಾರೆ.

'ಕಂದಾಯ ಸಚಿವ ಆರ್. ಅಶೋಕ ಅವರು ಸುಳ್ಳು ಮಾಹಿತಿ ನೀಡುವ ಮೂಲಕ ಜನರನ್ನು ದಿಕ್ಕುತಪ್ಪಿಸಲು ಯತ್ನಿಸಿದ್ದಾರೆ. 'ಟಿಪ್ಪು ಸುಲ್ತಾನ್ ಹೆಸರು ಹೇಳಿದರೆ ಕಾಂಗ್ರೆಸ್‌ನವರು ಮೈಮೇಲೆ ಬಂದಂತೆ ಆಡುತ್ತಾರೆ' ಎಂದು ಹೇಳಿದ್ದಾರೆ. 2012–13ರಲ್ಲಿ ಬಿಜೆಪಿ ಸರ್ಕಾರ ಇದ್ದಾಗ ಟಿಪ್ಪುವಿನ ದೇಶಪ್ರೇಮ, ಪರಾಕ್ರಮ ಕುರಿತ 425 ಪುಟಗಳ ಗ್ರಂಥ ಪ್ರಕಟಿಸಲಾಗಿತ್ತು. ಆಗ ಮುಖ್ಯಮಂತ್ರಿಯಾಗಿದ್ದ ಜಗದೀಶ ಶೆಟ್ಟರ್, ಸಚಿವರಾಗಿದ್ದ ಗೋವಿಂದ ಕಾರಜೋಳ, ಆರ್. ಅಶೋಕ ಟಿಪ್ಪುವಿನ ವೇಷ ಧರಿಸಿ ಸಂಭ್ರಮಿಸಿದ್ದರು. ಈಗ ವಾಟ್ಸ್ ಆ್ಯಪ್ ವಿಶ್ವವಿದ್ಯಾಲಯದ ಮಾಹಿತಿ ಆಧರಿಸಿ ಸುಳ್ಳು ಹೇಳುತ್ತಿದ್ದಾರೆ' ಎಂದು ವಾಗ್ದಾಳಿ ನಡೆಸಿದ್ದಾರೆ.

ಮುಖ್ಯಪ್ರಕಾರ ಸೇರಿದ ದಲಿತ ಸಾಹಿತ್ಯ: ಹನುಮಂತಯ್ಯ

ಬೆಂಗಳೂರು: ದೇಶದ ಎಲ್ಲ ಭಾಷೆಗಳಿಗೆ ಹೊಸ ಕಸುವು ತಂದಿದ್ದ ದಲಿತ ಸಾಹಿತ್ಯವು ಇಂದು ಮುಖ್ಯಪ್ರಕಾರದಲ್ಲಿ ಸೇರಿಕೊಂಡಿದೆ. ಕನ್ನಡವೂ ಸೇರಿದಂತೆ ಎಲ್ಲ ಭಾಷೆಗಳು ದಲಿತ ಸಾಹಿತ್ಯವನ್ನು ಪ್ರತ್ಯೇಕವಾಗಿ ನೋಡದೇ ಒಳಗುಮಾಡಿಕೊಂಡು ಬಹುದೊಡ್ಡ ಔದಾರ್ಯವನ್ನು ಮೆರೆದಿವೆ ಎಂದು ರಾಜ್ಯಸಭೆ ಸದಸ್ಯರೂ ಆಗಿರುವ ಕವಿ ಎಲ್. ಹನುಮಂತಯ್ಯ ಹೇಳಿದರು.



ನಗರದ ಸಂತ ಜೋಸೆಫರ ಕಾಲೇಜಿನ ಕನ್ನಡ ವಿಭಾಗವು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಹಕಾರದೊಂದಿಗೆ ಹಮ್ಮಿಕೊಂಡಿದ್ದ 'ದಲಿತ ಮತ್ತು ಮಹಿಳಾ ಸಾಹಿತ್ಯ; ಹೊಸ ಸಾಧ್ಯತೆಗಳು' ಎಂಬ ವಿಷಯ ಕುರಿತ ರಾಷ್ಟ್ರೀಯ ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಇದೇ ವೇಳೆ ಕನ್ನಡ ವಿಭಾಗದ ಮುಖ್ಯಸ್ಥರಾದ ಈರಯ್ಯ ಹಂಪಾಪುರ ಸಂಪಾದಿಸಿರುವ 'ನುಡಿ ಬಿಂಬ' ಮತ್ತು ಪ್ರಾಧ್ಯಾಪಕ ಎಸ್. ಬಿ. ಹನುಮಂತರಾಯಪ್ಪ ಸಂಪಾದಿಸಿರುವ 'ಎಳೆ ಚಿಗುರು' ಪುಸ್ತಕಗಳನ್ನು ಅವರು ಬಿಡುಗಡೆ ಮಾಡಿದರು. ಕನ್ನಡದಲ್ಲಿ ದಲಿತ ಸಾಹಿತ್ಯವೆಂಬುದು ಇತ್ತೀಚಿನ ವರ್ಷಗಳಲ್ಲಿ ಹುಟ್ಟಿದ್ದಲ್ಲ; ಪಂಪ, ಬಸವಣ್ಣನವರ ಕಾಲದಿಂದಲೂ ಬಂಡಾಯದ ಬಹುದೊಡ್ಡ ಚಹರೆಗಳು ಇದ್ದು, ಅಂತಹ ಪರಂಪರೆ ಕನ್ನಡದ್ದಾಗಿದೆ. ವಚನ ಸಾಹಿತ್ಯದಲ್ಲಿ ದಲಿತರೂ ಸೇರಿದಂತೆ ತಳಸಮುದಾಯದ ವಚನಕಾರರು, ಮಹಿಳಾ ವಚನಕಾರರು ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ. ಕುವೆಂಪು ಅವರು ಬಹುದೊಡ್ಡ ಬಂಡಾಯಕವಿ ಎಂದೂ ಹನುಮಂತಯ್ಯ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಫಾದರ್ ವಿಕ್ಟರ್ ಲೋಬೊ ಅವರು, ವಿದ್ಯಾರ್ಥಿಗಳ ಬರೆಹವನ್ನು ಸಂಪಾದಿಸಿ ಪ್ರಕಟಿಸುವ ಮೂಲಕ ಹೊಸ ತಲೆಮಾರನ್ನು ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿಸುತ್ತಿರುವುದು ಶ್ಲಾಘನೀಯ ಎಂದರು.

ಹಗರಣ ಬಯಲಿಗೆಳೆದ ಉಪಾಸೆಗೆ ವರ್ಗಾವಣೆ

ಕಲಬುರಗಿ: ವಾಣಿಜ್ಯ ತೆರಿಗೆ ಇಲಾಖೆಯ ಇಲ್ಲಿನ ಕಚೇರಿಯಲ್ಲಿನ ಟಿಡಿಎಸ್ ಫಾರಂ ದುರ್ಬಳಕೆ ಮಾಡಿಕೊಂಡು ಕೋಟಿಗಟ್ಟಲೇ ಹಣ ಲೂಟಿ ಮಾಡಿದ್ದ ಹಗರಣ ಬಯಲಿಗೆ ಎಳೆಯುವಲ್ಲಿ ಪ್ರಮುಖ ಪಾತ್ರವಹಿಸಿದ ಇಲಾಖೆಯ ಜಂಟಿ ಆಯುಕ್ತ ಸಂಗಮೇಶ ಉಪಾಸೆ ಅವರಿಗೆ ಐದೇ ತಿಂಗಳಲ್ಲಿ ಬೆಂಗಳೂರಿಗೆ ವರ್ಗಾವಣೆಯಾಗಿದೆ.



ಸಂಗಮೇಶ ಉಪಾಸೆ

ಇಲ್ಲಿನ ವಾಣಿಜ್ಯ ತೆರಿಗೆ ಇಲಾಖೆಯ ಸಹಾಯಕ ಆಯುಕ್ತರ ಕಚೇರಿಯಲ್ಲಿ ಸುಳ್ಳು ದಾಖಲೆ ಸೃಷ್ಟಿಸಿ 'ಟಿಡಿಎಸ್ ಮರುಪಾವತಿ' ನೆಪದಲ್ಲಿ ಕೋಟ್ಯಂತರ ಹಣ ಕಬಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲಾಖೆಯ ಪ್ರಥಮ ದರ್ಜೆ ಸಹಾಯಕ ಪಂಡರಿನಾಥ, ಹೊರಗುತ್ತಿಗೆ ನೌಕರ ಮೊಹಮ್ಮದ್ ರಹೀಲ್ ಎಂಬ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು. 'ಮೆ.ರಿದನಾಲ್ ವಾಟರ್ ಪ್ಯುರಿಫಯರ್ ಎಂಬ ನಕಲಿ ಸಂಸ್ಥೆ ಹುಟ್ಟುಹಾಕಿ, ಈವರೆಗೆ ₹ 2 ಕೋಟಿಗೂ ಅಧಿಕ ಹಣ ಕಬಳಿಸಿದ್ದನ್ನು ಸಂಗಮೇಶ ಪತ್ತೆ ಮಾಡಿ ಕಾನೂನು ಕ್ರಮಕ್ಕೆ ಮುಂದಾಗಿದ್ದರು. ಅಷ್ಟರಲ್ಲಿ ಅವರನ್ನು ಬೆಂಗಳೂರಿಗೆ ವರ್ಗಾಯಿಸಿ, ಕೇಂದ್ರ ಕಚೇರಿಯಲ್ಲಿ ಕಾನೂನು ವ್ಯವಹಾರಗಳ ಜಂಟಿ ಆಯುಕ್ತರನ್ನಾಗಿ ನಿಯೋಜಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

76 ಮಂದಿಯಿಂದ ಮುಖ್ಯಮಂತ್ರಿಗೆ ಬಹಿರಂಗ ಪತ್ರ

'ಮುಸ್ಲಿಂ, ಕ್ರೈಸ್ತ, ದಲಿತರ ಮೇಲೆ ಹಲ್ಲೆ ಆಘಾತಕಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಮುಸ್ಲಿಂ, ಕ್ರೈಸ್ತ ಮತ್ತು ದಲಿತರ ಮೇಲೆ ನಾನಾ ರೀತಿಯ ಹಲ್ಲೆಗಳು ನಡೆಯುತ್ತಿರುವುದು ನಮಗೆ ಆಘಾತ ಮೂಡಿಸಿದೆ' ಎಂದು ಚಿಂತಕರು, ಲೇಖಕರು, ಹೋರಾಟಗಾರರನ್ನು ಒಳಗೊಂಡ 76 ಮಂದಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬಹಿರಂಗ ಪತ್ರ ಬರೆದಿದ್ದಾರೆ.

'ಕಳೆದ ಒಂದು ತಿಂಗಳಿಂದ ತಮ್ಮನ್ನು ಭೇಟಿ ಮಾಡಿ ಈ ಪತ್ರ ನೀಡಲು ತಮ್ಮ ಕಚೇರಿಯ ಮೂಲಕ ಪ್ರಯತ್ನಿಸಿದ್ದೆವು. ಅದು ವಿಫಲವಾಗಿದ್ದರಿಂದ ಪತ್ರ ಬರೆಯುತ್ತಿದ್ದೇವೆ' ಎಂದೂ ಅವರು ಹೇಳಿದ್ದಾರೆ.

ಎಂ.ಎಸ್.ಸತ್ಯು, ರಾಮಚಂದ್ರ ಗುಹಾ, ಗಿರೀಶ್ ಕಾಸರವಳ್ಳಿ, ಶಶಿ ದೇಶಪಾಂಡೆ, ವೈದೇಹಿ, ಎಸ್.ಜಿ. ವಾಸುದೇವ್, ವಿವೇಕ್ ಶಾನುಭಾಗ, ಕೇಶವ ಮಳಗಿ, ಯಲ್ಲಪ್ಪರೆಡ್ಡಿ, ನಾಗೇಶ ಹೆಗಡೆ, ಶರತ್ ಅನಂತಮೂರ್ತಿ, ಕವಿತಾ ಲಂಕೇಶ್, ನಿವೃತ್ತ ಐಎಎಸ್, ಐಎಫ್ಎಸ್, ಐಪಿಎಸ್ ಅಧಿಕಾರಿಗಳಾದ ರವಿ ಜೋಷಿ, ಚಿರಂಜೀವಿ ಸಿಂಗ್, ಅಜಯಕುಮಾರ್ ಸಿಂಗ್, ಪಾಸ್ಕಲ್ ನಜರೆತ್, ಟಿ.ಆರ್. ರಘುನಂದನ್, ವಿಜಯಲತಾ ರೆಡ್ಡಿ ಸೇರಿದಂತೆ 76 ಜನ ಪತ್ರಕ್ಕೆ ಸಮ್ಮತಿ ಸೂಚಿಸಿದ್ದಾರೆ. ಲೇಖಕರು, ವಿಜ್ಞಾನಿಗಳು, ಕಲಾವಿದರು, ಛಾಯಾಗ್ರಾಹಕರು, ಪತ್ರಕರ್ತರು ಈ ಪಟ್ಟಿಯಲ್ಲಿದ್ದಾರೆ.

'ಕರ್ನಾಟಕದಲ್ಲಿ ಶಾಂತಿ ಮತ್ತು ಸೌಹಾರ್ದ ಮೂಡಿಸಿ, ನಾಡನ್ನು ಸರ್ವಜನಾಂಗದ ಶಾಂತಿಯ ತೋಟವಾಗಿ ಮರುಸ್ಥಾಪಿಸಬೇಕು. ಇಲ್ಲವಾದರೆ ರಾಜ್ಯ ಪ್ರಗತಿಯತ್ತ ಸಾಗುವುದರ ಬದಲು ಸರ್ಕಾರದ ನಿಷ್ಕ್ರಿಯತೆಯಿಂದ ಅಧಃಪತನಕ್ಕೆ ಸಾಗಲಿದೆ' ಎಂದು ಅವರು ಎಚ್ಚರಿಸಿದ್ದಾರೆ.

'ದಿಗಿಲು ಹುಟ್ಟಿಸುವ ಭಾರತ' ಮತ್ತು 'ಕಳಂಕಿತ ಭಾರತ'ದ ವಾತಾವರಣದಲ್ಲಿ 'ಭಾರತದಲ್ಲಿ ತಯಾರಿಸು'(ಮೇಕ್ ಇನ್ ಇಂಡಿಯಾ) ಎನ್ನುವ ಘೋಷವಾಕ್ಯವನ್ನು ಸಾಕಾರಗೊಳಿಸುವುದು ಸಾಧ್ಯವಿಲ್ಲದ ಮಾತು' ಎಂದಿದ್ದಾರೆ.

ಸಂಕುಚಿತ ಮತೀಯವಾದಿಗಳು, ದ್ವೇಷಪೂರಿತ ವ್ಯಕ್ತಿಗಳು ಧರ್ಮ ಮತ್ತು ಜಾತಿಯ ಆಧಾರದಲ್ಲಿ ಅಲ್ಪಸಂಖ್ಯಾತರನ್ನು ಪ್ರತ್ಯೇಕಿಸಿ ದೂರವಿಡುವ ಮತ್ತು ಅವರನ್ನು ದಮನಗೊಳಿಸುವ ಪ್ರಯತ್ನ ನಡೆಸಿದ್ದಾರೆ. ಚುನಾಯಿತ ಪ್ರತಿನಿಧಿಗಳೂ ಸೇರಿ ಜವಾಬ್ದಾರಿ ಹುದ್ದೆಗಳಲ್ಲಿರುವ ಹಲವರು ಅಲ್ಪಸಂಖ್ಯಾತ ಸಮುದಾಯದವರಲ್ಲಿ ಭೀತಿ ಮೂಡಿಸುತ್ತಿದ್ದಾರೆ. ಈ ಸಮುದಾಯಗಳ ಮೇಲೆ ಸಾಮಾಜಿಕ ಮತ್ತು ಆರ್ಥಿಕ ಬಹಿಷ್ಕಾರ ಹಾಕಿ ಅವರನ್ನು ದ್ವಿತೀಯ ದರ್ಜೆ ನಾಗರಿಕರಂತೆ ಪರಿಗಣಿಸಿ ಅವರ ಸಾಂವಿಧಾನಿಕ ಹಕ್ಕುಗಳನ್ನು ಹತ್ತಿಕ್ಕುತ್ತಿದ್ದಾರೆ ಎಂದು ಅವರು ಕಿಡಿಕಾರಿದ್ದಾರೆ.


ಈ ಬೆಳವಣಿಗೆಗಳಿಂದಾಗಿ ರಾಜ್ಯದ ಪ್ರಗತಿಕುಂಠಿತಗೊಳ್ಳಲಿದೆ.ರಾಜ್ಯದಕೀರ್ತಿಗೂ ಭಂಗ ಬರಲಿದೆ. ಹೂಡಿಕೆದಾರರು, ಉದ್ಯಮಿಗಳು ರಾಜ್ಯದ ಮೇಲೆ ನಂಬಿಕೆ ಕಳೆದುಕೊಳ್ಳಲಿದ್ದಾರೆ. ನಾಗರಿಕರಲ್ಲಿ ಅಪನಂಬಿಕೆ ಮತ್ತು ಅಸುರಕ್ಷಿತ ಭಾವನೆ ಮೂಡಿಸಿ ಭಯದ ವಾತಾವರಣ ಸೃಷ್ಟಿಸಲಾಗುತ್ತಿದೆ ಎಂದಿದ್ದಾರೆ.

ಮುಖ್ಯಾಂಶಗಳು

- ರಾಜ್ಯದ ಕೀರ್ತಿಗೆ ಭಂಗ ತರದಂತೆ ನೋಡಿಕೊಳ್ಳಿ
- ಮತೀಯ ಬಹಿಷ್ಕಾರ ಹಾಕುವವರ ವಿರುದ್ಧ ಕ್ರಮ ಕೈಗೊಳ್ಳಿ
- ಜಿಲ್ಲಾಡಳಿತದ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಿ

ಪ್ರಮುಖ ಒತ್ತಾಯಗಳು

- ಪೊಲೀಸ್ ಪಡೆಯು ಸಾಂವಿಧಾನಿಕ ಕರ್ತವ್ಯಕ್ಕೆ ಬದ್ಧವಾಗಿ ಕಾನೂನು ಪಾಲನೆಯನ್ನು ಎತ್ತಿಹಿಡಿದು ಸಮಾಜದ ದುರ್ಬಲ ವರ್ಗದ ನಾಗರಿಕರ ರಕ್ಷಣೆ ಮಾಡಬೇಕು. ಮತೀಯವಾದಿ ಮತ್ತು ಜಾತಿವಾದಿ ಅಪರಾಧಗಳಿಗೆ ತುತ್ತಾಗುವ ನಾಗರಿಕರಿಗೆ ಪೂರ್ಣ ನ್ಯಾಯ ದೊರಕಬೇಕು.
- ಕೋಮು ಗಲಭೆಗಳಿಂದ ಹಿಂಸೆ, ಸಾವು ಮತ್ತು ಜೀವನ ನಷ್ಟವಾದಾಗ ಶಾಂತಿ ಮತ್ತು ಸೌಹಾರ್ದತೆ ಕಾಪಾಡಲು ವಿಫಲರಾಗುವ ಅಧಿಕಾರಿಗಳ ವಿರುದ್ಧ ವಿಶೇಷವಾಗಿ ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತ ಮತ್ತು ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.
- ಅಲ್ಪಸಂಖ್ಯಾತರ ವಿರುದ್ಧ ಸಾಮಾಜಿಕ, ಆರ್ಥಿಕ ಬಹಿಷ್ಕಾರದ ಕರೆ ನೀಡಿ ಸಮಾಜದ ಸ್ವಾಸ್ಥ್ಯ ಕೆಡಿಸುತ್ತಿರುವ ವ್ಯಕ್ತಿಗಳ ವಿರುದ್ಧ ಕಠಿಣವಾಗಿ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಹಿಂಸೆಗೆ ಪ್ರಚೋದನೆ ನೀಡುವಂತ ಪ್ರವೃತ್ತಿಗೆ ತಡೆಯೊಡ್ಡಬೇಕು.
- ಸಾಮಾಜಿಕ ಜಾಲತಾಣಗಳು, ಇತರ ಮಾಧ್ಯಮಗಳು ಮತ್ತು ಸಾರ್ವಜನಿಕ ವೇದಿಕೆಗಳಲ್ಲಿ ಅಲ್ಪಸಂಖ್ಯಾತ ಸಮುದಾಯದ ವಿರುದ್ಧ ಸುಳ್ಳು ಸುದ್ದಿ, ಗಾಳಿ ಸುದ್ದಿ ಹಬ್ಬಿಸುವ ಕೃತ್ಯ ನಡೆಯುತ್ತಿದೆ. ಇಂತಹ ಅಪರಾಧಗಳನ್ನು ಎಸಗುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು.



ತರಬೇತಿ ಪಥ

ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಬೆಂಗಾವಲು ಪಡೆಯ ಹೆಲಿಕಾಪ್ಟರ್‌ಗಳನ್ನು ಇಳಿಸಲು ಕೊಮ್ಮಘಟ್ಟ ಬಳಿ ನಿರ್ಮಿಸಿದ್ದ ಹೆಲಿಪ್ಯಾಡ್‌ಗಳು ಈಗ ಚಾಲನಾ ತರಬೇತಿ ಪಥವಾಗಿ ಮಾರ್ಪಟ್ಟಿರುವ ದೃಶ್ಯ ಶುಕ್ರವಾರ ಕಂಡುಬಂತು. –ಪ್ರಜಾವಾಣಿ ಚಿತ್ರ/ರಂಜು ಪಿ.



ಮಂಗಳೂರಿನ ನಾಗುರಿಯಲ್ಲಿ ಶುಕ್ರವಾರ ಎಲೆಕ್ಟ್ರಿಕ್ ಸ್ಕೂಟರ್ ಮಳಿಗೆ ಇರುವ ಕಟ್ಟಡಕ್ಕೆ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹತ್ತಿಕೊಂಡಿದ್ದನ್ನು ಅಗ್ನಿಶಾಮಕ ಇಲಾಖೆ ಸಿಬ್ಬಂದಿ ನಂದಿಸಿದರು

ಇ– ಸ್ಕೂಟರ್ ಶೋರೂಂಗೆ ಬೆಂಕಿ 150ಕ್ಕೂ ಅಧಿಕ ಸ್ಕೂಟರ್‌ಗೆ ಹಾನಿ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ನಾಗುರಿಯಲ್ಲಿ ಶುಕ್ರವಾರ ಒಕಿನವಾ ಎಲೆಕ್ಟ್ರಿಕ್ ಸ್ಕೂಟರ್ ಶೋರೂಂಗಳಿಗೆ ಬೆಂಕಿ ಬಿದ್ದ ಪರಿಣಾಮ 150ಕ್ಕೂ ಅಧಿಕ ಸ್ಕೂಟರ್‌ಗಳು ಸುಟ್ಟಿವೆ.

ಶಾರ್ಟ್ ಸರ್ಕ್ಯೂಟ್‌ನಿಂದ ಅವಘಡ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ. ಬೆಳಿಗ್ಗೆ ಮಳಿಗೆ ಸಿಬ್ಬಂದಿ, ಕೆಲಸಕ್ಕೆ ಬಂದಾಗ ಹೊಗೆ ಬರುತ್ತಿರುವುದು ಕಾಣಿಸಿದೆ. ನಂತರ ಏಕಾಏಕಿ ಬೆಂಕಿ ಹೊತ್ತಿಕೊಂಡಿದೆ. ತಕ್ಷಣ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಬಂದರೂ, ಅಷ್ಟೊತ್ತಿಗಾಗಲೇ ಬೆಂಕಿಯ ಕೆನ್ನಾಲಿಗೆ ಮಳಿಗೆಯನ್ನು ಆವರಿಸಿತ್ತು. ಶೋರೂಂ ಮಾಲೀಕ ಪ್ರಶಾಂತ್ ಕಂಕನಾಡಿ ನಗರ ಠಾಣೆಗೆ ದೂರು ನೀಡಿದ್ದಾರೆ.

'ಮಂಗಳೂರಿನ ಶೋರೂಂನಲ್ಲಿ ಅಗ್ನಿ ಅನಾಹುತ ಸಂಭವಿಸಿರುವುದು ದುರದೃಷ್ಟಕರ. ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಅವಘಡ ಸಂಭವಿಸಿದೆ ಎಂದು ಡೀಲರ್ ತಿಳಿಸಿದ್ದಾರೆ. ಈ ಬಗ್ಗೆ ಡೀಲರ್ ಜತೆ ನಿರಂತರ ಸಂಪರ್ಕದಲ್ಲಿದ್ದೇವೆ. ಸುರಕ್ಷತೆ ಒಕಿನವದ ಆದ್ಯತೆಯಾಗಿದೆ. ನಮ್ಮ ಎಲ್ಲ ಡೀಲರ್‌ಶಿಪ್‌ಗಳಲ್ಲಿ ಅಧಿಕ ಗುಣಮಟ್ಟದ ಸುರಕ್ಷತಾ ಕ್ರಮ ಕೈಗೊಳ್ಳಲಾಗಿದೆ' ಎಂದು ಒಕಿನವಾ ಆಟೊಟೆಕ್ ವಕ್ತಾರರು ತಿಳಿಸಿದ್ದಾರೆ.

'ಫ್ರೀಡಂ ಸನ್‌ಫ್ಲವರ್ ಆಯಿಲ್‌ಗೆ ನಂ.1 ಪಟ್ಟ'

ಬೆಂಗಳೂರು: ಜೆಮಿನಿ ಎಡಿಬಲ್ಸ್ ಆ್ಯಂಡ್ ಫ್ಯಾಟ್ಸ್ ಇಂಡಿಯಾ ಲಿಮಿಟೆಡ್ ಕಂಪನಿಯ 'ಫ್ರೀಡಂ ರಿಫೈನ್ಡ್ ಸನ್‌ಫ್ಲವರ್ ಆಯಿಲ್' ಬ್ರ್ಯಾಂಡ್‌ಗೆ ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಸೂರ್ಯಕಾಂತಿ ಎಣ್ಣೆ ವಿಭಾಗದಲ್ಲಿನ ಒಟ್ಟು ಮಾರಾಟದ ಆಧಾರದಲ್ಲಿ 'ನಂ.1 ಬ್ರ್ಯಾಂಡ್' ಎಂಬ ಹೆಗ್ಗಳಿಕೆ ದೊರೆತಿದೆ.

ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ ಮತ್ತು ಒಡಿಶಾ ರಾಜ್ಯಗಳಲ್ಲಿ ಮಾತ್ರ ಅಸ್ತಿತ್ವದಲ್ಲಿ ಇದ್ದರೂ ಈ ಬ್ರ್ಯಾಂಡ್‌ಗೆ ಈ ಹೆಗ್ಗಳಿಕೆ ದೊರೆತಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

'ಇದು ನಮ್ಮ ಗ್ರಾಹಕ ಕೇಂದ್ರಿತ ನಡೆ, ಬಲಿಷ್ಠ ವಿತರಣಾ ಜಾಲ ಮತ್ತು ಗುಣಮಟ್ಟಕ್ಕೆ ನೀಡಿದ ಗಮನದಿಂದಾಗಿ ಸಿಕ್ಕ ಫಲ. ಮುಂದಿನ ದಿನಗಳಲ್ಲಿ ನಾವು ತಮಿಳುನಾಡು ಹಾಗೂ ಕೇರಳ ಮಾರುಕಟ್ಟೆಗಳನ್ನೂ ಪ್ರವೇಶಿಸಲಿದ್ದೇವೆ' ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್ ಚೌಧರಿ ಹೇಳಿದ್ದಾರೆ.

ಬಾಗಲೂರು ಮೆಟ್ರೊ ನಿಲ್ದಾಣದ ಪಿಲ್ಲರ್‌ಗೆ ಅಡಿಪಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾರ್ಗದ ಮೆಟ್ರೊ ರೈಲು ಕಾಮಗಾರಿ ಚುರುಕು ಪಡೆದಿದ್ದು, ಬಾಗಲೂರು ನಿಲ್ದಾಣದ ಮೊದಲ ಪಿಲ್ಲರ್ ನಿರ್ಮಾಣಕ್ಕೆ ಗುರುವಾರ ಅಡಿಪಾಯ ಹಾಕಲಾಯಿತು.

ಮೆಟ್ರೊ ರೈಲು ಮಾರ್ಗದ ಸಿವಿಲ್ ಕಾಮಗಾರಿಯನ್ನು ವೇಗವಾಗಿ ಪೂರ್ಣಗೊಳಿಸಲು ಮುಂದಾಗಿರುವ ಬೆಂಗಳೂರು ಮೆಟ್ರೊ ರೈಲು ನಿಗಮ(ಬಿಎಂಆರ್‌ಸಿಎಲ್), ಚಿಕ್ಕಜಾಲ ಬಳಿ ಮೊದಲ ಪಿಲ್ಲರ್ ನಿರ್ಮಾಣ ಕಾಮಗಾರಿಯನ್ನು ಮೇ 10ರಂದು ಆರಂಭಿಸಿತ್ತು. ಪಿಲ್ಲರ್‌ಗಳ ಮೇಲೆ 'ಯು' ಆಕಾರದ ಗರ್ಡರ್ ಅಳವಡಿಕೆ ಕಾರ್ಯವನ್ನು ಕಳೆದ ವಾರ ಆರಂಭಿಸಲಾಗಿತ್ತು.



ಬಾಗಲೂರು ಮೆಟ್ರೊ ರೈಲು ನಿಲ್ದಾಣದ ಮೊದಲ ಪಿಲ್ಲರ್ ನಿರ್ಮಾಣಕ್ಕೆ ಅಡಿಪಾಯ ಹಾಕಿರುವುದು

ಬೊಗಳೆ ಬಿಡುವವರ ಜೊತೆಗೇನು ಚರ್ಚೆ?: ಪ್ರತಾಪ ಸಿಂಹಗೆ ಮಹಾದೇವಪ್ಪ ಪ್ರಶ್ನೆ

ಮೈಸೂರು: 'ನಾವು ಜಿಲ್ಲಾಸ್ಪತ್ರೆ ಕಟ್ಟದಿದ್ದರೆ ಕೋವಿಡ್ ಸಂದರ್ಭದಲ್ಲಿ ರೋಗಿಗಳನ್ನು ಎಲ್ಲಿ ಮಲಗಿಸುತ್ತಿದ್ದರು? ಸಂಸದ ಪ್ರತಾಪ ಸಿಂಹ ಅವರು ಏನೂ ಕೆಲಸ ಮಾಡದೇ ಕೇವಲ ಬೊಗಳೆ ಬಿಟ್ಟುಕೊಂಡು ಓಡಾಡುತ್ತಿದ್ದಾರೆ. ಅಂಥವರೊಂದಿಗೇನು ಚರ್ಚಿಸುವುದು' ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್.ಸಿ. ಮಹಾದೇವಪ್ಪ ಪ್ರತಿಪಾದಿಸಿದರು.

'ಮೈಸೂರು ಅಭಿವೃದ್ಧಿ ಕುರಿತ ಚರ್ಚೆಗೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಚರ್ಚೆಗೆ ಬರಲಿ' ಎಂಬ ಸಂಸದ ಪ್ರತಾಪ ಸಿಂಹ ಹೇಳಿಕೆಗೆ ಇಲ್ಲಿ ಶುಕ್ರವಾರ ಪ್ರತಿಕ್ರಿಯಿಸಿದ ಅವರು, 'ಸಂಸದರು ಕೆಲಸಕ್ಕೆ ಬಾರದ ಮಾತುಗಳನ್ನಾಡುತ್ತಿದ್ದಾರೆ. ನಾವು ನೂರು ಅಭಿವೃದ್ಧಿ ಕೆಲಸ ಮಾಡಿದ್ದೇವೆ' ಎಂದರು. ಪ್ರತ್ಯೇಕ ರಾಜ್ಯದ ಬಗ್ಗೆ ಸಚಿವ ಉಮೇಶ ಕತ್ತಿ ಧ್ವನಿ ಎತ್ತಿದ ಬಗ್ಗೆ ಪ್ರತಿಕ್ರಿಯಿಸಿ, 'ಅವನೊಬ್ಬ ಬುದ್ಧಿ ಇಲ್ಲದ ಅವಿವೇಕಿ. ಅರಣ್ಯ ಇಲಾಖೆಯಂತಹ ಬಹುಮುಖ್ಯ ಖಾತೆ ಇದ್ದರೂ ಕೆಲಸವಿಲ್ಲದಂತಿದ್ದಾನೆ. ಮುಖ್ಯಮಂತ್ರಿಯಾಗುವ ಆಸೆ ಇದ್ದರೆ ಇಲ್ಲೇ ಆಗಲಿ. ಅದಕ್ಕೇಕೆ ಪ್ರತ್ಯೇಕ ರಾಜ್ಯ ಬೇಕು?' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಇದು ದಪ್ಪ ಚರ್ಮದ ಸರ್ಕಾರ. ಜನಾಭಿಪ್ರಾಯಕ್ಕೆ ಮನ್ನಣೆ ನೀಡಿಲ್ಲ. ಕೋಮುವಾದದ ಅಫೀಮನ್ನು ಪಠ್ಯಪುಸ್ತಕದಲ್ಲಿ ಸೇರಿಸುವುದೇ ಅವರ ಉದ್ದೇಶ. ಅಂಬೇಡ್ಕರ್, ಬಸವಣ್ಣ, ಕುವೆಂಪು, ಕನಕದಾಸರು ಸೇರಿದಂತೆ ಯಾರ ಮೇಲೂ ಗೌರವವಿಲ್ಲ ಎನ್ನುವುದು ಪಠ್ಯಪರಿಷ್ಕರಣೆಯ ಮೂಲಕ ಮತ್ತೆ ಸಾಬೀತಾಗಿದೆ. ರಾಷ್ಟ್ರಪತಿ ಹುದ್ದೆಗೆ ಬಿಜೆಪಿ ಆದಿವಾಸಿ ಸಮುದಾಯದ ದ್ರೌಪದಿ ಮುರ್ಮು ಅವರನ್ನು ಅಭ್ಯರ್ಥಿಯಾಗಿಸಿರುವುದು ಸಾಮಾಜಿಕ ನ್ಯಾಯದ ಸಂಕೇತವೇನಲ್ಲ. ಪ್ರಧಾನಿ, ರಾಷ್ಟ್ರಪತಿ, ಮುಖ್ಯಮಂತ್ರಿ ಹುದ್ದೆಗಳನ್ನು ಜಾತಿಯಿಂದ ನೋಡುವುದೇ ಸಂವಿಧಾನಕ್ಕೆ ಮಾಡುವ ಅಪಮಾನ ಎಂದರು.

ಬೆಂಗಳೂರು ವಿಶ್ವವಿದ್ಯಾಲಯ ಎಡವಟ್ಟು: ವಿದ್ಯಾರ್ಥಿಗಳ ಅಸಮಾಧಾನ

ಸ್ನಾತಕೋತ್ತರ ತರಗತಿಗೆ ಪ್ರವೇಶ: ಪದವಿಯಲ್ಲಿ ಫೇಲ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನಾತಕೋತ್ತರ ತರಗತಿಗೆ ಪ್ರವೇಶ ಪಡೆದು ಮೊದಲ ಸೆಮಿಸ್ಟರ್‌ನ ಪರೀಕ್ಷೆಗಳು ಸಮೀಪಿಸುತ್ತಿರುವ ಹಂತದಲ್ಲಿ ಹಲವು ವಿದ್ಯಾರ್ಥಿಗಳನ್ನು ಬೆಂಗಳೂರು ವಿಶ್ವವಿದ್ಯಾಲಯ ಸಂಕಷ್ಟಕ್ಕೆ ಸಿಲುಕಿಸಿದೆ.

'ಪದವಿ ಹಂತದಲ್ಲೇ ಅನುತ್ತೀರ್ಣರಾಗಿರುವುದರಿಂದ ಸ್ನಾತಕೋತ್ತರ ಕೋರ್ಸ್‌ಗಳಿಗೆ ನೀಡಿರುವ ಪ್ರವೇಶಾತಿಗೆ ಅನುಮೋದನೆ ನೀಡಲು ಅವಕಾಶ ಇಲ್ಲ' ಎಂದು ವಿಶ್ವವಿದ್ಯಾಲಯ ತಡವಾಗಿ ತಿಳಿಸಿದೆ.

ಈ ಬಗ್ಗೆ ಮಾಹಿತಿಯನ್ನು ಸ್ನಾತಕೋತ್ತರ ಪದವಿ ಕೋರ್ಸ್‌ಗೆ ಪ್ರವೇಶ ನೀಡಿರುವ ಕಾಲೇಜುಗಳಿಗೆ ನೀಡಲಾಗಿದೆ. ಕನಿಷ್ಠ 21 ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ನಿರ್ಧಾರದಿಂದ ಆಘಾತಕ್ಕೆ ಒಳಗಾಗಿದ್ದಾರೆ.

ಸಮಿತಿ ರಚನೆ

'ಈ ಪ್ರಕರಣದ ಬಗ್ಗೆ ಪರಿಶೀಲನೆ ನಡೆಸಲು ಸಿಂಡಿಕೇಟ್ ಉಪ ಸಮಿತಿ ರಚಿಸಲಾಗಿದೆ. ಸಮಿತಿ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ಮುಂದಿನ ಕ್ರಮಕೈಗೊಳ್ಳಲಾಗುವುದು' ಎಂದು ಕುಲಸಚಿವ ಎಂ. ಕೊಟ್ರೇಶ್ ತಿಳಿಸಿದ್ದಾರೆ.

ಡಿಸ್ಟಿಂಕ್ಷನ್‌ನೊಂದಿಗೆ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. ಆದರೆ, ಪ್ರವೇಶ ಪ್ರಕ್ರಿಯೆಗೆ ಅನುಮೋದನೆ ನೀಡುವ ಸಂದರ್ಭದಲ್ಲಿ ಹಿಂದಿನ ತರಗತಿಗಳಲ್ಲಿ ಅನುತ್ತೀರ್ಣರಾಗಿರುವುದು ಪತ್ತೆಯಾಗಿದೆ ಎಂದು ವಿಶ್ವವಿದ್ಯಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

'ಮೊದಲ ಸೆಮಿಸ್ಟರ್‌ನ ಸ್ನಾತಕೋತ್ತರ ಪರೀಕ್ಷೆ ನಡೆಯುವ ಕೆಲವು ದಿನಗಳ ಮುನ್ನ ಅನುತ್ತೀರ್ಣದ ಬಗ್ಗೆ ತಿಳಿಸಲಾಗಿದೆ. ವಿಶ್ವವಿದ್ಯಾಲಯದ ಮೌಲ್ಯಮಾಪನ ಮತ್ತು ಪರೀಕ್ಷಾ ವಿಭಾಗವೇ ನಮಗೆ ಪ್ರಮಾಣಪತ್ರ ಮತ್ತು ಅಗತ್ಯ ದಾಖಲೆಗಳನ್ನು ನೀಡಿದೆ. ಜತೆಗೆ, ಸ್ನಾತಕೋತ್ತರ ಸೀಟು ಸಹ ನೀಡಿದೆ. ಆದರೆ, ಈಗ ಹಿಂದಿನ ತರಗತಿಯಲ್ಲಿ ಅನುತ್ತೀರ್ಣರಾಗಿದ್ದೀರಿ ಎಂದು ತಿಳಿಸಿದೆ. ವಿಶ್ವವಿದ್ಯಾಲಯದ ನಿರ್ಲಕ್ಷ್ಯದಿಂದ ಸಂಕಷ್ಟ ಎದುರಿಸಬೇಕಾಗಿದೆ' ಎಂದು ವಿದ್ಯಾರ್ಥಿಗಳು ದೂರಿದ್ದಾರೆ.

'ಪದವಿ ಪರೀಕ್ಷೆಯ ಅಂತಿಮ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶವನ್ನು 2021ರ ನವೆಂಬರ್‌ನಲ್ಲಿ ಪ್ರಕಟಿಸಲಾಗಿತ್ತು. ಆಗ ನಮ್ಮನ್ನು ಉತ್ತೀರ್ಣಗೊಳಿಸಲಾಗಿತ್ತು. ಬೆಂಗಳೂರು ವಿಶ್ವವಿದ್ಯಾಲಯ ವಿತರಿಸಿದ ಅಂಕಪಟ್ಟಿಯಲ್ಲೂ ಉತ್ತೀರ್ಣ ಎಂದೇ ನಮೂದಿಸಲಾಗಿತ್ತು. ಮುಂದಿನ ತರಗತಿಗಳಿಗೆ ಉತ್ತೀರ್ಣಗೊಳಿಸಿದ ಬಗ್ಗೆ ತಾತ್ಕಾಲಿಕ ಪ್ರಮಾಣಪತ್ರವನ್ನು ಸಹ ನೀಡಲಾಗಿತ್ತು ಎಂದು ತಿಳಿಸಿದ್ದಾರೆ.

'ಈಗ ನಾವು ಸ್ನಾತಕೋತ್ತರ ಪದವಿಯ ಮೊದಲ ಸೆಮಿಸ್ಟರ್ ಪರೀಕ್ಷೆಯ ಶುಲ್ಕವನ್ನು ಪಾವತಿಸಬೇಕಾಗಿದೆ. ಆದರೆ, ಪದವಿ ಪರೀಕ್ಷೆಯ ಅಂತಿಮ ಸೆಮಿಸ್ಟರ್ ಪರೀಕ್ಷೆಯಲ್ಲಿ ಫೇಲ್ ಆಗಿದ್ದರಿಂದ ವಿಶ್ವವಿದ್ಯಾಲಯ ಪ್ರವೇ ಶಾತಿಗೆ ಅನುಮೋದನೆ ನೀಡಿಲ್ಲ ಎನ್ನುವುದನ್ನು ಕಾಲೇಜು ಆಡಳಿತ ಮಂಡಳಿ ತಿಳಿಸಿದೆ. ವಿಶ್ವವಿದ್ಯಾಲಯ ಮಾಡಿರುವ ತಪ್ಪಿಗೆ ಹೊಣೆ ಯಾರು' ಎಂದು ಇನ್ನೊಬ್ಬ ವಿದ್ಯಾರ್ಥಿ ಪ್ರಶ್ನಿಸಿದ್ದಾರೆ.

'ಪರೀಕ್ಷೆ ಮತ್ತು ಮೌಲ್ಯಮಾಪನ ವಿಭಾಗಗಳು ಹೇಗೆ ಕಾರ್ಯ ನಿರ್ವಹಿಸುತ್ತವೆ ಎನ್ನುವುಕ್ಕೆ ಈ ಪ್ರಕರಣಕ್ಕೆ ಸಾಕ್ಷಿ. ಈ ವಿಭಾಗಗಳಲ್ಲಿ ನಮ್ಮ ಸಮಸ್ಯೆಯನ್ನು ಸಹ ಆಲಿಸುತ್ತಿಲ್ಲ' ಎಂದು ವಿದ್ಯಾರ್ಥಿಗಳು ದೂರಿದ್ದಾರೆ.

ಮೋದಿಗೆ ಕ್ಲೀನ್ ಚಿಟ್: ಸುಪ್ರೀಂ ಕೋರ್ಟ್ ಅಸ್ತು

ಒಂದನೇ ಪುಟದಿಂದ...

ನ್ಯಾಯಮೂರ್ತಿ ಎ.ಎಂ.ಖಾನ್ವಿಲ್ಕರ್ ನೇತೃತ್ವದ ಪೀಠವು, 'ಮುಸಲ್ಮಾನರ ವಿರುದ್ಧದ ಸಾಮೂಹಿಕವಾಗಿ ಹಿಂಸಾಕೃತ್ಯ ಕೈಗೊಳ್ಳಲು ಉನ್ನತ ಮಟ್ಟದಲ್ಲಿ ದೊಡ್ಡ ಸಂಚು ನಡೆಸಲಾಗಿತ್ತು. ಆ ಹಿಂಸಾಕೃತ್ಯ ಪೂರ್ವನಿಯೋಜಿತ ಎಂಬ ಆರೋಪವನ್ನು ತನಿಖೆಯ ಹಂತದಲ್ಲಿ ಸಂಗ್ರಹಿಸಿರುವ ಸಾಕ್ಷ್ಯಗಳು ಸಮರ್ಥಿಸುವುದಿಲ್ಲ' ಎಂದು ಅಭಿಪ್ರಾಯಪಟ್ಟಿತು.

ನ್ಯಾಯಮೂರ್ತಿಗಳಾದ ದಿನೇಶ್ ಮಹೇಶ್ವರಿ ಮತ್ತು ಸಿ.ಟಿ.ರವಿಕುಮಾರ್ ಅವರೂ ಈ ಪೀಠದಲ್ಲಿದ್ದರು. 'ಉದ್ರಿಕ್ತ ಪರಿಸ್ಥಿತಿ ನಿರಂತರವಾಗಿ ಇರುವಂತೆ ತಂತ್ರ ರೂಪಿಸಲಾಗಿತ್ತು' ಎಂದು ಝಕಿಯಾ ಜಾಫ್ರಿ ಅವರ ಅರ್ಜಿಯಲ್ಲಿ ಹೇಳಲಾಗಿದೆ. 'ಅರ್ಜಿಯು ವಿಚಾರಣೆಗೆ ಅರ್ಹವಲ್ಲ' ಎಂದು ಪೀಠ ಅಭಿಪ್ರಾಯಪಟ್ಟಿತು. ದೊಡ್ಡ ಮಟ್ಟದ ಸಂಚು ನಡೆಸಲಾಗಿತ್ತು ಎಂಬ ಆರೋಪ ಕುರಿತಂತೆ ಆಗ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಮತ್ತು ಇತರ 64 ಜನರಿಗೆ ಎಸ್‌ಐಟಿ ಕ್ಲೀನ್ ಚಿಟ್ ನೀಡಿತ್ತು. ಇದನ್ನು ಪ್ರಶ್ನಿಸಿದ್ದ ಅರ್ಜಿಯನ್ನು ಈ ಹಿಂದೆ ಗುಜರಾತ್ ಹೈಕೋರ್ಟ್ ತಿರಸ್ಕರಿಸಿತ್ತು. ನಂತರ ಝಕಿಯಾ ಅವರು 'ಸುಪ್ರೀಂ'ಗೆ ಮೇಲ್ಮನವಿ ಸಲ್ಲಿಸಿದ್ದರು.

'ಎಸ್‌ಐಟಿ ತನಿಖಾ ಕ್ರಮ ಮತ್ತು 2012ರ ಫೆಬ್ರುವರಿ 8ರಂದು ಸಲ್ಲಿಸಿದ್ದ ಅಂತಿಮ ವರದಿಯಲ್ಲಿ ಯಾವುದೇ ಲೋಪವನ್ನು ಗುರುತಿಸಲಾಗದು' ಎಂದು ಸುಪ್ರೀಂ ಕೋರ್ಟ್ ಪ್ರತಿಪಾದಿಸಿತು. ಈ ಕುರಿತಂತೆ ಒಟ್ಟು 452 ಪುಟಗಳ ತೀರ್ಪು ನೀಡಿರುವ ನ್ಯಾಯಪೀಠವು, 'ಎಸ್‌ಐಟಿ ಸಲ್ಲಿಸಿದ್ದ ಅಂತಿಮ ವರದಿಯನ್ನು ಈ ಹಿಂದೆ ಅಂಗೀಕರಿಸಿದ್ದ ಮ್ಯಾಜಿಸ್ಟ್ರೇಟ್ ಅವರ ತೀರ್ಮಾನ'ವನ್ನು ಎತ್ತಿಹಿಡಿಯಿತು. ಗುಜರಾತ್‌ನ ಗೋಧ್ರಾದಲ್ಲಿ 2002ರಲ್ಲಿ ರೈಲಿಗೆ ಬೆಂಕಿ ಹಚ್ಚಲಾಗಿದ್ದ ಘಟನೆಯಲ್ಲಿ 59 ಜನರು ಮೃತಪಟ್ಟಿದ್ದರು. ಅದರ ಮಾರನೆಯ ದಿನ, ಫೆ. 28ರಂದು ಅಹಮದಾಬಾದ್‌ನ ಗುಲ್ಬರ್ಗ್ ಸೊಸೈಟಿ ಬಳಿ ನಡೆದಿದ್ದ ವ್ಯಾಪಕ ಹಿಂಸಾಚಾರದಲ್ಲಿ ಕಾಂಗ್ರೆಸ್ ಮುಖಂಡ ಎಹಸಾನ್ ಜಾಫ್ರಿ ಸೇರಿದಂತೆ 68 ಜನರು ಅಸುನೀಗಿದ್ದರು. ತದನಂತರ ರಾಜ್ಯದಲ್ಲಿ ನಡೆದಿದ್ದ ಹಿಂಸಾಕೃತ್ಯಗಳಲ್ಲಿ 1,044 ಜನರು ಮೃತಪಟ್ಟಿದ್ದು, ಇವರಲ್ಲಿ ಹೆಚ್ಚಿನವರು ಮುಸ್ಲಿಮರಾಗಿದ್ದರು. ಕೇಂದ್ರ ಸರ್ಕಾರ ರಾಜ್ಯಸಭೆಯಲ್ಲಿ ಮೇ 2005ರಲ್ಲಿ ಈ ಘಟನೆ ವಿವರ ನೀಡಿ, 'ಹಿಂಸಾಕೃತ್ಯಗಳಲ್ಲಿ 254 ಹಿಂದೂಗಳು, 790 ಮುಸ್ಲಿಮರು ಮೃತಪಟ್ಟಿದ್ದರು' ಎಂದು ತಿಳಿಸಿತ್ತು.

'ತೀರ್ಪಿನಿಂದ ನಿರಾಶೆ'

ಅಹಮದಾಬಾದ್ (ಪಿಟಿಐ): 'ಸುಪ್ರೀಂ ಕೋರ್ಟ್ ತೀರ್ಪಿನಿಂದ ನನಗೆ ನಿರಾಶೆಯಾಗಿದೆ. ನಾನು ಭಾರತದಿಂದ ಹೊರಗಿರುವ ಕಾರಣ, ತೀರ್ಪನ್ನು ಅಧ್ಯಯನ ಮಾಡಿದ ನಂತರ ವಿವರವಾದ ಹೇಳಿಕೆ ನೀಡುತ್ತೇನೆ' ಎಂದು ಕಾಂಗ್ರೆಸ್ ನಾಯಕ ಎಹಸಾನ್ ಜಾಫ್ರಿ ಅವರ ಪುತ್ರ ತನ್ವೀರ್ ಜಾಫ್ರಿ ಪ್ರತಿಕ್ರಿಯಿಸಿದ್ದಾರೆ. 'ತನ್ವೀರ್ ಹಜ್ ಯಾತ್ರೆಗಾಗಿ ಮೆಕ್ಕಾದಲ್ಲಿದ್ದಾರೆ' ಎಂದು ಅವರ ಪರ ವಕೀಲರು ತಿಳಿಸಿದ್ದಾರೆ.

ಟೋಲ್ ಶುಲ್ಕ ಶೇ 20ರಷ್ಟು ಹೆಚ್ಚಳ

ಒಂದನೇ ಪುಟದಿಂದ...

'ಕೋವಿಡ್‌ನಿಂದಾಗಿ ಕಂಪನಿಯಲ್ಲಿ ಸಂಬಳ ಕಡಿತವಾಗಿದೆ. ಪೆಟ್ರೋಲ್ ದರ ಸಹ ಜಾಸ್ತಿ ಆಗಿದೆ. ಇದೀಗ, ಶುಲ್ಕ ಸಹ ಹೆಚ್ಚಿಸಿರುವುದು ನಮ್ಮಂಥ ಉದ್ಯೋಗಿಗಳ ಮೇಲೆ ಬರೆ ಎಳೆದಂತಾಗಿದೆ' ಎಂದು ಕಬ್ಬಿಣ ಸಾಮಗ್ರಿ ತಯಾರಿಕಾ ಕಂಪನಿ ಉದ್ಯೋಗಿ ಪ್ರಶಾಂತ್ ಹೇಳಿದರು.

'ರಸ್ತೆ ಬಳಸುವವರ ಅಭಿಪ್ರಾಯ ಸಂಗ್ರಹಿಸಿ ಶುಲ್ಕ ಹೆಚ್ಚಳ ಮಾಡಬೇಕಿತ್ತು. ಆದರೆ, ದಿಢೀರ್ ಶುಲ್ಕ ಹೆಚ್ಚಳ ಮಾಡಿರುವುದು ಸರಿಯಲ್ಲ. ಈ ತೀರ್ಮಾನವನ್ನು ಹಿಂಪಡೆಯಬೇಕು' ಎಂದು ಒತ್ತಾಯಿಸಿದರು.

ನವೋದ್ಯಮವೊಂದರ ಉದ್ಯೋಗಿ ರಾಜಶೇಖರ್, 'ಬೇರೆ ಟೋಲ್‌ಗೇಟ್‌ಗಳಲ್ಲಿ ದ್ವಿಚಕ್ರ ವಾಹನಗಳಿಗೆ ಶುಲ್ಕವಿಲ್ಲ. ಆದರೆ, ಇಲ್ಲಿ ಶುಲ್ಕ ಪಡೆಯುತ್ತಾರೆ. ಇದೀಗ, ದ್ವಿಚಕ್ರ ವಾಹನಗಳ ಶುಲ್ಕವನ್ನು ಹೆಚ್ಚಳ ಮಾಡಿರುವುದು ಸರಿಯಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪರಿಷ್ಕೃತ ಶುಲ್ಕದ ವಿವರ (ಜುಲೈ 1ರಿಂದ ಅನ್ವಯ)

ವಾಹನ	ಒಂದು ಬದಿ	ಎರಡೂ ಬದಿ	ಮಾಸಿಕ ಪಾಸ್ (₹ಗಳಲ್ಲಿ)
ದ್ವಿಚಕ್ರ ವಾಹನಗಳು	25	35	720
ಕಾರು, ಜೀಪು, ವ್ಯಾನ್	60	90	1,795
ಲಘುವಾಹನ, ಮಿನಿ ಬಸ್	85	125	2515
ಟ್ರಕ್, ಬಸ್	170	250	5030
ಭಾರಿ ವಾಹನಗಳು	335	505	10,065

'ದಾಖಲೆ ಸರಳೀಕರಿಸಿ'

ಮಂಗಳೂರು: ಮಂಗಳಮುಖಿಯರು ಸರ್ಕಾರಿ ಉದ್ಯೋಗಕ್ಕೆ ಅರ್ಜಿ ಸಲ್ಲಿಸುವಾಗ ಸಾಕಷ್ಟು ತಾಂತ್ರಿಕ ತೊಡಕುಗಳು ಎದುರಾಗುತ್ತಿವೆ. ಅವರ ದಾಖಲೆಗಳ ಸರಳೀಕರಣ ಮಾಡಬೇಕು ಎಂದು ಕರ್ನಾಟಕ ಮಂಗಳಮುಖಿಯರ ಫೌಂಡೇಷನ್ ಪ್ರಧಾನ ಕಾರ್ಯದರ್ಶಿ ಅರುಂಧತಿ ಹೆಗ್ಗಡೆ ಒತ್ತಾಯಿಸಿದರು.

'ಪ್ರಜಾವಾಣಿ' ಜತೆ ಮಾತನಾಡಿದ ಅವರು, 'ರಾಜ್ಯ ಸರ್ಕಾರ ಸರ್ಕಾರಿ ಹುದ್ದೆಗಳಲ್ಲಿ ಮಂಗಳಮುಖಿಯರಿಗೆ ಶೇ 1ರಷ್ಟು ಮೀಸಲಾತಿ ನೀಡುವ ಮೂಲಕ ಆಸರೆ ನೀಡಿದೆ. ಅರ್ಜಿ ಸಲ್ಲಿಸುವಾಗ ದಾಖಲೆಗಳ ಪೂರೈಕೆ ತೊಡಕಾಗುತ್ತಿದ್ದು, ವೈದ್ಯಕೀಯ ಪ್ರಮಾಣಪತ್ರವನ್ನು ಮೂಲ ದಾಖಲೆಯಾಗಿ ಪರಿಗಣಿಸಬಹುದು. ಉದ್ಯೋಗ ದೊರೆತಲ್ಲಿ ನಾವು ಮುಖ್ಯವಾಹಿನಿಯಲ್ಲಿ ಸೇರಬಹುದು' ಎಂದರು.

ಬೆಂಗಳೂರು ರೇಸ್

ಝೂಕರೆಲಿ ಗೆಲ್ಲುವ ನಿರೀಕ್ಷೆ

ಚೀಫ್ ಜಸ್ಟೀಸ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಝೂಕರೆಲಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಹ್ಯಾಂಡ್ಸಮ್ ರಾಕಿ 3, ಲವ್ 5, ಅಲ್ಟಾಮಾಂಟೆ 6
2ನೇ ರೇಸ್: ಸ್ಯಾಕ್ರಮೆಂಟ್ 3, ಡಿಫೈನಿಂಗ್ ಪವರ್ 10, ಕೇಪ್ರಿಗರ್ಲ್ 9
3ನೇ ರೇಸ್: ಪ್ರಿನ್ಸ್ ಅಭೀರ್ 2, ಕೀಸ್ಟೋನ್ 4, ಕರಣ್‌ವೀರ್ (1)
4ನೇ ರೇಸ್: ಝೂಕರೆಲಿ 2, ಥಿಯಾನ್ 1, ಫೇತ್ ಆಫ್ ಸಕ್ಸಸ್ 3
5ನೇ ರೇಸ್: ಕ್ವೀನ್ಸ್‌ಟೌನ್ 9, ಫಾರ್ಚೂನೇಟ್ಸ್ 2, ಮ್ಯಾಗ್ನಾನಿಮಸ್ 9
6ನೇ ರೇಸ್: ಓನ್ ಲೆಗಸಿ 5, ಡಿವೈನ್ ರೇ 4, ಸಿಲ್ವೆರಿಟ 2
7ನೇ ರೇಸ್: ಏಬಲ್ ಒನ್ 1, ಮಾರ್ಕ್ ಒನ್ 3, ಎಕ್ಸ್‌ಟ್ರಾಆರ್ಡಿನರಿ 5

ಉತ್ತಮ ಬೆಟ್: ಝೂಕರೆಲಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7



'ವಿಮೆನ್ ಪವರ್ ರೂಪನಗರ'ದ ವಾಟ್ಸ್‌ಆ್ಯಪ್ ಗ್ರೂಪ್‌ನ ನಿಜರೂಪ

ಸ್ವಚ್ಛ ಪರಿಸರಕ್ಕೆ ಟೊಂಕಕಟ್ಟಿ ನಿಂತ ಮಹಿಳಾ ಶಕ್ತಿ

ರೂಪನಗರದ 'ವಿಮೆನ್ ಪವರ್'



'ಅವರ ರಸ್ತೆ ಅವರ ಜವಾಬ್ದಾರಿ' ಹಸಿರು ಉಳಿಸಿ ಬೆಳೆಸುವತ್ತ

> ಕೊರೊನಾ ಸೋಂಕು ಪ್ರತಿ ಮನೆಯನ್ನೂ ದ್ವೀಪವಾಗಿಸಿದ್ದಾಗ, 'ವಿಮೆನ್-ಪವರ್ ರೂಪನಗರ' ವಾಟ್ಸ್‌ಆ್ಯಪ್ ಗುಂಪಿನ ಸದಸ್ಯರು ಡಿಜಿಟಲ್ ಸಂಪರ್ಕದೊಂದಿಗೆ ಪರಸ್ಪರ ದೀಪಗಳಾದರು. ಆ ದೀಪಗಳ ಬೆಳಕಿನೊಂದಿಗೆ ಬಡಾವಣೆಯ ಅಭಿವೃದ್ಧಿಗೆ ಕೈಜೋಡಿಸಿದ್ದಾರೆ.

ರೇಣುಕಾ ಮಂಜುನಾಥ್

ಇದೊಂದು ಡಿಜಿಟಲ್ ಯುಗದ ವರ್ಚುಯಲ್ ಜಗತ್ತಿನ ಮೂಲಕ ಒಂದು ಬಡಾವಣೆಯ ಪರಿಸರ ಸ್ವಚ್ಛತೆ ಸಾಧಿಸಿದ ಮಹಿಳೆಯರ ಯಶೋಗಾಥೆ.

ನೇರವಾಗಿ ವಿಷಯಕ್ಕೆ ಬರುವುದಾದರೆ, ಈಗಿಲ್ಲಿ ಹೇಳಹೊರಟಿರುವುದು, ಮಹಿಳೆಯರೆಲ್ಲಾ ಅನುಕರಿಸಬಹುದಾದ ಒಂದು ವಾಟ್ಸ್‌ಆ್ಯಪ್ ಗುಂಪಿನ ಬಗ್ಗೆ. ಅದು ಹತ್ತು ಮಹಿಳೆಯರ ನಿರ್ವಹಣೆಯಲ್ಲಿನ ಇನ್ನೂರೈವತ್ತು ಗೃಹಿಣಿಯರ ಗುಂಪಿನ ಕಾರ್ಯ ಸಾಧನೆ. ಕೊರೊನಾ ಸೋಂಕು ಹರಡುವಿಕೆ ಉತ್ತುಂಗದಲ್ಲಿದ್ದಾಗ ಹುಟ್ಟಿಕೊಂಡ ಆ ಗುಂಪಿನ ಹೆಸರು 'ವಿಮೆನ್ ಪವರ್- ರೂಪನಗರ'!

ಮೈಸೂರಿನ ರೂಪನಗರ ಬಡಾವಣೆ ಇದರ ಕಾರ್ಯಸ್ಥಾನ. ಈ ಬಡಾವಣೆ ರೂಪುಗೊಂಡಿರುವುದು, ಸಹಕಾರಿ ಕ್ಷೇತ್ರದಲ್ಲಿ 'ಎ ಗ್ರೇಡ್' ಸೊಸೈಟಿ ಎಂದು ಪರಿಗಣಿಸಲಾದ 'ದೀಪಾ ಗೃಹನಿರ್ಮಾಣ ಸಹಕಾರಿ ಸಂಘ'ದ ವತಿಯಿಂದ.

ಮನುಷ್ಯರ ಮಧ್ಯೆ ಅಂತರವಿಡಲೇಬೇಕಾದ, ಆದರೆ ಪರಸ್ಪರ ಮನುಷ್ಯ ಸಂಬಂಧ ಅಗತ್ಯವಾಗಿದ್ದ ಸಂದಿಗ್ಧವನ್ನು ಒಟ್ಟೊಟ್ಟಿಗೇ ಎದುರಿಸಬೇಕಾದ ಸ್ಥಿತಿ ಉಂಟಾಗಿದ್ದು ಕೊರೊನಾ ಸೋಂಕಿನಿಂದ. ಅಂಥ ಪಿಡುಗನ್ನು ನಿಭಾಯಿಸಲು ಸಾಧ್ಯವಾಗಿದ್ದು ವಾಟ್ಸ್‌ಆ್ಯಪ್, ಗೂಗಲ್, ಫೋನ್ ಮುಂತಾದ ಆನ್‌ಲೈನ್ ಸೌಕರ್ಯದಿಂದ. ಆಗ ರೂಪುಗೊಂಡಿದ್ದೇ ರೂಪನಗರದ ವಿಮೆನ್ ಪವರ್!

'ಪವರ್'ಗೆ ಶಕ್ತಿ ತುಂಬಿದವರು

ಈ ಗುಂಪಿಗೆ ಚಾಲನೆ ಕೊಟ್ಟು ಒಟ್ಟಾದವರು ವಿವಿಧ ಹಿನ್ನೆಲೆಯ ವಿದ್ಯಾವಂತ ಮಹಿಳೆಯರು. ರೂಪನಗರಕ್ಕೆ ಸೇರಿದ ಕೆನಡಾ ನಿವಾಸಿ ರೂಪಾ ತೂಬಗೆರೆ ಅವರೊಡನೆ ಜೊತೆಯಾದವರು ಮಲ್ಲಮ್ಮ, ಪೂರ್ಣಿಮಾ, ನೀಲಮ್ಮ, ಮಾಯಾ, ವಿದ್ಯಾಪೇಶ್ವ, ಉಮಾ, ಲಕ್ಷ್ಮಿ, ವಿದ್ಯಾ ಸತೀಶ್ ಹಾಗೂ ಪ್ರಿಯಾ ಎಂಬ ಸಮಾಜಪರ ಮಹಿಳೆಯರು. ಇವರಿಗೆ ಒತ್ತಾಸೆಯಾಗಿ ನಿಂತಿದ್ದು 250 ಮಹಿಳೆಯರ ಗುಂಪು!

ಕೋವಿಡ್ ಅಲೆಗಳೆದ್ದ ಕಾಲದಲ್ಲಿ ಕುಟುಂಬ ನಿರ್ವಹಣೆಯಲ್ಲಿ ಎದುರಿಸಿದ ಆರೋಗ್ಯ, ಶಿಕ್ಷಣ, ಶುಶ್ರೂಷೆ, ಆಹಾರ, ಖಿನ್ನತೆಯ ನಿಭಾಯಿಸುವಿಕೆ, ಉದ್ಯೋಗ, ಲಸಿಕೆ, ಆಸ್ಪತ್ರೆ, ಸಾರಿಗೆ ಎಂಬ ಹತ್ತುಹಲವು ಕ್ಷಣಕ್ಷಣದ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಇಂಥ ಒಂದು ಗ್ರೂಪ್‌ನ ಅಗತ್ಯ ಪ್ರತಿಯೊಬ್ಬರಿಗೂ ಬೇಕಾಯ್ತು. ಅದಾದ ನಂತರ, ತಮ್ಮ ಬಡಾವಣೆಯ ಸ್ವಚ್ಛತೆ ತಮ್ಮದೇ ಎಂಬ ನಾಗರಿಕ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಳ್ಳಬೇಕೆಂಬ ಮನಸ್ಸು ಎಲ್ಲರದ್ದೂ ಆಯಿತು.

ಆಗ ಕಾರ್ಯಪ್ರವೃತ್ತರಾಗಲು, ಈ ಮಹಿಳೆಯರು ತಮ್ಮಲ್ಲೇ ಕೆಲವು ನಿಬಂಧನೆಗಳನ್ನು ಹಾಕಿಕೊಂಡರು. ವಾಟ್ಸ್‌ಆ್ಯಪ್ ಗುಂಪಿನಲ್ಲಿ ಬಡಾವಣೆಯ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದ ಮತ್ತು ಪರಿಸರದ ಅರಿವು ಮೂಡಿಸುವ ವಿಷಯಕ್ಕಷ್ಟೆ ಅವಕಾಶ ಎನ್ನುವುದೇ ಆ ನಿಬಂಧನೆ. ಇನ್ನು ಸಾಂಸ್ಕೃತಿಕ ವಾತಾವರಣ ವೃದ್ಧಿಸಲು ಬೇಕಾದ ಸಂಗೀತ, ನೃತ್ಯ, ಸಾಹಿತ್ಯ, ಪಾಕವಿದ್ಯೆ, ಕ್ರೀಡೆ ಮುಂತಾದ ವಿಷಯದಲ್ಲಿ ಪ್ರತಿಭೆ, ಕೌಶಲವಿದ್ದವರ ಪ್ರೋತ್ಸಾಹಕ್ಕೆ ಬೇಕಾದ ಮೆಸೇಜ್‌ಗಳನ್ನು ಬುಧವಾರಕ್ಕಷ್ಟೇ ನಿಗದಿಪಡಿಸಿ, ಅಂದು ಸಂಜೆಗೇ ಅದನ್ನು ಮುಗಿಸುವುದು ಎಂದೂ ತೀರ್ಮಾನವಾಯಿತು.

220 ಎಕರೆ ಪ್ರದೇಶದಲ್ಲಿರುವ ಸಾವಿರಮನೆಗಳ ಈ ಬಡಾವಣೆಯನ್ನು ರೂಪಿಸಿ ಬೆಳೆಸಿದ್ದು, ಮಾಜಿ ವಾಯುಪಡೆ ಯೋಧ ದಿವಂಗತ ಎಸ್ ಸುವರ್ಣ. ಇವರ ಧ್ಯೇಯೋದ್ದೇಶಗಳನ್ನು ಕಟಿಬದ್ಧರಾಗಿ ಮುಂದುವರೆಸುತ್ತಿರುವವರು ಅವರದ್ದೇ ತಂಡದವರಾದ ಸದಾಶಿವ ಪೂಜಾರಿ, ಬಾಲಕೃಷ್ಣ, ಡಾ. ದೀಪಕ್ ಸುವರ್ಣ, ರಾಮಪ್ಪ, ಸುಂದರ್ ಹಾಗೂ ಪುಷ್ಪಾ ಕರ್ಕೆರಾ. ಹಾಗಾಗಿಯೇ ರೂಪನಗರದಲ್ಲಿ ನಾಗರಿಕ ಮೂಲಸೌಲಭ್ಯಗಳೆಲ್ಲವೂ ಸೊಸೈಟಿ ವತಿಯಿಂದ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿವೆ. ಇಂಥ ಬಡಾವಣೆಯಲ್ಲಿ ಕೊರೊನಾ ಸೋಂಕು ಪ್ರತಿ ಮನೆಯನ್ನೂ ದ್ವೀಪಗಳನ್ನಾಗಿಸಿದಾಗ 'ವಿಮೆನ್-ಪವರ್ ರೂಪನಗರ' ವಾಟ್ಸ‌ಆ್ಯಪ್ ಗುಂಪಿನಲ್ಲಿರುವವರು ಡಿಜಿಟಲ್ ಆಗಿ ಪರಸ್ಪರ ದೀಪಗಳಾದರು.

ವೈವಿಧ್ಯಮಯ ಕಾರ್ಯಕ್ರಮ

ವಿಮೆನ್ ಪವರ್- ರೂಪನಗರ ಗುಂಪಿನಿಂದ ಆಗಾಗ ಆರೋಗ್ಯ, ಆಯುರ್ವೇದ, ಯೋಗ, ಕೌಟುಂಬಿಕ ಅಗತ್ಯಗಳ ವಿಷಯದಲ್ಲಿ ತಜ್ಞರಿಂದ ಅರಿವಿನ ಉಪನ್ಯಾಸಗಳಾಗುತ್ತಲೇ ಇವೆ. ಎಲ್ಲಕ್ಕಿಂತ ಇಲ್ಲಿನ ಮಹಿಳೆಯರು 'ಪ್ಲಾಸ್ಟಿಕ್ ರಾಕ್ಷಸ' ಎಂಬ ಬೀದಿನಾಟಕ ರಚಿಸಿ, ತಮ್ಮ ಶಾಲೆಯ ಗ್ರಾಮೀಣ ಮಕ್ಕಳಿಗೆ ತರಬೇತಿ ನೀಡಿ ನೆರೆಯ ಗ್ರಾಮವಾದ ದಾಸನಕೊಪ್ಪಲಿನಲ್ಲಿ ಪ್ರದರ್ಶಿಸಿ, ಜನರಲ್ಲಿ ಪರಿಸರ ಪ್ರಜ್ಞೆ ಮೂಡಿಸಿದ್ದಾರೆ. ಇನ್ನು ಪ್ರತಿಭಾ ಪುರಸ್ಕಾರ, ರಾಜ್ಯೋತ್ಸವ, ಮಹಿಳಾ ದಿನಾಚರಣೆ ಮುಂತಾದ ಕಾರ್ಯಕ್ರಮಗಳಲ್ಲದೆ, ಶಾಲಾ ಆವರಣದಲ್ಲಿನ ತಮ್ಮ ಕೌಶಲ, ಪ್ರತಿಭೆ, ಪಾಕಪ್ರಾವೀಣ್ಯ, ಕ್ರೀಡೆ, ಮನರಂಜನೆ ಮೊದಲಾದ್ದನ್ನೆಲ್ಲಾ ಆಯೋಜಿಸಿ ಮೇಳವನ್ನೂ ನಡೆಸಲಾಗಿದೆ.



ಪ್ಲಾಸ್ಟಿಕ್‌ಮುಕ್ತ ಬಡಾವಣೆಗಾಗಿ, ಪ್ರತಿಮನೆಯಿಂದ ತ್ಯಾಜ್ಯ ಸಂಗ್ರಹಿಸಿ ಮರುಬಳಕೆಗೆ ಸಾಗಿಸಲು ಒಟ್ಟುಗೂಡಿಸುತ್ತಿರುವ ಮಹಿಳೆಯರು

ಮಹಿಳಾ ಶಕ್ತಿಯ ಕಾರ್ಯವೈಖರಿ

ಇಡೀ ಬಡಾವಣೆಯಲ್ಲಿ ಎಲ್ಲೆಂದರಲ್ಲಿ ತ್ಯಾಜ್ಯವನ್ನು ಬಿಸಾಡುವಂತಿಲ್ಲ. ಪ್ರತಿ ಮನೆಯಲ್ಲೂ ಒಣಕಸ, ಪ್ಲಾಸ್ಟಿಕ್ ಮತ್ತು ಹಸಿ ತ್ಯಾಜ್ಯ ಪ್ರತ್ಯೇಕಿಸಲೇಬೇಕು. ಹಸಿತ್ಯಾಜ್ಯವನ್ನು ಅವರವರ ಕೈತೋಟಕ್ಕೆ ಗೊಬ್ಬರವಾಗಿ ಪರಿವರ್ತಿಸಿ ಬಳಸಬೇಕು. ಇತರ ಕಸ ಮತ್ತು ಪ್ಲಾಸ್ಟಿಕ್ ಅನ್ನು ಮಹಾನಗರ ಪಾಲಿಕೆ ಮತ್ತು ಮೂಡಾ ಹಾಗೂ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರಿಂದ ಮಾನ್ಯತೆ ಪಡೆದ 'ಜಾಗೃತ್ ಸಂಸ್ಥೆ' ಮತ್ತು 'ನಮ್ಮ ಮೈಸೂರು' ಸಂಸ್ಥೆಯವರ ಸಹಾಯ, ಸಹಕಾರದಿಂದ ಪ್ರತಿವಾರ ಮತ್ತು ತಿಂಗಳಿಗೊಮ್ಮೆ ಮರುಬಳಕೆಗಾಗಿ ಹೊರಸಾಗಿಸಲಾಗುತ್ತಿದೆ. ಸಂಸ್ಥೆಯ ಸ್ವಯಂಸೇವಕರು, ಅದರ ರೂವಾರಿಗಳಾದ ದಶರಥ್, ದಿನೇಶ್ ಮತ್ತು ದರ್ಶನ್ ಅವರ ಕಾಳಜಿಯುಕ್ತ ಸಹಕಾರಕ್ಕೆ ಈ ಗುಂಪು ಋಣಿಯಾಗಿದೆ. ಇದಕ್ಕೆ ಬೇಕಾದ ಆರ್ಥಿಕ ಸಹಾಯವನ್ನು ಈ ಸಂಸ್ಥೆಗಳಲ್ಲದೆ, ಹೆಸರು ಹೇಳಿಕೊಳ್ಳಲಿಚ್ಛಿಸದ ಬಡಾವಣೆಯ ಮಹಿಳೆಯ ಸಹಾಯ ದೊಡ್ಡ ಮಟ್ಟದಲ್ಲಿ ಸಿಕ್ಕಿದೆ. ಅದಲ್ಲದೆ ಅಗತ್ಯ ಬಿದ್ದರೆ ಈ ಗುಂಪಿನ ಮಹಿಳೆಯರೇ ಸೇರಿ ವೆಚ್ಚ ಭರಿಸಲೂ ತಯಾರಿದ್ದಾರೆ. ಇಂಥ ವಿಷಯಗಳಲ್ಲಿ ಬಡಾವಣೆಯ ಸುಪರ್ದಿವಹಿಸಿರುವ ದೀಪಾ ಸೊಸೈಟಿಯ ಬೆಂಬಲ ಮತ್ತು ಪ್ರೋತ್ಸಾಹ ನಿರಂತರವಾಗಿದೆ.

'ಈ ಮಹಿಳಾ ಕ್ಷೇಮಾಭಿವೃದ್ಧಿ ಗುಂಪು ತಲೆಯೆತ್ತುವ ಮುನ್ನ, ಬಡಾವಣೆಯ ಒಳಚರಂಡಿಯು ಸ್ಯಾನಿಟರಿ ನ್ಯಾಪ್ಕಿನ್‌ಗಳಿಂದಾಗಿ ಪದೇಪದೇ ಕಟ್ಟಿಕೊಂಡು ಸಮಸ್ಯೆಗಳಾಗುತ್ತಿತ್ತು. ಈಗ ಇವರ ಅರಿವು ಮೂಡಿಸುವ ಶ್ರಮದಿಂದಾಗಿ ನಮಗಿದ್ದ ಬಹು ಮುಖ್ಯ ಸಮಸ್ಯೆಗೆ ಪರಿಹಾರ ಸಿಕ್ಕಿದೆ' ಎನ್ನುತ್ತಾರೆ ದೀಪಾ ಕೊಆಪರೇಟಿವ್ ಸೊಸೈಟಿ ಸಮಿತಿಯವರು.

'ಈ ಮಹಿಳಾ ಗುಂಪಿನವರ ನಿರಂತರ ಜನಪರ ಕಾರ್ಯಕ್ರಮಗಳಿಂದಾಗಿ ಇಡೀ ಬಡಾವಣೆಯಲ್ಲಿ ಒಗ್ಗಟ್ಟಿನ, ಕೌಟುಂಬಿಕ ವಾತಾವರಣವಿದೆ. 'ಅವರ ರಸ್ತೆ ಅವರ ಜವಾಬ್ದಾರಿ' ಎಂಬ ಪರಿಕಲ್ಪನೆಯಲ್ಲಿ ಆಯಾ ರಸ್ತೆಯ ಮರ ಗಿಡಗಳನ್ನು ಪೋಷಿಸುವ ಹೊಣೆ ಅವರಿಗೇ ಬಂದಿದೆ. ಎಲ್ಲಕ್ಕಿಂತ ಮೈಸೂರಿನ ಬೇರೆ ಕಡೆಗಳಲ್ಲಿ ಕಂಡುಬರುವ ತ್ಯಾಜ್ಯರಾಶಿ, ದುರ್ನಾತ ನಮ್ಮಲ್ಲಿಲ್ಲದಂತೆ ಮಹಿಳೆಯರು ಮುತುವರ್ಜಿ ವಹಿಸುತ್ತಿರುವುದು ಹೆಮ್ಮೆಯ ಸಂಗತಿ' ಎನ್ನುತ್ತಾರೆ ಸೊಸೈಟಿಯವರು.

ಇಂಥ ಜನಪರ ಕಾರ್ಯಗಳಲ್ಲಿ ತೊಡಗಿರುವ ವಿಮೆನ್ ಪವರ್ ಸದಸ್ಯರು, 'ನಮ್ಮ ಕನಸುಗಳು ಬಹಳಷ್ಟಿವೆ. ಈಗಷ್ಟೇ ಅಡಿಯಿಟ್ಟಿದ್ದೇವೆ. ಎಲ್ಲರ ಬೆಂಬಲದಿಂದ ನಮ್ಮ ಬಡಾವಣೆಯನ್ನು ಮಾದರಿಯಾಗಿಸಿ, ನಮ್ಮ ರೂಪನಗರ ವಿಮೆನ್ ಪವರ್ ಗುಂಪಿನ ಕೆಲಸ ಮತ್ತಷ್ಟು ಮಹಿಳೆಯರಿಗೆ ಸ್ಫೂರ್ತಿ ತರುವಷ್ಟು ಮಾದರಿಯಾಗಿ, ಆ ಮೂಲಕ ಇತರ ಬಡಾವಣೆಗಳೂ ಸ್ವಚ್ಛವಾಗಲಿ ಎಂಬುದು ನಮ್ಮ ಆಶಯ' ಎನ್ನುತ್ತಾರೆ!

ಚಿತ್ರಗಳು: ವಿಮೆನ್ ಪವರ್ ರೂಪನಗರ

ಜೋಳದ ವಡೆ, ಸಜ್ಜೆ ಚಕ್ಕುಲಿ

ಉತ್ತರ ಕರ್ನಾಟಕ ಭಾಗದಲ್ಲಿ ಜೋಳದ ಖಾದ್ಯಗಳು ತುಂಬಾ ಫೇಮಸ್. ಆದರೆ ಜೋಳದ ಜೊತೆಗೆ, ಅಕ್ಕಿ, ಸಜ್ಜೆಯಂತಹ ಧಾನ್ಯವನ್ನೂ ಬಳಸಿ ವೈವಿಧ್ಯಮಯ ಖಾದ್ಯಗಳನ್ನು ತಯಾರಿಸುತ್ತಾರೆ. ಅಂಥ ವಿಶಿಷ್ಟ ಖಾದ್ಯಗಳ ರೆಸಿಪಿಗಳನ್ನು ತ್ರಿವೇಣಿ ಪಾಟೀಲ್ ಇಲ್ಲಿ ಹಂಚಿಕೊಂಡಿದ್ದಾರೆ

ನಳಪಾಕ

ಕೊಬ್ರಿ ಕಡ್ಡಿ

ಬೇಕಾಗಿರುವ ಸಾಮಗ್ರಿಗಳು: 1 ಕಪ್ ಅಕ್ಕಿ, 1/2 ಕಪ್ ಪುಟಾಣಿ 1 ಚಮಚ ಹೆಸರುಬೇಳೆ, ಕಡಲೆಬೇಳೆ, ದನಿಯಾ, 1/2 ಕಪ್ ಒಣಕೊಬ್ಬರಿ ಚೂರು, ಕರಿಬೇವು, ಕೊತ್ತಂಬರಿ ಸೊಪ್ಪು, ಜೀರಿಗೆ, ಅಜ್ವಾನ, ಆರೇಳು ಹಸಿ ಮೆಣಸಿನಕಾಯಿ, ಒಂದೆರಡು ಬೆಳ್ಳುಳ್ಳಿ ಎಸಳು, ಉದ್ದಿನ ಬೇಳೆ, ಉಪ್ಪು, ಎಣ್ಣೆ



ತಯಾರಿಸುವ ವಿಧಾನ: ಮೊದಲಿಗೆ ಒಂದು ಕಪ್ ಅಕ್ಕಿಯನ್ನು ತೊಳೆದುಕೊಂಡು ನಂತರ ಕಾಟನ್ ಬಟ್ಟೆಯ ಮೇಲೆ 30 ನಿಮಿಷ ಒಣಗಿಸಬೇಕು. ಒಣಗಿದ ಅಕ್ಕಿಯನ್ನು ಹದವಾಗಿ ಹುರಿಯಬೇಕು (ತುಂಬಾ ಹುರಿಯುವ ಅವಶ್ಯಕತೆ ಇಲ್ಲ). ನಂತರ ಎಲ್ಲ ಬೇಳೆ ಕಾಳುಗಳನ್ನೂ ಇದೇ ರೀತಿಯಲ್ಲಿ ಹುರಿಯಬೇಕು. ನಂತರ ಈ ಎಲ್ಲವನ್ನೂ ಹಿಟ್ಟುಮಾಡಿಕೊಂಡು, ಜರಡಿ ಹಿಡಿದುಕೊಳ್ಳಬೇಕು.

ಒಂದು ಮಿಕ್ಸಿ ಜಾರ್‌ನಲ್ಲಿ ಒಣಕೊಬ್ಬರಿ, ಹಸಿ ಮೆಣಸಿನಕಾಯಿ, ಬೆಳ್ಳುಳ್ಳಿ, ಕರಿಬೇವು, ಕೊತ್ತಂಬರಿ ಸೊಪ್ಪು, ಜೀರಿಗೆ, ಉಪ್ಪು ಹಾಕಿ ರುಬ್ಬಿ ಪೇಸ್ಟ್ ಮಾಡಿಕೊಳ್ಳಬೇಕು.

ಒಂದು ಪಾತ್ರೆಯಲ್ಲಿ ಸ್ವಲ್ಪ ಎಣ್ಣೆ ಬಿಸಿ ಮಾಡಿಕೊಳ್ಳಿ. ಜರಡಿ ಮಾಡಿಟ್ಟುಕೊಂಡ ಅಕ್ಕಿ ಮತ್ತು ಕಾಳುಗಳ ಹಿಟ್ಟಿಗೆ ಸ್ವಲ್ಪ ಬಿಸಿ ಎಣ್ಣೆ ಹಾಕಿ. ಆಮೇಲೆ ಅಜ್ವಾನ ಹಾಕಿ. ಈಗಾಗಲೇ ತಯಾರಿಸಿ ಕೊಂಡಿರುವ ಮೆಣಸಿನಕಾಯಿ ಪೇಸ್ಟ್ ಅನ್ನೂ ಇದರೊಟ್ಟಿಗೆ ಹಾಕಿ ಹಿಟ್ಟನ್ನು ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಿ. ಚಪಾತಿ ಹಿಟ್ಟು ನಾದಿದ ಹಾಗೆ ನಾದಿಕೊಳ್ಳಿ. ಈಗ ಕಡ್ಡಿ ಆಕಾರದಲ್ಲಿ ಹೊಸೆದು, ಕಡಿಮೆ ಉರಿ ಇಟ್ಟುಕೊಂಡು ಎಣ್ಣೆಯಲ್ಲಿ ಕರಿದರೆ ಕೊಬ್ರಿ ಕಡ್ಡಿ ಸಿದ್ಧ.

ಸಜ್ಜೆ ಚಕ್ಕುಲಿ

ಬೇಕಾಗಿರುವ ಸಾಮಗ್ರಿಗಳು: 1 ಕಪ್ ಸಜ್ಜೆ ಹಿಟ್ಟು, 1/2 ಕಪ್ ಅಕ್ಕಿ ಹಿಟ್ಟು, 1/2 ಕಪ್ ಕಡಲೆಹಿಟ್ಟು, ಕರಿಎಳ್ಳು, ಅಚ್ಚಕಾರದ ಪುಡಿ ರುಚಿಗೆ ತಕ್ಕಷ್ಟು, ಜೀರಿಗೆ, ಅಜ್ವಾನ, ಉಪ್ಪು ರುಚಿಗೆ ತಕ್ಕಷ್ಟು, ಎಣ್ಣೆ

ತಯಾರಿಸುವ ವಿಧಾನ: ನೀರು ಬಿಸಿ ಮಾಡಿಕೊಳ್ಳಿ. ಅಗಲವಾದ ಪಾತ್ರೆಯಲ್ಲಿ ಸಜ್ಜೆ ಹಿಟ್ಟು, ಅಕ್ಕಿ ಹಿಟ್ಟು, ಕಡಲೆಹಿಟ್ಟು, ಜೀರಿಗೆ, ಅಜ್ವಾನ, ಕರಿಎಳ್ಳು, ಅಚ್ಚಕಾರದ ಪುಡಿ, ಉಪ್ಪು ಹಾಕಿ ಸರಿಯಾಗಿ ಮಿಕ್ಸ್ ಮಾಡಿಕೊಳ್ಳಿ. ಸ್ವಲ್ಪ ಬಿಸಿ ಎಣ್ಣೆ ಮತ್ತು ನೀರು ಹಾಕಿ ಹಿಟ್ಟನ್ನು ಚೆನ್ನಾಗಿ ನಾದಿಕೊಳ್ಳಿ. ಈ ಹಿಟ್ಟನ್ನು ಚಕ್ಕುಲಿ ಒತ್ತುವ ಉಪಕರಣಕ್ಕೆ ಹಾಕಿ, ಎಲೆ/ಪ್ಲಾಸ್ಟಿಕ್ ಹಾಳೆ ಮೇಲೆ ಚಕ್ಕುಲಿ ಒತ್ತಿ. ನಿಮಗೆ ಅಭ್ಯಾಸವಿದ್ದರೆ, ಒಲೆ/ಸ್ಟವ್‌ಮೇಲಿಟ್ಟಿರುವ ಬಿಸಿ ಎಣ್ಣೆಯ ಬಾಣಲೆಗೆ ನೇರವಾಗಿ ಚಕ್ಕಲಿಯನ್ನು ಒತ್ತಬಹುದು. ಕಡಿಮೆ ಉರಿಯಲ್ಲಿ ಕರಿದರೆ, ಗರಿಗರಿ ಚಕ್ಕುಲಿ ಸವಿಯಲು ರೆಡಿ.



ಜೋಳದ ವಡೆ

ಬೇಕಾಗಿರುವ ಸಾಮಗ್ರಿಗಳು: 2 ಕಪ್ ಜೋಳದ ಹಿಟ್ಟು, 3/4 ಕಪ್ ಗೋಧಿ ಹಿಟ್ಟು, 1/4 ಕಪ್ ಕಡಲೆಹಿಟ್ಟು, ಎಳ್ಳು, ಆರೇಳು ಹಸಿ ಮೆಣಸಿನಕಾಯಿ , ಕರಿಬೇವು, ಕೊತ್ತಂಬರಿ ಸೊಪ್ಪು, ಉಪ್ಪು, ದನಿಯಾ, ಅರಸಿನಪುಡಿ ಪುಡಿ, ಇಂಗು, 1 ಕಪ್ ನೆನೆಸಿರುವ ಉದ್ದಿನ ಬೇಳೆ, ಜೀರಿಗೆ, ಎಣ್ಣೆ



ತಯಾರಿಸುವ ವಿಧಾನ: ತೊಳೆದು ನೆನೆಸಿರುವ ಉದ್ದಿನ ಬೇಳೆಯನ್ನು ಮಿಕ್ಸಿ ಜಾರ್‌ಗೆ ಹಾಕಿ. ಅದಕ್ಕೆ ಜೀರಿಗೆ, ಹಸಿ ಮೆಣಸಿನಕಾಯಿ, ಕರಿಬೇವು, ಕೊತ್ತಂಬರಿ ಸೊಪ್ಪು, ದನಿಯಾ, ನೀರು ಹಾಕಿ ರುಬ್ಬಿ ನುಣ್ಣಗೆ ಪೇಸ್ಟ್ ಮಾಡಿಕೊಳ್ಳಿ. ಒಂದು ಅಗಲವಾದ ಪಾತ್ರೆಗೆ ಈ ಪೇಸ್ಟ್ ಹಾಕಿ. ಜೊತೆಗೆ, ಜೋಳದ ಹಿಟ್ಟು, ಗೋಧಿ ಹಿಟ್ಟು, ಕಡಲೆಹಿಟ್ಟು ಹಾಕಿ ಇಂಗು, ಅರಸಿನಪುಡಿ, ರುಚಿಗೆ ತಕ್ಕಷ್ಟು ಉಪ್ಪು ಹಾಕಬೇಕು. ಇದಕ್ಕೆ ಬಿಸಿ ನೀರಿ ಸೇರಿಸಿ ಹಿಟ್ಟನ್ನು ಗಟ್ಟಿಯಾಗಿ ನಾದಿಕೊಳ್ಳಬೇಕು. ನಾದಿಕೊಂಡ ಹಿಟ್ಟನ್ನು ಒಂದು ತಾಸು ನೆನೆಯಲು ಬಿಡಬೇಕು. ನಂತರ ಯಾವ ಆಕಾರ ಬೇಕೋ ಆ ಆಕಾರದಲ್ಲಿ ಹಿಟ್ಟನ್ನು ಲಟ್ಟಿಸಿಕೊಂಡು, ಅದರ ಮೇಲೆ ಸ್ವಲ್ಪ ಎಳ್ಳು ಹಚ್ಚಿ ಎಣ್ಣೆಯಲ್ಲಿ ಫ್ರೈ ಮಾಡಿಕೊಳ್ಳಿ. ರುಚಿ ರುಚಿಯಾದ ಜೋಳದ ವಡೆ ಸವಿಯಲು ಸಿದ್ಧ.

ದೊಡ್ಡ ನಾಲಿಗೆಗೆ ಹೆಚ್ಚು ರುಚಿ ಸಿಗಬಹುದೇ?



ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

- **21ವರ್ಷದ ಯುವಕ. ಶಿಶ್ನ ಚಿಕ್ಕದಿದೆ. ಅದನ್ನು ವೃದ್ಧಿಮಾಡಲು ಉಪಾಯವೇನಿದೆ?**

ಹೆಸರು, ಊರು ತಿಳಿಸಿಲ್ಲ

ನಿಮ್ಮ ಕೈಬೆರಳುಗಳನ್ನು ಉದ್ದಮಾಡಲು ಏನಾದರೂ ಉಪಾಯವಿರುವ ಸಾಧ್ಯತೆಗಳಿವೆಯೇ? ಸಾಧ್ಯವಿಲ್ಲ ಎಂದಾದರೆ ಇದೇ ತರ್ಕ ಶಿಶ್ನದ ಅಳತೆ ಆಕಾರಗಳಿಗೂ ಹೊಂದುತ್ತದೆ. ದೇಹದ ರಚನೆ ಸಂಪೂರ್ಣ ಅನುವಂಶಿಕವಾದದ್ದು. ಇದನ್ನು ಬದಲಾಯಿಸಬಹುದು ಎಂದು ನಿಮಗೆ ಯಾರಾದರೂ ಹೇಳಿದರೆ ಅವರು ನಿಮ್ಮನ್ನು ದಾರಿತಪ್ಪಿಸಿ ಹಣಮಾಡುವ ಉದ್ದೇಶ ಹೊಂದಿರುತ್ತಾರೆ. ಹೆಚ್ಚಿನ ಲೈಂಗಿಕ ಸುಖಕ್ಕೆ ಅಂಗಾಂಗಗಳು ದೊಡ್ಡದಿರಬೇಕು ಎನ್ನುವುದಾದರೆ ದೊಡ್ಡ ನಾಲಿಗೆ ಇರುವವನಿಗೆ ಮೈಸೂರ್‌ಪಾಕ್ ಹೆಚ್ಚು ರುಚಿಯಾಗಿ ಕಾಣಿಸಬೇಕು! ಇವೆಲ್ಲಾ ದಾರಿತಪ್ಪಿಸುವ ಮಾರುಕಟ್ಟೆಯ ತಂತ್ರಗಳು. ಸಂಪೂರ್ಣ ಲೈಂಗಿಕ ಸುಖ ಹೊಂದಲು ಬೇಕಾದಷ್ಟು ದೈಹಿಕ ಕ್ಷಮತೆಯನ್ನು ಪ್ರಕೃತಿ ಎಲ್ಲರಿಗೂ ನೀಡಿರುತ್ತದೆ. ಸಂಗಾತಿಯ ಜೊತೆಗೆ ಇರುವ ಆತ್ಮೀಯ ಸಂಬಂಧ ಮಾತ್ರ ನಿಮ್ಮ ಲೈಂಗಿಕ ಸುಖದ ಗುಣಮಟ್ಟವನ್ನು ನಿರ್ಧರಿಸುತ್ತದೆ. ನಿಶ್ಚಿಂತರಾಗಿ ಓದು ಉದ್ಯೋಗಗಳ ಕಡೆ ಗಮನಹರಿಸಿ ಮಾರುಕಟ್ಟೆಯಲ್ಲಿ ಸಿಗುವ ಯಾವುದೇ ವಸ್ತುಗಳಿಂದ ಮೋಸಹೋಗಬೇಡಿ.

- **25 ವರ್ಷದ ಯುವಕ. ಶಾಲಾ ದಿನಗಳಿಂದಲೂ ನನಗೆ ಸ್ಖಲನವಾಗುತ್ತಿದೆ. ನಾನು ಮದುವೆ ಮಾಡಿಕೊಳ್ಳಬಹುದೋ ಇಲ್ಲವೋ, ನನಗೆ ಮಕ್ಕಳಾಗುತ್ತದೆಯೇ ಎನ್ನುವ ಆತಂಕ ಶುರುವಾಗಿದೆ. ಸಲಹೆನೀಡಿ.**

ಹೆಸರು, ಊರು ತಿಳಿಸಿಲ್ಲ

ಸ್ಖಲನವಾಗದೇ ಶೇಖರಣೆಯಾದ ವೀರ್ಯ ಮದುವೆಯಾದ ಮೇಲೆ ಮಕ್ಕಳಾಗಲು ಉಪಯೋಗಕ್ಕೆ ಬರುತ್ತದೆ ಎಂದುಕೊಂಡಿದ್ದೀರಾ? 10-15 ವರ್ಷಗಳ ಹಳೆಯ ಬೀಜದಿಂದ ಹೊಸಪೈರು ಹುಟ್ಟಬಹುದೇ? ಪ್ರತಿ ತಿಂಗಳು ಹೊಸ ಅಂಡಾಣುವನ್ನು ಮಹಿಳೆಯರ ದೇಹ ಸೃಷ್ಟಿಸುವ ಉದ್ದೇಶವೇನಿರಬಹುದು? ದೇಹದ ಎಲ್ಲಾ ಜೀವಕೋಶಗಳೂ ಆಗಾಗ ಸತ್ತು ಹೊಸದು ಹುಟ್ಟುತ್ತಲೇ ಇರುತ್ತದೆ. ಹಾಗೆಯೇ ವೀರ್ಯಾಣುಗಳು ಕೂಡ ಸುಮಾರು 74 ದಿನಗಳವರೆಗೆ ಮಾತ್ರ ಜೀವಂತವಾಗಿರುತ್ತವೆ. ದೇಹದಲ್ಲಿ ಹಾರ್ಮೋನ್‌ಗಳು ಸೃಜನೆಯಾಗುವವರೆಗೆ ಹಳೆಯ ವೀರ್ಯಾಣುಗಳು ನಾಶವಾಗಿ ಹೊಸದು ಹುಟ್ಟುತ್ತಲೇ ಇರುತ್ತದೆ. ಸ್ಖಲನವಾಗದಿದ್ದರೂ ಹೊಸದಕ್ಕೆ ಅವಕಾಶ ಮಾಡಿಕೊಡಲು ಅವು ದೇಹದೊಳಗೇ ನಾಶಹೊಂದುತ್ತವೆ. ಹಾಗಾಗಿ ಯಾವುದೇ ಆತಂಕಕ್ಕೆ ಕಾರಣವಿಲ್ಲ. ದುಡಿಮೆ ಉದ್ಯೋಗಗಳ ಕಡೆ ಗಮನಹರಿಸಿ ಆದಷ್ಟು ಬೇಗ ಸಂಗಾತಿಯನ್ನು ಹುಡುಕಿಕೊಳ್ಳಿ. ಶುಭವಾಗಲಿ.

- **30ವರ್ಷದ ಯುವಕ. ಕಳೆದ 10ವರ್ಷದಿಂದ ಹಸ್ತಮೈಥುನ ಅಭ್ಯಾಸವಿದೆ. ನನಗೆ ಶೀಘ್ರಸ್ಖಲನವಾಗುತ್ತದೆ. ಸದ್ಯದಲ್ಲೇ ಮದುವೆ ಇದೆ. ಶೀಘ್ರಸ್ಖಲನವನ್ನು ನೈಸರ್ಗಿಕವಾಗಿ ನಿವಾರಿಸಿಕೊಳ್ಳಲು ಆಹಾರಪದ್ಧತಿ ಮತ್ತು ಆಹಾರ ಪದಾರ್ಥಗಳ ಬಗೆಗೆ ತಿಳಿಸಿಕೊಡಿ.**

ಹೆಸರು, ಊರು ತಿಳಿಸಿಲ್ಲ

ಶೀಘ್ರಸ್ಖಲನ ಎಂದರೆ ಎಷ್ಟು ಸಮಯ? ಅದನ್ನು ನಿರ್ಧರಿಸುವವರು ಯಾರು? ಅದಕ್ಕೆ ಏನಾದರೂ ವೈಜ್ಞಾನಿಕ ಆಧಾರಗಳಿವೆಯೇ? ಇವೆಲ್ಲಾ ಉತ್ತರವಿಲ್ಲದ ಪ್ರಶ್ನೆಗಳು. ಶೀಘ್ರಸ್ಖಲನ ಎನ್ನುವುದು ನಕಲಿ ಔಷಧಿ ಮಾರಿ ಹಣ ಮಾಡುವವರು ಹುಟ್ಟುಹಾಕಿರುವ ತಪ್ಪುಕಲ್ಪನೆ. ದೀರ್ಘಸಂಭೋಗದಿಂದ ಹೆಚ್ಚಿನ ಸುಖ ಸಿಗುತ್ತದೆ ಎನ್ನುವುದು ತಪ್ಪುಕಲ್ಪನೆ. ಲೈಂಗಿಕತೆಯಲ್ಲಿ ಪ್ರಮುಖವಾಗುವುದು ಇಬ್ಬರಿಗೂ ತೃಪ್ತಿಯಾಗಿದೆಯೇ ಎನ್ನುವುದು ಮಾತ್ರ. ಸಂಭೋಗ ಮಾಡಿದಷ್ಟೇ ಸುಖ ಸಂಭೂಗಪೂರ್ವ ಕ್ರಿಯೆಗಳಲ್ಲಿಯೂ ಇರುತ್ತದೆ. ಸಂಗಾತಿಗಳಿಬ್ಬರೂ ಹೆಚ್ಚು ಹೊತ್ತು ಒಡನಾಡಲು ಸಾಧ್ಯವಾದರೆ ಸಂಪೂರ್ಣ ತೃಪ್ತಿ ಸಿಗುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಆತಂಕ ತಪ್ಪುತಿಳಿವಳಿಕೆಗಳು ಶೀಘ್ರಸ್ಖಲನಕ್ಕೆ ಕಾರಣವಾಗುತ್ತದೆ. ಹಾಗಾಗಿ ಯಾವುದೇ ಹಿಂಜರಿಕೆಯಿಲ್ಲದೆ ಮದುವೆಯಾಗಿ. ನಂತರ ಸಮಸ್ಯೆಗಳು ಬಂದರೆ ಇಬ್ಬರೂ ಸೇರಿ ತಜ್ಞ ಲೈಂಗಿಕ ಮನೋಚಿಕಿತ್ಸಕರನ್ನು ಭೇಟಿಯಾಗಿ.

- **ಶೀಘ್ರಸ್ಖಲನದ ಸಮಸ್ಯೆಯಿದೆ. ಪರಿಹಾರವೇನು?**

ಹೆಸರು, ಊರು ತಿಳಿಸಿಲ್ಲ

ಯಾವುದೇ ವೈಯಕ್ತಿಕ ವಿವರಗಳಿಲ್ಲದ ಈ ರೀತಿಯ ಪ್ರಶ್ನೆಗಳಿಗೆ ಉತ್ತರಿಸುವುದು ಉಚಿತವಲ್ಲ. ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರವನ್ನು ಗಮನಿಸಿ. ಅಗತ್ಯವಿದ್ದರೆ ತಜ್ಞ ಮನೋಚಿಕಿತ್ಸಕರನ್ನು ಭೇಟಿಯಾಗಿ.

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ bhoomika@prajavani.co.in


ಪ್ರಜಾವಾಣಿ DH DECCAN HERALD
ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ
ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಎನ್‌ಬಿ. ಎಸ್ ನೂಲಾ,** ನಂ.225, 54ನೇ ಕ್ರಾಸ್, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು	30,000
2	**ಸಿ. ಭಾರತಿ,** ಪಾರಿಜಾತ, ನಂ. 11, 5ನೇ ಕ್ರಾಸ್, ಮಾರೇನಹಳ್ಳಿ, ಜೆ.ಪಿ.ನಗರ, ಬೆಂಗಳೂರು	25,000
3	**ರಾಜನ್,** ನಂ .540, ಶ್ರೀನಿವಾಸ, 7ನೇ ಕ್ರಾಸ್, ಒಂದನೇ ಬ್ಲಾಕ್, ಎಸ್‌ಐಟಿ ಬಡಾವಣೆ, ತುಮಕೂರು	10,000
4	**ನಾರಾಯಣ ಶೆಟ್ಟಿ ಕೆ.ಆರ್.,** ನಂ. 6 ಸಿ, 1ನೇ 'ಎ' ಮುಖ್ಯರಸ್ತೆ, ಮೇಟಗಳ್ಳಿ, ಮೈಸೂರು	10,000
5	**ಕಮಲಮ್ಮ,** ವೆಂಕಟಾದ್ರಿ ನಿಲಯ, 2ನೇ ಮೇನ್, 1ನೇ ಕ್ರಾಸ್, ವಿಜಯನಗರ, ತುಮಕೂರು	10,000
6	**ಜಿ.ಸುಶೀಲಾ ಗೋಪಾಲ್,** ಸಿ. 701, ಗುಲ್‌ಮೊಹರ್, ಟವರ್ 1, ಆದರ್ಶ್ ಪ್ಲಾಮ್ ರೀಟ್ರೀಟ್, ಹೊರವಲಯ ರಿಂಗ್ ರಸ್ತೆ, ದೇವರಬೀಸನ ಹಳ್ಳಿ, ಬೆಳ್ಳಂದೂರು ಪೋಸ್ಟ್, ಬೆಂಗಳೂರು	10,000
7	**ಗಂಗಾಧರಯ್ಯ ಡಿ.,** ನಂ. 1102, 10ನೇ 'ಡಿ'ಕ್ರಾಸ್ ವೆಸ್ಟ್ ಆಫ್ ಕಾರ್ಡ್ ರಸ್ತೆ, 2ನೇ ಹಂತ, ಮಹಾಲಕ್ಷ್ಮಿಪುರಂ, ಬೆಂಗಳೂರು	10,000
8	**ಯಶವಂತ್ ಸಿ.ಎನ್.,** ನಂ. 064, ಇಶಾ ಮಿಸ್ಟಿ ಗ್ರೀನ್ ಅಪಾರ್ಟ್‌ಮೆಂಟ್, ಚನ್ನಸಂದ್ರ, ಕಾಡುಗೋಡಿ ಪೋಸ್ಟ್, ಬೆಂಗಳೂರು	10,000
9	**ಡಾ.ಎಸ್.ಟಿ.ಕಾಂತರಾಜ್,** ಕನಕ ನರ್ಸಿಂಗ್ ಹೋಂ. ಜೆ.ಸಿ. ಬಡಾವಣೆ, ಕನಕಪುರ	10,000
10	**ಶಿವರಾಮ,** ನಂ.16, 3ನೇ ಮುಖ್ಯರಸ್ತೆ, ಆಡುಗೋಡಿ, ಬೆಂಗಳೂರು	6,666
11	**ಎಂ.ಆರ್.ಎಸ್.ಹೆಗ್ಡೆ,** ರಾಣಿ ಚನ್ನಮ್ಮ ಆರ್.ಎಂ.ಸಿ. ರಸ್ತೆ, ಸಾಗರ, ಶಿವಮೊಗ್ಗ	5,555
12	**ಸಿ.ವೆಂಕಟೇಶ್,** ನರಸಾಪುರ, ಹುಬ್ಬಳ್ಳಿ	5,000
13	**ಜನಾರ್ದನ ಗಣಪತಿ ಶೆಟ್ಟಿ,** ಬೆಂಗಳೂರು	5,000
14	**ಬಿ.ಅರ್.ಪದ್ಮಾ, ಸಿ.** 701, ಗುಲ್‌ಮೊಹರ್, ಗುಲ್‌ಮೊಹರ್, ಟವರ್ 1, ಆದರ್ಶ್ ಪ್ಲಾಮ್ ರೀಟ್ರೀಟ್, ಹೊರವಲಯ ರಿಂಗ್ ರಸ್ತೆ, ದೇವರ ಬೀಸನಹಳ್ಳಿ, ಬೆಳ್ಳಂದೂರು ಪೋಸ್ಟ್, ಬೆಂಗಳೂರು	5,000
15	**ಕೆ.ಲಕ್ಷ್ಮಿನರಸು,** ನಂ.22, 7ನೇ ಮೇನ್, ಬನಶಂಕರಿ 3ನೇ ಹಂತ, 5ನೇ ಬ್ಲಾಕ್, ಬೆಂಗಳೂರು	5,000
16	**ಗಿರಿಜಾ ಎಚ್,** ನಂ. 222, 14ನೇ ಮೇನ್, ಬನಶಂಕರಿ 1ನೇ ಹಂತ, 2ನೇ ಬ್ಲಾಕ್, ಬೆಂಗಳೂರು	5,000
17	**ಶಾನ್‌ಬಾಗ್ ಎಸ್.ಪಿ.,** ಐಸಿರಿ,ಎಸ್ಲೆ (ಉಂಡಕನಹಳ್ಳಿ), ಚಿಪಗಿ ಪೋಸ್ಟ್, ಶಿರಸಿ ತಾ.	5,000
18	**ಎಸ್.ಕೆ.ಶೈಲಜಾ,** ನಂ.844, 'ಎ'ಬ್ಲಾಕ್, 17ನೇ ಕ್ರಾಸ್, ಸಹಕಾರನಗರ, ಬೆಂಗಳೂರು	5,000
19	**ಜಿ.ಶ್ರೀದೇವಿ,** ನಂ.243, 12ನೇ ಮೇನ್, 5ನೇ ಕ್ರಾಸ್, ಸರಸ್ವತಿಪುರಂ, ಮೈಸೂರು	5,000
20	**ಎಚ್.ವಿ.ಅನಂತಸುಬ್ಬರಾವ್,** ನಂ.37, 16ನೇ ಮೇನ್ ರೋಡ್, ಎಂ.ಸಿ. ಲೇಔಟ್, ವಿಜಯನಗರ,ಬೆಂಗಳೂರು	4,000
21	**ಸಿ.ಬಿ.ರಮೇಶ್,** ಸಿ.ಐ.ಜಿ. 394, ಕೆಎಚ್‌ಬಿ ಕಾಲೊನಿ, ಕಲ್ಲಹಳ್ಳಿ, ವಿನೋಬಾನಗರ, ಶಿವಮೊಗ್ಗ	3,000
22	**ಚಲುವರಾಜು ಎಂ.ಎಸ್.,** ನಂ. 518/ಡಿ, 1ನೇ ಮಹಡಿ, 8ನೇ ಕ್ರಾಸ್, ರೈಲ್ವೆ ನಿಲ್ದಾಣದ ಬಳಿ, ಆರ್‌ಪಿಸಿ ಲೇಔಟ್, ಹಂಪಿನಗರ, ಬೆಂಗಳೂರು	2,502
23	**ಕೆ.ಎನ್.ವೆಂಕಟೇಶಮೂರ್ತಿ,** ನಂ. 259/ಎ, ಕುವೆಂಪು ರಸ್ತೆ, ಕೆಂಗೇರಿ, ಬೆಂಗಳೂರು	2,501
24	**ವಂಶಿಕುಮಾರ್,** ನಂ. 766, ಚಾಮುಂಡೇಶ್ವರಿ ನಗರ, 8ನೇ ಕ್ರಾಸ್, ಮಂಡ್ಯ	2,500
25	**ಲಲಿತಾ ಗಿರಿ,** ನಂ.33, 2ನೇ ಕ್ರಾಸ್, ವೈಯಾಲಿಕಾವಲ್ ಲೇಔಟ್, ವಿಜಯನಗರ, ಬೆಂಗಳೂರು	2,000
26	**ಸಿ.ಎಂ.ಚನ್ನಬಸವಯ್ಯ,** ಎ.ಎಸ್.ಗಿರೀಶ್, ಶೃಂಗೇರಿ ನಿಲಯ, 2ನೇ ಕ್ರಾಸ್, ಕುವೆಂಪುನಗರ, ಪೊಲೀಸ್ ಠಾಣೆ ಎದುರು, ತುಮಕೂರು	2,000
27	**ಗಿರಿಜಾ ರವೀಂದ್ರನಾಥ್,** ನಂ.423,27ನೇ ಕ್ರಾಸ್, 13ನೇ ಮೇನ್ ಬ್ಲಾಕ್, ಜೆ.ಪಿ.ನಗರ, ಮೈಸೂರು	2,000
28	**ಮುನಿರಾಮಪ್ಪ,** ನಂ.239, 8ನೇ ಕ್ರಾಸ್, 3ನೇ ಹಂತ,ಗೋಕುಲಂ, ಮೈಸೂರು	2,000
29	**ಶ್ರೀರಾಮ ರಾವ್,** ನಂ.3436, 1ನೇ ಕ್ರಾಸ್, 7ನೇ ಮೇನ್, ಬಿಟಿಎಸ್ ಡಿಪೊ ಹಿಂದೆ, ವಿಜಯನಗರ 2ನೇ ಹಂತ, ಬೆಂಗಳೂರು	2,000
30	**ಗೌರಮ್ಮ ಎಂ.,** ಕಂಪ್ಲಿಕೋಟೆ, ಬಳ್ಳಾರಿ	1,008
31	**ಮಂಜುನಾಥ ಎ.ವಿ.,** ಎಫ್.ಎಫ್.06, ಶ್ರೀಸಾಯಿಗಂಗಾ ಅಪಾರ್ಟ್‌ಮೆಂಟ್, ಮೇನ್ ರೋಡ್, ವಿದ್ಯಾಗಿರಿ, ಧಾರವಾಡ	1,001
32	**ದೊರೆಸ್ವಾಮಿ ಎಚ್.ಆರ್.,** ನಂ.7, ಉತ್ತರ, 9ನೇ ಕ್ರಾಸ್, ವಿವೇಕಾನಂದ ನಗರ, ಮೈಸೂರು	1,000
33	**ಕಲಾವತಿ ಆರ್.,** 4ನೇ ಕ್ರಾಸ್, ಆರ್‌ಎಂಎಸ್ ಕಾಲೊನಿ, ಸಂಜಯನಗರ, ಆರ್‌ಎಂವಿ ಬಡಾವಣೆ, ಬೆಂಗಳೂರು	1,000
	ಇದುವರೆಗೆ ಸಂಗ್ರಹವಾದ ಮೊತ್ತ	4,23,750

ಧರಣೇಂದ್ರ ಕುರಕುರಿ, ಗೀತಾ ಶೆಣೈ, ಶತಾವಧಾನಿ ಗಣೇಶ್, ಶಶಿಕಿರಣ್‌ಗೂ ಅನುವಾದ ಪುರಸ್ಕಾರ

ಕಾಪಸೆಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಗುರುಲಿಂಗ ಕಾಪಸೆ


ಆರ್.ಗಣೇಶ್


ಧರಣೇಂದ್ರ ಕುರಕುರಿ


ಡಾ.ಗೀತಾ ಶೆಣೈ

ನವದೆಹಲಿ: ಕೇಂದ್ರ ಸಾಹಿತ್ಯ ಅಕಾಡೆಮಿ ನೀಡುವ ಅನುವಾದ ಪುಸ್ತಕ ಪ್ರಶಸ್ತಿಗೆ ಕನ್ನಡದ ಹಿರಿಯ ಲೇಖಕ ಡಾ. ಗುರುಲಿಂಗ ಕಾಪಸೆ ಆಯ್ಕೆಯಾಗಿದ್ದಾರೆ. ಲೇಖಕರಾದ ಪ್ರೊ.ಧರಣೇಂದ್ರ ಕುರಕುರಿ, ಗೀತಾ ಆರ್.ಶೆಣೈ, ಶತಾವಧಾನಿ ಆರ್.ಗಣೇಶ್ ಹಾಗೂ ಬಿ.ಎನ್.ಶಶಿಕಿರಣ್ ಅವರಿಗೆ ಸಹ ಅನುವಾದ ಪ್ರಶಸ್ತಿಗೆ ಪಾತ್ರರಾಗಿದ್ದರೆ.

ಪ್ರಶಸ್ತಿ ಪ್ರದಾನ ಸಮಾರಂಭವು ಆಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳಲ್ಲಿ ನವದೆಹಲಿಯಲ್ಲಿ ನಡೆಯಲಿದೆ. ಪ್ರತಿ ಪ್ರಶಸ್ತಿಯು ₹50 ಸಾವಿರ, ಸ್ಮತಿ ಫಲಕ ಒಳಗೊಂಡಿದೆ.

ವಿ.ಸ. ಖಾಂಡೇಕರ್ ಅವರ 'ಒಂದು ಪುಟದ ಕಥೆ'ಯನ್ನು ಡಾ.ಕಾಪಸೆ ಅವರು ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. 'ಒಂದು ಪುಟದ ಕಥೆ' (ಮೂಲ: 'ಏಕ ಪಾನಾಚಿ ಕಹಾಣಿ) ಖಾಂಡೇಕರ್ ಅವರ ಆತ್ಮಕಥೆ.

ಖಾಂಡೇಕರ್ ಅವರ ಆತ್ಮಕಥೆಯು ಕಳೆದ ಶತಮಾನದ ಭಾರತದ ಅದರಲ್ಲಿಯೂ ಮಹಾರಾಷ್ಟದ ಕೊಂಕಣ ಭಾಗದ ಸಾಮಾಜಿಕ, ಆರ್ಥಿಕ, ರಾಜಕೀಯ, ಜಾತೀಯ ಸ್ಥಿತಿಗತಿಗಳ ಸಮಗ್ರ ವಿವರಣೆ ನೀಡುತ್ತದೆ.

ಸಾಹಿತ್ಯ ಅಕಾಡೆಮಿಯ ಕನ್ನಡ ವಿಭಾಗದ ಸಂಚಾಲಕ ಡಾ. ಸರಜೂ ಕಾಟ್ಕರ್, ಸದಸ್ಯರಾದ ಡಾ.ಬಸವರಾಜ ಕಲ್ಗುಡಿ, ಬಿ.ಆರ್. ಲಕ್ಷ್ಮಣರಾವ್ ಹಾಗೂ ಡಾ ಸುಬ್ಬು ಹೊಲೆಯಾರ್ ಅವರನ್ನು ಒಳಗೊಂಡ ಆಯ್ಕೆ ಸಮಿತಿ ಕಾಪಸೆ ಅವರನ್ನು ಆಯ್ಕೆ ಮಾಡಿದೆ.

ಪ್ರೊ.ಧರಣೇಂದ್ರ ಕುರಕುರಿ ಅವರು ಬಸವರಾಜ ಕಟ್ಟೀಮನಿ ಅವರ 'ಜ್ವಾಲಾಮುಖಿ ಮೇಲೆ' ಕೃತಿಯನ್ನು ಕನ್ನಡದಿಂದ ಹಿಂದಿಗೆ ಅನುವಾದ ಮಾಡಿದ್ದಾರೆ. ಅವರಿಗೆ ಹಿಂದಿ ವಿಭಾಗ ದಲ್ಲಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಗೀತಾ ಶೆಣೈ ಅವರು ಕುವೆಂಪು ಅವರ 'ವಿಚಾರ ಕ್ರಾಂತಿಗೆ ಆಹ್ವಾನ' ಕೃತಿಯನ್ನು ಕನ್ನಡದಿಂದ ಕೊಂಕಣಿಗೆ ಅನುವಾದ ಮಾಡಿದ್ದಾರೆ. ಅವರಿಗೆ ಕೊಂಕಣಿ ವಿಭಾಗದಲ್ಲಿ ಪ್ರಶಸ್ತಿ ದೊರಕಿದೆ.

ದೇವುಡು ನರಸಿಂಹ ಶಾಸ್ತ್ರಿ ಅವರ 'ಮಹಾಬ್ರಾಹ್ಮಣ' ಕಾದಂಬರಿಯನ್ನು ಶತಾವಧಾನಿ ಆರ್. ಗಣೇಶ್ ಹಾಗೂ ಬಿ.ಎನ್.ಶಶಿಕಿರಣ್ ಸಂಸ್ಕೃತಕ್ಕೆ ಅನುವಾದ ಮಾಡಿದ್ದಾರೆ. ಸಂಸ್ಕೃತ ವಿಭಾಗದಲ್ಲಿ ಅವರಿಗೆ ಪ್ರಶಸ್ತಿ ಲಭಿಸಿದೆ.

ಪ್ರಶಸ್ತಿ ಲಭಿಸಿದ್ದು ಸಂತಸ ತಂದಿದೆ: ಕಾಪಸೆ

ಧಾರವಾಡ: 'ಮರಾಠಿಯ ಜ್ಞಾನಪೀಠ ಪುರಸ್ಕೃತ ಸಾಹಿತಿ ವಿ.ಸ.ಖಾಂಡೇಕರ್ ಅವರು ಬದುಕಿನಲ್ಲಿ ಅನುಭವಿಸಿದ ಕಷ್ಟದ ದಿನಗಳು 'ಒಂದು ಪುಟದ ಕಥೆ' ಕೃತಿಯಲ್ಲಿದೆ. ಇಂಥ ಮಹತ್ವದ, ದೇಶಿಯ ಸೊಗಡಿನ ಕೃತಿಗೆ ಪ್ರಶಸ್ತಿ ಲಭಿಸಿದ್ದು ಸಂತೋಷದ ವಿಚಾರ' ಎಂದು ಹಿರಿಯ ಸಾಹಿತಿ ಡಾ. ಗುರುಲಿಂಗ ಕಾಪಸೆ ಹೇಳಿದರು.

ಕೇಂದ್ರ ಸಾಹಿತ್ಯ ಅಕಾಡೆಮಿಯ 'ಅನುವಾದ ಪ್ರಶಸ್ತಿ'ಗೆ ಆಯ್ಕೆಯಾದ ಸಂದರ್ಭದಲ್ಲಿ ಪ್ರತಿಕ್ರಿಯಿಸಿದ ಅವರು, 'ಈ ಕೃತಿಯನ್ನು ನಾನು ಬರೆದಿದ್ದೇ ಆಕಸ್ಮಿಕ. ಖಾಂಡೇಕರ್ ಅವರ ಕೃತಿಗಳನ್ನು ಓದಿದ್ದೆ. ವಿಭಿನ್ನ ಹಾಗೂ ಶ್ರೇಷ್ಠ ಕೃತಿಯಾದ ಇದನ್ನು ಅನುವಾದಿಸುವಂತೆ ಮನೋಹರ ಗ್ರಂಥಮಾಲೆಯ ಡಾ.ರಮಾಕಾಂತ ಜೋಶಿ ಅವರು ಕೊಟ್ಟರು. ಕೃತಿಗೆ ಪ್ರಶಸ್ತಿ ಬರುವ ನಿರೀಕ್ಷೆ ಇರಲಿಲ್ಲ' ಎಂದರು.

ಕೃಷಿ ಭೂಮಿ ಸಕ್ರಮ: ಅವಧಿ ವಿಸ್ತರಣೆ

ಬೆಂಗಳೂರು: ಸರ್ಕಾರಿ ಜಮೀನುಗಳಲ್ಲಿ ಅನಧಿಕೃತ ಸಾಗುವಳಿ ನಡೆಸುತ್ತಿರುವವರಿಗೆ ಜಮೀನು ಸಕ್ರಮಗೊಳಿಸುವುದಕ್ಕಾಗಿ ಅರ್ಜಿ ಸಲ್ಲಿಸುವ ಕಾಲಾವಕಾಶವನ್ನು 2023ರ ಮೇ ಅಂತ್ಯದವರೆಗೆ ವಿಸ್ತರಿಸಲಾಗಿದೆ.

ಅರ್ಜಿಗಳನ್ನು https://landrecords.karnataka.gov.in ಮೂಲಕ ಸಲ್ಲಿಸಬಹುದು.

ಶಿಕ್ಷಣ ಇಲಾಖೆ ಹೆಸರು ಬದಲಾವಣೆ

ಬೆಂಗಳೂರು: ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಹೆಸರನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಎಂದು ಮರುನಾಮಕರಣ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಹೆಚ್ಚಿನ ರಾಜ್ಯಗಳಲ್ಲಿ 'ಶಾಲಾ ಶಿಕ್ಷಣ ಇಲಾಖೆ' ಎನ್ನುವ ಪದನಾಮ ರೂಢಿಯಲ್ಲಿದೆ. ಆದ್ದರಿಂದ, ರಾಜ್ಯದಲ್ಲಿಯೂ ಇದೇ ಮಾದರಿ ಅಳವಡಿಸಲು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಸೂಚಿಸಿದ್ದರು.

ರಾಯಚೂರು: 'ಕುಡಿವ ನೀರು ಕೂಲಂಕಷ ಪರೀಕ್ಷೆ'

ನವದೆಹಲಿ: ರಾಯಚೂರಿನಲ್ಲಿ ಅಶುದ್ಧ ನೀರು ಕುಡಿದು ಆರು ಮಂದಿ ಮೃತಪಟ್ಟ ಹಿನ್ನೆಲೆಯಲ್ಲಿ ಆ ನ ಗರದ ಕುಡಿಯುವ ನೀರು ಪೂರೈಕೆ ವ್ಯವಸ್ಥೆಯ ಕೂಲಂಕಷ ಪರೀಕ್ಷೆ ನಡೆಸಲು ಕರ್ನಾಟಕ ಸರ್ಕಾರ ತೀರ್ಮಾನಿಸಿದೆ.

ಕರ್ನಾಟಕ ಭವನದಲ್ಲಿ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿ, ಅಶುದ್ಧ ನೀರು ಪೂರೈಕೆಯಾಗುತ್ತಿದೆ ಎಂದು ರಾಯಚೂರು ನಗರದ ನಿವಾಸಿಗಳು ದೂರಿದ್ದಾರೆ. ಈ ಬಗ್ಗೆ ರಾಜ್ಯ ಕುಡಿಯುವ ನೀರು ಹಾಗೂ ಒಳಚರಂಡಿ ಮಂಡಳಿಯ ಮುಖ್ಯ ಎಂಜಿನಿಯರ್ ತನಿಖೆ ನಡೆಸುತ್ತಿದ್ದಾರೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಹಲವು ಸಭೆಗಳನ್ನು ನಡೆಸಿದ್ದೇನೆ. ಶೀಘ್ರದಲ್ಲಿ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ' ಎಂದರು.

'ಶುದ್ಧ ನೀರು ಪೂರೈಸಲು ಶುದ್ಧ ನೀರಿನ ಘಟಕ ಸ್ಥಾಪಿಸಲಾಗಿದೆ. ಅದರ ನಿರ್ವಹಣೆಯ ವಿಚಾರದಲ್ಲಿ ಸ್ಥಳೀಯ ಆಡಳಿತಕ್ಕೆ ಹೆಚ್ಚಿನ ಪರಿಣತಿ ಇಲ್ಲ. ಈ ಘಟಕವನ್ನು ಕರ್ನಾಟಕ ಕುಡಿಯುವ ನೀರು ಹಾಗೂ ಒಳಚರಂಡಿ ಮಂಡಳಿಗೆ ಶೀಘ್ರ ಹಸ್ತಾಂತರ ಮಾಡಲಾಗುತ್ತದೆ' ಎಂದರು.

ಗ್ರೇಡ್–1 ತಹಶೀಲ್ದಾರ್ ಜ್ಯೇಷ್ಠತಾ ಪಟ್ಟಿ ಪ್ರಕಟ

ಬೆಂಗಳೂರು: ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಗ್ರೇಡ್–1 ತಹಶೀಲ್ದಾರ್‌ಗಳ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಮಂಗಳವಾರ ಪ್ರಕಟಿಸಿದೆ.

ಬಿ.ಕೆ. ಪವಿತ್ರ ಮತ್ತು ಕೇಂದ್ರ ಸರ್ಕಾರದ ಮಧ್ಯದ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನ ಆಧಾರದಲ್ಲಿ ಗ್ರೇಡ್–2 ತಹಶೀಲ್ದಾರ್‌ಗಳ ಜ್ಯೇಷ್ಠತಾ ಪಟ್ಟಿಯನ್ನು ಪರಿಷ್ಕರಣೆ ಮಾಡಲಾಗಿದೆ. ಇದೇ ಮಾರ್ಚ್ 16 ರಂದು ಕರಡು ಪಟ್ಟಿಯನ್ನು ಪ್ರಕಟಿಸಲಾಗಿತ್ತು. 27 ಅಧಿಕಾರಿಗಳು ಈ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಿದ್ದರು. 22 ಆಕ್ಷೇಪಣೆಗಳನ್ನು ಮಾನ್ಯ ಮಾಡಿದ್ದು, ಐದು ಅಧಿಕಾರಿಗಳ ಆಕ್ಷೇಪಣೆಗಳನ್ನು ತಿರಸ್ಕರಿಸಲಾಗಿದೆ.

1992ರ ಜುಲೈ 1ರಿಂದ 2021ರ ಡಿಸೆಂಬರ್ 31ರ ಅವಧಿಗೆ ಅನ್ವಯವಾಗುವಂತೆ ಈ ಜ್ಯೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲಾಗಿದೆ. ಯಾವುದೇ ನ್ಯಾಯಾಲಯ ಹಾಗೂ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಬಾಕಿ ಇರುವ ಪ್ರಕರಣಗಳ ಅಂತಿಮ ತೀರ್ಪಿನ ವ್ಯಾಪ್ತಿಗೆ ಒಳಪಡುವ ಷರತ್ತಿನೊಂದಿಗೆ ಈ ಪಟ್ಟಿಯನ್ನು ಅಂತಿಮಗೊಳಿಸಲಾಗಿದೆ ಎಂದು ಇಲಾಖೆ ಆದೇಶದಲ್ಲಿ ತಿಳಿಸಿದೆ.

ಬಾರದ ಬಸ್: ರಸ್ತೆಯಲ್ಲೇ ಓದಿ ಪ್ರತಿಭಟನೆ


ಬಾದಿಮನಾಳ ಕ್ರಾಸ್‌ನಲ್ಲಿ ಶುಕ್ರವಾರ ವಿದ್ಯಾರ್ಥಿಗಳು ಬಸ್ ಸಂಚಾರಕ್ಕೆ ಆಗ್ರಹಿಸಿ ರಸ್ತೆಯಲ್ಲಿಯೇ ಪುಸ್ತಕ ಓದುತ್ತ ಕುಳಿತು ಪ್ರತಿಭಟನೆ ನಡೆಸಿದರು

ಹನುಮಸಾಗರ (ಕೊಪ್ಪಳ): ಬಸ್ ಸೌಲಭ್ಯಕ್ಕೆ ಆಗ್ರಹಿಸಿ ಕುಷ್ಟಗಿ ತಾಲ್ಲೂಕಿನ ಕೋನಾಪುರ, ಪರಮನಹಟ್ಟಿ ಗ್ರಾಮಗಳ 50 ಪ್ರೌಢಶಾಲಾ ವಿದ್ಯಾರ್ಥಿಗಳು ಶುಕ್ರವಾರ ಸಮೀಪದ ಬಾದಮನಾಳ ಕ್ರಾಸ್ ಬಳಿ ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್ ತಡೆದು, ಅದರ ಎದುರು ರಸ್ತೆಯಲ್ಲೇ ಕುಳಿತು ಓದುತ್ತ ಪ್ರತಿಭಟನೆ ನಡೆಸಿದರು.

'ನಿತ್ಯ 4 ಕಿ.ಮೀ. ನಡೆದು ಶಾಲೆಗೆ ಹೋಗಬೇಕಾಗಿದೆ. ಮಳೆಗಾಲದಲ್ಲಿ ನಡೆದುಕೊಂಡು ಹೋಗಲು ಕಷ್ಟವಾಗುತ್ತದೆ. ಶಾಲಾ ಸಮಯಕ್ಕೆ ಸರಿಯಾಗಿ ಸಂಚರಿಸುತ್ತಿದ್ದ ಬಸ್‌ನ್ನು ರದ್ದುಪಡಿಸಿದ್ದರಿಂದ ತುಂಬಾ ಸಮಸ್ಯೆಯಾಗಿದೆ' ಎಂದು ವಿದ್ಯಾರ್ಥಿಗಳು ದೂರಿದರು.

'ಮಳೆಯಲ್ಲಿ ನೆನೆದುಕೊಂಡೇ ನಾವು ಶಾಲೆಗೆ ಹೋಗುತ್ತಿದ್ದೇವೆ. ಪಠ್ಯಪುಸ್ತಕಗಳು ತೊಯ್ಯುತ್ತವೆ' ಎಂದು ವಿದ್ಯಾರ್ಥಿನಿ ಶರಣಮ್ಮ ಸಮಸ್ಯೆ ತೋಡಿಕೊಂಡಳು. ಇದಕ್ಕೆ ಇತರ ವಿದ್ಯಾರ್ಥಿಗಳೂ ದನಿಗೂಡಿಸಿದರು.

ಸ್ಥಳಕ್ಕೆ ಭೇಟಿ ನೀಡಿದ್ದ ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ಎಸ್. ಹನುಮಂತು, ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ಅಧಿಕಾರಿಗೆ ದೂರವಾಣಿ ಕರೆ ಮಾಡಿ, ವಿಷಯ ತಿಳಿಸಿದರು. ಶನಿವಾರದಿಂದ ಬಸ್ ಸೌಲಭ್ಯ ಕಲ್ಪಿಸುವ ಕುರಿತು ಅಧಿಕಾರಿಯಿಂದ ಭರವಸೆ ದೊರೆತ ಬಳಿಕ ವಿದ್ಯಾರ್ಥಿಗಳು ಪ್ರತಿಭಟನೆ ಕೈಬಿಟ್ಟರು.

ಎನ್‌ಎಂಡಿಸಿ ಲಿಮಿಟೆಡ್
ದೋಣಿಮಲೈಕಾಂಪ್ಲೆಕ್ಸ್,ಬಳ್ಳಾರಿಜಿಲ್ಲೆ, ಕರ್ನಾಟಕ

NMDC

ದಿನಾಂಕ: 24.06.2022

ಸೂಚನೆ

ತಮಗೆ ತಿಳಿದಿರುವಂತೆ ದಿನಾಂಕ 12.06.2022 ರಂದು ಎನ್‌ಎಂಡಿಸಿ ಲಿಮಿಟೆಡ್ ವತಿಯಿಂದ ದೋಣಿಮಲೈ ಸಂಕೀರ್ಣದಲ್ಲಿ ನೇಮಕಾತಿಗಾಗಿ ಉದ್ಯೋಗ ಅಧಿಸೂಚನೆಸಂಖ್ಯೆ 04/2022 ದಿನಾಂಕ 03.02.2022ರ ಅಡಿಯಲ್ಲಿ ಲಿಖಿತ ಪರೀಕ್ಷೆಗಳನ್ನು ನಡೆಸಲಾಗಿತ್ತು. ನಮಗೆ ಸಿಕ್ಕ ಮಾಹಿತಿಯ ಪ್ರಕಾರ ಕೆಲ ವಂಚಕರ ಜಾಲವು ಎನ್‌ಎಂಡಿಸಿ ಲಿಮಿಟೆಡ್ನಲ್ಲಿ ಉದ್ಯೋಗ ಕೊಡಿಸುವ ಆಮಿಷ ಒಡ್ಡಿ ಅಭ್ಯರ್ಥಿಗಳಿಂದ ಹಣ ಪಡೆದು ವಂಚಿಸುತ್ತಿರುವುದಾಗಿ ತಿಳಿದುಬಂದಿರುತ್ತದೆ. ಈ ಸಂಬಂಧವಾಗಿ ನೇಮಕಾತಿ ಪರೀಕ್ಷೆಗಳು ನ್ಯಾಯಯುತ ಮತ್ತು ಪಾರದರ್ಶಕವಾಗಿ ಲಿಖಿತ ಪರೀಕ್ಷೆಯನ್ನು ನಡೆಸಲಾಗಿದೆ ಎಂದು ತಿಳಿಸಲು ಎನ್‌ಎಂಡಿಸಿ ಬದ್ಧವಾಗಿದೆ. ಈ ಪರೀಕ್ಷೆಗಳಲ್ಲಿ ಲಿಖಿತ ಉತ್ತರಗಳ ಮೌಲ್ಯಮಾಪನವನ್ನು ಕಂಪ್ಯೂಟರ್ ಮೂಲಕ ಮಾಡಲಾಗುತ್ತದೆ ಮತ್ತು ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೆರಿಟ್ ಪಟ್ಟಿಯ ಆಧಾರದ ಮೇಲೆ ಮಾತ್ರ ಆಯ್ಕೆ ಮಾಡಲಾಗುತ್ತದೆ.

ಆದ್ದರಿಂದ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳು ಇಂತಹ ಮೋಸ ಜಾಲದ ಮತ್ತು ಉದ್ಯೋಗ ದಂಧೆಕೋರರ ಬಗ್ಗೆ ಎಚ್ಚರದಿಂದಿರಬೇಕು ಹಾಗು ಅಂತವರ ಬಲೆಗೆ ಬಿದ್ದು ವಂಚನೆಗೆ ಬಲಿಯಾಗಬಾರದೆಂದು ಈ ಮೂಲಕ ತಿಳಿಸಲಾಗಿದೆ.

ಅಭ್ಯರ್ಥಿಗಳು ಅಂತಹ ಪ್ರಚೋದನೆಗಳ ಬಗ್ಗೆ ತಿಳಿದರೆ ತಕ್ಷಣವೇ ಸ್ಥಳೀಯ ಪೊಲೀಸ್ ಠಾಣೆಗೆ ಅಥವಾ ಎನ್‌ಎಂಡಿಸಿ ಜಾಲತಾಣದಲ್ಲಿ ಲಭ್ಯವಿರುವ ಎನ್‌ಎಂಡಿಸಿ ನಿರ್ವಹಣೆಯ ಉನ್ನತ ಅಧಿಕಾರಿಗಳಿಗೆ ಲಿಖಿತವಾಗಿ ಅಥವಾ ಮೌಖಿಕವಾಗಿ ಅಥವಾ ಇಮೇಲ್ ಮುಖಾಂತರ ತಿಳಿಸಬೇಕು.

ಎನ್‌ಎಂಡಿಸಿ ನಿರ್ವಹಣೆಯಮುಖಾಂತರಹೊರಡಿಸಲಾಗಿದೆ

ಭಾರತೀಯ ಸ್ಟೇಟ್ ಬ್ಯಾಂಕ್
ಅರೆಕೆರೆ ಶಾಖೆ, ಬೆಂಗಳೂರು ನಗರ ಜಿಲ್ಲೆ

ಕೆಳಕಂಡ ವ್ಯಕ್ತಿಗಳು ಕೆಳಗೆ ಉಲ್ಲೇಖಿಸಲಾಗಿರುವ ಭಾರತೀಯ ಸ್ಟೇಟ್ ಬ್ಯಾಂಕ್‌ನ ಶಾಖೆಗಳಲ್ಲಿ ತಮ್ಮ ಚಿನ್ನಾಭರಣಗಳನ್ನು ಅಡಮಾನ ನೀಡಿರುತ್ತಾರೆ ಮತ್ತು ಅವರವರ ಹೆಸರಿನ ಎದುರಿನಲ್ಲಿ ನಮೂದಿಸಲಾಗಿರುವ ಸಾಲಗಳನ್ನು ಪಡೆದುಕೊಂಡಿರುತ್ತಾರೆ. ಆಯಾ ಸಾಲಗಾರರಿಗೆ ರವಾನಿಸಲಾಗಿದ್ದ ನೋಟಿಸ್‌ಗಳು ಬಟವಾಡೆಗೊಳ್ಳದೆ/ತಿರಸ್ಕೃತಗೊಂಡು ಮರಳಿ ಬಂದಿರುತ್ತವೆ. ಸಾಲಗಳು ಕೂಡ ಮರುಪಾವತಿ ಆಗಿರುವುದಿಲ್ಲ. ಆದ್ದರಿಂದ, ಕೆಳಕಂಡ ಚಿನ್ನಾಭರಣಗಳನ್ನು **29-06-2022** ರಂದು ಹರಾಜು ಹಾಕಲಾಗುತ್ತಿದೆ.

ಕ್ರ. ಸಂ.	ಶಾಖೆಯ ಹೆಸರು ಮತ್ತು ವಿಳಾಸ	ಸಾಲಗಾರರ ಹೆಸರು	ಸಾಲಗಾರರ ವಿಳಾಸ	ಲೋನ್ ಅಕೌಂಟ್ ನಂಬರ್	ಸಾಲ ನೀಡಿರುವ ದಿನಾಂಕ	ಚಿನ್ನಾಭರಣಗಳ ಒಟ್ಟು ತೂಕ	ಬಡ್ಡಿ ಹೊರತುಪಡಿಸಿದಂತೆ ಬಾಕಿಮೊತ್ತ (ರೂ.ಗಳಲ್ಲಿ)
1.	ಎಸ್‌ಬಿಐ ಅರೆಕೆರೆ (18346), ಶ್ರೀನಿಧಿ ಪ್ಯಾರಾಡೈಸ್ ಜಿ-2, ನಂ. 754/86, ಹುಳಿಮಾವು, ಬನ್ನೇರಘಟ್ಟ ರಸ್ತೆ, ಬೆಂಗಳೂರು 560076	ಶಿವಪ್ರಸಾದ್ ಎಂ ಎನ್	ನಂ. 24/1ಬಿ,1ನೇ ಅಡ್ಡರಸ್ತೆ ಜೆಪಿಎಲ್ ಪುರಂ ಮೈಸೂರು ಕರ್ನಾಟಕ-12	39960955245	25.01.2021	55.00 ಗ್ರಾಮ್	250030/-
2.		ಸ್ವಾತಿ ಅಶೋಕ್ ರಾಠೋಡ	ಕೋಂ. ಜಿ ವಿ ಶೈಲೇಂದ್ರ ಸಿಂಗ್ 31 ಜಿಎಂ ಕಾಂಪ್ಲೆಕ್ಸ್ ಮೇದಾರಪೇಟೆ ಬೆಂಗಳೂರು ಉತ್ತರ ಒ ಕೆ ರೋಡ್ ಕ್ರಾಸ್ ಬೆಂಗಳೂರು ಕರ್ನಾಟಕ -02	39901643699	30.12.2020	44.00 ಗ್ರಾಮ್	203940/-

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕೆಳಕಂಡ ಷರತ್ತು ಮತ್ತು ನಿಬಂಧನೆಗಳ ಮೇರೆಗೆ ಆಯಾ ಶಾಖೆಯ ಪ್ರಾಂಗಣದಲ್ಲಿಯೇ 29-06-2022 ರಂದು ಬೆಳಗ್ಗೆ 11:00 ಗಂಟೆಗೆ, ಮೇಲೆ ಉಲ್ಲೇಖಿಸಲಾಗಿರುವ ಚಿನ್ನಾಭರಣಗಳನ್ನು ಸಾರ್ವಜನಿಕ ಹರಾಜಿನ ಮುಖಾಂತರ ಮಾರಾಟ ಮಾಡಲಾಗುತ್ತದೆ.

ಷರತ್ತು ಮತ್ತು ನಿಬಂಧನೆಗಳು

1. ಆಸಕ್ತಿಯುಳ್ಳ ಪಕ್ಷಗಾರರು ಜೂನ್ 27 ರೊಳಗಾಗಿ ರೂ. 1000/- (ಒಂದು ಸಾವಿರ ಮಾತ್ರ) ಭದ್ರತಾ ಠೇವಣಿ ಪಾವತಿಸತಕ್ಕದ್ದು. ಯಶಸ್ವಿ ಬಿಡ್‌ದಾರರ ಈ ಠೇವಣಿಯನ್ನು ಮಾರಾಟ ಇತ್ಯರ್ಥಗೊಂಡ ಬಳಿಕ, ಅವರ ಮಾರಾಟ ಮೌಲ್ಯದಲ್ಲಿ ಹೊಂದಾಣಿಕೆ ಮಾಡಲಾಗುತ್ತದೆ. ಇನ್ನಿತರರಿಗೆ ಬಡ್ಡಿರಹಿತವಾಗಿ ಹಿಂದಿರುಗಿಸಲಾಗುತ್ತದೆ.
2. ಯಶಸ್ವಿ ಬಿಡ್‌ದಾರರು, ಮಾರಾಟ ಇತ್ಯರ್ಥಗೊಂಡ ತಕ್ಷಣ ಸ್ಥಳದಲ್ಲಿಯೇ ಆಭರಣಗಳ ಬೆಲೆಯ 50% ಮೊಬಲಗನ್ನು ಪಾವತಿಸತಕ್ಕದ್ದು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ, ಇನ್ನುಳಿದ ಮೊತ್ತವನ್ನು ಹರಾಜು ದಿನಾಂಕದಿಂದ ಒಂದು ವಾರದೊಳಗೆ ಪಾವತಿಸಬೇಕು, ಇಲ್ಲವಾದಲ್ಲಿ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಮತ್ತು ಸಂಪೂರ್ಣ ಬಿಡ್ ಮೊತ್ತವನ್ನು ಪಾವತಿಸಿದ ಬಳಿಕವಷ್ಟೇ ಆಭರಣಗಳನ್ನು ನೀಡಲಾಗುತ್ತದೆ.
3. ಆಸಕ್ತಿಯುಳ್ಳ ಬಿಡ್‌ದಾರರು ಹರಾಜಿಗಿಂತ ಎರಡು ಗಂಟೆ ಮುಂಚೆ ಆಭರಣಗಳನ್ನು ಪರೀಕ್ಷಿಸಬಹುದು.
4. ಎಲ್ಲಿದೆಯೊ ಹೇಗಿದೆಯೊ ಆಧಾರದಲ್ಲಿ ಹರಾಜು ಕೈಗೊಳ್ಳಲಾಗುತ್ತದೆ ಮತ್ತು ಆಭರಣಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಬ್ಯಾಂಕ್ ಹೊಣೆಯಾಗಿರುವುದಿಲ್ಲ.
5. ಯಾವುದೇ ಕಾರಣ ನೀಡದೆಯೇ ಸದರಿ ಹರಾಜನ್ನು ರದ್ದುಪಡಿಸುವ ಅಥವಾ ಮುಂದೂಡುವ ಹಕ್ಕು ಬ್ಯಾಂಕ್‌ನದ್ದಾಗಿರುತ್ತದೆ.
6. ಯಾವುದೇ ಕಾರಣ ನೀಡದೆಯೇ ಯಾವುದೇ ಬಿಡ್ ಸ್ವೀಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ. ಆದ್ದರಿಂದ, ಈ ಕುರಿತಂತೆ ಬ್ಯಾಂಕ್‌ನ ನಿರ್ಧಾರವೇ ಅಂತಿಮ ನಿರ್ಧಾರವಾಗಿರುತ್ತದೆ.
7. ದಯವಿಟ್ಟು ಗಮನಿಸಿ, ಇನ್ನಿತರ ಎಲ್ಲಾ ವಿಷಯಗಳಲ್ಲಿ ಬ್ಯಾಂಕ್‌ನ ನಿರ್ಧಾರವೇ ಅಂತಿಮ ನಿರ್ಧಾರವಾಗಿರುತ್ತದೆ ಮತ್ತು ಈ ಕುರಿತಂತೆ ಯಾವುದೇ ಪತ್ರ ವ್ಯವಹಾರಗಳಿಗೆ ಅವಕಾಶವಿರುವುದಿಲ್ಲ.
8. ಸದರಿ ಹರಾಜಿನಲ್ಲಿ ಪಾಲ್ಗೊಳ್ಳುವ ವ್ಯಕ್ತಿಗಳು, ತಾವು ಮೇಲಿನ ನಿಬಂಧನೆಗಳಿಗೆ ಬದ್ಧರಾಗಿದ್ದೇವೆ ಎಂಬುದನ್ನು ಖಚಿತಪಡಿಸುವುದಕ್ಕಾಗಿ, ಹರಾಜು ಆರಂಭವಾಗುವುದಕ್ಕೂ ಮುನ್ನವೇ, ಕಡ್ಡಾಯವಾಗಿ ರಜಿಸ್ಟರ್‌ನಲ್ಲಿ ತಮ್ಮ ಸಹಿ ಹಾಕತಕ್ಕದ್ದು.

ದಿನಾಂಕ: 25-06-2022 ಸಹಿ/- ಶಾಖಾ ಪ್ರಬಂಧಕರು

ಸ್ಥಳ: ಬೆಂಗಳೂರು ಎಸ್‌ಬಿಐ, ಶಾಖೆ ಅರೆಕೆರೆ, ಬೆಂಗಳೂರು ನಗರ ಜಿಲ್ಲೆ

ಸಾರ್ವಜನಿಕ ಪಕ್ರಟಣೆ

ಷೆಡ್ಯೂಲ್ ಪ್ರಾಪರ್ಟಿಗಳನ್ನು ಒಳಗೊಂಡಿರುವ ಒಂದು ಉದ್ದೇಶಿತ ವ್ಯವಹಾರ ದೃಷ್ಟಿಯಿಂದ ಶ್ರೀ. ರಾಜಸೇಖರನ್ ಎಸ್ ("ಮಾಲೀಕರು") ಎಂಬುವರ, ಇಲ್ಲಿ ಕೆಳಗಿನ ಷೆಡ್ಯೂಲ್‌ನಲಿ ಹೆಚ್ಚು ಸ್ಪಷ್ಟವಾಗಿ ಉಲ್ಲೇಖಿಸಲಾಗಿರುವ (**"ಷೆಡ್ಯೂಲ್ ಪ್ರಾಪರ್ಟೀಸ್"**) ಭೂಭಾಗಗಳು ಮತ್ತು ಅವುಗಳಲ್ಲಿರುವ ರಚನೆಗಳಿಗೆ ಸಂಬಂಧಪಟ್ಟಂತೆ ಅವರ ಹಕ್ಕುಗಳನ್ನು ನಾವು ಪರಿಶೀಲಿಸುತ್ತಿದ್ದೇವೆ. ಉಲ್ಲೇಖಿತ ಮಾಲಿಕರು ತಾವೇ ಸದರಿ **ಷೆಡ್ಯೂಲ್ ಪ್ರಾಪರ್ಟಿ** ಸಂಪೂರ್ಣ ಮತ್ತು ಪರಿಪೂರ್ಣ ಮಾಲೀಕರು ಎಂದು ಪ್ರತಿನಿಧಿಸುತ್ತಿದ್ದು, ಅವುಗಳನ್ನು ಸಹಜವಾಗಿ ಉಪಭೋಗಿಸುತ್ತಿದ್ದೇನೆ ಮತ್ತು ಅವುಗಳು ಯಾವುದೇ ಅಡೆತಡೆ ಇಲ್ಲದೆ ನನ್ನ ಸ್ವಾಧೀನತೆಯಲ್ಲಿವೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಒಂದು ವೇಳೆ, ಸದರಿ ಷೆಡ್ಯೂಲ್ ಪ್ರಾಪರ್ಟಿಸ್ ಅಥವಾ ಪ್ರಾಪರ್ಟಿಗಳ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ, ಯಾವುದೇ ವ್ಯಕ್ತಿಯು ಮಾರಾಟ, ವರ್ಗಾವಣೆ, ವಿನಿಮಯ, ಅಸೈನ್‌ಮೆಂಟ್, ಉಯಿಲು, ಬಿಡುಗಡೆ, ರೆಲಿಂಕ್ವಿಶ್‌ಮೆಂಟ್, ಡಿಕ್ರಿ ಅಥವಾ ಯಾವುದೇ ನ್ಯಾಯಾಲಯದ ಆದೇಶ, ಋಣಭಾರ, ಅಡಮಾನ, ಭೋಗ್ಯ, ಲೀನ್, ಚಾರ್ಜ್, ನಿರ್ವಹಣೆ, ಪರವಾನಗಿ, ಉಡುಗೊರೆ, ಅನುವಂಶಿಕ, ಅವಿಭಜಿತ ಪಾಲುದಾರಿಕೆ, ಸ್ವಾಧೀನತೆ, ಈಸ್‌ಮೆಂಟ್, ಟ್ರಸ್ಟ್, ಬಿಕ್ವೆಸ್ಟ್, ಉಪ–ಭೋಗ್ಯ, ಬಾಡಿಗೆ, ಉಪ–ಬಾಡಿಗೆ, ಲೀವ್ & ಲೈಸನ್ಸ್, ಲಿಸ್‌ಪೆಂಡೆನ್ಸ್, ಆಯ್ಕೆಗಲು, ಮೊದಲ ತಿರಸ್ಕಾರದ ಹಕ್ಕು ಅಥವಾ ಪ್ರಿಯೆಂಪ್ಷನ್ ಅಥವಾ ಯಾವುದೇ ಸ್ವರೂಪದ ಋಣಭಾರ ಅಥವಾ ಇನ್ನಾವುದಾದರೂ ಹೊಣೆಗಾರಿಕೆ ಅಥವಾ ಯಾವುದೇ ಒಪ್ಪಂದದ ಅಡಿಯಲ್ಲಿ, ಡೀಡ್, ಡಾಕ್ಯೂಮೆಂಟ್ ಅಥವಾ ಪವರ್ ಆಫ್ ಅಟಾರ್ನಿ ಅಥವಾ ಯಾವುದೇ ರೀತಿಯ ತಂಟೆ ತಕರಾರು ರೂಪದಲ್ಲಿ ಹಕ್ಕು, ಬಾದ್ಯತೆ, ಕ್ಲೇಮ್, ಬೆನೆಫಿಟ್, ಡಿಮಾಂಡ್ ಅಥವಾ ಹಿತಾಸಕ್ತಿ ಹೊಂದಿದ್ದಲ್ಲಿ, ಅಂತಹವರು ತಮ್ಮ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ, ನೋಟರಿಕೃತ/ಪ್ರಮಾಣಿಕೃತ ಪೂರಕ ದಾಖಲಾತಿಗಳ ಸಮೇತ, ಇಲ್ಲಿ ಕೆಳಗೆ ಸಹಿ ಹಾಕಿರುವವರ ವಿಳಾಸಕ್ಕೆ ಸದರಿ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ 14 (ಹದಿನಾಲ್ಕು) ದಿನಗಳೊಳಗೆ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ, ಸದರಿ ಷೆಡ್ಯೂಲ್ ಸ್ವತ್ತುಗಳ ಹಕ್ಕುಗಳು ಸ್ಪಷ್ಟವಾಗಿವೆ, ಅಧಿಕೃತವಾಗಿದೆ ಮತ್ತು ವ್ಯಾಪಾರಕ್ಕೆ ಯೋಗ್ಯವಾಗಿವೆ ಹಾಗೂ ಸದರಿ ಷೆಡ್ಯೂಲ್ ಪ್ರಾಪರ್ಟಿಗಳ ಮೇಲೆ ಯಾವುದೇ ಅನ್ಯ ವ್ಯಕ್ತಿಯ ಯಾವುದೇ ಹಕ್ಕು/ಬಾದ್ಯತೆ/ಹಿತಾಸಕ್ತಿ/ಕ್ಲೇಮ್/ಡಿಮಾಂಡ್‌ಗಳು ಇರುವುದಿಲ್ಲವೆಂದು ಪರಿಭಾವಿಸಲಾಗುತ್ತದೆ. ಪೂರಕ ದಾಖಲಾತಿಗಳು ಇಲ್ಲದಿರುವ ಕ್ಲೇಮ್‌ಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್

(ಷೆಡ್ಯೂಲ್ ಪ್ರಾಪರ್ಟಿಸ್ ವಿವರ)

ಗಂಗಾಪುರ ಗ್ರಾಮ, ನಂದಗುಡಿ ಹೋಬಳಿ, ಹೊಸಕೋಟೆ ತಾಲ್ಲೂಕು ವಿಳಾಸದಲ್ಲಿ ಸ್ಥಿತಗೊಂಡಿರುವ ಸರಾಸರಿ 14 ಎಕರೆ 5 ಗುಂಟೆ ವಿಸ್ತೀರ್ಣವುಳ್ಳ ಜಮೀನು ಮತ್ತು ಅದರಲ್ಲಿ ನಿರ್ಮಿಸಲಾಗಿರುವ ರಚನೆಗಳು. ಜಮೀನಿನ ವಿವರ ಕೆಳಗಿನಂತಿರುತ್ತದೆ:

ಕ್ರ.ಸಂ.	ಸರ್ವೆ ನಂಬರ್	ಮಾಲಿಕರ ಒಡೆತನದಲ್ಲಿರುವ ವಿಸ್ತೀರ್ಣ (ಎಕರೆ – ಗುಂಟೆ)
1.	4/1	1 ಎಕರೆ 9 ಗುಂಟೆ
2.	61/1	1 ಎಕರೆ 18 ಗುಂಟೆ
3.	61/3	1 ಎಕರೆ 18 ಗುಂಟೆ
4.	58/1	2 ಎಕರೆ 20 ಗುಂಟೆ
5.	58/2	2 ಎಕರೆ 20 ಗುಂಟೆ
6.	59	5 ಎಕರೆ
	ಒಟ್ಟು	14 ಎಕರೆ 5 ಗುಂಟೆ

ಸದರಿ ಷೆಡ್ಯೂಲ್ ಸ್ವತ್ತುಗಳ ಚಕ್ಕುಬಂದಿ:

1. ಸರ್ವೆ ನಂ. 4/1 ರಲ್ಲಿರುವ 1 ಎಕರೆ 9 ಗುಂಟೆ ವಿಸ್ತೀರ್ಣವುಳ್ಳ ಜಮೀನು
ಪೂರ್ವಕ್ಕೆ: ಚಿನ್ನಪ್ಪನವರಿಗೆ ಸಂಬಂಧಿತ ಜಮೀನು;
ಪಶ್ಚಿಮಕ್ಕೆ: ಚಿಕ್ಕಪ್ಪಯ್ಯನವರಿಗೆ ಸಂಬಂಧಿತ ಜಮೀನು;
ಉತ್ತರಕ್ಕೆ: ಚಿಕ್ಕಪ್ಪಯ್ಯನವರಿಗೆ ಸಂಬಂಧಿತ ಜಮೀನು; ಮತ್ತು
ದಕ್ಷಿಣಕ್ಕೆ: ನಾರಾಯಣಪ್ಪನವರಿಗೆ ಸಂಬಂಧಿತ ಜಮೀನು.

2. ಸರ್ವೆ ನಂ. 61/1 ರಲ್ಲಿರುವ 1 ಎಕರೆ 18 ಗುಂಟೆ ವಿಸ್ತೀರ್ಣವುಳ್ಳ ಜಮೀನು
ಪೂರ್ವಕ್ಕೆ: ಸರ್ವೆ ನಂ. 3 ರಲ್ಲಿರುವ ಜಮೀನು;
ಪಶ್ಚಿಮಕ್ಕೆ: ಸುನಿತಾ ಶೆಟ್ಟಿ ರವರಿಗೆ ಸಂಬಂಧಿತ ಜಮೀನು;
ಉತ್ತರಕ್ಕೆ: ಜಿ.ಟಿ.ಗೌಡ ರವರಿಗೆ ಸಂಬಂಧಿತ ಜಮೀನು; ಮತ್ತು
ದಕ್ಷಿಣಕ್ಕೆ: ಗೌರಮ್ಮನವರಿಗೆ ಸಂಬಂಧಿತ ಜಮೀನು.

3. ಸರ್ವೆ ನಂ. 61/3 ರಲ್ಲಿರುವ 1 ಎಕರೆ 18 ಗುಂಟೆ ವಿಸ್ತೀರ್ಣವುಳ್ಳ ಜಮೀನು
ಪೂರ್ವಕ್ಕೆ: ಸರ್ವೆ ನಂ. 61/1 ರಲ್ಲಿರುವ ಜಮೀನು;
ಪಶ್ಚಿಮಕ್ಕೆ: ಚಿಕ್ಕಪ್ಪಯ್ಯ ರವರಿಗೆ ಸಂಬಂಧಿತ ಜಮೀನು;
ಉತ್ತರಕ್ಕೆ: ಸರ್ವೆ ನಂ. 61/2 ರಲ್ಲಿರುವ ಜಮೀನು; ಮತ್ತು
ದಕ್ಷಿಣಕ್ಕೆ: ಚಿನ್ನಪ್ಪ ರವರಿಗೆ ಸಂಬಂಧಿತ ಜಮೀನು.

4. ಸರ್ವೆ ನಂ. 58/1 ರಲ್ಲಿರುವ 2 ಎಕರೆ 20 ಗುಂಟೆ ವಿಸ್ತೀರ್ಣವುಳ್ಳ ಜಮೀನು
ಪೂರ್ವಕ್ಕೆ: ಖಾಸಗಿ ಸ್ವತ್ತು;
ಪಶ್ಚಿಮಕ್ಕೆ: ಖಾಸಗಿ ಸ್ವತ್ತು;
ಉತ್ತರಕ್ಕೆ: ಖಾಸಗಿ ಸ್ವತ್ತು; ಮತ್ತು
ದಕ್ಷಿಣಕ್ಕೆ: ರಸ್ತೆ.

5. ಸರ್ವೆ ನಂ. 58/2 ರಲ್ಲಿರುವ 2 ಎಕರೆ 20 ಗುಂಟೆ ವಿಸ್ತೀರ್ಣವುಳ್ಳ ಜಮೀನು
ಪೂರ್ವಕ್ಕೆ: ಖಾಸಗಿ ಸ್ವತ್ತು;
ಪಶ್ಚಿಮಕ್ಕೆ: ಖಾಸಗಿ ಸ್ವತ್ತು;
ಉತ್ತರಕ್ಕೆ: ಖಾಸಗಿ ಸ್ವತ್ತು; ಮತ್ತು
ದಕ್ಷಿಣಕ್ಕೆ: ರಸ್ತೆ.

6. ಸರ್ವೆ ನಂ. 59 ರಲ್ಲಿರುವ 5 ಎಕರೆ ವಿಸ್ತೀರ್ಣವುಳ್ಳ ಜಮೀನು
ಪೂರ್ವಕ್ಕೆ: ಕೊಂಡಪ್ಪ ನವರಿಗೆ ಸಂಬಂಧಿತ ಜಮೀನು;
ಪಶ್ಚಿಮಕ್ಕೆ: ಸರ್ವೆ ನಂ. 58 ರಲ್ಲಿರುವ ಜಮೀನು;
ಉತ್ತರಕ್ಕೆ: ಸರ್ವೆ ನಂ. 60 ರಲ್ಲಿರುವ ಜಮೀನು; ಮತ್ತು
ದಕ್ಷಿಣಕ್ಕೆ: ರಸ್ತೆ.

ದಿನಾಂಕ: 25.06.2022
ಸ್ಥಳ : ಬೆಂಗಳೂರು

ನಮ್ರತ ಕೋಲಾರ್
ಪಾಲುದಾರರು
ಸಿರಿಲ್ ಅಮರಚಂದ್ ಮಂಗಲದಾಸ್
3ನೇ ಮಹಡಿ, ಪೆಸ್ಟೀಜ್ ಫಾಲ್ಕನ್ ಟವರ್ಸ್
19, ಬ್ರಂಟನ್ ರೋಡ್, ಎಂ.ಜಿ.ರೋಡ್ ಪಕ್ಕ
ಬೆಂಗಳೂರು – 560 025



ಸುಭಾಷಿತ

ಪರಿಪೂರ್ಣ ಆರೋಗ್ಯ, ಪ್ರಾಮಾಣಿಕತೆ, ನೇರ ನಡೆನುಡಿ, ಧೈರ್ಯ, ನಿಸ್ವಾರ್ಥ, ತಾಳ್ಮೆ, ಪರಿಶ್ರಮ, ಸ್ವನಿಯಂತ್ರಣ... ಎಲ್ಲವೂ ಸುಂದರವಾದ ಭಾಷಣಗಳಿಗಿಂತ ಉದಾಹರಣೆಯ ಮೂಲಕ ಕಲಿಸಬೇಕಾದ ಸಂಗತಿಗಳು.

-ಶ್ರೀ ಅರವಿಂದೊ

ಬಿಬಿಎಂಪಿ ವಾರ್ಡ್ ಮರುವಿಂಗಡಣೆ ಕ್ರಮಬದ್ಧವಾಗಿ ಪೂರ್ಣಗೊಳ್ಳಲಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಾರ್ಡ್‌ಗಳ ಮರುವಿಂಗಡಣೆ ಸಲುವಾಗಿ ಸಮಿತಿ ರಚಿಸಿದ 20 ತಿಂಗಳ ಬಳಿಕ ಸರ್ಕಾರವು ಪರಿಷ್ಕೃತ ವಾರ್ಡ್‌ಗಳ ವ್ಯಾಪ್ತಿಯ ಮಾಹಿತಿಯುಳ್ಳ ಕರಡನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿದೆ. ಬೆಂಗಳೂರಿನ ಗಡಿಯಿಂದ ಒಂದು ಕಿಲೊಮೀಟರ್‌ವರೆಗಿನ ಗ್ರಾಮಗಳನ್ನು ಸೇರಿಸಿಕೊಂಡು ಬಿಬಿಎಂಪಿಯ ವ್ಯಾಪ್ತಿಯನ್ನು ವಿಸ್ತರಿಸಲು ಹಾಗೂ ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 243ಕ್ಕೆ ಹೆಚ್ಚಿಸಲು ನಗರಾಭಿವೃದ್ಧಿ ಇಲಾಖೆಯು 2020ರ ಅಕ್ಟೋಬರ್‌ನಲ್ಲಿ ಅಧಿಸೂಚನೆ ಹೊರಡಿಸಿತ್ತು. ವಾರ್ಡ್ ಮರುವಿಂಗಡಣೆ ವೇಳೆ ಹೊಸತಾಗಿ ಸೇರಿಸಿಕೊಳ್ಳುವ ಪ್ರದೇಶಗಳ ಬಗ್ಗೆ ಶಿಫಾರಸು ಮಾಡಲು ಬಿಬಿಎಂಪಿ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿಯನ್ನೂ ರಚಿಸಿತ್ತು. ಬಿಬಿಎಂಪಿ ಗಡಿಗೆ ತಾಗಿಕೊಂಡಿದ್ದ ಕೆಲವು ಗ್ರಾಮಗಳಿಂದ ಈ ಕುರಿತು ಅರ್ಜಿಗಳನ್ನೂ ಸ್ವೀಕರಿಸಲಾಗಿತ್ತು. ಆದರೆ, ಈಗ ಪ್ರಕಟಿಸಿರುವ ಕರಡುವಿನಲ್ಲಿ ಬಿಬಿಎಂಪಿ ವ್ಯಾಪ್ತಿಯನ್ನು ಈಗಿರುವಷ್ಟೇ ಉಳಿಸಿಕೊಳ್ಳಲಾಗಿದೆ. 2011ರ ಜನಗಣತಿ ಪ್ರಕಾರ, ಬಿಬಿಎಂಪಿ ವ್ಯಾಪ್ತಿಯ ಜನಸಂಖ್ಯೆ 84,43,675 ಇತ್ತು. ಈ ಜನಸಂಖ್ಯೆಯನ್ನೇ ಆಧರಿಸಿ ವಾರ್ಡ್‌ಗಳ ಮರುವಿಂಗಡಣೆ ಮಾಡಲಾಗಿದೆ. ವಾರ್ಡ್‌ಗಳ ಜನಸಂಖ್ಯೆ ಒಂದೇ ರೀತಿ ಇರಲಿಲ್ಲ. ಆ ಅಸಮಾನತೆಯನ್ನು ಈಗ ಸರಿಪಡಿಸಲಾಗಿದೆ ಎಂದು ಸರ್ಕಾರ ತಿಳಿಸಿದೆ. ಅಚ್ಚರಿಯೆಂದರೆ, 2011ರ ಜನಗಣತಿ ಆಧಾರದಲ್ಲಿ ಬಿಬಿಎಂಪಿಯ 198 ವಾರ್ಡ್‌ಗಳ ಮರುವಿಂಗಡಣೆಯನ್ನು 2020ರಲ್ಲೂ ಮಾಡಲಾಗಿತ್ತು. 2020ರ ಮಾರ್ಚ್‌ನಲ್ಲಿ ಈ ಬಗ್ಗೆ ಕರಡು ಅಧಿಸೂಚನೆ ಪ್ರಕಟಿಸಿದ್ದ ಸರ್ಕಾರ, ಸಾರ್ವಜನಿಕರಿಂದ ಆಕ್ಷೇಪ ಹಾಗೂ ಸಲಹೆಗಳನ್ನು ಆಹ್ವಾನಿಸಿ 2020ರ ಜೂನ್‌ನಲ್ಲಿ ರಾಜ್ಯಪತ್ರದಲ್ಲಿ ಅಂತಿಮ ಅಧಿಸೂಚನೆಯನ್ನೂ ಪ್ರಕಟಿಸಿತ್ತು. 'ವಾರ್ಡ್‌ಗಳ ನಡುವೆ ಇದ್ದ ಅಸಮಾನತೆಯನ್ನು ನಿವಾರಿಸಿದ್ದೇವೆ' ಎಂದು ಸರ್ಕಾರ ಆಗಲೂ ಹೇಳಿಕೊಂಡಿತ್ತು. ಆದರೆ, ಆ ನಿರ್ಧಾರ ಜಾರಿ ಆಗದ ಕಾರಣ ವಾರ್ಡ್‌ಗಳ ಮರುವಿಂಗಡಣೆ ಸಲುವಾಗಿ 2020ರಲ್ಲಿ ನಡೆಸಲಾಗಿದ್ದ ಅಷ್ಟೂ ಕಸರತ್ತು ವ್ಯರ್ಥವಾಗಿತ್ತು. ಅದಾಗಿ ಎರಡು ವರ್ಷಗಳಲ್ಲಿ ವಾರ್ಡ್‌ಗಳ ಮರುವಿಂಗಡಣೆಯ ಮತ್ತೊಂದು ಕರಡು ಪ್ರಕಟವಾಗಿದೆ. ವಾರ್ಡ್‌ಗಳ ಒಟ್ಟು ಸಂಖ್ಯೆ 198ರಿಂದ 243ಕ್ಕೆ ಹೆಚ್ಚಳವಾಗಿರುವುದರಿಂದ ಬಹುತೇಕ ವಾರ್ಡ್‌ಗಳ ಗಡಿಗಳು ಮತ್ತೆ ಬದಲಾಗಿವೆ. ಕೆಲವು ವಾರ್ಡ್‌ಗಳ ಹೆಸರುಗಳು ಬದಲಾಗಿವೆ. ಅಷ್ಟನ್ನು ಹೊರತುಪಡಿಸಿದರೆ ಆಡಳಿತಾತ್ಮಕ ದೃಷ್ಟಿಯಿಂದ ಮಹತ್ತರ ಬದಲಾವಣೆಗಳೇನೂ ಕಾಣಿಸುತ್ತಿಲ್ಲ. ವಾರ್ಡ್ ಮರುವಿಂಗಡಣೆಯ ಕಸರತ್ತು ನಡೆಸಿದ್ದೇ ಬಿಬಿಎಂಪಿ ಚುನಾವಣೆ ಮುಂದೂಡುವುದಕ್ಕೆ ಎಂಬುದು ಇದರಿಂದ ಸ್ಪಷ್ಟ.



ಆಡಳಿತ ಸುಧಾರಣೆಯ ಉದ್ದೇಶದಿಂದ ಕೈಗೊಳ್ಳುವ ಇಂತಹ ಕಾರ್ಯಗಳು ವೈಜ್ಞಾನಿಕವಾಗಿ ಇರುವಂತೆ ನೋಡಿಕೊಳ್ಳಬೇಕಾದುದು ಸರ್ಕಾರದ ಕರ್ತವ್ಯ

ಬಿಬಿಎಂಪಿ ಚುನಾವಣೆ ನಡೆಸಲು ಎಂಟು ವಾರಗಳೊಳಗೆ ಅಧಿಸೂಚನೆ ಹೊರಡಿಸಬೇಕು ಎಂದು ಸುಪ್ರೀಂ ಕೋರ್ಟ್ ಕಳೆದ ತಿಂಗಳು ನಿರ್ದೇಶನ ನೀಡಿದ್ದರಿಂದ ಸರ್ಕಾರ ಬೇರೆ ದಾರಿ ಇಲ್ಲದೆ ವಾರ್ಡ್‌ಗಳ ಮರುವಿಂಗಡಣೆ ಪ್ರಕ್ರಿಯೆಯನ್ನು ತರಾತುರಿಯಲ್ಲಿ ನಡೆಸುತ್ತಿರುವಂತೆ ತೋರುತ್ತಿದೆ. ಬಿಬಿಎಂಪಿ ಆಡಳಿತದಲ್ಲಿ ಸುಧಾರಣೆ ತರುವ ಬಗ್ಗೆ ಸರ್ಕಾರಕ್ಕೆ ನೈಜ ಕಾಳಜಿ ಇದ್ದಿದ್ದರೆ ಈ ಸಲುವಾಗಿ ರಚಿಸಿದ್ದ ಸಮಿತಿ 20 ತಿಂಗಳು ವೃಥಾ ಕಾಲಹರಣ ಮಾಡಲು ಅವಕಾಶವನ್ನೇ ನೀಡುತ್ತಿರಲಿಲ್ಲ. ವಾರ್ಡ್ ಮರುವಿಂಗಡಣೆ ಪ್ರಕ್ರಿಯೆಯು ನಗರದ ಆಡಳಿತ ದೃಷ್ಟಿಯಿಂದ ಮಹತ್ತರವಾದ ಪ್ರಕ್ರಿಯೆ. ಸ್ಥಳೀಯ ಆಡಳಿತ ಸಂಸ್ಥೆಗಳ ಚುನಾವಣೆ ಮುಂದೂಡುವ ಅಸ್ತ್ರವಾಗಿ ಅದು ಬಳಕೆಯಾಗುತ್ತಿರುವುದು ಅಕ್ಷಮ್ಯ. ಬಿಬಿಎಂಪಿಯ ಪರಿಷ್ಕೃತ ವಾರ್ಡ್‌ಗಳಿಗೆ ಸಂಬಂಧಿಸಿದ ಕರಡುವಿಗೆ ಸಲಹೆ ಅಥವಾ ಆಕ್ಷೇಪ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಲಾಗಿದೆ. ಬೆಂಗಳೂರಿನಂತಹ ಮಹಾನಗರದ ವಾರ್ಡ್‌ಗಳ ಮರುವಿಂಗಡಣೆ ನಡೆಸುವಾಗ ಸಾರ್ವಜನಿಕರ ಪ್ರತಿಕ್ರಿಯೆ ಪಡೆಯಲು ಇಷ್ಟು ಕಡಿಮೆ ಕಾಲಾವಕಾಶ ನೀಡಿರುವುದನ್ನು ಒಪ್ಪಲಾಗದು. ವಾರ್ಡ್ ವ್ಯಾಪ್ತಿಯಲ್ಲಿ ಏನೆಲ್ಲ ಬದಲಾವಣೆಗಳಾಗಿವೆ ಎಂಬುದನ್ನು ಅರ್ಥೈಸಿಕೊಂಡು, ಅದರಿಂದ ಆಗಬಹುದಾದ ಪರಿಣಾಮಗಳನ್ನು ಪರಾಮರ್ಶಿಸಲು 15 ದಿನಗಳು ಸಾಲುವುದಿಲ್ಲ. ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನಿರ್ದೇಶನ ಪಾಲಿಸಲೇಬೇಕಾದ ಅನಿವಾರ್ಯ ಇರುವುದರಿಂದ, ಸಲಹೆ ಹಾಗೂ ಆಕ್ಷೇಪ ಸಲ್ಲಿಕೆಗೆ ಹೆಚ್ಚಿನ ಕಾಲಾವಕಾಶ ನೀಡುವ ಸ್ಥಿತಿಯಲ್ಲಿ ಸರ್ಕಾರ ಇಲ್ಲ. 2011ರ ಜನಗಣತಿಯ ಅಂಕಿ–ಅಂಶಗಳು ಕೈ ಸೇರಿದಾಗಲೇ ಬಿಬಿಎಂಪಿ ವಾರ್ಡ್‌ಗಳ ಮರುವಿಂಗಡಣೆಗೆ ಸರ್ಕಾರ ಕ್ರಮ ಕೈಗೊಂಡಿದ್ದಿದ್ದರೆ ಇಂತಹ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ. ಆಗ ಸರ್ಕಾರ ನಿದ್ದೆಗೆ ಜಾರಿತ್ತು. ಹಾಗಾಗಿಯೇ ಈ ಮಹತ್ವದ ಪ್ರಕ್ರಿಯೆಯನ್ನು ಕಾಟಾಚಾರಕ್ಕೆ ನಡೆಸುವ ದುಃಸ್ಥಿತಿ ಎದುರಾಗಿದೆ. ಸರ್ಕಾರದ ಅಸಡ್ಡೆ ಧೋರಣೆಯಿಂದಾಗಿ ಆಡಳಿತಾತ್ಮಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. 2001ರ ಜನಗಣತಿಗೆ ಹೋಲಿಸಿದಾಗ 2011ರಲ್ಲಿ ಬೆಂಗಳೂರಿನ ಜನಸಂಖ್ಯೆಯಲ್ಲಿ ಶೇ 46.68ರಷ್ಟು ಹೆಚ್ಚಳ ಕಂಡಿತ್ತು. ನಗರದ ಈಗಿನ ಜನಸಂಖ್ಯೆ 1.39 ಕೋಟಿಯಷ್ಟಿದೆ ಎಂಬುದು ಸರ್ಕಾರದ ಅಂದಾಜು. 2021ರಲ್ಲಿ ಜನಗಣತಿ ಕಾರ್ಯ ನಡೆಯಬೇಕಿತ್ತು. ಕೋವಿಡ್ ಕಾರಣದಿಂದಾಗಿ ಜನಗಣತಿ ಪ್ರಕ್ರಿಯೆ ವಿಳಂಬವಾಗಿದೆ. ಮತ್ತೆ ಜನಗಣತಿ ನಡೆದು, ಇನ್ನೇನು ಒಂದೆರಡು ವರ್ಷಗಳಲ್ಲಿ ನಗರದ ಜನಸಂಖ್ಯೆಗೆ ಸಂಬಂಧಿಸಿದ ಹೊಸ ಅಂಕಿ–ಅಂಶಗಳು ಬಿಡುಗಡೆಯಾಗುವ ನಿರೀಕ್ಷೆ ಇದೆ. ಆಗ ಬಿಬಿಎಂಪಿ ವಾರ್ಡ್‌ಗಳ ಮರುವಿಂಗಡಣೆಯನ್ನು ಮತ್ತೊಮ್ಮೆ ನಡೆಸಬೇಕಾಗುತ್ತದೆ.

ರಾಜಕೀಯ ಪಕ್ಷವೊಂದರ ಪ್ರಾಬಲ್ಯವನ್ನು ಕುಗ್ಗಿಸಲು ನಿರ್ದಿಷ್ಟ ವಿಧಾನಸಭಾ ಕ್ಷೇತ್ರಗಳಲ್ಲಿ ವಾರ್ಡ್‌ಗಳ ಸಂಖ್ಯೆಯನ್ನು ಕಡಿಮೆಗೊಳಿಸಲಾಗಿದೆ ಎಂಬ ಟೀಕೆ ವ್ಯಕ್ತವಾಗಿದೆ. ಪಕ್ಷಪಾತಕ್ಕೆ ಸಂಬಂಧಿಸಿದ ಇಂತಹ ಟೀಕೆಗಳು ಪ್ರತೀ ಸಲ ವಾರ್ಡ್‌ಗಳ ಮರುವಿಂಗಡಣೆ ನಡೆದಾಗಲೂ ಕೇಳಿಬರುತ್ತಿವೆ. ಆಡಳಿತ ಸುಧಾರಣೆಯ ಉದ್ದೇಶದಿಂದ ಕೈಗೊಳ್ಳುವ ಇಂತಹ ಮಹತ್ವದ ಕಾರ್ಯಗಳು ವೈಜ್ಞಾನಿಕವಾಗಿ ಇರುವಂತೆ ನೋಡಿಕೊಳ್ಳಬೇಕಾದುದು ಸರ್ಕಾರದ ಕರ್ತವ್ಯ. ಬಿಬಿಎಂಪಿಯಲ್ಲಿ ಚುನಾಯಿತ ಕೌನ್ಸಿಲ್ ಆಡಳಿತವು 2020ರ ಸೆಪ್ಟೆಂಬರ್ 10ರಂದೇ ಕೊನೆಗೊಂಡಿದೆ. ಚುನಾವಣೆ ನಡೆಸಿ ಹೊಸ ಕೌನ್ಸಿಲ್ ರಚಿಸುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಬಿಬಿಎಂಪಿ ವಾರ್ಡ್‌ಗಳ ಮರು ವಿಂಗಡಣೆ ಪ್ರಕ್ರಿಯೆಯನ್ನು ಕ್ರಮಬದ್ಧವಾಗಿ ಪೂರ್ಣಗೊಳಿಸಿ ಆದಷ್ಟು ಬೇಗ ಚುನಾವಣೆ ನಡೆಸಬೇಕು.

ದಿನದ ಟ್ವೀಟ್

ಪಕ್ಷಾತೀತವಾಗಿ ಖಂಡಿಸಬೇಕಿದೆ



ಯಾವುದೇ ಜನಪ್ರತಿನಿಧಿಯ ಕಚೇರಿಯ ಮೇಲೆ ನಡೆಯುವ ಯಾವುದೇ ಬಗೆಯ ದಾಳಿಯನ್ನು ಏಕಪ್ರಕಾರವಾಗಿ ಖಂಡಿಸಬೇಕು. ಅದು, ಎಸ್‌ಎಫ್‌ಐನಿಂದ ರಾಹುಲ್ ಗಾಂಧಿ ಅವರ ವಯನಾಡ್ ಕಚೇರಿಯ ಮೇಲೆ ನಡೆದದ್ದಿರಲಿ ಅಥವಾ ಶಾಸಕ ಮಂಗೇಶ್ ಕುಡಲ್ಕರ್ ಅವರ ಕಚೇರಿ ಮೇಲೆ ಶಿವಸೇನಾ ಕಾರ್ಯಕರ್ತರು ನಡೆಸಿದ್ದೇ ಆಗಿರಲಿ. ಗೂಂಡಾಗಿರಿಯನ್ನು ಪಕ್ಷಾತೀತವಾಗಿ ಖಂಡಿಸಬೇಕಾಗಿದೆ.

ಪ್ರೀತಮ್ ಕೊಠಾಡಿಯ, ವಕೀಲ

ಕಿಡಿನುಡಿ



ಎಲ್ಲ ರಾಜಕಾರಣಿಗಳೂ ಪರಸ್ಪರ ಬೆನ್ನಿಗೆ ಚೂರಿ ಹಾಕುವ ಮತ್ತು ಕಾಲೆಳೆದು ಕೆಡಹುವ ಕಾಯಕದಲ್ಲಿ ನಿರತರಾಗಿದ್ದಾರೆ. ಹೀಗಿರುವಾಗ, ಜನರ ಸಮಸ್ಯೆಗಳತ್ತ ಗಮನಹರಿಸಬೇಕಾದ ತಮ್ಮ ಪ್ರಾಥಮಿಕ ಕೆಲಸಕ್ಕೆ ಅಗತ್ಯವಾಗಿರುವ ಸಮಯ ಮತ್ತು ಶಕ್ತಿ ಅವರಿಗೆ ಸಿಗುವುದಾದರೂ ಯಾವಾಗ ಎಂದು ಅಚ್ಚರಿಯಾಗುತ್ತದೆ.

ರಾಮ್‌ಗೋಪಾಲ್ ವರ್ಮಾ, ಚಲನಚಿತ್ರ ನಿರ್ದೇಶಕ

25 ವರ್ಷಗಳ ಹಿಂದೆ

ಬುಧವಾರ, 25-6-1997

● ಲಾಲೂ ಜತೆ ಸಂಘರ್ಷ ಒಲ್ಲದ ದಳ ಧುರೀಣರು

ನವದೆಹಲಿ, ಜೂನ್ 24 (ಪಿಟಿಐ, ಯುಎನ್‌ಐ) – ಪಕ್ಷದ ಅಧ್ಯಕ್ಷ ಹಾಗೂ ಬಿಹಾರದ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಅವರ ಜತೆ ಸಂಘರ್ಷಕ್ಕೆ ಇಳಿದರೆ ಪಕ್ಷವು ವಿಭಜನೆಯಾಗುವ ಸಾಧ್ಯತೆ ಇರುವ ಕಾರಣ, ಪದತ್ಯಾಗಕ್ಕೆ ಲಾಲೂ ಅವರ ಮನವೊಲಿಸುವುದೇ ಉಚಿತವೆಂಬ ನಿಲುವು ದಳದ ಹಿರಿಯ ಮುಖಂಡರದು ಎನ್ನಲಾಗಿದೆ.

ಮೇವು ಹಗರಣದಲ್ಲಿ ಸಿಬಿಐ ಆರೋಪ ಪಟ್ಟಿ ಸಲ್ಲಿಸಿದ ಮೇಲೆ ನೈತಿಕ ಕಾರಣದಿಂದ ಲಾಲೂ ರಾಜೀನಾಮೆ ನೀಡಬೇಕು ಎಂದು ನಿನ್ನೆ ರಾತ್ರಿ ಸಭೆ ಸೇರಿದ್ದ ಜನತಾದಳದ ಹಿರಿಯ ನಾಯಕರು ಅಭಿಪ್ರಾಯಪಟ್ಟರಾದರೂ ಈ ಹಂತದಲ್ಲಿ ಲಾಲೂ ಅವರನ್ನು ಏಕಾಂಗಿಯನ್ನಾಗಿ ಮಾಡಬಾರದು ಎಂಬ ನಿಲುವನ್ನೂ ತಳೆದರು ಎನ್ನಲಾಗಿದೆ.

'ಲಾಲೂ ಅವರನ್ನು ಮೂಲೆಗುಂಪು ಮಾಡಿ, ದಳದ ವಿಭಜನೆಗೆ ಅವಕಾಶ ಮಾಡಿಕೊಡಬಾರದು' ಎಂದು ಮುಖಂಡರೊಬ್ಬರು ಹೇಳಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ 25-6-1972

● ಬಳ್ಳಾರಿ ಖಜಾನೆಗೆ ಲಕ್ಷ ರೂ. ವಂಚನೆ: ಮೂವರ ಬಂಧನ

ಬೆಂಗಳೂರು, ಜೂನ್ 24 – ನಕಲಿ ಬಿಲ್ಲುಗಳನ್ನು ಉಪಯೋಗಿಸಿ ಬಳ್ಳಾರಿಯ ಸರ್ಕಾರಿ ಖಜಾನೆಗೆ ಒಂದು ಲಕ್ಷ ರೂಪಾಯಿಗಿಂತ ಹೆಚ್ಚು ಹಣ ವಂಚಿಸಿದ ತಂಡವೊಂದನ್ನು ರಾಜ್ಯದ ಸಿ.ಐ.ಡಿ ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

ಈ ಸಂಬಂಧದಲ್ಲಿ ಬಳ್ಳಾರಿ ಸರ್ಕಾರಿ ಖಜಾನೆಯ ಒಬ್ಬ ಅಧಿಕಾರಿ ಹಾಗೂ ಒಬ್ಬ ಪೇದೆ ಸೇರಿದಂತೆ ಮೂವರು ವ್ಯಕ್ತಿಗಳನ್ನು ಬಂಧಿಸಲಾಗಿದೆ.

ಕನ್ನಡ ಮಾಧ್ಯಮವೆನ್ನುವ ಹಡಗು ತೂತಾಗಿ ನಿಧಾನಕ್ಕೆ ಮುಳುಗುವಂತೆ ಕಾಣುತ್ತಿದೆ...

ಮೊದಲು ಕನ್ನಡ ಶಾಲೆ ಉಳಿಯಲಿ



ವಿಶ್ಲೇಷಣೆ

ವಸಂತ ಶೆಟ್ಟಿ

ಕೋವಿಡ್ ಜೊತೆಯಲ್ಲಿ ಬದುಕಲು ಶುರುಮಾಡಿ ಎರಡು ವರ್ಷಗಳಾಯಿತು. ಆರ್ಥಿಕತೆ, ಜನಜೀವನದ ಮೇಲೆ ಕೋವಿಡ್‌ನ ಪ್ರಭಾವಗಳ ಕುರಿತು ಹಲವು ವರದಿಗಳು ಬಂದಿವೆ. ಆದರೆ ಈ ಎರಡು ವರ್ಷಗಳಲ್ಲಿ ದೇಶದ ಉದ್ದಗಲದ ಶಾಲೆಗಳಲ್ಲಿ ಮಕ್ಕಳ ಕಲಿಕೆ ಯಾವ ಮಟ್ಟದಲ್ಲಿತ್ತು ಅನ್ನುವ ಕುರಿತು ವಿವರವಾದ ಅಧ್ಯಯನ ನಡೆದಿರಲಿಲ್ಲ. ಇತ್ತೀಚೆಗೆ ಬಿಡುಗಡೆಯಾದ ರಾಷ್ಟ್ರೀಯ ಸಾಧನೆ ಸಮೀಕ್ಷೆ- 2021 ಮೂಲಕ ಅದು ನೆರವೇರಿದೆ.

ದೇಶದ 720 ಜಿಲ್ಲೆಗಳಿಗೆ ಸೇರಿದ 34 ಲಕ್ಷ ವಿದ್ಯಾರ್ಥಿಗಳು ಈ ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದರು. 2017ರಲ್ಲಿ ನಡೆದ ಹಿಂದಿನ ಸಮೀಕ್ಷೆಗೆ ಹೋಲಿಸಿದಾಗ ಮಕ್ಕಳ ಕಲಿಕೆಯ ಮಟ್ಟ ಬಹಳಷ್ಟು ಕುಸಿದಿರುವುದನ್ನು ಈ ಸಮೀಕ್ಷೆ ಎತ್ತಿತೋರಿದೆ.

ಸಮೀಕ್ಷೆಯು 3, 5ನೇ ತರಗತಿಯ ಮಕ್ಕಳನ್ನು ಭಾಷೆ, ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳಲ್ಲೂ, 8ನೇ ತರಗತಿಯ ಮಕ್ಕಳನ್ನು ಭಾಷೆ, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನದ ವಿಷಯಗಳಲ್ಲೂ ಹಾಗೂ 10ನೇ ತರಗತಿಯ ಮಕ್ಕಳನ್ನು ಭಾಷೆ, ಗಣಿತ, ಇಂಗ್ಲಿಷ್, ವಿಜ್ಞಾನ ಮತ್ತು ಸಮಾಜ ವಿಜ್ಞಾನದ ವಿಷಯಗಳಲ್ಲಿ ಕಲಿಕೆಯ ಮಟ್ಟವನ್ನು ಅಳೆಯುವ ಕೆಲಸ ಮಾಡಿತು. ನಾಲ್ಕು ತರಗತಿಗಳ ಮಟ್ಟದಲ್ಲೂ 2017ರ ಹೋಲಿಕೆಯಲ್ಲಿ ಕಲಿಕೆಯ ಮಟ್ಟ ಕುಸಿದಿರುವುದನ್ನು ಈ ಸಮೀಕ್ಷೆ ದಾಖಲಿಸಿದೆ. ಪಟ್ಟಣಗಳ ಹೋಲಿಕೆಯಲ್ಲಿ ಹಳ್ಳಿಯ ಶಾಲೆಗಳಲ್ಲಿ, ಸಾಮಾನ್ಯ ವರ್ಗದ ವಿದ್ಯಾರ್ಥಿಗಳ ಹೋಲಿಕೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿಗಳಲ್ಲಿ ಕಲಿಕೆಯ ಮಟ್ಟ ಕುಸಿದಿರುವುದನ್ನು ಈ ಸಮೀಕ್ಷೆ ಗುರುತಿಸಿದೆ.

ಕರ್ನಾಟಕದಲ್ಲಿ ಏಳು ಸಾವಿರ ಸರ್ಕಾರಿ, ಖಾಸಗಿ ಮತ್ತು ಕೇಂದ್ರೀಯ ಶಾಲೆಗಳ ಎರಡು ಲಕ್ಷಕ್ಕೂ ಹೆಚ್ಚು ಮಕ್ಕಳು ಪಾಲ್ಗೊಂಡ ಸಮೀಕ್ಷೆಯಲ್ಲಿ ಮೂರನೇ ತರಗತಿಯ ಐವತ್ತು ಪ್ರತಿಶತಕ್ಕೂ ಹೆಚ್ಚು ಪಾಲು ಮಕ್ಕಳಲ್ಲಿ ಭಾಷೆ, ಗಣಿತ ಮತ್ತು ಪರಿಸರ ಅಧ್ಯಯನದಲ್ಲಿ ಕನಿಷ್ಠ ಮಟ್ಟದ ಕಲಿಕೆ ಸಾಧ್ಯವಾಗುತ್ತಿಲ್ಲ ಎಂದು ಕಂಡರೆ, ಐದನೇ ತರಗತಿಯ ಮುಕ್ಕಾಲುಪಾಲು ಮಕ್ಕಳಿಗೆ ಗಣಿತ ಮತ್ತು ಪರಿಸರ ಅಧ್ಯಯನದ ಪಾಠಗಳನ್ನು ಕಲಿಯಲು ಹೆಚ್ಚಿನ ನೆರವು ಬೇಕಿದೆ ಎಂದು ಸಮೀಕ್ಷೆ ತಿಳಿಸುತ್ತಿದೆ.

ಎಂಟು ಮತ್ತು ಹತ್ತನೆಯ ತರಗತಿ ತಲುಪುವ ಹೊತ್ತಿಗೆ ಕನಿಷ್ಠ ಕಲಿಕೆಯ ಮಟ್ಟವನ್ನು ತಲುಪದ, ವಿಜ್ಞಾನ, ಗಣಿತ ಕಲಿಯಲು ಹೆಚ್ಚಿನ ನೆರವು ಬೇಡುವ ಮಕ್ಕಳ ಪ್ರಮಾಣ ಸರಾಸರಿ ಶೇ 80ಕ್ಕೆ ಏರಿರುವುದನ್ನು ಕಾಣಬಹುದು. ಸರಾಸರಿ ಶೇ 49ರಷ್ಟು ಮಕ್ಕಳು ಕೋವಿಡ್ ಕಾಲದಲ್ಲಿ ಕಲಿಯಲು ಯಾವುದೇ ಡಿಜಿಟಲ್ ಸಾಧನ ತಮ್ಮ ಬಳಿ ಇರಲಿಲ್ಲ ಅಂತಲೂ ಹೇಳಿರುವುದನ್ನು ಸಮೀಕ್ಷೆ ದಾಖಲಿಸಿದೆ.

ಈ ವರದಿಯ ಅಂಶಗಳನ್ನು ಗಮನಿಸಿದಾಗ, ತಮ್ಮ ಕಲಿಕೆಯ ಜೀವನದ ಎರಡು ಅಮೂಲ್ಯ ವರ್ಷಗಳನ್ನು ಕಳೆದುಕೊಂಡಿರುವ ಮಕ್ಕಳು ಶಾಲೆಗೆ ಹಿಂತಿರುಗಿ, ಕಲಿಕೆಯಲ್ಲಿ ತಮಗಾಗಿರುವ ಹಿನ್ನಡೆಯನ್ನು ಸರಿದೂಗಿಸಿಕೊಳ್ಳುವ ತುರ್ತಿನಲ್ಲಿದ್ದಾರೆ ಅಂದರೆ ತಪ್ಪಾಗದು. ಈ ಮಕ್ಕಳ ಪಾಲಕರು ಸಹ ಶಾಲೆಗಳು ಶುರುವಾಗಿ, ಮಕ್ಕಳು ಕಲಿಕೆಯ ಹಳಿಗೆ ಬೀಳಲಿ ಅನ್ನುವ ಕಾತರದಲ್ಲಿದ್ದಾರೆ. ಹೀಗಿರುವಾಗ ಕಲಿಕೆಯ ಮಟ್ಟ ಎರಡು ವರ್ಷಗಳಷ್ಟು ಹಿಂದಕ್ಕೆ ಹೋಗಿರುವುದನ್ನು ಸರಿಪಡಿಸಿಕೊಳ್ಳುವುದು ಸರ್ಕಾರದ ಆದ್ಯತೆ ಆಗಬೇಕಿದೆ.

ತಂತ್ರಜ್ಞಾನವನ್ನು ಬಳಸಿಕೊಂಡು ಪಠ್ಯಕ್ರಮದಲ್ಲಿ ಸೂಕ್ತ ರೀತಿಯಲ್ಲಿ ವಿಜ್ಞಾನ ಮತ್ತು ಗಣಿತದ ಪ್ರಾಯೋಗಿಕ ಕಲಿಕೆಗೆ ಒತ್ತು ನೀಡುವ ಮೂಲಕ, ಕಳೆದುಹೋದ ಎರಡು ವರ್ಷಗಳ ಕಲಿಕೆಯನ್ನು ಸಾಧ್ಯವಾದಷ್ಟು ಪ್ರಮಾಣದಲ್ಲಿ ಮಕ್ಕಳಿಗೆ ದಕ್ಕುವಂತೆ ಮಾಡುವ ದೊಡ್ಡ ಹೊಣೆಗಾರಿಕೆ ಸರ್ಕಾರದ ಮೇಲಿದೆ. ಆದರೆ ಶಾಲೆಗಳು ಶುರುವಾಗಿ ತಿಂಗಳಾಗುತ್ತ ಬಂದರೂ ಇನ್ನೂ ಪಠ್ಯಪುಸ್ತಕಗಳು ಸರಿಯಾಗಿ ಶಾಲೆಗೆ ತಲುಪದಿರುವುದು, ಪಠ್ಯಪುಸ್ತಕದ ತಿದ್ದುಪಡಿಯನ್ನು ಸೈದ್ಧಾಂತಿಕ ತಿಕ್ಕಾಟದ ನೆಲೆಯಾಗಿಸಿಕೊಂಡು ರಾಜಕೀಯ ಹಗ್ಗಜಗ್ಗಾಟದ ಚರ್ಚೆಗಳಲ್ಲೇ ದಿನಗಳು ಉರುಳುತ್ತಿರುವುದನ್ನು ಕಂಡರೆ, ಕುಸಿದಿರುವ ಮಕ್ಕಳ ಕಲಿಕೆಯ ಮಟ್ಟದ ಬಗ್ಗೆ ಯಾರಿಗಾದರೂ ಕಾಳಜಿ ಇದೆಯೇ ಅನ್ನುವ ಪ್ರಶ್ನೆ ಏಳುತ್ತದೆ.

ಇಪ್ಪತ್ತು ವರ್ಷಗಳ ಹಿಂದೆ ಹತ್ತಿರ ಹತ್ತಿರ ಎಂಬತ್ತು ಪ್ರತಿಶತಕ್ಕೂ ಹೆಚ್ಚು ಮಕ್ಕಳು ಕರ್ನಾಟಕದಲ್ಲಿ ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಓದುತ್ತಿದ್ದರು. ಆ ಪ್ರಮಾಣ ದಿನೇದಿನೇ ಕಡಿಮೆಯಾಗುತ್ತ ಈಗ ಐವತ್ತು ಪ್ರತಿಶತದ ಹತ್ತಿರದಲ್ಲಿದೆ. ಕರ್ನಾಟಕದ ನಲವತ್ತು ಪ್ರತಿಶತಕ್ಕೂ ಹೆಚ್ಚಿನ ಮಕ್ಕಳು ಈಗಾಗಲೇ ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಹೊರಟುಹೋಗಿದ್ದಾರೆ. ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ಸೃಷ್ಟಿಯಾಗಿರುವ ಇಂಗ್ಲಿಷ್ ಮಾಧ್ಯಮದ ಸುತ್ತಲಿನ ಸಮೂಹಸನ್ನಿಯಿಂದ ಹಳ್ಳಿ, ಪಟ್ಟಣಗಳಲ್ಲಿ ಇಂಗ್ಲಿಷ್ ಮಾಧ್ಯಮದ ಶಾಲೆಗಳು ಹಾದಿಗೊಂದು, ಬೀದಿಗೊಂದು ಎಂಬಂತೆ ಕಣ್ತೆರೆದಿವೆ. ಮಕ್ಕಳ ಭವಿಷ್ಯಕ್ಕೆ ಇದೊಂದೇ ಸರಿದಾರಿ ಅನ್ನುವ ಭ್ರಮೆಯಲ್ಲಿ ಲಕ್ಷಾಂತರ ಪಾಲಕರು ತಮ್ಮ ದುಡಿಮೆಯ ಬಹುಪಾಲನ್ನು ಈ ವ್ಯವಸ್ಥೆಗೆ ಸುರಿದು ಬಡವರಾಗುತ್ತಿದ್ದಾರೆ. ಇಂತಹ ಶಾಲೆಗಳ ಮಕ್ಕಳ ಕಲಿಕೆಯ ಮಟ್ಟ ಯಾವ ರೀತಿಯಲ್ಲೂ ಮೇಲಿಲ್ಲ ಅನ್ನುವುದನ್ನು ಸಮೀಕ್ಷೆಯ ಅಂಕಿಅಂಶಗಳು ಹೇಳುತ್ತಿವೆ.

ತಂತ್ರಜ್ಞಾನ ಪ್ರಪಂಚದಲ್ಲಿ ಆಗುತ್ತಿರುವ ವೇಗದ ಬದಲಾವಣೆಗಳು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮತ್ತು ಆಟೊಮೇಶನ್ ಮೂಲಕ ಈಗಿರುವ ಲಕ್ಷಾಂತರ ಉದ್ಯೋಗಗಳನ್ನು ಇಲ್ಲವಾಗಿಸುವ ಸಾಧ್ಯತೆಗಳ ಮುನ್ನೋಟವೊಂದನ್ನು ನೀಡುತ್ತಿವೆ. ಉಕ್ರೇನ್-ರಷ್ಯಾದ ಯುದ್ಧ ಮುಗಿದಾಗ ದೊಡ್ಡ ಮಟ್ಟದ ಜಾಗತಿಕ ರಾಜಕೀಯ ಪಲ್ಲಟಗಳು ಸಂಭವಿಸುವ ಸಾಧ್ಯತೆಗಳು ಮತ್ತು ಅದರಿಂದ ಈಗಿರುವ ಜಾಗತೀಕರಣದ ಮಾದರಿಯೂ ಬುಡಮೇಲಾಗಿ ದೇಶ-ದೇಶಗಳ ನಡುವಿನ ಸಂಬಂಧಗಳು ಹೊಸ ನೆಲೆಯಲ್ಲಿ ರೂಪುಗೊಳ್ಳುವ ಕುರಿತು ಹಲವಾರು ಚರ್ಚೆಗಳು ಜಗತ್ತಿನಲ್ಲಿ ನಡೆಯುತ್ತಿವೆ.

ಪರಿಸರದಲ್ಲಿ ಆಗುತ್ತಿರುವ ತೀವ್ರವಾದ ಬದಲಾವಣೆಗಳು, ಮುಂದೆಯೂ ಕೋವಿಡ್‌ನಂತಹ ಸಾಂಕ್ರಾಮಿಕ ಪಿಡುಗು ಪ್ರಪಂಚವನ್ನು ಕಾಡುವ ಎಲ್ಲ ಸಾಧ್ಯತೆಗಳನ್ನು ಮುಕ್ತವಾಗಿರಿಸಿದೆ. ಈ ಹೊತ್ತಿನಲ್ಲಿ ನಾವು ಈಗಲೂ ಹೊರದೇಶದ ಸೇವಾ ಗುತ್ತಿಗೆಯ ಕೆಲಸಗಳು, ಅಮೆರಿಕ ಕೇಂದ್ರಿತ ಬಂಡವಾಳದ ಹರಿವಿನ ಮೇಲೆಯೇ ಭವಿಷ್ಯ ಅರಸುತ್ತೇವೆ ಎಂದುಕೊಂಡು ಇಂಗ್ಲಿಷ್ ಮಾಧ್ಯಮದ ಬಾಯಿಪಾಠದ ಕಲಿಕೆಯತ್ತಲೇ ಹೋಗುತ್ತೇವೆಯೋ ಇಲ್ಲ ಮಕ್ಕಳು ಆಲೋಚಿಸುವ, ಕನಸು ಕಾಣುವ ಭಾಷೆಯಲ್ಲಿ, ಜಗದ ಅಗತ್ಯಗಳನ್ನು ಕಟ್ಟಿಕೊಳ್ಳಲಾಗುವ ಗಟ್ಟಿಯಾದ ಕಲಿಕೆಯ ವ್ಯವಸ್ಥೆಯೊಂದರ ಮೂಲಕ ಏಳಿಗೆಯತ್ತ ಸಾಗುವಂತೆ ಮಾಡುತ್ತೇವೆಯೋ ಅನ್ನುವುದು ಈ ಹೊತ್ತಿನ ಮುಖ್ಯ ಚರ್ಚೆಯಾಗಬೇಕಿದೆ.

ಕನ್ನಡ ಮಾಧ್ಯಮವೆನ್ನುವ ಹಡಗು ತೂತಾಗಿ ನಿಧಾನಕ್ಕೆ ಮುಳುಗುವಂತೆ ಕಾಣುತ್ತಿರುವಾಗ, ಅಲ್ಲಿ ಏನು ಕಲಿಸಬೇಕು ಅನ್ನುವ ಸೈದ್ಧಾಂತಿಕ ಚರ್ಚೆಯೇ ದೊಡ್ಡದಾಗಿರುವುದು ದುರಂತವೇ ಸರಿ. ಕನ್ನಡ ಮಾಧ್ಯಮದ ಶಾಲೆಗಳಿದ್ದರಲ್ಲವೇ ಅಲ್ಲಿ ಏನು ಕಲಿಸಬೇಕು ಅನ್ನುವ ಚರ್ಚೆ?

ಭಾರತದಂತಹ ದೇಶ ವರ್ಷಕ್ಕೆ ಎರಡು ಕೋಟಿ ಉದ್ಯೋಗಗಳನ್ನು ಇನ್ನು ಹತ್ತು ವರ್ಷ ನಿರಂತರವಾಗಿ ಸೃಷ್ಟಿಸದಿದ್ದರೆ ಒಂದು ಮಧ್ಯಮ ಆದಾಯದ ದೇಶವಾಗುವುದು ಸಾಧ್ಯವಿಲ್ಲ. ಈಗಿರುವ ಯುವಜನರ ಬಲ ಒಂದು ತೊಂದರೆಯಾಗದೇ ಶಕ್ತಿಯಾಗಬೇಕು ಅಂದರೆ ದೊಡ್ಡ ಪ್ರಮಾಣದ ಉದ್ಯೋಗ ಸೃಷ್ಟಿಯಾಗಲೇಬೇಕು. ಹೀಗೆ ಉದ್ಯೋಗ ಸೃಷ್ಟಿಸುವಂತಹ ವಾತಾವರಣ ಕಟ್ಟಲು ಭಾರತದಂತಹ ದೇಶಕ್ಕೆ ಜ್ಞಾನ-ವಿಜ್ಞಾನದ ಬಲವೊಂದರಿಂದಲೇ ಸಾಧ್ಯ ಮತ್ತು ಅದಾಗಲು ಕಲಿಕೆ, ಅದರಲ್ಲೂ ಭಾರತದ ಭಾಷೆಗಳಲ್ಲಿ ಕಲಿಕೆಯ ವ್ಯವಸ್ಥೆಯನ್ನು ಸರಿಯಾಗಿಸಿಕೊಳ್ಳುವುದು ಬಹಳ ಮುಖ್ಯ. ಪಠ್ಯಪುಸ್ತಕಗಳ ಕುರಿತ ಯಾವುದೇ ಚರ್ಚೆ ಯಾವ ರೀತಿಯಲ್ಲಿ ಗಣಿತ ಮತ್ತು ವಿಜ್ಞಾನದ ಪಠ್ಯಕ್ರಮವನ್ನು ಇನ್ನಷ್ಟು ಸರಳವಾಗಿಸಿ ಮಕ್ಕಳ ಕಲಿಕೆಯ ಮಟ್ಟ ಹೆಚ್ಚಿಸಬಹುದು ಅನ್ನುವತ್ತ ಹರಿಯಬೇಕಿದೆ. ರಾಷ್ಟ್ರೀಯ ಶಿಕ್ಷಣ ನೀತಿ ಈ ಕುರಿತು ಮಾತನಾಡಿರುವುದು ಒಳ್ಳೆಯ ಬೆಳವಣಿಗೆಯಾದರೂ ಅದನ್ನು ಜಾರಿ ಮಾಡುವತ್ತ ಇನ್ನೂ ಯಾವುದೇ ನಿರ್ದಿಷ್ಟ ಯೋಜನೆಗಳು ಕಂಡುಬಂದಿಲ್ಲ.

ನಾಡಿನ ಎಲ್ಲ ಮಕ್ಕಳಿಗೂ ತಲುಪುವಂತಹ ಪರಿಣಾಮಕಾರಿಯಾದ ಕಲಿಕೆಯನ್ನು ಮಕ್ಕಳ, ಪಾಲಕರ, ಶಿಕ್ಷಕರ ಮತ್ತು ಪರಿಸರದ ನುಡಿಯಾಗಿರುವ ಕನ್ನಡದಂತಹ ಭಾಷೆಯಲ್ಲಷ್ಟೇ ಕಟ್ಟಲು ಸಾಧ್ಯ. ಈ ಸತ್ಯ ಕೈಬಿಟ್ಟು, ಕಲಿಕೆಯನ್ನು ಕೇವಲ ಸೈದ್ಧಾಂತಿಕ ತಿಕ್ಕಾಟದ ಕಣ್ಣಿನಿಂದ ನೋಡುತ್ತಾ ಹೋದರೆ ಇನ್ನೈದು ವರ್ಷ ಬಿಟ್ಟು ಸಮೀಕ್ಷೆ ಮಾಡಿದಾಗಲೂ ನಾವು ಎಲ್ಲಿದ್ದೇವೋ ಅಲ್ಲಿಯೇ ಇರುತ್ತೇವೆ.



ಚುರುಮುರಿ



ಶಿವ ಬದಲು ಶಿಂಧೆ?

● ಆನಂದ

'ಇನ್‌ಡಿಸ್ಪೆನ್ಸಬಲ್ ಅಂದರೆ ಏನು?' ಎಂದು ಹೆಂಡತಿ ಕೇಳಿದಳು. ನಾನು ಯೋಚಿಸಿ, 'ನಾನು ನಿನಗೆ ಏನೂ ಇಲ್ಲದಿರಬಹುದು, ಆದರೆ ನೀನು ನನಗೆ ಇನ್‌ಡಿಸ್ಪೆನ್ಸಬಲ್' ಎಂದೆ.

'ಅರ್ಥವಾಯಿತು ಬಿಡಿ' ಎಂದಾಗ 'ಈ ಪ್ರಶ್ನೆ ಯಾಕೀಗ?' ಎಂದೆ.

'ಅದೇರಿ, ಠಾಕ್ರೆ ಕುಟುಂಬ ಇಲ್ಲದೆ ಶಿವಸೇನೆ ಇರಲು ಸಾಧ್ಯವೇ?' ಎಂದು ಕೇಳಿದಳು.

'ಹೋ! ಶಿವಸೇನೆಗೆ ಆ ಕುಟುಂಬ ಇನ್‌ಡಿಸ್ಪೆನ್ಸಬಲ್ ಅಂತ ತಾನೆ ನೀನು ಹೇಳ್ತಿರೋದು ಅಥವಾ ಕೇಳ್ತಿರೋದು?'

'ಹೌದು, ಶಿವಸೇನೆ ಅಂದರೆ ಬಾಳಾಸಾಹೇಬ ಠಾಕ್ರೆ, ಠಾಕ್ರೆ ಎಂದರೆ ಶಿವಸೇನೆ ಅಂತ ಇರುವಾಗ ಈಗ ಅದು ಶಿಂಧೆಸೇನೆ ಆಗಲಿಕ್ಕೆ ಹೊರಟಿದೆ. ಆದ್ದರಿಂದ ಏಕ್‌ನಾಥ್ ಶಿಂಧೆ ಅವರು ಠಾಕ್ರೆ ಕುಟುಂಬಾನ ಡೈವೋರ್ಸ್ ಮಾಡಲು ಸಾಧ್ಯವೇ?'

'ಗುಡ್ ಕ್ವೆಶ್ಚನ್, ಬಟ್ ದೇರ್ ಈಸ್ ನೊ ಗುಡ್ ಆನ್ಸರ್' ಎಂದು ಒಪ್ಪಿಕೊಂಡೆ.

'ನಿಮ್ಮ ಬಳಿ ಅಂತ ಹೇಳಿ' ಎಂದು ಕೊಂಕಿದಳು.

'ಆದರೆ ಬೇರೆ ಸವಾಲುಗಳಿವೆ. ನೆಹರೂ–ಗಾಂಧಿ ಕುಟುಂಬ ಇಲ್ಲದೆ ಕಾಂಗ್ರೆಸ್‌ಗೆ ಭವಿಷ್ಯ ಇದೆಯೇ?'

'ಇದೆ ಅಂತ ಕೆಲವರು ಬಹಿರಂಗವಾಗಿ, ಕೆಲವರು ಗುಟ್ಟಾಗಿ ಹೇಳ್ತಾರೆ. ಉಳಿದವರು ನೆಹರೂ– ಗಾಂಧಿ ಕುಟುಂಬ ಇಲ್ಲದೆ ಪಕ್ಷ ಇರಲಿಕ್ಕೆ ಸಾಧ್ಯವೇ ಇಲ್ಲ ಎಂದು ಘಂಟಾಘೋಷವಾಗಿ ಸಾರ್ತಿದ್ದಾರೆ. ಅಂದರೆ ಶಿಂಧೆಸೇನೆಗೆ ಭವಿಷ್ಯ ಇರಲೂಬಹುದು. ಉತ್ತರ ಮತದಾರರಿಗೆ ಮಾತ್ರ ಗೊತ್ತಿರುತ್ತೆ'.

'ಮತ್ತೆ ನಮ್ಮ ಜೆಡಿಎಸ್‌ನ ಭವಿಷ್ಯ ಏನು?'

'ಉಜ್ವಲವಾಗಿರುತ್ತದೆ ಅಂತ ಕುಮಾರಣ್ಣ ಹೇಳ್ತಿದ್ದಾರೆ. ಇನ್ನೇನು?'

'ಅಲ್ಲಾ, ಒಂದು ವೇಳೆ ನಮ್ಮ ದೇವೇಗೌಡರು ರಾಷ್ಟ್ರಪತಿಯಾಗಿ ದೆಹಲಿಯಲ್ಲಿ ಮೊಕ್ಕಾಂ ಹೂಡಿದ್ದರೆ ಆಗ ಜೆಡಿಎಸ್ ಗತಿ ಏನಾಗ್ತಿತ್ತು?'

'ಅಂದರೆ ಗೌಡರು ಅವರ ಪಕ್ಷಕ್ಕೆ ಇನ್‌ಡಿಸ್ಪೆನ್ಸಬಲ್ ಅಂತ ತಾನೆ ನೀನು ಹೇಳ್ತಿರೋದು?'

'ಅಲ್ವೇ ಮತ್ತೆ?'

ಸಂಗತ

'ಜನಪ್ರಿಯ' ಹಾಸ್ಯಮಾಲಿನ್ಯ!

ಬೋಧಪ್ರದ ವಿನೋದಕ್ಕೆ ಹುಡುಕಾಟ ನಡೆಯಲಿ

● ಯೋಗಾನಂದ

ಅವು ನಿಯಮಿತವಾಗಿ ಪ್ರಸಾರವಾಗುವ ಕಿರುತೆರೆ ಕನ್ನಡ 'ಕಾಮಿಡಿ' ಕಾರ್ಯಕ್ರಮಗಳು. ತೀರ್ಪುಗಾರರೇನೊ ಖ್ಯಾತ ನಟ ನಟಿಯರು, ನುರಿತ ಕಲಾವಿದರು, ಅನುಭವಿಗಳು. ಆದರೆ ಸ್ಪರ್ಧಾಳುಗಳು ಪುಂಖಾನುಪುಂಖವಾಗಿ ನೀಡುವ ಪ್ರದರ್ಶನಗಳಲ್ಲಿ ಮಾತ್ರ ಹಾಸ್ಯವು ಹದ ತಪ್ಪಿರುತ್ತದೆ. ಅಸಂಬದ್ಧ ಪ್ರಾಸಗಳು, ಚರ್ವಿತಚರ್ವಣ ಮಾತುಗಳು.

ಲೈಂಗಿಕ ಅಲ್ಪಸಂಖ್ಯಾತರು ಈಚೆಗೆ ಗೌರವದಿಂದ ಬದುಕು ಕಟ್ಟಿಕೊಳ್ಳಲು ಹವಣಿಸುತ್ತಿದ್ದಾರೆ. ಸರ್ಕಾರ ಹಾಗೂ ಸ್ವಯಂಸೇವಾ ಸಂಸ್ಥೆಗಳು ಅವರಿಗೆ ನೆರವಾಗುತ್ತಿವೆ. ಈ ಷೋಗಳಲ್ಲಿ ಅವರನ್ನು ಅಪಮಾನಿಸುವ ರೀತಿಯಲ್ಲಿ ಬಿಂಬಿಸಲಾಗುತ್ತದೆ. ಕುಳ್ಳರನ್ನು, ಅತಿ ಎತ್ತರದವರನ್ನು ಹೀಯಾಳಿಸಲಾಗುತ್ತದೆ. ಕೆಮ್ಮು, ಮುಪ್ಪು, ಬಕ್ಕತಲೆ, ಉಬ್ಬು ಹಲ್ಲು, ಕಪ್ಪು ಮುಖ... ಇಂಥವು ನಗೆಯ ಮೂಲವೇ?

ಪಾತ್ರಧಾರಿಗಳ ಆಂಗಿಕ ಭಾಷೆ ಮನೆಮಂದಿಯೆಲ್ಲ ಕುಳಿತು ವೀಕ್ಷಿಸುವಂಥದ್ದೇ ಎನ್ನುವ ಪ್ರಶ್ನೆ ಮೂಡಿಸುತ್ತದೆ. ವಿಪರ್ಯಾಸವೆಂದರೆ, ಈ ಪ್ರದರ್ಶನ ಸರಣಿಗಳಲ್ಲಿ ಆರಂಭದಲ್ಲಿ ಯಾವುದೇ ವಿಷಯ ಪ್ರಸ್ತಾಪಿಸಿದರೂ ಬಹುಮಟ್ಟಿಗೆ ಅದು ಅಂತ್ಯವಾಗುವುದು ನಮಗೆ ಮುಜುಗರ ಆಗುವುದರಲ್ಲೇ!

ಹಾಸ್ಯ ಸಮಸ್ತರಿಗೂ ಶೈಕ್ಷಣಿಕವಾಗಬಲ್ಲದು. ಹಾಗಾಗಿ ಸಭ್ಯತೆಯ ಎಲ್ಲೆ ಮೀರದ ತಮಾಷೆಗಳು ಕುಟುಂಬದ ಮುಂದೆ ಪ್ರಸ್ತುತಗೊಳ್ಳಬೇಕು. ಹಾಸ್ಯದ ಗುರಿ ವಕ್ರವಾದ, ಗೋಜಲು ಜಯಿಸುವುದು, ಮನುಷ್ಯ ಮನುಷ್ಯರ ನಡುವಿನ ಆಪ್ತತೆಯನ್ನು ಮತ್ತಷ್ಟು ಹೆಚ್ಚಿಸುವುದು. ಈಚೆಗಂತೂ ರಿಯಾಲಿಟಿ ಷೋಗಳು ಪ್ರೇಕ್ಷಕರಿಗೆ ಕುಟುಂಬಸ್ನೇಹಿ ಹಾಸ್ಯ ಒದಗಿಸುವುದರಿಂದ ದೂರ ಸರಿಯುತ್ತಿವೆ. ಜನರಿಗೆ ಹುಸಿನಗೆ, ಮುಗುಳ್ನಗು, ಕಚಗುಳಿ ಸೃಷ್ಟಿಸುವ ವಿಡಂಬನೆ, ವಿನೋದ ಗುರುತಿಸುವಲ್ಲಿ ನಮ್ಮ ಪ್ರಸಾರ ಜಾಲಗಳು ಸೋಲುತ್ತಿವೆ. ಒಟ್ಟಾಗಿ ನಗುವ ಕುಟುಂಬ ಒಟ್ಟಾಗಿ ಇರುತ್ತದೆ ಎನ್ನುವ ತಥ್ಯವನ್ನು ಅವು ಗಮನಿಸಬೇಕಿದೆ.

ಬದುಕಿನ ಸರಳ ಸಂದರ್ಭಗಳನ್ನು ಬಳಸಿ ಅದ್ಭುತ ಸದಭಿರುಚಿಯ ವಿನೋದಗಳನ್ನು ಸೃಜಿಸಲು ಸಾಧ್ಯ. ಅದು ಬಿಟ್ಟು ದ್ವಂದ್ವಾರ್ಥ ಪುಟಿದೆದ್ದರೆ ಅದು ಕ್ಷಣ ನಗೆಯುಕ್ಕಿಸಿದರೂ ಆಖೈರಾಗಿ ಬೀರುವುದು ಕೆಟ್ಟ ಸಂದೇಶವನ್ನೇ. ಜೋರು ಚಪ್ಪಾಳೆ ಅಂಗೀಕಾರದ ಮುದ್ರೆಯಲ್ಲ. ಹೇಳಬೇಕೆನ್ನುವುದು ಏನು ಎನ್ನುವಷ್ಟೇ ಯಾವಾಗ ಎನ್ನುವುದೂ ಮುಖ್ಯ. ಪ್ರಾಯೋಜಿಸುವವರ ದೆಸೆಯಿರಲಿ, ಕಲಾವಿದರಿಗೆ ಒಂದಷ್ಟು ಅವಕಾಶಗಳು ಲಭಿಸಲಿ, ತಂತ್ರಜ್ಞರಿಗೆ ಕೈ ತುಂಬ ಕೆಲಸವಿರಲಿ. ಯಾರು ಬೇಡವೆನ್ನುತ್ತಾರೆ? ಆದರೆ ಅದರ ಜೊತೆಗೆ, ಅದಕ್ಕೂ ಪ್ರಧಾನವಾಗಿ ಸೃಜನಶೀಲ, ನಿರಪೇಕ್ಷ ವಿಡಂಬನೆ ಬಿತ್ತರಗೊಳ್ಳುವುದನ್ನು ಮಂದಿ ನಿರೀಕ್ಷಿಸುತ್ತಾರೆ. ವಿಡಂಬನೆಯು ನಗುವನ್ನು ಸರ್ವದಾ ಸಿಡಿಸಬೇಕಿಲ್ಲ. ಅದು ಬದುಕಿನಲ್ಲಿ ವಿನೋದ ಸೃಷ್ಟಿಸಬಲ್ಲ, ವಿಮರ್ಶಿಸಬಲ್ಲ ಪ್ರಜ್ಞೆ ಜಾಗೃತಗೊಳಿಸಿದರಾಯಿತು. ಕಿರುಚಾಟ, ಅರಚಾಟ, ಎರಚಾಟ, ಅನುಕರಣ, ಭವ್ಯ ರಂಗಸಜ್ಜಿಕೆ, ಅದ್ದೂರಿ ವೇಷಭೂಷಣದಲ್ಲಿ ವಿನೋದವಿರದು. ಹಾಸ್ಯದ ಯಶಸ್ಸೆಂದರೆ ಸದಭಿರುಚಿಯ ಪ್ರೇಕ್ಷಕರು ಮತ್ತಷ್ಟು ಬಯಸುವುದು. ಅದುವೆ ಗಂಭೀರವಾಗಿರುವ ತಮಾಷೆಯ ಮಾರ್ಗ.

ಟೀಕಿಸುವುದಕ್ಕೂ ಒಂದು ಶಿಸ್ತಿದೆ, ಕ್ರಮವಿದೆ. ನಯ, ನಿರ್ಗಳ ಮಾತು ಎಲ್ಲರನ್ನೂ ಸೆಳೆಯುವುದು. ಒಬ್ಬರನ್ನು ರೇಗಿಸುವುದಾದರೂ ಅದು ಶಿಷ್ಟವಾಗಿರಬೇಕು ತಾನೆ? ಏಕೆಂದರೆ ಅದರ ಉದ್ದೇಶ ನಗಿಸುವುದೇ ವಿನಾ ಭಾವನೆಗಳನ್ನು ನೋಯಿಸುವುದಲ್ಲ. ಕಿರುತೆರೆಗೆ ನಿರ್ಮಿಸಲಾಗುವ ಯಾವುದೇ ಕಾರ್ಯಕ್ರಮವಿರಲಿ, ಅದಕ್ಕೆ ಎಷ್ಟೊಂದು ಹಣ, ಸಮಯ ವ್ಯಯವಾಗುತ್ತದೆ. ಪ್ರಸಾಧನ, ಸಾರಿಗೆ ಏರ್ಪಾಡು, ಶಬ್ದ ಮತ್ತು ಬೆಳಕಿನ ವ್ಯವಸ್ಥೆ, ಕಲಾವಿದರಿಗೆ ಸಂಭಾವನೆ, ಭೋಜನ... ಒಂದೇ ಎರಡೇ? ಹಲವು ಬಾರಿ ತಾಲೀಮು ನಡೆಸುವುದು ಬೇರೆ. ಇಂತಿರುವಾಗ ಪ್ರೇಕ್ಷಕವರ್ಗ ಅಸಮಾಧಾನಗೊಂಡರೆ ನೀರಿನಲ್ಲಿ ಹುಳಿ ಹಿಂಡಿದಂತಾದೀತು?

ಸಾಹಿತಿಗಳಾದ ಕೈಲಾಸಂ ಅವರಾಗಲಿ, ಬೀಚಿಯವರಾಗಲಿ ಅಥವಾ ರಾಶಿ ಅವರಾಗಲಿ ತಮ್ಮ ಹಾಸ್ಯ ವಾಙ್ಮಯದಲ್ಲಿ ಅಶ್ಲೀಲತೆಯನ್ನು ತರಲಿಲ್ಲ. ಯಾರಿಗೂ ಬೇಸರವಾಗದಂತೆ ಎಚ್ಚರವಹಿಸಿ ಕೌಶಲದಿಂದ ನವಿರಾದ ವಿನೋದವನ್ನು ಹಂಚಿದರು. ಸಿನಿಮಾ, ಕಿರುತೆರೆಗಳಲ್ಲಿ ಒಂದು ಕಾಲದಲ್ಲಿ ವಿಜೃಂಭಿಸಿದ ಗಂಭೀರ ವಿಡಂಬನೆ ಇಂದು ಇಲ್ಲವಾಗಿದೆ. 'ನಾನು ಕೊಟ್ಟ ಸಾಲ ಬರುತ್ತದೆ ತಾನೆ? ನಿಶ್ಚಿಂತನಾಗಿರಲೇ?' ಅಂತ ಒಂದು ಪಾತ್ರ ಪ್ರಶ್ನಿಸುತ್ತದೆ. ಅದಕ್ಕೆ ಇನ್ನೊಂದು ಪಾತ್ರ 'ಖಂಡಿತ, ಬೇಕಾದರೆ ಎದೆ ಮೇಲೆ ಒಂದು ಕಲ್ಲು ಇಟ್ಟುಕೊ' ಎಂದು ಅಭಯ ಹೇಳುವುದು! ಇದು ಅರ್ಧ ಶತಮಾನದ ಹಿಂದಿನ ಕನ್ನಡ ಸಿನಿಮಾದ ಸಂಭಾಷಣೆ. ನಿರ್ದೇಶಕರು ಅದೆಷ್ಟು ಸೂಕ್ಷ್ಮವಾಗಿ ಜನಪದವನ್ನು ಗ್ರಹಿಸಿರಬೇಕು?

ಅಂತೆಯೇ ಮನೆಯೊಡೆಯನನ್ನು ಓಲೈಸಲು ಹೊಸ ಆಳು ಇಂದಿನ ಪತ್ರಿಕೆಯನ್ನು ನಿನ್ನೆಯಿಂದಲೂ ಹುಡುಕುತ್ತಿರುವೆ ಅಂತ ನಾಟಕವಾಡುವುದು. ಅಂತಹ ಶುದ್ಧ ಬೋಧಪ್ರದ ವಿನೋದ ಇಂದೂ ಸಾಧ್ಯ. ಮುಖ್ಯವಾಗಿ ನಿರ್ದೇಶಕರು, ಕಲಾವಿದರು, ತಂತ್ರಜ್ಞರು ಹಾಸ್ಯದ ಸರ್ವೇಕ್ಷಣೆ ನಡೆಸಬೇಕಷ್ಟೆ.

ಬಹುಮಂದಿ ಶುದ್ಧ ವಿಡಂಬನೆ ಕಳೆದುಕೊಳ್ಳುವುದು ಅವರಿಗೆ ಅದು ಲಭಿಸಲಿಲ್ಲ ಎಂದಲ್ಲ. ಅವರು ಆ ನಿಲ್ದಾಣದಲ್ಲಿ ಹೆಚ್ಚು ಹೊತ್ತು ಇರದೆ ದೌಡಾಯಿಸಿರುವುದು! ನೋಡುಗರ ಮನಸ್ಸುಗಳಲ್ಲಿ ಸಾತ್ವಿಕತೆ ಹರವದಿದ್ದರೆ ಟಿಆರ್‌ಪಿ ಕಟ್ಟಿಕೊಂಡು ಜನರಿಗೆ ಆಗಬೇಕಾದ್ದೇನು? ಬೋಧಪ್ರದ ವಿನೋದಕ್ಕೆ ಹುಡುಕಾಟ ನಡೆಯಲಿ. ಟಿ.ವಿ. ಮುಂದೆ ಕೂತವರು ಒಬ್ಬೊಬ್ಬರಾಗಿ ಎದ್ದು ಹೊರಹೋಗದಂತಿರಲಿ.



ವಾಚಕರ ವಾಣಿ

ರಾಜ್ಯ ವಿಭಜನೆಯ ಮಾತು ಸಲ್ಲದು

ಉಮೇಶ ಕತ್ತಿ ಅವರು ಕರ್ನಾಟಕದ ಒಬ್ಬ ಸಚಿವರಾಗಿ ರಾಜ್ಯ ವಿಭಜನೆ ಕುರಿತು ಪ್ರಸ್ತಾಪಿಸುವುದು ನಾಡದ್ರೋಹದ ಮಾತು. ಹಿಂದೊಮ್ಮೆ ಛಿದ್ರಗೊಂಡಿದ್ದ ಕನ್ನಡಿಗರನ್ನು ಒಂದು ರಾಜ್ಯದಡಿ ತರಬೇಕೆಂದು ನಮ್ಮ ಹಿರಿಯರು ದೀರ್ಘಕಾಲ ಹೋರಾಟ ಮಾಡಿರುವ ಇತಿಹಾಸ ಕತ್ತಿ ಅವರಿಗೆ ತಿಳಿದಿಲ್ಲ ಅನಿಸುತ್ತದೆ. ಅಂದು ಹಳೆ ಮೈಸೂರು ಭಾಗದ ಕೆಲವರಿಗೆ ಇಷ್ಟವಿಲ್ಲದೇ ಇದ್ದರೂ ಕನ್ನಡಿಗರು ಒಟ್ಟಿಗೆ ಇರಬೇಕೆಂಬ ಉದ್ದೇಶದಿಂದ ಕೆಂಗಲ್ ಹನುಮಂತಯ್ಯ ಅವರು ಸಹ ಏಕೀಕರಣಕ್ಕೆ ಬೆಂಬಲ ವ್ಯಕ್ತಪಡಿಸಿದ್ದು ಇತಿಹಾಸ.

ಕತ್ತಿ ಅವರು ಕರ್ನಾಟಕದ ಭೂಪಟವನ್ನು ತಮ್ಮ ಮನಸ್ಸಿನ ಕತ್ತಿಯಿಂದ ಹರಿಯುವಂತೆ ಮಾತನಾಡಿರುವುದು ಇದು ಮೊದಲೇನೂ ಅಲ್ಲ. ಪಕ್ಕದ ಆಂಧ್ರಪ್ರದೇಶ ವಿಭಜನೆಯಾದಂತೆ ಇಲ್ಲಿಯೂ ಆದರೆ ತಮ್ಮ ರಾಜಕೀಯ ಆಕಾಂಕ್ಷೆ ಈಡೇರಿಸಿಕೊಳ್ಳಬಹುದು ಎಂಬ ದುರುದ್ದೇಶ ಇದ್ದಂತೆ ಕಂಡುಬರುತ್ತದೆ. ಇಂತಹವರಿಗೆ ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರ ಕನಸು ಏನಿತ್ತು ಎಂಬುದು ಗೊತ್ತಿಲ್ಲ. ಕತ್ತಿ ಅವರ ಮಾತನ್ನು ಕನ್ನಡಿಗರು ಖಂಡಿಸಬೇಕಾಗಿದೆ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

ಪೌತಿ ಖಾತೆ: ಅವೈಜ್ಞಾನಿಕ ತೀರ್ಮಾನ

ಜುಲೈನಲ್ಲಿ ನಡೆಯುವ ಕಂದಾಯ ಇಲಾಖೆಯ ಉದ್ದೇಶಿತ ಪೌತಿ ಖಾತೆ ಆಂದೋಲನದಲ್ಲಿ ಪೌತಿ ವಾರಸು ಖಾತೆ ಬದಲಾವಣೆ ಮಾಡುವ ಅಧಿಕಾರವನ್ನು ಉಪವಿಭಾಗಾಧಿಕಾರಿಗೆ ನೀಡಲಾಗುವುದೆಂದು ವರದಿಯಾಗಿದೆ. ಪ್ರಸ್ತುತ ಖಾತೆ ಬದಲಾವಣೆ ಅಧಿಕಾರ ತಹಶೀಲ್ದಾರ್‌ಗಳಿಗಿದೆ. ಅಧಿಕಾರ ವಿಕೇಂದ್ರೀಕರಣ ಪ್ರಯೋಗಗಳಲ್ಲಿ ತಳಹಂತದ ಅಧಿಕಾರಿಗಳಿಗೆ ಅಧಿಕಾರ ನೀಡುವುದು ಹಾಗೂ ಸರಳೀಕರಣ ಮಾಡುತ್ತಿರುವ ಕಾಲಮಾನದಲ್ಲಿ ಈ ಬಗೆಯ ಅಧಿಕಾರ ವರ್ಗಾವಣೆ ಅವೈಜ್ಞಾನಿಕವಾಗಿದೆ.

ಎಲ್ಲ ಬಗೆಯ ಖಾತೆ ಬದಲಾವಣೆಯ ಸಮಯದಲ್ಲಿ ಜಾರಿ ಮಾಡುವ ನಮೂನೆ 12 ಮತ್ತು 21 ಜಾರಿ ಮಾಡದೇ ಹಾಗೂ ಆಕ್ಷೇಪಗಳಿಗೆ ಅವಕಾಶ ನೀಡದೇ ಮಾಡಲು ಹೊರಟಿರುವ ಖಾತೆ ಬದಲಾವಣೆ ಆಂದೋಲನದಿಂದ ಮುಂದಿನ ದಿನಗಳಲ್ಲಿ ಮತ್ತದೇ ಕಂದಾಯ ಇಲಾಖೆಯ ನ್ಯಾಯಾಲಯಗಳಲ್ಲಿ ವಿವಾದಾಸ್ಪದ ಪ್ರಕರಣಗಳು ಹೆಚ್ಚು ದಾಖಲಾಗುವ ಸ್ಥಿತಿ ನಿರ್ಮಾಣವಾಗಬಹುದು. ಆದ್ದರಿಂದ, ಪೌತಿ ಖಾತೆ ಆಂದೋಲನದಲ್ಲಿ ಖಾತೆ ಬದಲಾವಣೆಯ ಅಧಿಕಾರವನ್ನು ತಹಶೀಲ್ದಾರ್‌ಗಳಿಗೇ ಉಳಿಸಿ, ನಿಯಮಾನುಸಾರ ಆಕ್ಷೇಪಗಳಿಗೆ ಕಾಲಾವಕಾಶ ಒದಗಿಸಿ ಖಾತೆ ಬದಲಾವಣೆ ಮಾಡುವುದು ಸೂಕ್ತ.

ಲಕ್ಷ್ಮೀಕಾಂತರಾಜು ಎಂ.ಜಿ., ಮಠಗ್ರಾಮ, ಗುಬ್ಬಿ

ಓಲೈಕೆಗಿಂತ ವಿಶ್ವಾಸ ಗಳಿಸಿ

ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿಗೆ ಭೇಟಿ ನೀಡುತ್ತಾರೆ ಎಂಬ ಕಾರಣಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವತಿಯಿಂದ ತರಾತುರಿಯಲ್ಲಿ ₹ 23 ಕೋಟಿ ಖರ್ಚು ಮಾಡಿ ಕೆಲವು ರಸ್ತೆಗಳನ್ನು ದುರಸ್ತಿ ಮಾಡಲಾಗಿತ್ತು. ಜ್ಞಾನಭಾರತಿ ಕ್ಯಾಂಪಸ್ ಬಳಿ ₹ 6 ಕೋಟಿ ವೆಚ್ಚದಲ್ಲಿ ಡಾಂಬರೀಕರಣ ಮಾಡಿದ್ದ ರಸ್ತೆಯೂ ಅದರಲ್ಲಿ ಸೇರಿದ್ದು, ಮೂರೇ ದಿನಗಳಲ್ಲಿ ಆ ರಸ್ತೆ ಕುಸಿದು ಹೋಗಿರುವುದು ಬಿಬಿಎಂಪಿ ಕಾರ್ಯಗಳ ಗುಣಮಟ್ಟಕ್ಕೆ ಹಿಡಿದ ಕನ್ನಡಿಯಾಗಿದೆ. ಆಗಾಗ ಪ್ರಧಾನಿ ಬರುತ್ತಿರಲಿ, ಅವರು ಬಂದಾಗಲಾದರೂ ಅಭಿವೃದ್ಧಿ ಕಾರ್ಯಗಳು ಚುರುಕಾಗುತ್ತವೆ ಎಂದುಕೊಂಡವರು ಈಗ ಅಂತಹ ಕಾಮಗಾರಿಗಳ ಗುಣಮಟ್ಟವನ್ನು ದೂಷಿಸುತ್ತಿದ್ದಾರೆ. ಚುನಾವಣೆ ಸಮೀಪಿಸುತ್ತಿದ್ದಂತೆಯೇ ರಾಜ್ಯಗಳಿಗೆ ಭೇಟಿ ನೀಡುವ ಪ್ರಧಾನಿಯವರ ಓಲೈಕೆಗಿಂತ ರಾಜ್ಯದ ಮತದಾರರ ವಿಶ್ವಾಸ ಗಳಿಸುವತ್ತ ಜನಪ್ರತಿನಿಧಿಗಳು ಗಮನಹರಿಸಬೇಕು.

ಸುನೀಲ ಹರಳಿ, ಸತ್ತಿಗೇರಿ

ಕಳಪೆ ಹೊಳಪು

ಒಪ್ಪುತ್ತೇವೆ, ಪ್ರಧಾನಿ ಬಂದಾಗ
ರಸ್ತೆಗಳಿಗೆ ಸಿಕ್ಕಿದ್ದು
ಫಳಫಳ ಹೊಳಪೆ,
ಆದರೆ, ಕಾಮಗಾರಿ ಮಾತ್ರ
ಖಂಡಿತಾ ಕಳಪೆ!

ಮಹಾಂತೇಶ ಮಾಗನೂರ
ಬೆಂಗಳೂರು

ದಂತವೈದ್ಯರ ನೇಮಕವಾಗಲಿ

ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಸಮುದಾಯ ಕೇಂದ್ರಗಳಲ್ಲಿ ಬಿಎಎಂಎಸ್ ಹಾಗೂ ಎಂಬಿಬಿಎಸ್ ವೈದ್ಯರ ಸೇವೆ ಸಾರ್ವಜನಿಕರಿಗೆ ಸಿಗುತ್ತಿದೆ. ಆದರೆ ದಂತವೈದ್ಯರ ಸೇವೆ ಅನೇಕ ವರ್ಷಗಳಿಂದ ಸರಿಯಾಗಿ ದೊರೆಯುತ್ತಿಲ್ಲ. ಬಹಳಷ್ಟು ಯುವ ದಂತವೈದ್ಯರು ನಿರುದ್ಯೋಗಿಗಳಾಗಿದ್ದಾರೆ. ಆರೋಗ್ಯ ಸಚಿವರು ಆರೋಗ್ಯ ಇಲಾಖೆಯಲ್ಲಿ ಗೌರವಧನ ನಿಗದಿಪಡಿಸಿ, ತಾತ್ಕಾಲಿಕವಾಗಿಯಾದರೂ ದಂತವೈದ್ಯ ಪದವೀಧರ ನಿರುದ್ಯೋಗಿಗಳಿಗೆ ಅನುಕೂಲ ಕಲ್ಪಿಸಬೇಕು.

ಎಂ.ಆಂಜನೇಯ, ಹಾವೇರಿ

ಎಂಜಿನಿಯರಿಂಗ್ ಪ್ರವೇಶ: ಹೊರೆ ಮಾಡದಿರಿ


ನಾನು ಎಂಜಿನಿಯರಿಂಗ್ ಓದುತ್ತಿರುವ ವಿದ್ಯಾರ್ಥಿನಿ. ನನ್ನಂಥ ಎಷ್ಟೋ ಬಡ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯುವಲ್ಲಿ ಆರ್ಥಿಕ ಸಂಕಷ್ಟ ಎದುರಾಗಿರುತ್ತದೆ. ಅದರ ನಡುವೆಯೂ ಎಂಜಿನಿಯರಿಂಗ್ ಪದವಿ ಪಡೆದು ದೇಶ ವಿದೇಶಗಳಲ್ಲಿ ಕೆಲಸ ಮಾಡಬೇಕೆನ್ನುವ ಮಹದಾಸೆ ಹೊಂದಿರುತ್ತಾರೆ. ಸಂಪೂರ್ಣ ಕರ್ನಾಟಕಕ್ಕೆ ಒಂದೇ ಎಂಜಿನಿಯರಿಂಗ್ ವಿಶ್ವವಿದ್ಯಾಲಯ (ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ) ಇದ್ದು, ಇದರ ಅಡಿ ಸರ್ಕಾರಿ ಕಾಲೇಜುಗಳಿಗಿಂತ ಖಾಸಗಿ ಕಾಲೇಜುಗಳೇ ಹೆಚ್ಚಾಗಿವೆ. ಎಂಜಿನಿಯರಿಂಗ್ ಶಿಕ್ಷಣ ಪಡೆಯುತ್ತಿರುವ ಹೆಚ್ಚಿನ ವಿದ್ಯಾರ್ಥಿಗಳು ಶುಲ್ಕ ಕಟ್ಟಲು ಹಣವಿಲ್ಲದೆ ಬ್ಯಾಂಕ್‌ನಲ್ಲಿ ಸಾಲ ಪಡೆದು ಪದವಿ ಪಡೆಯುತ್ತಿರುತ್ತಾರೆ. ಹೀಗಿರುವಾಗ ಸರ್ಕಾರವು ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶ ಶುಲ್ಕವನ್ನು ಶೇಕಡ 10ರಷ್ಟು ಹೆಚ್ಚಿಸಲು ಮುಂದಾಗಿರುವುದು ಸರಿಯಲ್ಲ.

ಭೂಮಿಕ ಬಿ.ಯು., ತೀರ್ಥಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಏಕರೂಪ ತೆರಿಗೆ ಪದ್ಧತಿ ಜಿಎಸ್‌ಟಿ ಜಾರಿಗೆ ಬಂದು ಐದು ವರ್ಷದ ಸಂದರ್ಭದಲ್ಲಿ ಎರಡು ಚಿಂತನೆ

ಜಿಎಸ್‌ಟಿ– ಸರಳೀಕರಣವೇ ಏಕೈಕ ಮಂತ್ರ



ಏಕೀಕೃತ ತೆರಿಗೆ ವ್ಯವಸ್ಥೆಯಿಂದ ಅನುಕೂಲಗಳಿವೆ ಎಂಬುದರ ಬಗ್ಗೆ ವಿವಾದವೇ ಇಲ್ಲ ಎಂಬುದನ್ನು ಜಗತ್ತಿನಾದ್ಯಂತ ಈ ತೆರಿಗೆ ವ್ಯವಸ್ಥೆ ಇರುವ ದೇಶಗಳ ದತ್ತಾಂಶ ದೃಢಪಡಿಸಿದೆ. ಎರಡೇ ದರಗಳನ್ನು ರೂಪಿಸಿ ಎಂದು ಸರ್ಕಾರವು ಅಧಿಕಾರಶಾಹಿಗೆ ದ್ವಂದ್ವವೇ ಇಲ್ಲದ ನಿರ್ದೇಶನ ನೀಡಬೇಕು. ಇದು ಸಾಧ್ಯವಾಗಬೇಕಿದ್ದರೆ ರಾಜಕೀಯ ಮಟ್ಟದಲ್ಲಿ ಸ್ಪಷ್ಟವಾದ ಸುಧಾರಣಾವಾದಿ ಚಿಂತನೆಯು ಅಗತ್ಯ

• ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಐಷಾರಾಮಿ ವಸ್ತುಗಳನ್ನು ಬಿಟ್ಟರೆ ಉಳಿದವುಗಳ ಶೇ 28ರ ಜಿಎಸ್‌ಟಿ ದರವು ಶೀಘ್ರ ಕೊನೆಯಾಗಲಿದೆ ಎಂದು 2018ರ ಡಿಸೆಂಬರ್‌ನಲ್ಲಿ ಆಗ ಹಣಕಾಸು ಸಚಿವರಾಗಿದ್ದ ಅರುಣ್ ಜೇಟ್ಲಿ ಘೋಷಿಸಿದ್ದರು. ದೇಶವು ಮುಂದಿನ ದಿನಗಳಲ್ಲಿ ಶೇ 5ರ ಒಂದು ದರ ಮತ್ತು ಶೇ 12 ಮತ್ತು ಶೇ 18ರ ನಡುವಣ ಒಂದು ದರವನ್ನು (ಕೆಲವು ವಸ್ತುಗಳನ್ನು ಹೊರತುಪಡಿಸಿ) ಎದುರು ನೋಡಬಹುದು. ಅಗತ್ಯ ಚಿಂತನೆ ನಡೆಸಿ, ನಿಧಾನಕ್ಕೆ ಇದನ್ನು ಜಾರಿಗೆ ತರಬೇಕು ಎಂದು ಜೇಟ್ಲಿ ಭಾವಿಸಿದ್ದರು. ಆದರೆ, ವರ್ಷ ತುಂಬುವುದರೊಳಗೆ, ಭರವಸೆ ಈಡೇರಿಸುವ ಮೊದಲೇ ಅಕಾಲಿಕವಾಗಿ ಅವರು ಸಾವಿಗೀಡಾದರು. ಸರಳತೆಯನ್ನು ಸಾಧಿಸುವುದು ಸುಲಭವಲ್ಲ. ಶ್ರೇಷ್ಠ ಸಂತರು, ಕಲಾವಿದರು ಮತ್ತು ವಿನ್ಯಾಸಕಾರರು ಕಾಲ ಕಾಲದಿಂದಲೂ ಇದನ್ನು ಬೋಧಿಸಿದ್ದಾರೆ.

ಕೇಂದ್ರ ಮತ್ತು ರಾಜ್ಯಗಳ ತೆರಿಗೆಗಳು ಮತ್ತು ಮೇಲ್ತೆರಿಗೆಗಳ ಚಕ್ರವ್ಯೂಹದ ಕೋಟೆಯಂತಹ ತೆರಿಗೆ ವ್ಯವಸ್ಥೆಯ ಇತಿಹಾಸದಲ್ಲಿ ಏಕರೂಪದ ಜಿಎಸ್‌ಟಿ ಜಾರಿ ಒಂದು ಮೈಲಿಗಲ್ಲು. ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ಈಗಲೂ ಜಿಎಸ್‌ಟಿ ವ್ಯಾಪ್ತಿಗೆ ಬಂದಿಲ್ಲ. ಕೇಂದ್ರ ಎಕ್ಸೈಸ್ ಸುಂಕಗಳು ಮತ್ತು ರಾಜ್ಯಗಳು ವಿಧಿಸುವ ವಿವಿಧ ತೆರಿಗೆಗಳು– ಶೇ 46ರಿಂದ ಶೇ 55ರಷ್ಟು ಬೃಹತ್ ದರದಲ್ಲಿ ಇವೆ.

ಹಲವು ದರಗಳನ್ನು ಹೊಂದಿರುವ ಜಿಎಸ್‌ಟಿ ಈಗಲೂ ಸಂಕೀರ್ಣ ವ್ಯವಸ್ಥೆಯೇ ಆಗಿದೆ. ಅರ್ಥ ಮಾಡಿಕೊಳ್ಳಲು ಅಥವಾ ಅನುಸರಿಸಲು ಸುಲಭವಲ್ಲ ಮತ್ತು ವಿವಿಧ ವ್ಯಾಖ್ಯಾನದ ಅವಕಾಶಗಳು ಇವೆ. ಕಿರುಕುಳಕ್ಕೂ ಅವಕಾಶ ಇದೆ. ತಪ್ಪಿಸಬಹುದಾದ ವ್ಯಾಜ್ಯಗಳ ಸಾಧ್ಯತೆಗಳು ಇವೆ. ಹಣಕಾಸು ಸಚಿವಾಲಯದ ಅಧಿಕಾರಿಗಳಿಗೆ 'ಕಿಸ್' (KISS) ತತ್ವವನ್ನು ಮತ್ತೊಮ್ಮೆ ನೆನಪಿಸಬೇಕಿದೆ.

ಕಿಸ್– ಅಂದರೆ ಕೀಪ್ ಇಟ್ ಸಿಂಪಲ್, ಸ್ಟುಪಿಡ್ (ಮೂರ್ಖ, ಸರಳವಾಗಿರಿಸು). ಇದು ವ್ಯಾಪಾರದಲ್ಲಿ ಸ್ವೀಕೃತವಾಗಿರುವ ತತ್ವ. ಲಾಕ್‌ಹೀಡ್ ವಿಮಾನ ಕಂಪನಿಯ ಎಂಜಿನಿಯರ್ ಕೆಲ್ಲಿ ಜಾನ್ಸನ್ ಅವರು ಮೊದಲು ಇದನ್ನು ಬಳಸಿದರು. ಯುದ್ಧರಂಗದಲ್ಲಿ ಒಬ್ಬ ಮೂರ್ಖ ಕೂಡ ಸಾಮಾನ್ಯ ಸಲಕರಣೆ ಬಳಸಿ ದುರಸ್ತಿ ಮಾಡಲು ಸಾಧ್ಯವಾಗುವಂತೆ ವಿಮಾನದ ವಿನ್ಯಾಸ ಇರಬೇಕು ಎಂಬುದು ಇದರ ಅರ್ಥ. ಜಗತ್ತಿನ ಎಲ್ಲೆಡೆಯೂ ಅಧಿಕಾರಶಾಹಿಗೆ 'ಕಿಸ್' ತತ್ವದ ವಿಚಾರದಲ್ಲಿ ವಿಸ್ಮೃತಿಯೇ ಇದೆ.

ಏಕೀಕೃತ ತೆರಿಗೆ ವ್ಯವಸ್ಥೆಯಿಂದ ಅನುಕೂಲಗಳಿವೆ ಎಂಬುದರ ಬಗ್ಗೆ ವಿವಾದವೇ ಇಲ್ಲ ಎಂಬುದನ್ನು ಜಗತ್ತಿನಾದ್ಯಂತ ಈ ತೆರಿಗೆ ವ್ಯವಸ್ಥೆ ಇರುವ ದೇಶಗಳ ದತ್ತಾಂಶ ದೃಢಪಡಿಸಿದೆ. ಎರಡೇ ದರಗಳನ್ನು ರೂಪಿಸಿ ಎಂದು ಸರ್ಕಾರವು ಅಧಿಕಾರಶಾಹಿಗೆ ದ್ವಂದ್ವವೇ ಇಲ್ಲದ ನಿರ್ದೇಶನ ನೀಡಬೇಕು. ಇದು ಸಾಧ್ಯವಾಗಬೇಕಿದ್ದರೆ ರಾಜಕೀಯ ಮಟ್ಟದಲ್ಲಿ ಸ್ಪಷ್ಟವಾದ ಸುಧಾರಣಾವಾದಿ ಚಿಂತನೆಯು ಅಗತ್ಯ.

ಐಷಾರಾಮಿ ವಸ್ತುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯನ್ನೇ ನೋಡೋಣ.

300 ಕೊಠಡಿಗಳಿರುವ ಪಂಚತಾರಾ ಹೋಟೆಲ್ ನೇರವಾಗಿಯೇ 500 ಜನರಿಗೆ ಉದ್ಯೋಗಾವಕಾಶ ಸೃಷ್ಟಿಸುತ್ತದೆ. ಅವರಲ್ಲಿ ಶೇ 90ರಷ್ಟು ಮಂದಿ ವೈಟರ್‌ಗಳು, ಸ್ವಚ್ಛತೆಯ ಕೆಲಸಗಾರರು, ಭದ್ರತಾ ಸಿಬ್ಬಂದಿ, ಸ್ವಾಗತ ಸಿಬ್ಬಂದಿ, ದ್ವಾರಪಾಲಕರು, ಬಾಣಸಿಗರು, ಹಣಕಾಸು ವ್ಯವಹಾರದ ಸಿಬ್ಬಂದಿ ಮತ್ತು ಕ್ಲರ್ಕ್‌ಗಳು ಇರುತ್ತಾರೆ. ಸ್ಪಾ, ಉಡುಗೊರೆ ಅಂಗಡಿ, ಈಜುಕೊಳದಲ್ಲಿಯೂ ಹಲವು ಮಂದಿ ಕೆಲಸ ಪಡೆದುಕೊಳ್ಳುತ್ತಾರೆ.

ಪರೋಕ್ಷವಾಗಿಯೂ ಹಲವು ಉದ್ಯೋಗಗಳು ಈ ಹೋಟೆಲ್‌ನಿಂದಾಗಿ ಸೃಷ್ಟಿಯಾಗುತ್ತವೆ.

ಪಂಚತಾರಾ ಹೋಟೆಲ್‌ಗಳು ವಿದೇಶದ ಶ್ರೀಮಂತ ಪ್ರವಾಸಿಗರನ್ನು ಆಕರ್ಷಿಸುತ್ತವೆ ಮತ್ತು ಆ ಮೂಲಕ ವಿದೇಶಿ ವಿನಿಮಯ ಗಳಿಸಿಕೊಡುತ್ತವೆ. ಹಾಗಾಗಿಯೇ ಇಂತಹ ಹೋಟೆಲ್‌ಗಳ ಮೇಲೆ ವಿಪರೀತ ತೆರಿಗೆ ವಿಧಿಸುವುದು ವಿವೇಕವಲ್ಲ. ಹವಾನಿಯಂತ್ರಕ, ಹವಾನಿಯಂತ್ರಿತ ಹೋಟೆಲ್, ಚಾಕೊಲೇಟ್ ಅಥವಾ ಐಷಾರಾಮಿ ಕಾರುಗಳ ಮೇಲೆ ಅತಿಯಾದ ತೆರಿಗೆ ವಿಧಿಸಬೇಕು ಎಂಬುದು ಕೂಡ ಸಂಕುಚಿತ ಮನೋಭಾವವೇ.

ಶ್ರೀಮಂತ ಮತ್ತು ಮೇಲ್ಮಧ್ಯಮ ವರ್ಗವು ಹಣ ಖರ್ಚು ಮಾಡುವುದರ ಮೂಲಕ ಅರ್ಥವ್ಯವಸ್ಥೆಯು ಪುನಶ್ಚೇತನಗೊಳ್ಳುವಂತೆ ಮಾಡುವುದು ಹೇಗೆ ಎಂಬುದನ್ನು ಕಂಡುಕೊಳ್ಳಬೇಕು. ಚಾಕೊಲೇಟ್, ಹವಾನಿಯಂತ್ರಕದಂತಹ ವಸ್ತುಗಳ ಮೇಲೆ ತೆರಿಗೆ ಹೇರಿ ಇವು ಗ್ರಾಹಕರ ಕೈಗೆಟುಕದಂತೆ ಮಾಡುವುದರ ಬದಲು, ಹೆಚ್ಚು ಹೆಚ್ಚು ಜನರು ಇವುಗಳನ್ನು ಖರೀದಿಸಲು ಸಾಧ್ಯವಾಗುವಂತೆ ಮಾಡಬೇಕು.

ನನ್ನ ಹೆಂಡತಿ ನಡೆಸುವ ಅಯ್ಯಂಗಾರ್ ಬೇಕರಿಯ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಗೊಂದಲ ಮೂಡಿಸುವಲ್ಲಿ ಅಧಿಕಾರಿಗಳು ನಿಸ್ಸೀಮರು– ಬ್ರೆಡ್‌ಗೆ ತೆರಿಗೆ ಇಲ್ಲ, ಆದರೆ, ತರಕಾರಿಯ ಸ್ಯಾಂಡ್‌ವಿಚ್‌ಗೆ ಶೇ 5ರಷ್ಟು ತೆರಿಗೆ ಇದೆ. ಇದು ತರಕಾರಿ ಬೆಳೆಯುವವರ ಮೇಲೆ ನೇರ ಪ್ರಹಾರ. ಬನ್‌ಗೆ ತೆರಿಗೆ ಇಲ್ಲ, ಅದರ ಮೇಲೆ ಒಂದಿಷ್ಟು ಒಣದ್ರಾಕ್ಷಿ ಹಾಕಿದರೆ ಶೇ 5ರಷ್ಟು ತೆರಿಗೆ ಇದೆ. ಮಸಾಲೆ ಸೇರಿಸಿದ ಶೇಂಗಾ, ಮುರುಕ್ಕುಗಳಿಗೆಲ್ಲ ಶೇ 12ರಷ್ಟು ತೆರಿಗೆ. ಕೇಕ್ ಮತ್ತು ಚಾಕೊಲೇಟ್‌ಗೆ ಶೇ 18ರಷ್ಟು ತೆರಿಗೆ.

ವಾಹನಗಳು, ಟ್ರ್ಯಾಕ್ಟರ್‌ಗಳು, ಸೈಕಲ್‌ಗಳು, ಬೈಕ್‌ಗಳು, ಕಡಿಮೆ ದರದ ಕಾರುಗಳು ಮತ್ತು ಐಷಾರಾಮಿ ಕಾರುಗಳು– ಇವುಗಳಿಗೆ ಶೇ 5, ಶೇ 12, ಶೇ 18, ಶೇ 28 ಮತ್ತು ಶೇ 50ರವರೆಗಿನ ತೆರಿಗೆ ಇದೆ. ವಾಹನಗಳ ಮಾರಾಟವು ಅರ್ಥವ್ಯವಸ್ಥೆಯೊಂದರ ಹೃದಯ ಮಿಡಿತ ಮತ್ತು ಆರೋಗ್ಯದ ಸೂಚಕ. ಹಳೆಯ ನುಡಿಯೊಂದು ಈಗಲೂ ಪ್ರಸ್ತುತ– ಕಾರುಗಳು ಮತ್ತು ಹೆದ್ದಾರಿಗಳನ್ನು ಅಮೆರಿಕ ನಿರ್ಮಿಸಲಿಲ್ಲ, ಬದಲಿಗೆ, ವಾಹನಗಳು ಮತ್ತು ರಸ್ತೆಗಳೇ ಅಮೆರಿಕವನ್ನು ಕಟ್ಟಿದವು.

ಪರೋಟ, ಚಪಾತಿ, ದೋಸೆ ಹಿಟ್ಟು ಮುಂತಾದವುಗಳನ್ನು ಮಾರುವ ನವೋದ್ಯಮ 'ಐಡಿ ಫ್ರೆಶ್ ಫೂಡ್'ನ ಜಿಎಸ್‌ಟಿ ವಿವಾದದ ಕುತೂಹಲಕರ ಪ್ರಕರಣವನ್ನೇ ನೋಡಿ. ಈ ಸಂಸ್ಥೆಯ ಉತ್ಪನ್ನಗಳಿಗೆ ಶೇ 5ರಷ್ಟು ಜಿಎಸ್‌ಟಿ ಸೇರಿಸಿ ಮಾರಾಟ ಮಾಡಲಾಗುತ್ತಿತ್ತು. ಅತಿಬುದ್ಧಿವಂತ ತೆರಿಗೆ ಅಧಿಕಾರಿಯೊಬ್ಬರು ಹೊಸ ಚಿಂತನೆಯನ್ನೇ ಮುಂದಿಟ್ಟರು. ಚಪಾತಿ ಮತ್ತು ರೋಟಿಗಳೆಲ್ಲ ಸಪಾಟು ಆಹಾರಗಳು. ಆದರೆ, ಪರೋಟ ಹಾಗಲ್ಲ, ಅದು ಪದರಗಳುಳ್ಳ ಆಹಾರ ಎಂದ ಅವರು ಪರೋಟಕ್ಕೆ ಶೇ 18ರಷ್ಟು ತೆರಿಗೆ ಹಾಕಿದರು.

ತೆರಿಗೆ ಅಧಿಕಾರಿಗಳು ಹಿಟ್ಟು ಮಾಡುವುದರ ವ್ಯತ್ಯಾಸದ ಬಗ್ಗೆ ಸಂಶೋಧನೆಯಲ್ಲಿ ತೊಡಗಿಕೊಂಡರೆ ಅರ್ಥವ್ಯವಸ್ಥೆಯನ್ನು ಐದು ಟ್ರಿಲಿಯನ್ ಡಾಲರ್‌ಗೆ (ಸುಮಾರು ₹390 ಲಕ್ಷ ಕೋಟಿ) ತಲುಪಿಸುವುದು ಸಾಧ್ಯವೇ? ಕಡಿಮೆ ವೆಚ್ಚದ ವಿಮಾನಯಾನವು ಯಶಸ್ವಿ ಆದದ್ದು 'ಕಿಸ್' ತತ್ವದ ಕಾರಣದಿಂದ: ಎಲ್ಲ ಹೆಚ್ಚುವರಿಗಳನ್ನು ಕಳಚಲಾಯಿತು– ನೀರು, ಆಹಾರ, ಉಚಿತ ಕೊಡುಗೆಗಳು, ವಿಶೇಷ ಆಸನ ಇತ್ಯಾದಿ– ಏಕ ವರ್ಗದ ಆಸನ ವ್ಯವಸ್ಥೆ, ಕೋಡ್ ಹಂಚಿಕೆ ಇಲ್ಲದೆ ಒಂದೆಡೆಯಿಂದ ಇನ್ನೊಂದೆಡೆಗೆ ನೇರ ಪ್ರಯಾಣ, ಇಂಟರ್‌ನೆಟ್ ಬುಕಿಂಗ್, ಮಧ್ಯವರ್ತಿ ಇಲ್ಲ... ಇದು ಆಕಾಶದಲ್ಲಿನ ಉಡುಪಿ ಸೆಲ್ಫ್ ಸರ್ವಿಸ್ ಹೋಟೆಲ್.

ಹಣಕಾಸು ಸಚಿವರು ಅತ್ಯಂತ ಎಚ್ಚರದ ಹೆಜ್ಜೆ ಇರಿಸುತ್ತಿದ್ದಾರೆ. ಆದರೆ, ಅದರ ಬದಲಿಗೆ ಅವರು ಪ್ರಧಾನಿಯವರ ಹೇಳಿಕೆಯಂತೆ ನಡೆದುಕೊಳ್ಳಬೇಕು. ಕೋವಿಡ್ ಬಳಿಕ ಮಹತ್ವದ ಸುಧಾರಣೆಗಳನ್ನು ನಡೆಸಲಾಗುವುದು ಎಂಬರ್ಥದ ಮಾತನ್ನು ಪ್ರಧಾನಿ ಆಡಿದ್ದರು. ಅದರಂತೆ ಹಣಕಾಸು ಸಚಿವರು, ಗೊಂದಲಕಾರಿಯಾದ ಹಲವು ದರಗಳನ್ನು ಶೀಘ್ರವೇ ಕೈಬಿಡಬೇಕು. ವಿನಾಯಿತಿಯ ಪಟ್ಟಿಯೊಂದಿಗೆ ಕಡಿಮೆಯಾದ ಒಂದೇ ತೆರಿಗೆ ದರವನ್ನು ಹಣಕಾಸು ಸಚಿವೆ ಮುಂದಿರಿಸಬಹುದು. ಇದು ತೆರಿಗೆ ಅನುಸರಣೆ ಹೆಚ್ಚಿಸಬಹುದು, ತೆರಿಗೆ ವ್ಯಾಪ್ತಿ ಹಿಗ್ಗಿಸಬಹುದು, ಸುಲಲಿತ ವ್ಯಾಪಾರವನ್ನು ಸುಧಾರಿಸಬಹುದು, ಅರ್ಥವ್ಯವಸ್ಥೆಗೆ ಉತ್ತೇಜನ ನೀಡಬಹುದು, ಉದ್ಯೋಗ ಸೃಷ್ಟಿಸಬಹುದು, ತೆರಿಗೆ ಸಂಗ್ರಹ ಹೆಚ್ಚಿಸಬಹುದು ಮತ್ತು ಭ್ರಷ್ಟಾಚಾರವನ್ನು ತಗ್ಗಿಸಬಹುದು. ಹಲವು ದೇಶಗಳಲ್ಲಿ ಇದು ಸಾಧ್ಯವಾಗಿದೆ.

ವಿನ್‌ಸ್ಟನ್ ಚರ್ಚಿಲ್ ಅವರ ಚತುರ ನುಡಿಯೊಂದನ್ನು ಇಲ್ಲಿ ನೆನಪಿಸಿಕೊಳ್ಳಬಹುದು: 'ಸಮೃದ್ಧಿ ಹೊಂದುವುದಕ್ಕಾಗಿ ತೆರಿಗೆ ಹೇರುವ ದೇಶವು ಬಕೆಟ್‌ನೊಳಗೆ ನಿಂತು ಅದರ ಹಿಡಿಯ ಮೂಲಕ ತನ್ನನ್ನು ಮೇಲೆತ್ತಿಕೊಳ್ಳಲು ಶ್ರಮಿಸುತ್ತಿರುವ ವ್ಯಕ್ತಿಗೆ ಸಮಾನ'.

ಲೇಖಕ: ಉದ್ಯಮಿ



ಗೋಜಲು ಬಿಡಿಸಲು ಸಕಾಲ

• ಅನುಪಮ್ ಮಣೂರ್



ಜಿಎಸ್‌ಟಿಯು ಏಕರೂಪದ ಮತ್ತು ಸರಳ ತೆರಿಗೆ ವ್ಯವಸ್ಥೆಯಾಗಬೇಕಿತ್ತು. ಆದರೆ ಜಿಎಸ್‌ಟಿಯು ಸರಕು ಮತ್ತು ಸೇವೆಗಳ ವರ್ಗೀಕರಣ, ಮರುವರ್ಗೀಕರಣದಂತಹ ಸಂಕೀರ್ಣತೆಗಳ ಮಹಾ ಗೋಜಲಾಗಿದೆ. ಇನ್ನು ಸ್ವಲ್ಪವೇ ಚೌಕಾಸಿ ನಡೆಸಿದ್ದರೆ ಮತ್ತು ರಾಜಕೀಯ ಇಚ್ಛಾಶಕ್ತಿ ಇದ್ದಿದ್ದರೆ ನಮ್ಮ ಜಿಎಸ್‌ಟಿ ವ್ಯವಸ್ಥೆಯು ಒಂದು ಅಥವಾ ಎರಡು ತೆರಿಗೆ ದರದ ವ್ಯವಸ್ಥೆಯಾಗಿ ರೂಪುಗೊಳ್ಳುತ್ತಿತ್ತು

ಜಿಎಸ್‌ಟಿಗೆ ಕೊಡಬೇಕಿದ್ದ ಶಹಬ್ಬಾಸ್‌ಗಿರಿಯನ್ನು ನಾವು ಕೊಡಲೇಬೇಕಿದೆ. ದೊಡ್ಡ, ಒಕ್ಕೂಟ ವ್ಯವಸ್ಥೆಯ ಮತ್ತು ಬೇರೆ ಬೇರೆ ರಾಜಕೀಯ ಪಕ್ಷಗಳ ಆಡಳಿತದ ಹಲವು ರಾಜ್ಯಗಳಿರುವ ದೇಶದಲ್ಲಿ ಸರಕು ಮತ್ತು ಸೇವೆಗಳಿಗೆ ಒಂದೇ ದರದ ತೆರಿಗೆ ವಿಧಿಸುವುದನ್ನು ಜಾರಿಗೆ ತಂದಿದ್ದು ದೊಡ್ಡ ಸಾಧನೆಯೇ ಸರಿ. ದೇಶದ 29 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಜತೆಗೆ ಒಕ್ಕೂಟ ಸರ್ಕಾರವು ಚೌಕಾಸಿ ನಡೆಸಿ ಮತ್ತು ಪೂರ್ಣ ಸಹಮತದೊಂದಿಗೆ 2017ರ ಜುಲೈ 1ರಂದು ಸರಕು ಮತ್ತು ಸೇವಾ ತೆರಿಗೆಯನ್ನು (ಜಿಎಸ್‌ಟಿ) ಜಾರಿಗೆ ತರಲಾಯಿತು. ದೇಶೀಯ ತೆರಿಗೆಗಳನ್ನು ಸರಳ ಮತ್ತು ಏಕರೂಪಗೊಳಿಸುವ, ತೆರಿಗೆ ಆದಾಯವನ್ನು ಹೆಚ್ಚಿಸುವ ಮತ್ತು ಆರ್ಥಿಕತೆಯಲ್ಲಿನ ನ್ಯೂನತೆಗಳನ್ನು ಸರಿಪಡಿಸುವ ಅತಿದೊಡ್ಡ ನಿರೀಕ್ಷೆಗಳೊಂದಿಗೆ ಜಿಎಸ್‌ಟಿಯನ್ನು ಜಾರಿಗೆ ತರಲಾಗಿತ್ತು.

ಒಕ್ಕೂಟ ಮತ್ತು ರಾಜ್ಯಗಳು ವಿಧಿಸುತ್ತಿದ್ದ ಒಂಬತ್ತು ಬೇರೆ ಬೇರೆ ತೆರಿಗೆಗಳನ್ನು ಒಗ್ಗೂಡಿಸಿದ್ದು ಜಿಎಸ್‌ಟಿಯ ಬಹುದೊಡ್ಡ ಸಾಧನೆ. ದೇಶದಾದ್ಯಂತ ಸರಕುಗಳ ಸರಾಗ ಸಾಗಣೆಗೆ ಅಡಚಣೆಯಾಗಿದ್ದ ಮತ್ತು ವ್ಯಾಪಕ ಭ್ರಷ್ಟಾಚಾರಕ್ಕೆ ಕಾರಣವಾಗಿದ್ದ ಚೆಕ್‌ಪೋಸ್ಟ್ ವ್ಯವಸ್ಥೆಯನ್ನು ಹೋಗಲಾಡಿಸಿದ್ದು ಜಿಎಸ್‌ಟಿಯ ಮತ್ತೊಂದು ಬಹುದೊಡ್ಡ ಸಾಧನೆ.

ಆದರೆ, ಜಿಎಸ್‌ಟಿಯು ತನ್ನ ತೆರಿಗೆ ಸಂಗ್ರಹ ನಿರೀಕ್ಷೆಯನ್ನು ಮುಟ್ಟಿಲ್ಲ. ಆರಂಭಿಕ ದಿನಗಳಲ್ಲಿ ತೆರಿಗೆ ಸಂಗ್ರಹ ಇಳಿಕೆಯಾದರೂ, ನಂತರದ ದಿನಗಳಲ್ಲಿ ಈ ಹಿಂದಿನ ವ್ಯವಸ್ಥೆಗಿಂತ ಹೆಚ್ಚು ತೆರಿಗೆಯನ್ನು ಜಿಎಸ್‌ಟಿ ತಂದುಕೊಡಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಇದು ಸಾಧ್ಯವಾಗಿಲ್ಲ. 2017–18ರಲ್ಲಿ ತೆರಿಗೆ ಸಂಗ್ರಹವು ಶೇ 10ರಷ್ಟು ಇಳಿಕೆಯಾಗಿತ್ತು ಮತ್ತು ನಂತರದ ವರ್ಷಗಳಲ್ಲಿ ಅದು ಸಾಧಾರಣ ಮಟ್ಟದಲ್ಲಿದೆ ಎಂದು ಸಿಎಜಿ ತನ್ನ ವರದಿಯಲ್ಲಿ ವಿಶ್ಲೇಷಿಸಿದೆ.

ಜಿಎಸ್‌ಟಿ ನೆಟ್‌ವರ್ಕ್ ಎಂಬ ಅತ್ಯಂತ ಪ್ರಬಲ ತಂತ್ರಜ್ಞಾನ ಪ್ಲಾಟ್‌ಫಾರ್ಮ್‌ನಲ್ಲಿ ಜಿಎಸ್‌ಟಿ ವ್ಯವಸ್ಥೆ ಕೆಲಸ ಮಾಡುತ್ತದೆ. ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ಅನ್ನು ಪರಿಶೀಲಿಸಲು ಜಿಎಸ್‌ಟಿಎನ್ ಬಳಕೆಯಾಗುತ್ತದೆ. ಆದರೆ, ಜಿಎಸ್‌ಟಿಎನ್ ಬಳಕೆಯು ತಾಂತ್ರಿಕ ಸಮಸ್ಯೆಗಳಿಂದ ಕೂಡಿತ್ತು. ಜಿಎಸ್‌ಟಿ ಫೈಲಿಂಗ್‌ನಲ್ಲಿ ಸಮಸ್ಯೆ ಇತ್ತು, ಜಿಎಸ್‌ಟಿ ಮರುಪಾವತಿ ಸ್ಥಗಿತವಾಗಿತ್ತು, ಅಸಮಂಜಸವಾದ ದಂಡ, ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ಗುರುತಿಸುವಲ್ಲಿ ವೈಫಲ್ಯ... ಈ ಎಲ್ಲಾ ಸಮಸ್ಯೆಗಳಿಂದ ಸಣ್ಣ–ಪುಟ್ಟ ಉದ್ಯಮಗಳು ಭಾರಿ ನಷ್ಟ ಅನುಭವಿಸಿದವು.

ಜಿಎಸ್‌ಟಿ ವ್ಯವಸ್ಥೆ ಇನ್ನೇನು ಸರಿಹೋಗುತ್ತಿದೆ ಎನ್ನುವಾಗ ಕೋವಿಡ್ ಸಾಂಕ್ರಾಮಿಕ ಬಂದೆರಗಿತು. ಅದರ ಹಿಂದೆಯೇ ಒಂದರ ನಂತರ ಒಂದರಂತೆ ಬಂದ ಲಾಕ್‌ಡೌನ್‌ಗಳು ಆರ್ಥಿಕತೆಯನ್ನು ಹದಗೆಡಿಸಿದವು. ಸಹಜವಾಗಿಯೇ ತೆರಿಗೆ ಸಂಗ್ರಹಕ್ಕೆ ಹೊಡೆತ ಬಿತ್ತು. ಆದರೆ ಇದರ ಮಧ್ಯೆಯೇ, ಕೋವಿಡ್ ಎರಡನೇ ಅಲೆಯ ನಂತರ ತೆರಿಗೆ ಸಂಗ್ರಹ ನಿರಂತರವಾಗಿ ಏರಿಕೆಯಾಗುತ್ತಲೇ ಇದೆ ಎಂಬ ಒಳ್ಳೆಯ ಸುದ್ದಿಯೂ ಇದೆ.

ಜಿಎಸ್‌ಟಿ ವ್ಯವಸ್ಥೆಯಲ್ಲಿ ಇರುವ ಅತ್ಯಂತ ದೊಡ್ಡ ನ್ಯೂನತೆಯಂದರೆ, ಅದರ ಸಂಕೀರ್ಣತೆ. ಮತ್ತು ಈ ನ್ಯೂನತೆಯನ್ನು ತಕ್ಷಣವೇ ಸರಿಪಡಿಸಬೇಕಾದ ಅಗತ್ಯವಿದೆ. ಜಿಎಸ್‌ಟಿಯಲ್ಲಿ ಈಗ ಶೇ 5, ಶೇ 12, ಶೇ 18 ಮತ್ತು ಶೇ 28ರ ನಾಲ್ಕು ಪ್ರತ್ಯೇಕ ಪ್ರಾಥಮಿಕ ದರಗಳಿವೆ. ಜತೆಗೆ ವಿನಾಯಿತಿ ಪಡೆದ ಸರಕುಗಳ ಮೇಲೆ (ಶೇ 0), ಅಮೂಲ್ಯ ಮುತ್ತು–ರತ್ನ ಮತ್ತು ಹವಳಗಳ ಮೇಲೆ ಶೇ 0.25ರ ವಿಶೇಷ ದರ, ಚಿನ್ನದ ಮೇಲೆ ಶೇ 3ರಷ್ಟು ತೆರಿಗೆಯ ಹೆಚ್ಚುವರಿ ದರಗಳೂ ಇವೆ. ಐಷಾರಾಮಿ ವಸ್ತುಗಳು ಎಂಬ ಒಪ್ಪತಕ್ಕದ್ದಲ್ಲದ ಶೇ 28ರಷ್ಟು ಭಾರಿ ದರದ ತೆರಿಗೆ ಕಟ್ಟಬೇಕಾದ ಮತ್ತೊಂದು ವರ್ಗವೂ ಇದೆ. ಜಿಎಸ್‌ಟಿಯು ಏಕರೂಪದ ಮತ್ತು ಸರಳ ತೆರಿಗೆ ವ್ಯವಸ್ಥೆಯಾಗಬೇಕಿತ್ತು. ಆದರೆ ಜಿಎಸ್‌ಟಿಯು ಸರಕು ಮತ್ತು ಸೇವೆಗಳ ವರ್ಗೀಕರಣ, ಮರುವರ್ಗೀಕರಣದಂತಹ ಸಂಕೀರ್ಣತೆಗಳ ಮಹಾ ಗೋಜಲಾಗಿದೆ. ಇನ್ನು ಸ್ವಲ್ಪವೇ ಚೌಕಾಸಿ ನಡೆಸಿದ್ದರೆ ಮತ್ತು ರಾಜಕೀಯ ಇಚ್ಛಾಶಕ್ತಿ ಇದ್ದಿದ್ದರೆ ನಮ್ಮ ಜಿಎಸ್‌ಟಿ ವ್ಯವಸ್ಥೆಯು ಒಂದು ಅಥವಾ ಎರಡು ತೆರಿಗೆ ದರದ ವ್ಯವಸ್ಥೆಯಾಗಿ ರೂಪುಗೊಳ್ಳುತ್ತಿತ್ತು.

ತೆರಿಗೆ ಹೊರೆ ಹಂಚಿಕೆಯಲ್ಲಿ ಸಮಾನತೆ ಸಾಧಿಸುವ ಸಲುವಾಗಿ ಕೆಲವು ಅತ್ಯಗತ್ಯ ವಸ್ತುಗಳನ್ನು ಜಿಎಸ್‌ಟಿಯಿಂದ ಹೊರಗೆ ಇಡಲಾಗಿದೆ ಇಲ್ಲವೇ ಅತ್ಯಂತ ಕಡಿಮೆ ದರದ ವರ್ಗಕ್ಕೆ ಸೇರಿಸಲಾಗಿದೆ. ಇಂತಹ ಸಮಾನತೆಯನ್ನು ತೆರಿಗೆ ಹೊರೆ ಹಂಚಿಕೆಗಿಂತ, ಸರ್ಕಾರವು ತನ್ನ ವೆಚ್ಚದ ಮೂಲಕ ಸಾಧಿಸುವುದು ಹೆಚ್ಚು ಸೂಕ್ತ ಎಂಬುದಕ್ಕೆ ನಿದರ್ಶನಗಳಿವೆ. ಬ್ರ್ಯಾಂಡ್ ಅಲ್ಲದ ಆಹಾರ ಪದಾರ್ಥಗಳನ್ನು ಜಿಎಸ್‌ಟಿಯಿಂದ ಹೊರಗೆ ಇಡಲಾಗಿದೆ. ಆದರೆ ಬ್ರ್ಯಾಂಡೆಡ್ ಆಹಾರ ಪದಾರ್ಥಗಳಿಗೆ ಶೇ 12ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಈ ರೀತಿಯ ಆಯ್ದ ಸ್ವರೂಪದ ತೆರಿಗೆ ಹೇರಿಕೆಯು ಹಲವು ಸಮಸ್ಯೆಗಳನ್ನು ತಂದೊಡ್ಡುತ್ತದೆ. ತೆರಿಗೆಯಲ್ಲಿನ ಭಾರಿ ಅಂತರದ ಕಾರಣ ಆಹಾರ ಪದಾರ್ಥದಲ್ಲಿನ ಉತ್ಪಾದನೆಯು ಅಸಂಘಟಿತ ವಲಯದತ್ತ ಹೊರಳುತ್ತಿದೆ.

ಜಿಎಸ್‌ಟಿ ವ್ಯವಸ್ಥೆಯ ಸಂಕೀರ್ಣತೆಯನ್ನು ಈ ನಿದರ್ಶನದ ಮೂಲಕ ಇನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು. ಪಿಜ್ಜಾಗಳನ್ನು ಹೇಗೆ ಮಾಡಲಾಗುತ್ತದೆ ಮತ್ತು ಹೇಗೆ ಮಾರಾಟ ಮಾಡಲಾಗುತ್ತದೆ ಎಂಬುದರ ಮೇಲೆ ಮೂರು ದರದ ಜಿಎಸ್‌ಟಿ ವಿಧಿಸಲಾಗುತ್ತದೆ. ರೆಸ್ಟೋರೆಂಟ್‌ನಲ್ಲಿ ಕೂತು ಪಿಜ್ಜಾ ತಿನ್ನುವುದಾದರೆ ಸರ್ಕಾರಕ್ಕೆ ಶೇ 5ರಷ್ಟು ಜಿಎಸ್‌ಟಿ ನೀಡಬೇಕು. ಅದೇ ಪಿಜ್ಜಾವನ್ನು ಮನೆಗೆ ತರಿಸಿಕೊಂಡರೆ ಅದಕ್ಕೆ ಶೇ 18ರಷ್ಟು ಜಿಎಸ್‌ಟಿ ಕಟ್ಟಬೇಕು. ಪಿಜ್ಜಾ ಬೇಸ್‌ಗೆ ಶೇ 12ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಅದೇ ಪಿಜ್ಜಾ ಬೇಸ್‌ನ ಮೇಲೆ ಹಾಕುವ ಟಾಪಿಂಗ್ಸ್‌ಗಳಿಗೆ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತದೆ.

ಸಂಕೀರ್ಣ ಮತ್ತು ಭಾರಿ ದರದ ಜಿಎಸ್‌ಟಿಯು ಆರ್ಥಿಕತೆಗೆ ಮಾರಕವಾಗಿ ಪರಿಗಣಿಸುತ್ತದೆ. ಸಿಮೆಂಟ್, ಟೈಲ್ಸ್, ಮಾರ್ಬಲ್–ಗ್ರನೇಟ್, ಪೇಂಟ್ ಮತ್ತು ಪ್ಲೈವುಡ್‌ಗಳಂತಹ ನಿರ್ಮಾಣ ಕಾಮಗಾರಿಯ ಸರಕುಗಳನ್ನು ಐಷಾರಾಮಿ ವಸ್ತುಗಳು ಎಂದು ಪರಿಗಣಿಸಲಾಗಿದೆ. ಅವುಗಳ ಮೇಲೆ ಶೇ 28ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ವಾಹನ ಮತ್ತು ಬಿಡಿಭಾಗಗಳ ಮೇಲಂತೂ ಶೇ 28ರಷ್ಟು ಜಿಎಸ್‌ಟಿ ಮತ್ತು ಕೆಲವು ಸಂದರ್ಭಗಳಲ್ಲಿ ಶೇ 22ರಷ್ಟು ಪರಿಹಾರ ಸೆಸ್ ಅನ್ನು ಹೇರಲಾಗಿದೆ. ಒಟ್ಟಾರೆಯಾಗಿ ಇದು ಶೇ 50ರಷ್ಟು ತೆರಿಗೆಯಾಗುತ್ತದೆ. ಈ ಎರಡೂ ವಲಯಗಳು ಉದ್ಯೋಗ ಸೃಷ್ಟಿಯಲ್ಲಿ ಅತ್ಯಂತ ಮಹತ್ವದ್ದಾಗಿವೆ. ವಿಪರೀತ ತೆರಿಗೆಯು ಬೇಡಿಕೆಯನ್ನು ಕುಗ್ಗಿಸಬಹುದು. ಪರಿಣಾಮವಾಗಿ ಉದ್ಯೋಗ ನಷ್ಟವಾಗಬಹುದು.

ಜಿಎಸ್‌ಟಿ ಜಾರಿಗೆ ಬಂದು ಐದು ವರ್ಷಗಳಾಗಿವೆ. ಜಿಎಸ್‌ಟಿ ವ್ಯವಸ್ಥೆಯೂ ಸರಿಯಾಗಿ ಕೆಲಸ ಮಾಡುತ್ತಿದೆ ಮತ್ತು ತೆರಿಗೆ ಸಂಗ್ರಹವೂ ಏರಿಕೆಯಾಗುತ್ತಿದೆ. ಜಿಎಸ್‌ಟಿ ಜಾರಿಯ ಮೂಲ ಉದ್ದೇಶವಾಗಿದ್ದ ಸರಳ ತೆರಿಗೆ ವ್ಯವಸ್ಥೆಯನ್ನು ಸಾಧಿಸುವ ಸುಧಾರಣೆಗೆ ಇದು ಸಕಾಲ. ಈ ಸುಧಾರಣೆಯಲ್ಲಿ ವಿವಿಧ ತೆರಿಗೆ ದರಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ಅಡಿಯಲ್ಲಿ ತರಬೇಕು. ಪೆಟ್ರೋಲಿಯಂ ಉತ್ಪನ್ನಗಳನ್ನು ಉತ್ಪಾದನೆಗೆ ಬಳಸಿಕೊಳ್ಳುವ ಉದ್ಯಮಗಳ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಇದರಿಂದ ಸರಳವಾಗುತ್ತದೆ. ಜತೆಗೆ ಗ್ರಾಹಕರಿಗೆ ಕಡಿಮೆ ಬೆಲೆಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳು ದೊರೆಯುತ್ತವೆ. ಎರಡನೆಯದಾಗಿ, ಹಲವು ದರದ ತೆರಿಗೆಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು ಮತ್ತು ಪರಿಹಾರ ಸೆಸ್ ಅನ್ನು ಸಂಪೂರ್ಣವಾಗಿ ತೆಗೆದು ಹಾಕಬೇಕು. ಶೇ 15ರಷ್ಟು ತೆರಿಗೆಯ ಏಕ ದರದ ವ್ಯವಸ್ಥೆ ಜಾರಿಗೆ ತರಬೇಕು ಮತ್ತು ಅದನ್ನು 10 ವರ್ಷಗಳಲ್ಲಿ ಶೇ 12ಕ್ಕೆ ಇಳಿಸುವ ಗುರಿ ಹಾಕಿಕೊಳ್ಳಬೇಕು. ಮೂರನೆಯದಾಗಿ, ಜಿಎಸ್‌ಟಿ ಪಾಲನಾ ವೆಚ್ಚವನ್ನು ಕಡಿತಗೊಳಿಸಬೇಕು. ತೆರಿಗೆ ಸಂಬಂಧಿ ವ್ಯಾಜ್ಯ ಪರಿಹಾರ ವ್ಯವಸ್ಥೆಯಲ್ಲೂ ಸುಧಾರಣೆಗೆ ಹಲವು ಅವಕಾಶಗಳಿವೆ.

ಭಾರತವನ್ನು ಏಕ ಮಾರುಕಟ್ಟೆಯಾಗಿ ಮಾರ್ಪಡಿಸುವಲ್ಲಿ ಜಿಎಸ್‌ಟಿಯು ಅನಿವಾರ್ಯವಾದ ವ್ಯವಸ್ಥೆಯಾಗಿದೆ. ತನ್ನದೇ ಸಂಕೀರ್ಣತೆಗಳಿಂದ ಬಳಲುತ್ತಿರುವ ಜಿಎಸ್‌ಟಿಯನ್ನು ಸುಧಾರಿಸಿ, ಅದರ ನೈಜ ಸಾಮರ್ಥ್ಯವನ್ನು ಬಳಸಿಕೊಳ್ಳಲು ಈಗ ಕಾಲ ಒದಗಿಬಂದಿದೆ.

ಲೇಖಕ: ತಕ್ಷಶಿಲಾ ಸಂಸ್ಥೆಯಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕ

ಪೂರಕ ಮಾಹಿತಿ: ಎಂ.ಗೋವಿಂದ ರಾವ್, ತಕ್ಷಶಿಲಾ ಸಂಸ್ಥೆಯ ಕೌನ್ಸಿಲರ್



ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 156

ಬ್ರಹ್ಮನ ರಕ್ಷಣೆಗೆ ಬಂದ ವಿಷ್ಣು

ಕಾಮವಿಕಾರಕ್ಕೆ ಸಿಲುಕಿದ್ದ ಬ್ರಹ್ಮ ಹೇಗಾದರೂ ಸತೀದೇವಿಯ ಮುಖ ನೋಡಬೇಕೆಂಬ ಉತ್ಕಟೇಚ್ಛೆಯಿಂದ ಒಂದು ಉಪಾಯ ಮಾಡಿದ. ಹಸಿಯ ಸೌದೆಗಳನ್ನು ವಿವಾಹಾಗ್ನಿಗೆ ಹೆಚ್ಚಾಗಿ ಹಾಕಿ ಆಜ್ಯವನ್ನು ಸ್ವಲ್ಪವೇ ಹೋಮಮಾಡುತ್ತಾ ಹೊಗೆಯನ್ನೆಬ್ಬಿಸಿದ. ಆಗ ಹೊಗೆಯು ಹೆಚ್ಚಾಗಿ, ಯಾರಿಗೂ ಕಣ್ಣು ಕಾಣಿಸದಂತಾಯಿತು. ಹೊಗೆಯಿಂದ ರಕ್ಷಿಸಿಕೊಳ್ಳಲು ಪರಮೇಶ್ವರ ತನ್ನೆರಡು ಕೈಗಳಿಂದ ಕಣ್ಣುಗಳನ್ನು ಮುಚ್ಚಿಕೊಂಡ. ಆಗ ಕಾಮುಕನಾದ ಬ್ರಹ್ಮ ವಧುವಿನ ಉಡುಪಿನಲ್ಲಿದ್ದ ಸತೀದೇವಿಯ ಸೀರೆ ಸೆರಗನ್ನು ಸರಿಸಿ, ಅವಳ ಸುಂದರಮುಖವನ್ನು ನೋಡಿ ಮಹಾಸಂತೋಷದಿಂದ ಸಂಭ್ರಮಿಸಿದ.

ಕಾಮವಿಕಾರಕ್ಕೊಳದ ಬ್ರಹ್ಮನ ವೀರ್ಯವು ಹಿಮದ ತುಂತುರಿನಂತೆ ನೆಲಕ್ಕೆ ಬಿದ್ದಿತು. ಇದನ್ನು ಕಂಡು ಬ್ರಹ್ಮ ಹೆದರಿ ತನ್ನ ರೇತಸ್ಸನ್ನು ಯಾರಿಗೂ ಕಾಣಿಸದಂತೆ ಒರೆಸಿ ಮುಚ್ಚಿಹಾಕಿದ. ಆಗ ಭಗವಾನ್ ಶಂಕರನ ದಿವ್ಯದೃಷ್ಟಿಗೆ ಬ್ರಹ್ಮ ಮಾಡಿದ ಕುಕೃತ್ಯ ತಿಳಿದುಹೋಯಿತು. ಆಗ ರುದ್ರ ಭಯಂಕರ ಕೋಪದಿಂದ 'ಎಲೈ ಪಾಪಿಯಾದ ಬ್ರಹ್ಮನೆ! ಇದೇನು ಮಾಡಿದೆ? ವಿವಾಹದ ಸಂದರ್ಭದಲ್ಲಿ ನನ್ನ ಕಾಂತೆಯ ಮುಖವನ್ನು ಅನುರಾಗದಿಂದ ನೋಡುತ್ತಿರುವೆಯಲ್ಲಾ! ಇಂಥ ನಿಂದಿತವಾದ ಅಸಹ್ಯವಾದ ಕರ್ಮವನ್ನು ಏಕೆ ಮಾಡಿರುವೆ?' ಎಂದು ಪ್ರಶ್ನಿಸಿದ.

ರುದ್ರದೇವನ ಕೋಪನೋಡಿ ಬ್ರಹ್ಮ ತನ್ನ ತಪ್ಪಿನ ಅರಿವಾಗಿ ನಿರುತ್ತರನಾದ. ಆಗ ಶಿವ ಮತ್ತಷ್ಟು ಕೋಪೋದ್ರಿಕ್ತನಾಗಿ 'ನೀನು ಮಾಡಿದ ದುಷ್ಕರ್ಮವು ನನಗೆ ತಿಳಿದಿಲ್ಲವೆಂದುಕೊಂಡಿರುವೆಯಾ? ಮೂರು ಲೋಕಗಳಲ್ಲಿ ಶಂಕರನಿಗೆ ತಿಳಿಯದಿರುವುದು ಯಾವುದೂ ಇಲ್ಲ; ನಿನ್ನ ಅವಿವೇಕವು ನನಗೆ ತಿಳಿಯಲಾರದೆ? ಎಳ್ಳಿನಲ್ಲಿ ಹೇಗೆ ಎಣ್ಣೆಯು ಅಡಗಿರುವುದೋ ಅದರಂತೆ ನಾನೂ ಮೂರು ಲೋಕಗಳಲ್ಲಿರುವ ಸ್ಥಿರಚರರೂಪಗಳಲ್ಲಿ ಅಂತರ್ಯಾಮಿಯಾಗಿ ವ್ಯಾಪಿಸಿರುವೆ. ನನಗೆ ತಿಳಿಯದಿರುವ ಸಮಾಚಾರವು ಒಂದೂ ಇಲ್ಲ' ಎಂದು ಹೇಳಿ, ವಿಷ್ಣುವಿಗೆ ಕೊಟ್ಟ ವಾಗ್ದಾನದಂತೆ ಬ್ರಹ್ಮನನ್ನು ಸಂಹರಿಸಲು ತ್ರಿಶೂಲವನ್ನೆತ್ತಿದ.


ಆಗ ಬ್ರಹ್ಮನ ಮಾನಸಪುತ್ರರಾದ ಮರೀಚಿಮುನಿ ಮೊದಲಾದವರು ಭಯದಿಂದ ಹಾಹಾಕಾರ ಮಾಡಿದರು. ಶಂಕರನನ್ನು ಶಾಂತಗೊಳಿಸಲು ವಿವಿಧ ಸ್ತೋತ್ರ ಮಾಡಿದರು. 'ಓ ಮಹಾದೇವನೇ, ಶಾಂತನಾಗು. ಅನುಗ್ರಹವನ್ನು ಮಾಡಿ ಬ್ರಹ್ಮನನ್ನು ರಕ್ಷಿಸು. ನೀನು ಜಗತ್ತಿಗೆ ತಂದೆಯಾದರೆ, ಸತಿಯು ನಮಗೆಲ್ಲ ಮಾತೆ. ನೀನು ಅದ್ಭುತವಾದ ಆಕಾರ ಮತ್ತು ಲೀಲೆಯುಳ್ಳವನು. ನಿನ್ನ ಮಾಯೆಯು ಅಮೋಘವಾದದು. ಆ ಮಾಯೆಯು ನಿನ್ನ ಭಕ್ತಿಯಿಲ್ಲದ ಪ್ರಾಣಿಗಳನ್ನೆಲ್ಲಾ ಮೋಹಗೊಳಿಸಿ, ಪಾಠ ಕಲಿಸುವುದು. ಈಗ ಬ್ರಹ್ಮನು ನಿನ್ನ ಮಾಯೆಯಿಂದ ತಪ್ಪು ಮಾಡಿದ್ದಾನೆ. ಆ ತಪ್ಪನ್ನು ಕ್ಷಮಿಸು' ಎಂದು ಮನವಿ ಮಾಡಿದರು.

ದೇವತೆಗಳು ಮತ್ತು ಮುನಿಗಳು ದೀನತೆಯಿಂದ ಸ್ತುತಿಸಿದರೂ ಕೇಳದ ಮಹೇಶ್ವರ ತನ್ನ ಶೂಲದಿಂದ ಕೊಲ್ಲಲು ಮುಂದಾದಾಗ ಅಡ್ಡಬಂದ ದಕ್ಷಪ್ರಜಾಪತಿ 'ಬೇಡ ಬೇಡ, ನನ್ನ ತಂದೆಯನ್ನು ಕೊಲ್ಲಬೇಡ' ಎಂದು ಭಯದಿಂದ ಕೈಗಳನ್ನೆತ್ತಿ ನಮಸ್ಕರಿಸುತ್ತಾ ಶಿವನನ್ನು ತಡೆದ. ಆಗ ಶಿವ ತಾನು ವಿಷ್ಣುವಿಗೆ ಮಾತುಕೊಟ್ಟದ್ದನ್ನು ಎಲ್ಲರಿಗೂ ತಿಳಿಸಲು 'ಎಲೈ ದಕ್ಷಬ್ರಹ್ಮನೇ, ನನ್ನ ಪ್ರಿಯಭಕ್ತನಾದ ಹರಿಯು ಸತಿಯನ್ನು ಕಾಮಿಸಿದವರನ್ನು ಸಂಹರಿಸು ಎಂದು ಹೇಳಿರುವುದನ್ನು ನಾನು ಅಂಗೀಕರಿಸಿರುವೆ. ಅದನ್ನು ಮೀರಲು ಸಾಧ್ಯವಿಲ್ಲ. ಅದರಂತೆ ಈಗ ಬ್ರಹ್ಮನನ್ನು ಸಂಹರಿಸಿ ಹರಿಯ ಕೋರಿಕೆಯನ್ನು ಈಡೇರಿಸುವೆ' ಎನ್ನುತ್ತಾನೆ.

ಆಗ ಅಲ್ಲಿ ನೆರೆದಿದ್ದ ದೇವತೆಗಳೂ ಮುನಿಗಳೂ ಭಯದಿಂದ ನಡುಗಿ, ಹಾಹಾಕಾರ ಮಾಡಿದರು. ನಿರಾಶೆಯು ಎಲ್ಲರಲ್ಲಿಯೂ ಮೂಡಿತು. ಬ್ರಹ್ಮ ತುಂಬಾ ಭಯದಿಂದ ದೀನನಾಗಿ ನಡುಗುತ್ತಾ ನಿಂತಿದ್ದ. ಆಗ ಮಧ್ಯ ಪ್ರವೇಶಿಸಿದ ಹರಿಯು, ಅನೇಕ ಸ್ತೋತ್ರಗಳಿಂದ ಶಂಕರನನ್ನು ಸ್ತುತಿಸಿ, ಶಿವನನ್ನು ತಡೆದ. 'ಓ ಶಂಕರ! ಜಗತ್ತಿಗೆ ಸೃಷ್ಟಿಕರ್ತನಾದ ಈ ವಿಧಿಯನ್ನು ಕೊಲ್ಲಬೇಡ, ಇವನು ನಿನ್ನಲ್ಲೇ ಶರಣು ಹೊಂದಿರುವನು. ನಾನು ನಿನಗೆ ಪ್ರಿಯನಾದ ಭಕ್ತ. ನಿನ್ನ ಭಕ್ತರಲ್ಲಿ ಉತ್ತಮನಾದ ನನ್ನ ವಿಜ್ಞಾಪನೆಯನ್ನು ಮನ್ನಿಸಿ ಬ್ರಹ್ಮನಲ್ಲಿ ಅನುಗ್ರಹವನ್ನು ಮಾಡು' ಎಂದು ಪ್ರಾರ್ಥಿಸಿದ.

ಪದಬಂಧ 4999

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

2.ವಾಯಸದ ಹತ್ತಿರವಿರುವ ಅಭ್ರಕ (5)
4.ನೀಚ ಇಲ್ಲಿಗೆ ಬಂದಿದ್ದಾನಲ್ಲಾ? (3)
5.ಇದು ಪ್ರತಿಕೂಲವಾದುದು (3)
9.ಶ್ರಮ ನಿರ್ವಹಿಸುವುದು (2)
10.ದಪ್ಪವಾದ ಸೂಜಿಯಿದು (3)
11.ಅವಳು ನೋಡಿದಾಗ ಸುರಿದ ಕಣ್ಣೀರು! (2)
12.ಕನಸು ಇಲ್ಲಿ ದಿಟವಾಗಿದೆ (3)
14.ಇದು ನಿಸ್ಸಾರವಾದುದು (3)
15.ಸಾಯುವ ಸಮಯವಿದು (5)

ಮೇಲಿಂದ ಕೆಳಕ್ಕೆ

1.ಬಂದನಕ್ಕೊಳಗಾದವ ತಿರುಗಿ ನಿಂತಿದ್ದಾನೆ (2)
2.ಮನ್ಮಥನ ಇನ್ನೊಂದು ಹೆಸರು (2)
3.ವಿರಮಿಸುತ್ತಿದ್ದಾಗ ಮೂಡಿದ ನೇಸರು (2)
4.ಹೆದರಬೇಡ ರಕ್ಷಿಸುತ್ತೇನೆಂದು ಧೈರ್ಯ ಕೊಡುವುದು (5)
6.ಮಡುವಿನೊಳಗೆ ಮರುಭೂಮಿ ಕಾಣುತ್ತಿದೆಯಲ್ಲಾ! (5)
7.ಕೊನೆಗೆ ದನವನ್ನಿಟ್ಟು ತುಂಡು ಮಾಡುವಿಕೆ (3)
8.ಜಿಂಕೆಯ ಮರಿ ಇಲ್ಲಿದೆ (3)
13.ಸುಗಮವಾಗಿ ಕಿತ್ತ ಹೂವು! (2)
14.ಬರಗಾಲದಲ್ಲಿ ತೋರಿದ ಶಕ್ತಿ! (2)
16.ದುಡ್ಡು ಇಲ್ಲಿ ಉಲ್ಟಾಪಲ್ಟಾ ಆಗಿದೆಯಲ್ಲಾ? (2)

4998ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜವಾಬ್ದಾರಿ 3.ಜಟಿಲ
4.ಪುರೋಹಿತ
6.ಜುಲುಮೆ 8.ಕಾರಣ
9.ಅಗುಳು 10.ಲಶುನ
12.ಕಸರತ್ತು 14.ಕಮರಿ
15.ನವಿರೆಳೆ

ಮೇಲಿಂದ ಕೆಳಕ್ಕೆ:
1.ಜಲ 2.ರಿಪು
3.ಜಹಜು 5.ತರುಣ
7.ಮೆದುಳು 8.ಕಾದಲ
9.ಅಳ್ಳಕ 11.ನಸರಿ
13.ತ್ತುನ 14.ಕಳೆ

ಸುಡೊಕು 5385

			8				1	
				4			7	
		4	9		2	8	3	6
3		6				5		9
	7		3	2	4			
		1				3		7
4			6		1		9	
	3				5			
6		8	2				5	

5384 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜೂನ್ 25, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ದ್ವಾದಶಿ ಗಂ. 25-10 ನಕ್ಷತ್ರ: ಭರಣಿ ಗಂ. 10-24, ಯೋಗ: ಧೃತಿ ಅಹೋರಾತ್ರ ಕರಣ: ಕೌಲವ ಗಂ. 12-09, ಮಿಥುನ ಮಾಸದ 10 ನೇ ದಿನ.
ರಾಹುಕಾಲ: ಬೆಳಿಗ್ಗೆ 09:00 – 10:30
ಸೂರ್ಯೋದಯ: 06-10 **ಸೂರ್ಯಾಸ್ತ:** 06-57
ಮುಸ್ಲಿಂ ದಿನಾಂಕ: 25 ಜುಲ್ಹಾಯದ್
ಅದೃಷ್ಟ ಸಂಖ್ಯೆ: 5, 12

ಮೇಷ: ಅತಿಯಾದ ಆಲಸ್ಯವು ಈ ದಿನ ನಿಮ್ಮ ಏಳಿಗೆಗೆ ಹಾನಿಯನ್ನು ಉಂಟುಮಾಡಲಿದೆ. ಮಕ್ಕಳ ಜೊತೆ ಸಂತೋಷದಿಂದ ಸಮಯ ಕಳೆಯುವ ದಿಕ್ಕಿನಲ್ಲಿ ಕೆಲ ನಿರ್ಧಾರಗಳನ್ನು ಕೈಗೊಳ್ಳುವಿರಿ.

ವೃಷಭ: ನಿಮ್ಮ ನೇರ ನಡೆ-ನುಡಿ ನಿಮ್ಮ ಗೆಳೆತನಕ್ಕೆ ಹುಳಿ ಹಿಂಡಿದಂತಾಗ-ಬಹುದು. ಕೆಲವು ಮಾನಸಿಕ ತೊಂದರೆಗಳು ಎದುರಾಗಬಹುದು. ಆದರೇ ಯಾವುದೇ ರೀತಿಯ ದೊಡ್ಡ ಸಮಸ್ಯೆ ಉಂಟಾಗುವುದಿಲ್ಲ.

ಮಿಥುನ: ಸಾಲ ತೀರಿಸಲು ಹೊಸದೊಂದು ಮಾರ್ಗ ನಿಮ್ಮ ಮುಂದೆ ಕಾಣಲಿದೆ. ಕಬ್ಬಿಣ ಹಾಗೂ ಸಿಮೆಂಟ್ ವ್ಯಾಪಾರಿಗಳಿಗೆ ಹೆಚ್ಚಿನ ವ್ಯಾಪಾರದೊಂದಿಗೆ ಲಾಭ.

ಕರ್ಕಾಟಕ: ಯಾವುದೇ ಕಠಿಣ ಪರಿಸ್ಥಿತಿಯಲ್ಲಿಯೂ ವಿಚಲಿತಗೊಳ್ಳದೆ ಕೆಲಸವನ್ನು ನೆರವೇರಿಸಿ. ಮೇಲಧಿಕಾರಿಗಳಲ್ಲಿ ನಿಮ್ಮ ನಡೆನುಡಿ ಉತ್ತಮವಾಗಿದ್ದರೆ ಪ್ರತಿಫಲ ಆಕರ್ಷಕವಾಗಿವುದು.

ಸಿಂಹ: ಸಂಘ ಸಂಸ್ಥೆಗಳ ಜವಾಬ್ದಾರಿಯನ್ನು ನೋಡುವವರಿಗೆ ನಾಲ್ಕಾರು ಮಾತುಗಳನ್ನು ಕೇಳಬೇಕಾಗುವುದು. ಹೆಂಡತಿ ಮಕ್ಕಳ ಕನಸನ್ನು ನನಸು ಮಾಡುವ ಕಾರ್ಯದ ಕಡೆ ನಿಮ್ಮ ಹೆಚ್ಚಿನ ಗಮನವಿರುವುದು.

ಕನ್ಯಾ: ಇಂದಿನಿಂದ ಮತ್ತೊಬ್ಬರ ಅವಲಂಬನೆ ಬೇಡವೆನಿಸುವುದು. ಕೋರ್ಟ್ ಕಚೇರಿಯ ಗೊಡವೆಗಳಿಂದ ಬಿಡುಗಡೆ ಹೊಂದುವಿರಿ. ಒಳಾಂಗಣ ವಿನ್ಯಾಸಗಾ-ರರಿಗೆ ಅಧಿಕ ವರಮಾನ.

ತುಲಾ: ರೈತಾಪಿ ವರ್ಗದವರಿಗೆ ಈ ದಿನದ ವಾತಾವರಣ ಉಪಕಾರಿ ಯಾಗುವುದು. ಸಣ್ಣಪುಟ್ಟ ಸಮಸ್ಯೆಯನ್ನು ಹೊರತುಪಡಿಸಿ ಆರೋಗ್ಯ, ಮಾನಸಿಕ ನೆಮ್ಮದಿ ಉತ್ತಮವಾಗಿರುತ್ತದೆ.

ವೃಶ್ಚಿಕ: ಭೂ ವ್ಯವಹಾರಗಳಿಂದ ಹೆಚ್ಚಿನ ಲಾಭ. ಹಣಕಾಸಿನ ವಿಷಯದಲ್ಲಿ ಯಾವುದೇ ತೊಂದರೆ ಕಾಣಿಸದು. ವೃತ್ತಿಯ ಬದುಕಿನಲ್ಲಿ ಕೆಲವು ಅಡೆಚಣೆಗಳು ಎದುರಾಗಬಹುದು. ಸಂಜೆಯ ಸಮಯದಲ್ಲಿ ದೇಹಾಯಾಸ ಕಾಣುವುದು.

ಧನು: ನಿಮ್ಮ ನಿರ್ಲಿಪ್ತತೆಯಿಂದಾಗಿ ಸದ್ಯದ ಸಮಸ್ಯೆಗಳು ಪರಿಹಾರ ಕಾಣಲಿವೆ. ವಿದ್ಯಾರ್ಥಿಗಳಿಗೆ ಫಲಿತಾಂಶ ಸಂತಸ ತರಲಿದೆ. ಹೆಚ್ಚಿನ ವ್ಯಾಸಾಂಗದ ಬಗ್ಗೆ ಆತುರದ ನಿರ್ಧಾರ ಸಲ್ಲದು. ಧಾನ್ಯ ಬೆಳೆಗಳ ಮಾರಾಟದಿಂದ ಲಾಭ.

ಮಕರ: ಗಿಡ ಮೂಲಿಕೆಯಂತಹ ಔಷಧದ ಬಳಕೆಯಿಂದ ಹೆಂಡತಿಯ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ. ಸೋಮಾರಿತನ ಇಲ್ಲದೆ ದುಡಿಯಿರಿ, ಆದರೆ ಸಂಪಾದನೆಯ ಮಾರ್ಗ ಸತ್ಯವಾಗಿದ್ದಾಗಿರಲಿ.

ಕುಂಭ: ಕೌಟುಂಬಿಕ ವಿಚಾರಗಳತ್ತ ಸಂಪೂರ್ಣ ಗಮನ ನೀಡುವಿರಿ. ಹೊಸತನ್ನು ಸಾಧಿಸುವ ಪ್ರಚೋದನೆ ಮತ್ತು ವಿಭಿನ್ನ ವಿಷಯಗಳು ಗಮನ ಸೆಳೆಯಲಿವೆ. ಕಣ್ಣಿನ ದೃಷ್ಟಿಗೆ ಸಂಬಂಧಿಸಿದಂತೆ ತಪಾಸಣೆ ಮಾಡಿಸಿಕೊಳ್ಳಿ.

ಮೀನ: ವಿಳಂಬವಾಗಿದ್ದ ನಿಮ್ಮ ಕಾರ್ಯಗಳು ಚುರುಕುಗೊಂಡು ಹೆಚ್ಚಿನ ಅನುಕೂಲ ಒದಗಿ ಬರಲಿದೆ. ನೀರಿನ ಹತ್ತಿರದಲ್ಲಿ ಅಥವಾ ನೀರಿಗೆ ಸಂಬಂಧಿಸಿದ ಕೆಲಸ ನಡೆಸುವವರಿಗೆ ವೃತ್ತಿಯಲ್ಲಿ ಭೀತಿ ಎದುರಾಗಬಹುದು.

ಶಿವಸೇನಾ ಬೆಂಬಲಿಗರ ದಾಳಿ; ಮುಂಬೈ ನಗರದಲ್ಲಿ ಸೇನಾ ಶಾಖಾ ಕಚೇರಿ ಸೇರಿ ಹಲವೆಡೆ ಬಿಗಿಭದ್ರತೆ

ಬಂಡಾಯ ಶಾಸಕರ ಕಚೇರಿ ಫಲಕ ಧ್ವಂಸ

ಮುಂಬೈ (ಪಿಟಿಐ): ಮಹಾರಾಷ್ಟ್ರ ಸರ್ಕಾರದ ಹಿರಿಯ ಸಚಿವ ಏಕನಾಥ ಶಿಂಧೆ ನೇತೃತ್ವದ ಬಂಡಾಯ ಶಾಸಕರ ಗುಂಪಿನಲ್ಲಿರುವ ಶಿವಸೇನಾ ಶಾಸಕ ಮಂಗೇಶ್ ಕುಡಾಲ್ಕರ್ ಅವರ ಕಚೇರಿ ಮೇಲೆ ಶುಕ್ರವಾರ ದಾಳಿ ನಡೆಸಿರುವ ಶಿವಸೇನಾ ಕಾರ್ಯಕರ್ತರು, ಕಚೇರಿಯ ನಾಮಫಲಕ ಧ್ವಂಸ ಗೊಳಿಸಿದ್ದಾರೆ.

ಕುರ್ಲಾದ ನೆಹರೂ ನಗರ ಪ್ರದೇಶದಲ್ಲಿರುವ ಕುಡಾಲ್ಕರ್ ಅವರ ಕಚೇರಿಯ ಹೊರಗೆ ಶಿವಸೇನಾ ಬೆಂಬಲಿಗರ ಗುಂಪು ಜಮಾಯಿಸಿ, ಶಾಸಕರ ಹೆಸರು ಮತ್ತು ಭಾವಚಿತ್ರವಿರುವ ನಾಮಫಲಕ ವನ್ನು ಧ್ವಂಸಮಾಡಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಶಿಂಧೆ ಅವರ ಬಂಡಾಯದ ನಂತರ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಬೈ ಪೊಲೀಸರು ನಗರದ ಶಿವಸೇನಾ ಶಾಖಾ ಕಚೇರಿಗಳು ಸೇರಿ ಹಲವು ಸೂಕ್ಷ್ಮ ಸ್ಥಳಗಳಲ್ಲಿ ಬಿಗಿಭದ್ರತೆ ಹೆಚ್ಚಿಸಿದ್ದಾರೆ.



ಮುಂಬೈನಲ್ಲಿರುವ ಶಿವಸೇನಾ ಪಕ್ಷದ ಕಚೇರಿ ಶಿವ ಸೇನಾ ಭವನದ ಬಳಿ ಶುಕ್ರವಾರ ಬಿಗಿ ಭದ್ರತೆಗೆ ಪೊಲೀಸರನ್ನು ನಿಯೋಜಿಸಲಾಗಿದೆ– ಪಿಟಿಐ ಚಿತ್ರ

ಮಹಾರಾಷ್ಟ್ರ ಮೈತ್ರಿಕೂಟದ ನಾಯಕ ಶರದ್ ಪವಾರ್ ಅವರಿಗೆ ಕೇಂದ್ರ ಸಚಿವರೊಬ್ಬರು ಬೆದರಿಕೆ ಹಾಕಿರುವುದಾಗಿ ಸೇನಾ ವಕ್ತಾರ ಸಂಜಯ್ ರಾವುತ್ ಶುಕ್ರವಾರ ಆರೋಪಿಸಿದ್ದಾರೆ.

ಇಂತಹದನ್ನು ನೀವು ಬೆಂಬಲಿಸುತ್ತೀರಾ? ಎಂದು ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ರಾವುತ್ ಪ್ರಶ್ನಿಸಿದ್ದಾರೆ.

ಶಾಸಕ ಅಜಯ್ ಚೌಧರಿ ಅವರನ್ನು ರಾಜ್ಯ ವಿಧಾನಸಭೆಯಲ್ಲಿ ಸೇನಾ ಶಾಸಕಾಂಗ ಪಕ್ಷದ ನಾಯಕರನ್ನಾಗಿ ನೇಮಿಸುವ ಪ್ರಸ್ತಾವನೆಗೆ ಉಪ ಸ್ಪೀಕರ್ ಅನುಮೋದನೆ ನೀಡಿದ್ದಾರೆ. ಬಂಡಾಯ ಶಾಸಕರಲ್ಲಿ 16 ಮಂದಿಯನ್ನು ಅನರ್ಹಗೊಳಿಸುವಂತೆ ಮೈತ್ರಿ ಸರ್ಕಾರ ಸಲ್ಲಿಸಿರುವ ಅರ್ಜಿ ಸ್ವೀಕರಿಸಿರುವ ಉಪ ಸ್ಪೀಕರ್, ಸಂಬಂಧಿಸಿದವರಿಗೆ ನೋಟಿಸ್ ಕಳುಹಿಸುವ ನಿರೀಕ್ಷೆಯಿದೆ.

> ಸೂರತ್‌ಗೆ ಶಾಸಕರನ್ನು ಕರೆದೊಯ್ಯುತ್ತಿದ್ದ ಕಾರಿನಿಂದ ತಪ್ಪಿಸಿಕೊಂಡು, ಕಿ.ಮೀ.ಗಟ್ಟಲೆ ನಡೆದು, ಬೈಕ್ ಮತ್ತು ಟ್ರಕ್‌ನಲ್ಲಿ ಹತ್ತಿ ಮುಖ್ಯಮಂತ್ರಿ ನಿವಾಸಕ್ಕೆ ಬಂದಿದ್ದೇನೆ
> **ಕೈಲಾಸ್ ಪಾಟೀಲ್**
> ಬಂಡಾಯ ಶಾಸಕ

> ಶಿವಸೇನಾ, ಬಾಳಾಸಾಹೇಬ್ ಹೆಸರನ್ನು ಬಂಡಾಯ ಶಾಸಕರು ಬಳಸಬಾರದು. ಅವರ ಹೆಸರು ಬಳಸದೇ ಚುನಾವಣೆ ಗೆದ್ದು ತೋರಿಸಲಿ
> **ಉದ್ಧವ್ ಠಾಕ್ರೆ,**
> ಮಹಾರಾಷ್ಟ್ರ ಮುಖ್ಯಮಂತ್ರಿ

ನೋಟಿಸ್ ಸಿಕ್ಕಿದ ತಕ್ಷಣ ಸುಪ್ರೀಂ ಕೋರ್ಟ್ ಮೊರೆ ಹೋಗಲು ಬಂಡಾಯ ಶಾಸಕರು ಸಿದ್ಧತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿರುವುದಾಗಿ ಎನ್‌ಡಿಟಿವಿ ವರದಿ ಮಾಡಿದೆ.

ಏತನ್ಮಧ್ಯೆ, ಗುವಾಹಟಿಯಲ್ಲಿ ತಂಗಿರುವ ಬಂಡಾಯ ಶಾಸಕರ ಪಾಳಯಕ್ಕೆ ಸೇನಾದ ಮತ್ತೊಬ್ಬ ಶಾಸಕ ಸೇರಿಕೊಂಡಿದ್ದಾರೆ. ಏಕನಾಥ್ ಶಿಂಧೆ ಬಣವು, ಪಕ್ಷ ಮತ್ತು ಚಿಹ್ನೆಯ ಮೇಲಿನ ಹಕ್ಕಿಗಾಗಿ ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಮಹಾರಾಷ್ಟ್ರದಲ್ಲಿ ಸೇನಾದ ಮಿತ್ರಪಕ್ಷಗಳಾದ ಎನ್‌ಸಿಪಿ ಮತ್ತು ಕಾಂಗ್ರೆಸ್ ಏನೇ ಬಂದರೂ ಠಾಕ್ರೆಯ ಜತೆಗಿರುವುದಾಗಿ ಹೇಳಿವೆ.

‘ನಮ್ಮ ಪಕ್ಷವು ಕಾರ್ಯಕರ್ತರ ಮೇಲೆ ಬಲವಾಗಿ ನಿಂತಿದೆ. ಶಾಸಕರು ಬರುತ್ತಾರೆ ಮತ್ತು ಹೋಗುತ್ತಾರೆ, ಕಾರ್ಯಕರ್ತರು ಮಾತ್ರ ಠಾಕ್ರೆ ಅವರೊಂದಿಗೆ ಕಾಯಂ ಉಳಿಯುತ್ತಾರೆ’ ಎಂದು ಶಿವಸೇನಾ ಸಂಸದೆ ಪ್ರಿಯಾಂಕಾ ಚತುರ್ವೇದಿ ಅವರು ಹೇಳಿದ್ದಾರೆ.

ಕಾನೂನು ಸಮರಕ್ಕೆ ಉದ್ಧವ್ ಸಿದ್ಧ

ಒಂದನೇ ಪುಟದಿಂದ...

‘ಅಲ್ಲಿಗೆ ಹೋದವರು ಮುಂದೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ನಾವು ಅವರ ವಿರುದ್ಧ ಸದನದಲ್ಲಿ ಮತ್ತು ಬೀದಿಯಲ್ಲಿ ಹೋರಾಡಲಿದ್ದೇವೆ’ ಎಂದೂ ಹೇಳಿದ್ದಾರೆ. ‘ಇದು ರಾಜಕೀಯ ಹೋರಾಟವಷ್ಟೇ ಅಲ್ಲ, ಕಾನೂನು ಹೋರಾಟವೂ ಹೌದು’ ಎಂದು ಸೇನಾದ ಸಂಸದ ಅರವಿಂದ ಸಾವಂತ್ ಹೇಳಿದ್ದಾರೆ.

ಉದ್ಧವ್ ನಾಯಕತ್ವಕ್ಕೆ ಸಂಪೂರ್ಣ ಬೆಂಬಲ ಇದೆ ಎಂದು ಕಾಂಗ್ರೆಸ್ ಹೇಳಿದೆ. ಎಂವಿಎ ಸರ್ಕಾರ ಉಳಿಸಿಕೊಳ್ಳುವವರೆಗೆ ಹೋರಾಟ ನಿಲ್ಲದು ಎಂದಿದೆ.

ಅಡ್ವೊಕೇಟ್ ಜನರಲ್ ಅಶುತೋಷ್ ಕುಂಭಕೋಣಿ ಅವರು ವಿಧಾನಭವನಕ್ಕೆ ಭೇಟಿ ಕೊಟ್ಟಿದ್ದಾರೆ. ಅಮಾನತಿಗೆ ಸಂಬಂಧಿಸಿ ಸಲಹೆ ನೀಡುವುದಕ್ಕಾಗಿ ಬಂಡಾಯ ಶಾಸಕರ ಕಡೆಯಿಂದ ಬಂದಿರುವ ಪತ್ರಗಳನ್ನು ಪರಿಶೀಲಿಸಿದ್ದಾರೆ.

ಪದಾಧಿಕಾರಿಗಳ ಜತೆ ಮಾತು: ಉದ್ಧವ್ ಠಾಕ್ರೆ ಅವರು ಶಿವಸೇನಾದ ಮುಖಂಡರು ಮತ್ತು ಕಾರ್ಯಕರ್ತರನ್ನು ಉದ್ದೇಶಿಸಿ ಶುಕ್ರವಾರ ಮಾತನಾಡಿದ್ದಾರೆ. ಶಿವಸೇನಾ ಮತ್ತು ಮಹಾ ವಿಕಾಸ ಆಘಾಡಿ (ಎಂವಿಎ) ಸರ್ಕಾರದ ಉಳಿವಿನ ಕುರಿತಂತೆ ಇರುವ ಅನುಮಾನಗಳನ್ನು ತಳ್ಳಿ ಹಾಕಿದ್ದಾರೆ.

‘ನಾನು ಮುಖ್ಯಮಂತ್ರಿಯ ಅಧಿಕೃತ ನಿವಾಸವನ್ನು ಮಾತ್ರ ತೆರವು ಮಾಡಿದ್ದೇನೆ. ಆದರೆ, ನನ್ನ ದೃಢನಿಶ್ಚಯ ಹಾಗೆಯೇ ಇದೆ’ ಎಂದು ಶಿವಸೇನಾದ ಜಿಲ್ಲಾ ಘಟಕಗಳ ಮುಖ್ಯಸ್ಥರು ಮತ್ತು ಸಂಪರ್ಕ ಪ್ರಮುಖರ ಸಭೆಯನ್ನು ಉದ್ದೇಶಿಸಿ ಹೇಳಿದ್ದಾರೆ.

‘ಪಠ್ಯ: ಸುಳ್ಳು ಮಾಹಿತಿ ನೀಡಿದ ಸಚಿವ ಅಶೋಕ’

ಬೆಂಗಳೂರು: ಪಠ್ಯಪುಸ್ತಕ ಪರಿಷ್ಕರಣೆ ಹೆಸರಿನಲ್ಲಿ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಮಾಡಿರುವ ಪ್ರಮಾದಗಳನ್ನು ಸಮರ್ಥಿಸಿಕೊಳ್ಳಲು ಕಂದಾಯ ಸಚಿವ ಆರ್. ಅಶೋಕ ಸುಳ್ಳು ಮಾಹಿತಿಗಳನ್ನು ಬಿಡುಗಡೆ ಮಾಡಿದ್ದಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಕಂದಾಯ ಸಚಿವರು ಗುರುವಾರ ನಡೆಸಿದ್ದ ಪತ್ರಿಕಾಗೋಷ್ಠಿಗೆ ಸಂಬಂಧಿಸಿದಂತೆ ಶುಕ್ರವಾರ ಸುದೀರ್ಘ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ‘ಬಿಜೆಪಿ ಸರ್ಕಾರ ಮತ್ತು ಸಂಘ ಪರಿವಾರ ಸೇರಿಕೊಂಡು ಎಳೆಯ ಮಕ್ಕಳ ಮನಸ್ಸುಗಳಿಗೆ ವಿಷ ತುಂಬಲು ಹೊರಟಿವೆ. ಈ ವಿಚಾರದಲ್ಲಿ ತಜ್ಞರ ಸಮಿತಿ ಮೂಲಕ ಪರಿಶೀಲನೆ ನಡೆಸುವ ಬದಲಿಗೆ ಪ್ರಮಾದಗಳನ್ನು ಸಮರ್ಥಿಸಿಕೊಂಡು ಸರ್ಕಾರ ಬೇಜವಾಬ್ದಾರಿತನ ಪ್ರದರ್ಶಿಸುತ್ತಿದೆ’ ಎಂದಿದ್ದಾರೆ.

‘ಸುಳ್ಳು ಹೇಳುವುದಿಲ್ಲ ಮತ್ತು ಪಕ್ಷಪಾತ ಮಾಡುವುದಿಲ್ಲ ಎಂದು ಪ್ರಮಾಣವಚನ ಸ್ವೀಕರಿಸಿ, ಪಠ್ಯಪುಸ್ತಕ ಪರಿಷ್ಕರಣೆ ವಿಚಾರದಲ್ಲಿ ಸುಳ್ಳು ಹೇಳಿಕೆ ನೀಡಿರುವ ಅಶೋಕ ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಬೇಕು. ಮಾಧ್ಯಮಗಳಿಗೆ ಸುಳ್ಳು ಮಾಹಿತಿ ಬಿಡುಗಡೆ ಮಾಡಿರುವ ಸಚಿವರ ವಿರುದ್ಧ ಕ್ರಮ ಜರುಗಿಸಬೇಕು. ಸರ್ಕಾರ ಬೇಷರತ್ತಾಗಿ ನಾಡಿನ ಜನರ ಕ್ಷಮೆ ಯಾಚಿಸಬೇಕು’ ಎಂದು ಒತ್ತಾಯಿಸಿದ್ದಾರೆ.

‘ಈ ವಿಷಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪತ್ರಿಕಾಗೋಷ್ಠಿ ನಡೆಸಬೇಕಿತ್ತು. ಇಲ್ಲವೇ, ಸಂಘ ಪರಿವಾರದ ಕಟ್ಟಾಳುಗಳಾದ ಎಸ್. ಸುರೇಶ್ ಕುಮಾರ್ ಅಥವಾ ಬಿ.ಸಿ. ನಾಗೇಶ್ ಹೇಳಿಕೆ ನೀಡಬೇಕಿತ್ತು. ಸಚಿವರಾದ ಅಶೋಕ ಅವರು ಸಿ.ಸಿ. ಪಾಟೀಲ, ಬೈರತಿ ಬಸವರಾಜ ಮತ್ತು ಶಿವರಾಂ ಹೆಬ್ಬಾರ್ ಜತೆ ಪತ್ರಿಕಾಗೋಷ್ಠಿ ನಡೆಸಿದ್ದಾರೆ. ಇಂತಹ ಕೆಲಸಗಳಿಗೆ ಶೂದ್ರರನ್ನೇ ಬಳಸುವುದು ಆರ್‌ಎಸ್‌ಎಸ್ ತಂತ್ರಗಾರಿಕೆ’ ಎಂದು ಟೀಕಿಸಿದ್ದಾರೆ.

ಪಠ್ಯ ಪರಿಷ್ಕರಣೆ ಹೆಸರಿನಲ್ಲಿ ದಾರ್ಶನಿಕರು, ತಳ ಸಮುದಾಯಗಳ ಮಹನೀಯರಿಗಾ ಅವಮಾನ ಮಾಡಲಾಗಿದೆ. ಬಿಜೆಪಿಯ ಶಾಸಕರು, ಸಂಸದರು ವಿರೋಧಿಸಿದ್ದಾರೆ. ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿಯ ತಪ್ಪುಗಳನ್ನು ಸಮರ್ಥಿಸಿಕೊಳ್ಳಲು ಹಿಂದೆ ಪಠ್ಯಪುಸ್ತಕ ಪರಿಷ್ಕರಿಸಿದ್ದ ಬರಗೂರು ರಾಮಚಂದ್ರಪ್ಪ ನೇತೃತ್ವದ 27 ಸಮಿತಿಗಳ ಮೇಲೂ ಸುಳ್ಳು ಆರೋಪ ಮಾಡಿರುವುದು ಖಂಡನೀಯ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಕನಕದಾಸರ ಮಾಹಿತಿ ಕಡಿತ: ಸ್ವಾಮೀಜಿ ಅಸಮಾಧಾನ

ಹೊಸದುರ್ಗ: ‘9ನೇ ತರಗತಿಯ ಸಮಾಜ ವಿಜ್ಞಾನ ವಿಷಯದ ‘ಭಕ್ತಿ ಪಂಥ’ ಪಾಠದಲ್ಲಿದ್ದ ಕನಕದಾಸರ ಕುರಿತ ಒಂದು ಪುಟದಷ್ಟು ಮಾಹಿತಿಯನ್ನು ಪಠ್ಯ ಪರಿಷ್ಕರಣೆಯಲ್ಲಿ ಕೇವಲ ಒಂದು ಸಾಲಿಗೆ ಸೀಮಿತಗೊಳಿಸಲಾಗಿದೆ’ ಎಂದು ಕಾಗಿನೆಲೆ ಕನಕ ಗುರುಪೀಠದ ಹೊಸದುರ್ಗ ಶಾಖಾಮಠದ ಈಶ್ವರಾನಂದಪುರಿ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕನಕದಾಸರ ಮಾಹಿತಿ ಕಡಿತಗೊಳಿಸಿರುವ ಬಗ್ಗೆ ಕಾರಣ ಕೇಳಿ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾಗಿ ಸ್ವಾಮೀಜಿ ಹೇಳಿದ್ದಾರೆ

‘ಜಾತೀಯತೆಯನ್ನು ಹೋಗಲಾಡಿಸಲು 16ನೇ ಶತಮಾನದಲ್ಲಿ ಕನಕದಾಸರು ಬಹು ದೊಡ್ಡ ಕೊಡುಗೆ ನೀಡಿದ್ದಾರೆ. ಕೀರ್ತನೆಗಳ ಮೂಲಕ ದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಕನಕದಾಸರ ಬಗ್ಗೆ ಇಂದಿನ ಪೀಳಿಗೆಗೆ ಮಾಹಿತಿ ನೀಡದಿರುವುದು ಎಷ್ಟು ಸರಿ?’ ಎಂದು ಪ್ರಶ್ನಿಸಿದರು.

‘ಕೂಡಲೇ ಶಿಕ್ಷಣ ಸಚಿವರಿಗೆ ಹಾಗೂ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯವರಿಗೆ ಸೂಚನೆ ನೀಡಿ, ಕನಕದಾಸರ ಬಗ್ಗೆ ಸಮಗ್ರ ಮಾಹಿತಿ ನೀಡುವ ನಿಟ್ಟಿನಲ್ಲಿ ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯಲ್ಲಿ ರಚಿಸಿದ್ದ ಪಠ್ಯವನ್ನೇ ಮುಂದುವರಿಸಬೇಕು’ ಎಂದೂ ಮನವಿ ಮಾಡಿದ್ದಾರೆ.

ಒಂದು ಸಾವಿರ ಅತಿಥಿ ಶಿಕ್ಷಕರ ನೇಮಕ

ಬೆಂಗಳೂರು: 2022–23 ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಶಿಕ್ಷಕರ ಕೊರತೆಯನ್ನು ನೀಗಿಸಲು 1,000 ಅತಿಥಿ ಶಿಕ್ಷಕರನ್ನು ನೇಮಕ ಮಾಡಲು ಸಾರ್ವಜನಿಕ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಇದಕ್ಕೆ ಮೊದಲು ಸರ್ಕಾರಿ ಪ್ರೌಢಶಾಲೆಗಳಿಗೆ 1,000 ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಲು ಅನುಮತಿ ನೀಡಲಾಗಿತ್ತು. ಆದರೆ, ಸರ್ಕಾರಿ ಪ್ರೌಢಶಾಲೆಗಳಿಗೆ ಅತಿಥಿ ಶಿಕ್ಷಕರ ಹುದ್ದೆಗಳ ಅವಶ್ಯಕತೆ ಕಂಡು ಬಂದಿಲ್ಲ. ಹೀಗಾಗಿ, 1,000 ಅತಿಥಿ ಶಿಕ್ಷಕರನ್ನು ಪ್ರಾಥಮಿಕ ಶಾಲೆಗಳಿಗೆ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ ಎಂದು ಆದೇಶ ಹೇಳಿದೆ.

ಜಮೀನು ವ್ಯಾಜ್ಯ: ₹ 5 ಲಕ್ಷ ಲಂಚ ಪಡೆದ ಆರೋಪ

ಡಿಸಿಯೂ ಆರೋಪಿ: ಎಸಿಬಿ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೇಕಲ್ ತಾಲ್ಲೂಕಿನ ಕೂಡ್ಲು ಗ್ರಾಮದ 38 ಗುಂಟೆ ಜಮೀನು ಒಡೆತನಕ್ಕೆ ಸಂಬಂಧಿಸಿದ ವ್ಯಾಜ್ಯದಲ್ಲಿ ಅನುಕೂಲಕರ ಆದೇಶ ನೀಡಲು ಬೇಗೂರು ನಿವಾಸಿ ಅಜಂ ಪಾಷಾ ಎಂಬುವವರಿಂದ ₹ 5 ಲಕ್ಷ ಲಂಚ ಪಡೆದ ಪ್ರಕರಣದಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಅವರನ್ನು ಮೂರನೆ ಆರೋಪಿಯನ್ನಾಗಿ ಮಾಡುವಂತೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದೆ.

ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣದಲ್ಲಿ ಅರ್ಜಿದಾರರ ಪರವಾಗಿ ಆದೇಶ ನೀಡಲು ₹ 15 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟು, ₹ 5 ಲಕ್ಷ ಪಡೆದ ಆರೋಪದ ಮೇಲೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿ ವ್ಯವಸ್ಥಾಪಕ ಮಹೇಶ್ ಮತ್ತು ನ್ಯಾಯಾಲಯ ವಿಭಾಗದ ಸಹಾಯಕ ಚೇತನ್ ಕುಮಾರ್ ಅಲಿಯಾಸ್ ಚಂದ್ರು ಎಂಬುವವರನ್ನು ಎಸಿಬಿ ಮೇ 21ರಂದು ಬಂಧಿಸಿತ್ತು.


ಜೆ. ಮಂಜುನಾಥ್

‘ನನ್ನ ಜಮೀನಿಗೆ ಸಂಬಂಧಿಸಿದ ಪ್ರಕರಣದ ಆದೇಶವನ್ನು ಪ್ರಕಟಿಸುವಂತೆ ಮನವಿ ಮಾಡಲು ಜಿಲ್ಲಾಧಿಕಾರಿಯವರನ್ನು ಭೇಟಿಮಾಡಿದ್ದೆ. ಅವರ ಸೂಚನೆಯಂತೆ ಮಹೇಶ್ ಅವರನ್ನು ಭೇಟಿಮಾಡಿದೆ. ಅವರು ಲಂಚಕ್ಕೆ ಬೇಡಿಕೆ ಇಟ್ಟಿದ್ದರು’ ಎಂದು ಅಜಂ ಪಾಷಾ ದೂರಿನಲ್ಲಿ ಉಲ್ಲೇಖಿಸಿದ್ದರು. ಜಿಲ್ಲಾಧಿಕಾರಿ ಹಾಗೂ ಮಹೇಶ್ ಜತೆಗಿನ ಸಂಭಾಷಣೆಯ ವಿವರವನ್ನು ಮೊಬೈಲ್‌ನಲ್ಲಿ ರೆಕಾರ್ಡಿಂಗ್ ಮಾಡಿಕೊಂಡಿದ್ದ ದೂರುದಾರರು ಆ ವಿವರಗಳನ್ನೂ ದೂರಿನೊಂದಿಗೆ ತನಿಖಾ ಸಂಸ್ಥೆಗೆ ನೀಡಿದ್ದರು. ಜಿಲ್ಲಾಧಿಕಾರಿಗೆ ನೋಟಿಸ್ ಜಾರಿಮಾಡಿದ್ದ ಎಸಿಬಿ ಅಧಿಕಾರಿಗಳು, ಬುಧವಾರ ಬೆಳಿಗ್ಗೆಯಿಂದ ರಾತ್ರಿ 9.30ರವರೆಗೂ ವಿಚಾರಣೆ ನಡೆಸಿದ್ದರು.

‘ಲಂಚದ ಹಣ ಪಡೆದಿದ್ದ ನೌಕರರ ಬಳಿ ಅರ್ಜಿದಾರನಿಗೆ ಸಂಬಂಧಿಸಿದ ಯಾವುದೇ ಕೆಲಸ ಬಾಕಿ ಇರಲಿಲ್ಲ. ಆದರೆ, ಕೂಡ್ಲು ಗ್ರಾಮದ ಸರ್ವೆ ನಂಬರ್ 190/5ರಲ್ಲಿರುವ 38 ಗುಂಟೆ ಜಮೀನಿನ ಒಡೆತನಕ್ಕೆ ಸಂಬಂಧಿಸಿದ ವ್ಯಾಜ್ಯ ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಬಾಕಿ ಇದೆ. 2022ರ ಮಾರ್ಚ್ 30ರಂದೇ ವಿಚಾರಣೆ ಪೂರ್ಣಗೊಳಿಸಿ, ಆದೇಶ ಕಾಯ್ದಿರಿಸಲಾಗಿತ್ತು. ದೂರುದಾರರ ಕೆಲಸ ಜಿಲ್ಲಾಧಿಕಾರಿ ಬಳಿಯೇ ಬಾಕಿ ಇರುವುದಕ್ಕೆ ತನಿಖೆ ವೇಳೆ ಸಾಕ್ಷ್ಯ ಲಭ್ಯವಾಗಿದೆ. ಈ ಕಾರಣದಿಂದ ಅವರನ್ನು ಮೂರನೇ ಆರೋಪಿಯನ್ನಾಗಿ ಮಾಡಬೇಕು’ ಎಂದು ತನಿಖಾ ತಂಡ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿಯಲ್ಲಿ ಶಿಫಾರಸು ಮಾಡಿದೆ.

ಮಳೆ: ಹೆದ್ದಾರಿಯಲ್ಲಿ ಗುಡ್ಡ ಕುಸಿತ

ಕಾರವಾರ: ಕರಾವಳಿಯ ಭಟ್ಕಳ, ಹೊನ್ನಾವರ, ಕುಮಟಾ ತಾಲ್ಲೂಕುಗಳಲ್ಲಿ ಶುಕ್ರವಾರ ಧಾರಾಕಾರವಾಗಿ ಮಳೆಯಾಗಿದೆ. ಕಲಭಾಗ ಗ್ರಾಮ ಪಂಚಾಯಿತಿಯ ಹಂತಿಮಠದಲ್ಲಿ ಮರ ಬಿದ್ದು ಮನೆಯೊಂದಕ್ಕೆ ಭಾಗಶಃ ಹಾನಿಯಾಗಿದೆ.

ಮಲೆನಾಡಿನ ಶಿರಸಿ, ಸಿದ್ದಾಪುರದಲ್ಲಿ ತುಂತುರು ಮಳೆಯಾದರೆ, ಹಳಿಯಾಳ, ಮುಂಡಗೋಡ ಭಾಗದಲ್ಲಿ ಸಾಧಾರಣ ಮಳೆಬಿದ್ದಿದೆ. ಹೊನ್ನಾವರ ತಾಲ್ಲೂಕಿನ ಆರೊಳ್ಳಿಯ ರಾಷ್ಟ್ರೀಯ ಹೆದ್ದಾರಿ 66ರ ತಿರುವಿನಲ್ಲಿ ಗುಡ್ಡ ಕುಸಿದು ಆತಂಕ ಉಂಟಾಗಿದೆ.

‘ಗುಡ್ಡದಲ್ಲಿ ಸುರಂಗ ನಿರ್ಮಾಣವಾಗಿದ್ದು ಇನ್ನಷ್ಟು ಕುಸಿಯುವ ಭೀತಿ ಇದೆ. ತುರ್ತುಸ್ಥಿತಿ ಎದುರಿಸಲು ತಾಲ್ಲೂಕು ಆಡಳಿತ ಕ್ರಮಕ್ಕೆ ಸಜ್ಜಾಗಿದೆ’ ಎಂದು ಸ್ಥಳಕ್ಕೆ ಭೇಟಿ ನೀಡಿದ ತಹಶೀಲ್ದಾರ್ ನಾಗರಾಜ ನಾಯ್ಕಡ ತಿಳಿಸಿದರು.

ಜೋರು ಮಳೆ ಸಾಧ್ಯತೆ ಹಿನ್ನೆಲೆಯಲ್ಲಿ ಜೂನ್ 27ರವರೆಗೆ ಕರಾವಳಿಯಲ್ಲಿ ‘ಆರೆಂಜ್ ಅಲರ್ಟ್’, 28, 29ರಂದು ‘ಯೆಲ್ಲೋ ಅಲರ್ಟ್’ ಮುನ್ಸೂಚನೆ ನೀಡಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಬೈಲಹೊಂಗಲ (ಬೆಳಗಾವಿ ಜಿಲ್ಲೆ) ತಾಲ್ಲೂಕಿನ ವಿವಿಧೆಡೆ ಧಾರಾಕಾರ ಮಳೆ ಸುರಿಯಿತು.

ಉಡುಪಿ ವರದಿ: ಜಿಲ್ಲೆಯಾದ್ಯಂತ ಮಳೆ ಮುಂದುವರಿದಿದ್ದು ಬಿರುಗಾಳಿ ಮಳೆಗೆ ಉಡುಪಿ ತಾಲ್ಲೂಕಿನ ಮೂಡನಿಡಂಬೂರು ಗ್ರಾಮದಲ್ಲಿ ಮನೆ ಮೇಲೆ ಮರಬಿದ್ದು ಹಾನಿಯಾಗಿದೆ. ಹಿರೇಬೆಟ್ಟು ಗ್ರಾಮದಲ್ಲಿ ಮನೆ ಬಿರುಕು ಬಿಟ್ಟಿದೆ. ಆತ್ರಾಡಿ ಗ್ರಾಮದಲ್ಲಿ ಮನೆ ಕುಸಿದಿದೆ.

ಬ್ರಹ್ಮಾವರ ತಾಲ್ಲೂಕಿನ ಕುಮ್ರಗೋಡು ಗ್ರಾಮದಲ್ಲಿ ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಹೆಬ್ರಿ ತಾಲ್ಲೂಕಿನಲ್ಲಿ ಅತಿ ಹೆಚ್ಚು 17.6 ಸೆಂ.ಮೀ ಮಳೆ ಬಿದ್ದಿದೆ.

ಕನಿಷ್ಠ ವೇತನ ನಿಗದಿಗೆ ಹಕ್ಕೊತ್ತಾಯ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ರಾಜ್ಯದ ಎಲ್ಲ ಮಸಣ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಪಡಿಸಬೇಕು. ಪುನರ್ವಸತಿ ಮತ್ತು ಜೀವನ ಭದ್ರತೆಗೆ ಕಾಯ್ದೆ ರೂಪಿಸಿ ಅನುಷ್ಠಾನಕ್ಕೆ ತರಬೇಕು ಎಂದು ಶುಕ್ರವಾರ ಇಲ್ಲಿ ನಡೆದ ಮಸಣ ಕಾರ್ಮಿಕರ ರಾಜ್ಯಮಟ್ಟದ ಸಮಾವೇಶದಲ್ಲಿ ಹಕ್ಕೊತ್ತಾಯ ಮಾಡಲಾಯಿತು.

ಕಸ ಗುಡಿಸುವ ಪೌರ ಕಾರ್ಮಿಕರಿಗೆ ಕನಿಷ್ಠ ವೇತನ ನೀಡಲಾಗುತ್ತಿದೆ. ಆದರೆ, ಮಸಣ ಕಾರ್ಮಿಕರಿಗೆ ಯಾವುದೇ ವೇತನ ಇಲ್ಲ. ಶವಸಂಸ್ಕಾರಕ್ಕೆ ಬರುವವರು ಕೊಟ್ಟ ಹಣವೇ ಅವರಿಗೆ ಆಸರೆಯಾಗಿದೆ. ಕೋವಿಡ್ ಸಂದರ್ಭದಲ್ಲಿ ಜೀವದ ಹಂಗು ತೊರೆದು ಅಳುಕಿಲ್ಲದೆ ಕೆಲಸ ಮಾಡಿದ್ದಾರೆ. ಆದರೆ, ಸಮಾಜವು ತಿರಸ್ಕಾರ ಭಾವದಿಂದ ನೋಡುತ್ತಿದೆ ಎಂಬ ನೋವು, ಸಮಾವೇಶದಲ್ಲಿ ವ್ಯಕ್ತವಾಯಿತು.



ರಾಜ್ಯಮಟ್ಟದ ಸಮಾವೇಶದ ಅಂಗವಾಗಿ ಮಸಣ ಕಾರ್ಮಿಕರು ಶುಕ್ರವಾರ ಹೊಸಪೇಟೆಯಲ್ಲಿ ರ್‍ಯಾಲಿ ನಡೆಸಿದರು

‘ಮಸಣ ಕಾರ್ಮಿಕರು ಈಗಲೂ ನಿಕೃಷ್ಟ ಬದುಕು ನಡೆಸುತ್ತಿದ್ದಾರೆ. ಅವರ ಪುನರ್ವಸತಿ, ಜೀವನ ಭದ್ರತೆಗೆ ಕೇಂದ್ರ ಸರ್ಕಾರ ಕಾಯ್ದೆ ರೂಪಿಸಿ, ಜಾರಿಗೆ ತರಬೇಕು’ ಎಂದು ನವದೆಹಲಿಯ ದಲಿತ ಶೋಷಣ್ ಮುಕ್ತಿ ಮಂಚ್ ಅಖಿಲ ಭಾರತ ಉಪಾಧ್ಯಕ್ಷ ಬಿ.ವಿ. ರಾಘವುಲು ಸಮಾವೇಶದಲ್ಲಿ ಆಗ್ರಹಪಡಿಸಿದರು.

ಸಮಾವೇಶಕ್ಕೂ ಮುನ್ನ ಮಸಣ ಕಾರ್ಮಿಕರು ನಗರದಲ್ಲಿ ರ್‍ಯಾಲಿ ನಡೆಸಿದರು.

ಇಂದಿನಿಂದ ದುಂಡು ಮೇಜಿನ ಸಭೆ

ಬೆಂಗಳೂರು: ‘ಪ್ರಸ್ತುತ ರಾಷ್ಟ್ರೀಯ ಬಿಕ್ಕಟ್ಟು ಮತ್ತು ನಾಗರಿಕ ಸಮಾಜದ ಪಾತ್ರದ’ ಕುರಿತು ಶನಿವಾರದಿಂದ (ಜೂನ್ 25ರಿಂದ) ಎರಡು ದಿನ ಗಾಂಧಿ ಭವನದಲ್ಲಿ ದುಂಡು ಮೇಜಿನ ಸಭೆ ನಡೆಯಲಿದೆ ಎಂದು ಸಿಟಿಜನ್ ಫಾರ್ ಡೆಮಾಕ್ರಸಿ ರಾಷ್ಟ್ರೀಯ ಅಧ್ಯಕ್ಷ ಎಸ್.ಆರ್. ಹಿರೇಮಠ ತಿಳಿಸಿದರು.

ಜನ ಸಂಗ್ರಾಮ, ಜನ ತಂತ್ರ ಪ್ರಯೋಗ ಶಾಲಾ, ಸಿಟಿಜನ್ ಫಾರ್ ಡೆಮಾಕ್ರಸಿ, ಸೊಸೈಟಿ ಫಾರ್ ಕಮ್ಯುನಲ್ ಹಾರ್ಮನಿ, ಸಂಯುಕ್ತ ಹೋರಾಟ ಕರ್ನಾಟಕ ಸಂಘಟನೆಗಳ ಆಶ್ರಯದಲ್ಲಿ ಸಭೆ ನಡೆಸಲಾಗುವುದು.

ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್, ಡಾ.ಅಶೋಕ್ ಧವಳೆ, ಪ್ರೊ.ಆನಂದ ಕುಮಾರ್, ಎನ್.ಡಿ. ಪಾಂಚೋಲಿ, ದತ್ತಾ ದೇಸಾಯಿ, ದೇವನೂರು ಮಹಾದೇವ, ರಾಘವೇಂದ್ರ ಕುಷ್ಟಗಿ, ಬಡಗಲಪುರ ನಾಗೇಂದ್ರ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭ್ರಷ್ಟಾಚಾರ ಆರೋಪ– ಕೇಂದ್ರದಿಂದ ಸ್ಪಂದನೆ

ಮೈಸೂರು: ‘ರಾಜ್ಯ ಸರ್ಕಾರದ ಅಭಿವೃದ್ಧಿ ಕಾಮಗಾರಿಗಳಲ್ಲಿ ಶೇ 40 ರಷ್ಟು ಲಂಚ ಪಡೆಯಲಾಗುತ್ತಿದೆ ಎಂದು ದೂರಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬರೆದ ಪತ್ರಕ್ಕೆ ಎರಡು ದಿನದ ಹಿಂದೆ ಅವರ ಕಾರ್ಯಾಲಯವು ಪ್ರತಿಕ್ರಿಯಿಸಿದೆ’ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ತಿಳಿಸಿದರು.


ಡಿ.ಕೆಂಪಣ್ಣ

‘ಹತ್ತು ದಿನದೊಳಗೆ ಕೇಂದ್ರದಿಂದ ಪ್ರತಿನಿಧಿಯೊಬ್ಬರನ್ನು ಕಳುಹಿಸಿ, ಅವರಿಂದ ವರದಿ ಪಡೆದು ಸಮಸ್ಯೆ ಇತ್ಯರ್ಥಪಡಿಸುವ ಭರವಸೆ ನೀಡಲಾಗಿದೆ’ ಎಂದು ಹೇಳಿದರು. ಅವರು ನಗರದಲ್ಲಿ ಶುಕ್ರವಾರ ಜಿಲ್ಲಾ ಗುತ್ತಿಗೆದಾರರ ಸಂಘವನ್ನು ಉದ್ಘಾಟಿಸಿ ಮಾತನಾಡಿದರು.

‘ಕಾಮಗಾರಿಗಳ ಗುಣಮಟ್ಟ ಕಳಪೆಯಾದರೆ, ಜನರು ಗುತ್ತಿಗೆದಾರರಿಗೆ ತರಾಟೆ ತೆಗೆದುಕೊಳ್ಳುತ್ತಾರೆ. ಆದರೆ, ಕಾಮಗಾರಿ ಹಂತದಲ್ಲಿನ ಭ್ರಷ್ಟಾಚಾರಗಳು ಅವರಿಗೆ ಗೊತ್ತಾಗುವುದಿಲ್ಲ. ಇದನ್ನು ಹತ್ತಿರದಿಂದ ಗಮನಿಸಿದ್ದ ನಾನು, ಈ ಹಿಂದೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಎರಡು ಬಾರಿ ಪತ್ರ ಬರೆದು ಸಮಸ್ಯೆಗೆ ಸ್ಪಂದಿಸಲು ಕೋರಿದ್ದೆ. ಸೂಕ್ತ ಸ್ಪಂದನೆ ಸಿಗದಿದ್ದುದರಿಂದ ಪ್ರಧಾನಿಗೆ ಅವರಿಗೆ ಪತ್ರ ಬರೆದಿದ್ದೆ. ತಡವಾಗಿಯಾದರೂ ಅವರ ಕಾರ್ಯಾಲಯ ಸ್ಪಂದಿಸಿದೆ’ ಎಂದರು.

ಸಮಸ್ಯೆ ಬಗೆಹರಿಸಲು ಹೋರಾಟ: ‘ಗುತ್ತಿಗೆ ನೀಡುವ ಸಂದರ್ಭದಲ್ಲಿ ಪ್ಯಾಕೇಜ್ ಪದ್ಧತಿ ರದ್ದುಗೊಳಿಸಬೇಕು, ಜೇಷ್ಠತೆಯ ಆಧಾರದಲ್ಲಿ ಕಾಮಗಾರಿಗಳ ಬಾಕಿ ಮೊತ್ತವನ್ನು ಬಿಡುಗಡೆ ಮಾಡಬೇಕು ಎಂದು ಸಂಘದಿಂದ ಮಂಡಿಸಿದ್ದ ಬೇಡಿಕೆಗೆ ಸ್ಪಂದಿಸಿ ರಾಜ್ಯ ಸರ್ಕಾರ ಕ್ರಮ ತೆಗೆದುಕೊಂಡಿದೆ. ಪ್ಯಾಕೇಜ್ ಪದ್ಧತಿಯನ್ನು ರದ್ದುಪಡಿಸಬೇಕು ಎಂದು ಸಂಘವು ಹೈಕೋರ್ಟ್‌ನ ಮೆಟ್ಟಿಲೇರಿದೆ. ಈ ಸಂಬಂಧ ಮಂಗಳವಾರ ತೀರ್ಪು ಹೊರಬೀಳುವ ನಿರೀಕ್ಷೆಯಿದೆ’ ಎಂದು ತಿಳಿಸಿದರು.

ವಯನಾಡು: ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ – ಮುಖ್ಯಮಂತ್ರಿ ಪಿಣರಾಯಿ

ರಾಹುಲ್ ಗಾಂಧಿ ಕಚೇರಿ ಧ್ವಂಸ

ವಯನಾಡ್ (ಪಿಟಿಐ): ಕೇರಳದ ಆಡಳಿತಾರೂಢ ಸಿಪಿಎಂನ ವಿದ್ಯಾರ್ಥಿ ಸಂಘಟನೆಯಾದ ಎಸ್‌ಎಫ್‌ಐ ವತಿಯಿಂದ ಇಲ್ಲಿನ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರ ಕಚೇರಿಗೆ ಶುಕ್ರವಾರ ನಡೆದ ಪ್ರತಿಭಟನಾ ಮೆರವಣಿಗೆ ಹಿಂಸಾಚಾರಕ್ಕೆ ತಿರುಗಿದ್ದು, ಪ್ರತಿಭಟನನಿರತರ ಗುಂಪು ಸಂಸದರ ಕಚೇರಿಗೆ ನುಗ್ಗಿ ಹಾನಿ ಎಸಗಿದೆ.

'ನೂರಾರು ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದು, ಕೆಲವರು ಸಂಸದರ ಕಚೇರಿಗೆ ನುಗ್ಗಿದ್ದಾರೆ. ಈ ಸಂಬಂಧ 8 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. ಕಚೇರಿಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಕೇರಳದ ಗುಡ್ಡಗಾಡು ಪ್ರದೇಶಗಳ ಅರಣ್ಯದಲ್ಲಿ ಬಫರ್ ವಲಯ ರಚಿಸುವ ವಿಷಯಕ್ಕೆ ಸಂಬಂಧಿಸಿದಂತೆ ಮಧ್ಯಪ್ರವೇಶಿಸುವಲ್ಲಿ ರಾಹುಲ್ ಗಾಂಧಿ ಅವರು ವಿಫಲರಾಗಿದ್ದಾರೆ ಎಂದು ಆರೋಪಿಸಿ ಎಸ್‌ಎಫ್‌ಐ ಪ್ರತಿಭಟನೆ ನಡೆಸಿದೆ.

ಪ್ರತಿಭಟನಕಾರರು ಸಂಸದರ ಕಚೇರಿಯೊಳಗೆ ದಾಂದಲೆ ನಡೆಸುತ್ತಿರುವ ದೃಶ್ಯಗಳನ್ನು ಟಿ.ವಿ ವಾಹಿನಿಗಳು ಪ್ರಸಾರ ಮಾಡಿವೆ.

ಘಟನೆಯನ್ನು ಖಂಡಿಸಿರುವ ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್, 'ಸಂಸದರ ಕಚೇರಿಯಲ್ಲಿ ದಾಂದಲೆ ನಡೆಸಿರುವುದು ಅನ್ಯಾಯ ಮತ್ತು ಗೂಂಡಾ ವರ್ತನೆ' ಎಂದು ಟ್ವೀಟ್ ಮಾಡಿದ್ದಾರೆ.

ರಾಹುಲ್ ಗಾಂಧಿ ಅವರ ಕಚೇರಿಗೆ ನುಗ್ಗಿ ದಾಂಧಲೆ ನಡೆಸಿರುವ ಪ್ರಕರಣವನ್ನು ಖಂಡಿಸಿರುವ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ.

'ನವ ಭಾರತದಲ್ಲಿ 'ಸ್ನೇಹಿತರ' ಮಾತಿಗಷ್ಟೇ ಬೆಲೆ'

ನವದೆಹಲಿ (ಪಿಟಿಐ): ಸೈನಿಕರ ಅಲ್ಪಾವಧಿ ನೇಮಕಾತಿ ಯೋಜನೆ 'ಅಗ್ನಿಪಥ'ದ ವಿರುದ್ಧ ಟೀಕೆ ಮುಂದುವರಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಶುಕ್ರವಾರ ತೀವ್ರ ವಾಗ್ದಾಳಿ ನಡೆಸಿದರು.

'ಅಗ್ನಿಪಥ' ಯೋಜನೆ ಟೀಕಿಸಿ ಪರಮವೀರಚಕ್ರ ಪುರಸ್ಕೃತ ಕ್ಯಾಪ್ಟನ್ ಬಾನಾ ಸಿಂಗ್ ಮಾಡಿರುವ ಟ್ವೀಟ್ ಅನ್ನು ರಾಹುಲ್ ಗಾಂಧಿ ಹಂಚಿಕೊಂಡಿದ್ದು, 'ಒಂದೆಡೆ ದೇಶದ ಪರಮವೀರನಿದ್ದರೆ ಮತ್ತೊಂದೆಡೆ, ಪ್ರಧಾನಿಯವರ ದುರಹಂಕಾರ ಮತ್ತು ಸರ್ವಾಧಿಕಾರವಿದೆ. 'ನವ ಭಾರತ'ದಲ್ಲಿ 'ಸ್ನೇಹಿತ'ರ ಮಾತಿಗೆ ಮಾತ್ರ ಬೆಲೆಯೇ, ದೇಶದ ವೀರರ ಮಾತಿಗಿಲ್ಲವೇ' ಎಂದು ರಾಹುಲ್ ಪ್ರಶ್ನಿಸಿದರು.

'ಪರಮವೀರಚಕ್ರ ಪ್ರಶಸ್ತಿ ಪುರಸ್ಕೃತರೊಬ್ಬರು ಅಗ್ನಿಪಥ ಯೋಜನೆಯ ವಿರುದ್ಧ ಮಾಡಿದ್ದ ಪ್ರಾಮಾಣಿಕ, ಹೃದಯಸ್ಪರ್ಶಿ ಟ್ವೀಟ್ ಅನ್ನು ಅಳಿಸುವಂತಾಗಿರುವುದು ಮೋದಿ ಭಾರತದಲ್ಲಿ ವಾಕ್ ಸ್ವಾತಂತ್ರ್ಯ ಮಾತ್ರವಲ್ಲ, ಮಾತಿನ ನಂತರದ ಸ್ವಾತಂತ್ರ್ಯವೂ ಅಪಾಯದಲ್ಲಿದೆ ಎಂಬುದನ್ನು ತೋರಿಸುತ್ತದೆ' ಎಂದು ರಾಹುಲ್ ಆಕ್ರೋಶ ವ್ಯಕ್ತಪಡಿಸಿದರು.

ಕ್ಯಾಪ್ಟನ್ ಬಾನಾ ಸಿಂಗ್ ಅವರು 'ಅಗ್ನಿಪಥ ಯೋಜನೆಯು ಸೇನೆಯನ್ನು ನಾಶಪಡಿಸುತ್ತದೆ. ಈ ಯೋಜನೆಯು ನಮಗೆ ಹಾನಿ ಮಾಡಲಿದೆ. ಈಗಾಗಲೇ ದೇಶವು ನಿರ್ಣಾಯಕ ಹಂತ ಎದುರಿಸುತ್ತಿದೆ. ಯುವಕರು ನಾಡಿನ ಭವಿಷ್ಯ. ದೇಶವನ್ನು ಉಳಿಸಿ' ಎಂದು ಟ್ವೀಟ್ ಮಾಡಿದ್ದರು. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಬಾನಾ ಸಿಂಗ್ ಅವರ ಟ್ವೀಟ್‌ನ ಸ್ಕ್ರೀನ್‌ಶಾಟ್ ಅನ್ನು ಹಂಚಿಕೊಂಡಿದ್ದಾರೆ. ಬಾನಾ ಸಿಂಗ್ ಅವರು ತಮ್ಮ ಈ ಟ್ವೀಟ್ ಅನ್ನು ಸದ್ಯ ಅಳಿಸಿಹಾಕಿದ್ದಾರೆ.

ಎಐಎಡಿಎಂಕೆ: ಇಪಿಎಸ್ ಬಣದ ಮೇಲುಗೈ?

ಚೆನ್ನೈ (ಪಿಟಿಐ): ಎಐಎಡಿಎಂಕೆ ಪಕ್ಷದಲ್ಲಿ ಎಡಪ್ಪಾಡಿ ಕೆ.ಪಳನಿಸ್ವಾಮಿ (ಇಪಿಎಸ್) ಮತ್ತು ಒ.ಪನ್ನೀರ್‌ಸೆಲ್ವಂ (ಒಪಿಎಸ್) ನೇತೃತ್ವದಲ್ಲಿ ಇದ್ದ ದ್ವಿ ನಾಯಕತ್ವ ವ್ಯವಸ್ಥೆ ರದ್ದಾಗಿದೆ ಎಂದು ಪಕ್ಷದ ಮೇಲೆ ಪ್ರಾಬಲ್ಯ ಹೊಂದಿರುವ ಇಪಿಎಸ್ ಬಣ ಶುಕ್ರವಾರ ಪ್ರತಿಪಾದಿಸಿದೆ.

ಇಬ್ಬರ ನೇತೃತ್ವದಲ್ಲಿ ನಾಯಕತ್ವ ಹಂಚಿಕೆಗೆ ಸಂಬಂಧಿಸಿದ ಪಕ್ಷದ ಬೈಲಾಗೆ ಡಿಸೆಂಬರ್ 1, 2021ರಲ್ಲಿ ತರಲಾಗಿದ್ದ ತಿದ್ದುಪಡಿಯನ್ನು ಗುರುವಾರ ನಡೆದ ಸಾಮಾನ್ಯ ಸಭೆಯು ಅನುಮೋದಿಸಿಲ್ಲ. ಹೀಗಾಗಿ, ದ್ವಿನಾಯಕತ್ವ ವ್ಯವಸ್ಥೆ ರದ್ದಾಗಲಿದೆ ಎಂದೂ ಈ ಬಣ ಪ್ರತಿಪಾದಿಸಿದೆ.

ಪಕ್ಷದ ಸಾಮಾನ್ಯ ಸಭೆಯು ಪಕ್ಷದಲ್ಲಿ ಏಕ ನಾಯಕತ್ವ ವ್ಯವಸ್ಥೆ ಜಾರಿಯಲ್ಲಿ ಇರಬೇಕು ಎಂದು ಪ್ರಸ್ತಾಪಿಸುವ ನಿರ್ಣಯದ ಹಿಂದೆಯೇ ಈ ಬೆಳವಣಿಗೆ ನಡೆದಿದೆ. ಬೈಲಾ ತಿದ್ದುಪಡಿಯಾದ ಬಳಿಕ ಒಪಿಎಸ್ ಮತ್ತು ಇಪಿಎಸ್ ಅವರು ಕ್ರಮವಾಗಿ ಸಂಯೋಜಕ ಮತ್ತು ಜಂಟಿ ಸಂಯೋಜಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರು.

ಪಕ್ಷದ ಈ ಉನ್ನತ ಸ್ಥಾನಗಳಿಗೆ ಸಂಬಂಧಿಸಿದ ಬೈಲಾ ತಿದ್ದುಪಡಿಯನ್ನು ಗುರುವಾರ ನಡೆದಿದ್ದ ಸಾಮಾನ್ಯ ಸಭೆಯು ಅನುಮೋದಿಸಿಲ್ಲ. ಹೀಗಾಗಿ, ಸಹಜವಾಗಿ ಉಲ್ಲೇಖಿತ ಎರಡೂ ಅಧಿಕಾರ ಸ್ಥಾನಗಳು ನಿಷ್ಕ್ರಿಯಗೊಳ್ಳಲಿವೆ. ಒಪಿಎಸ್ ಅವರು ಸಂಯೋಜಕರಾಗಿ ಇರುವುದಿಲ್ಲ. ಇಪಿಎಸ್ ಅವರು ಜಂಟಿ ಸಂಯೋಜಕರಾಗಿ ಉಳಿಯುವುದಿಲ್ಲ.

'ಈ ಇಬ್ಬರು ಖಜಾಂಚಿ (ಒಪಿಎಸ್) ಮತ್ತು ಕೇಂದ್ರ ಕಚೇರಿ ಕಾರ್ಯದರ್ಶಿಯಾಗಿ (ಇಪಿಎಸ್) ಮಾತ್ರವೇ ಮುಂದುವರಿಯಲಿದ್ದಾರೆ' ಎಂದು ಮಾಜಿ ಸಚಿವ ಷಣ್ಮುಗಂ ತಿಳಿಸಿದರು. ಈ ಮೂಲಕ ಇಪಿಎಸ್ ಬಣವು ತಮ್ಮ ನಾಯಕನನ್ನು ಪಕ್ಷದ ಏಕ ನಾಯಕರನ್ನಾಗಿ ಬಿಂಬಿಸುವ ಇಂಗಿತ ವ್ಯಕ್ತಪಡಿಸಿದೆ. ಜುಲೈ 11ರಂದು ಪಕ್ಷದ ಸಾಮಾನ್ಯ ಸಭೆಯಲ್ಲಿ ಈ ಕುರಿತು ಹೆಚ್ಚು ಸ್ಪಷ್ಟತೆ ಮೂಡುವ ಸಾಧ್ಯತೆ ಇದೆ.

ಅಗ್ನಿಪಥ: ನೇಮಕ ಆರಂಭಿಸಿದ ಸೇನೆ

ನವದೆಹಲಿ (ಪಿಟಿಐ): 'ಅಗ್ನಿಪಥ' ಯೋಜನೆಯಡಿ ನೋಂದಣಿ ಪ್ರಕ್ರಿಯೆಗೆ ಚಾಲನೆ ನೀಡುವ ಮೂಲಕ ಭಾರತೀಯ ವಾಯುಪಡೆಯು ಶುಕ್ರವಾರ ನೇಮಕಾತಿ ಪ್ರಕ್ರಿಯೆ ಆರಂಭಿಸಿತು. ಯೋಜನೆ ವಿರೋಧಿಸಿ ವಿವಿಧ ರಾಜ್ಯಗಳಲ್ಲಿ ಹಿಂಸಾಕೃತ್ಯಗಳು ನಡೆದ ವಾರದ ನಂತರ ನೇಮಕ ಪ್ರಕ್ರಿಯೆ ಆರಂಭವಾಗಿದೆ.

'ಅಗ್ನಿವೀರವಾಯು' ಹುದ್ದೆಗೆ ಹೆಸರು ನೋಂದಣಿ ಪ್ರಕ್ರಿಯೆ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಆರಂಭವಾಗಿದೆ' ಎಂದು ವಾಯುಪಡೆ ಟ್ವೀಟ್ ಮಾಡಿದೆ. ಅಗ್ನಿಪಥ ಯೋಜನೆಯಡಿ ನೇಮಕವಾದವರನ್ನು 'ಅಗ್ನಿವೀರ'ರು ಎಂದು ಗುರುತಿಸಲಾಗುತ್ತದೆ.

ಕೇಂದ್ರ ಸರ್ಕಾರ ಜೂನ್ 14ರಂದು ಅಗ್ನಿಪಥ ಯೋಜನೆ ಪ್ರಕಟಿಸಿತ್ತು. ನಾಲ್ಕು ವರ್ಷಗಳ ಅವಧಿಗೆ ಹದಿನೇಳೂವರೆ ವರ್ಷದಿಂದ 21 ವರ್ಷದವರೆಗಿನವರನ್ನು ನೇಮಿಸಲಾಗುತ್ತದೆ. ಅವಧಿ ಮುಗಿದ ತರುವಾಯ ಇವರಲ್ಲಿ ಶೇ 25ರಷ್ಟು ಜನರನ್ನು ಸೇನೆಗೆ ಪೂರ್ಣಾವಧಿಗೆ ನೇಮಿಸಿಕೊಳ್ಳಲಾಗುವುದು ಎಂದು ಸರ್ಕಾರ ಪ್ರಕಟಿಸಿತ್ತು.

ಶ್ರೀನಗರ: 2023ಕ್ಕೆ ಜಿ–20 ಶೃಂಗಸಭೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಮೊದಲ ಬಾರಿಗೆ ಜಿ–20 ನಾಯಕರ ಶೃಂಗಸಭೆ (2023ರಲ್ಲಿ) ನಡೆಯಲಿದ್ದು, ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪ್ರಕಾರ, 2022ರ ಡಿ.1ರಿಂದ ಜಿ–20 ಅಧ್ಯಕ್ಷ ಸ್ಥಾನ ಭಾರತ ಹೊಂದಿರುತ್ತದೆ ಮತ್ತು ಮುಂದಿನ ವರ್ಷ ಜಿ–20 ನಾಯಕರ ಶೃಂಗಸಭೆ ನಡೆಸಲಿದೆ. ಶೃಂಗಸಭೆ ಆಯೋಜನೆ ಸಂಬಂಧ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಜತೆ ಸಮನ್ವಯತೆಗಾಗಿ ಜಮ್ಮು– ಕಾಶ್ಮೀರ ಸರ್ಕಾರ ಐದು ಮಂದಿ ಸದಸ್ಯರ ಸಮಿತಿ ರಚಿಸಿದೆ.

ಐ.ಬಿ ಮುಖ್ಯಸ್ಥರಾಗಿ ತಪನ್ ಕುಮಾರ್ ಡೇಕಾ ನೇಮಕ

ನವದೆಹಲಿ: ಹಿರಿಯ ಐಪಿಎಸ್ ಅಧಿಕಾರಿ ತಪನ್ ಕುಮಾರ್ ಡೇಕಾ ಅವರನ್ನು ಗುಪ್ತಚರ (ಐ.ಬಿ) ಮುಖ್ಯಸ್ಥರಾಗಿ ಶುಕ್ರವಾರ ನೇಮಕ ಮಾಡಲಾಗಿದೆ.

ಗುಪ್ತಚರ ದಳದ ಕಾರ್ಯಾಚರಣಾ ವಿಭಾಗವನ್ನು ನಿರ್ವಹಿಸುತ್ತಿದ್ದ ತಪನ್ ಕುಮಾರ್ ಅವರು 2 ವರ್ಷಗಳ ಅವಧಿಗೆ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ ಎಂದು ಸಿಬ್ಬಂದಿ ಸಚಿವಾಲಯ ತಿಳಿಸಿದೆ. ತಪನ್ ಕುಮಾರ್ ಅವರು ಹಿಮಾಚಲ ಪ್ರದೇಶ ಕೇಡರ್‌ನ 1998ರ ಬ್ಯಾಚ್‌ನ ಅಧಿಕಾರಿಯಾಗಿದ್ದಾರೆ.

ರಿಸರ್ಚ್ ಆ್ಯಂಡ್ ಅನಾಲಿಸಿಸ್ ವಿಂಗ್‌ನ (ರಾ) ಮುಖ್ಯಸ್ಥ ಸಮಂತ್ ಗೋಯೆಲ್ ಅವರ ಅಧಿಕಾರಾವಧಿಯನ್ನು ಮತ್ತೆ ಒಂದು ವರ್ಷಕ್ಕೆ ವಿಸ್ತರಿಸಲಾಗಿದೆ ಎಂದೂ ಸಚಿವಾಲಯ ತಿಳಿಸಿದೆ.

ರಾಷ್ಟ್ರಪತಿ ಚುನಾವಣೆ: ಮುರ್ಮು ನಾಮಪತ್ರ ಸಲ್ಲಿಕೆ

ಪ್ರತಿಪಕ್ಷಗಳ ಬೆಂಬಲಕ್ಕೆ ಮೊರೆ



ಎನ್‌ಡಿಎ ಅಭ್ಯರ್ಥಿಯಾಗಿ ದ್ರೌಪದಿ ಮುರ್ಮು ಅವರು ನಾಮಪತ್ರ ಸಲ್ಲಿಸಿದ ಬಳಿಕ ಪ್ರಧಾನಿ ಮೋದಿ ರಿಜಿಸ್ಟರ್‌ನಲ್ಲಿ ಸಹಿ ಹಾಕಿದರು. –ಪಿಟಿಐ ಚಿತ್ರ

ನವದೆಹಲಿ: ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರು ಶುಕ್ರವಾರ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೇರಿ ಪ್ರತಿಪಕ್ಷಗಳ ಪ್ರಮುಖ ನಾಯಕರಿಗೆ ದೂರವಾಣಿ ಕರೆ ಮಾಡಿ ತಮ್ಮ ಉಮೇದುವಾರಿಕೆಗೆ ಬೆಂಬಲ ಕೋರಿದ್ದಾರೆ. ಮೂವರೂ ಮುರ್ಮು ಅವರಿಗೆ ಶುಭ ಹಾರೈಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜುಲೈ 18ರಂದು ನಡೆಯಲಿರುವ ರಾಷ್ಟ್ರಪತಿ ಚುನಾವಣೆಗೆ ನಾಮಪತ್ರ ಸಲ್ಲಿಕೆಗೂ ಮುನ್ನ ಮುರ್ಮು ಅವರು ವೈಯಕ್ತಿಕವಾಗಿ ಪ್ರತಿ ಪಕ್ಷಗಳ ನಾಯಕರಿಗೆ ಕರೆ ಮಾಡಿ ಬೆಂಬಲ ಕೋರಿದ್ದಾರೆ.

ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ದ್ರೌಪದಿ ಮುರ್ಮು ಅವರು ಶುಕ್ರವಾರ ನಾಮಪತ್ರವನ್ನು ಚುನಾವಣಾಧಿಕಾರಿ ಪಿ.ಸಿ. ಮೋದಿ ಅವರಿಗೆ ಸಲ್ಲಿಸಿದರು. ಕೇಂದ್ರ ಸಚಿವರಾದ ರಾಜನಾಥ ಸಿಂಗ್, ಅಮಿತ್ ಶಾ, ನಿತಿನ್ ಗಡ್ಕರಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿ ಹಲವು ನಾಯಕರು ಮುರ್ಮು ಅವರಿಗೆ ಬೆಂಬಲ ಸೂಚಿಸಿದ್ದಾರೆ.

ಬಿಜೆಪಿ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ಯೋಗಿ ಆದಿತ್ಯನಾಥ್ ಸೇರಿ ಎನ್‌ಡಿಎ ಮಿತ್ರಪಕ್ಷಗಳಾದ ವೈಎಸ್‌ಆರ್‌ಸಿಪಿ, ಬಿಜೆಡಿ, ಎಐಎಡಿಎಂಕೆ ಮುಖಂಡರೂ ಇದ್ದರು.

ಬೆಂಬಲ ಕೋರಿದ ನಡ್ಡಾ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ, ಮಾಜಿ ಪ್ರಧಾನಿ ಮತ್ತು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಸೇರಿ ವಿರೋಧ ಪಕ್ಷಗಳ ನಾಯಕರಿಗೆ ಕರೆ ಮಾಡಿ, ದ್ರೌಪದಿ ಮುರ್ಮು ಅವರಿಗೆ ಬೆಂಬಲ ಕೋರಿದರು.


ಸ್ವದೇಶಿ ಕ್ಷಿಪಣಿ ಪರೀಕ್ಷೆ ಯಶಸ್ವಿ

ಬಾಲಾಸೋರ್, ಒಡಿಶಾ (ಪಿಟಿಐ): ಹಡಗಿನಿಂದ ಬಹುವಿಧದ ಗುರಿಗಳನ್ನು ಭೇದಿಸುವ ಕಡಿಮೆ ವ್ಯಾಪ್ತಿಯ ಮೇಲ್ಮೈ ವಾಯು ದಾಳಿ ಕ್ಷಿಪಣಿ (ವಿಎಲ್‌–ಎಸ್‌ಆರ್‌ಎಸ್‌ಎಎಂ) ಪರೀಕ್ಷೆಯನ್ನು ಡಿಆರ್‌ಡಿಒ ಮತ್ತು ಭಾರತೀಯ ನೌಕಾಪಡೆ ಒಡಿಶಾದ ಕರಾವಳಿಯ ಚಾಂಡಿಪುರದ ಸಮಗ್ರ ಪರೀಕ್ಷಾ ಕೇಂದ್ರದಲ್ಲಿ (ಐಟಿಆರ್) ಶುಕ್ರವಾರ ಯಶಸ್ವಿಯಾಗಿ ನಡೆಸಿವೆ.

ವಿಎಲ್‌–ಎಸ್‌ಆರ್‌ಎಸ್‌ಎಎಂ (ವರ್ಟಿಕಲ್ ಲಾಂಚ್ ಶಾರ್ಟ್ ರೇಂಜ್ ಸರ್ಫೇಸ್ ಟು ಏರ್ ಮಿಸೈಲ್ ಕ್ಷಿಪಣಿ) ಹಡಗಿನಿಂದ ಉಡಾಯಿಸುವ ಕ್ಷಿಪಣಿ ವ್ಯವಸ್ಥೆಯಾಗಿದೆ. ಇದು ಸಾಗರದೊಳಗೆ ಎದುರಾಗುವ ದಾಳಿಗಳನ್ನು ಮತ್ತು ವಾಯು ಪ್ರದೇಶದಲ್ಲಿ ತೀರಾ ಸನಿಹದಲ್ಲಿ ಎದುರಾಗುವ ವೈಮಾನಿಕ ದಾಳಿಯ ಗುರಿಗಳನ್ನು ನಾಶಪಡಿಸುತ್ತದೆ.

ಅತಿ ವೇಗದ ವೈಮಾನಿಕ ಗುರಿಯನ್ನು ಪರೀಕ್ಷಾರ್ಥ ವಿಮಾನದ ವಿರುದ್ಧ ಈ ಕ್ಷಿಪಣಿಯನ್ನು ನೌಕಾಪಡೆಯ ಹಡಗಿನಿಂದ ಉಡಾವಣೆ ಮಾಡಿ, ಪರೀಕ್ಷಿಸಲಾಯಿತು.

ಷೇರುಪೇಟೆ ವಹಿವಾಟು 462



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,556
ಇಂದಿನ ಅಂತ್ಯ	15,699
▲	143
ದಿನದ ಗರಿಷ್ಠ	15,749

ವಿನಿಮಯ ದರ

$ ಡಾಲರ್	78.33
£ ಪೌಂಡ್	96.07
€ ಯುರೊ	82.53
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹545
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹550

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1540)
ಸೋಯಾ (ರಿಫೈನ್ಡ್)	₹1340 (1350)
ಸೂರ್ಯಕಾಂತಿ (ರಿಫೈನ್ಡ್)	₹1680 (1680)
ಪಾಮೋಲಿನ್	₹1255 (1265)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹172-570
ದ್ವಿತಳಿ (ಬಿ.ವಿ)	₹456-825

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹173
ಆರ್‌ಎಸ್‌ಎಸ್-5	₹165
ಗುಡ್ ಲಾಟ್	₹157

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1300-1500
ಮಧ್ಯಮ	₹1000-1300
ಸಣ್ಣ	₹600-1000

ಪರಮೇಶ್ವರನ್ ನೀತಿ ಆಯೋಗದ ಸಿಇಒ

ನವದೆಹಲಿ (ಪಿಟಿಐ): ನೀತಿ ಆಯೋಗದ ಸಿಇಒ ಆಗಿ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಮಾಜಿ ಕಾರ್ಯದರ್ಶಿ ಪರಮೇಶ್ವರನ್ ಅಯ್ಯರ್ ನೇಮಕ ಆಗಿದ್ದಾರೆ.

ಅಮಿತಾಭ್ ಕಾಂತ್ ಅವರ ಅಧಿಕಾರ ಅವಧಿಯು ಇದೇ 30ರಂದು ಮುಗಿಯಲಿದ್ದು, ಅವರ ಸ್ಥಾನಕ್ಕೆ ಈ ನೇಮಕ ನಡೆದಿದೆ. ಸರ್ಕಾರದ ಆದೇಶದಲ್ಲಿ ಈ ಮಾಹಿತಿ ಇದೆ.

ಉತ್ತರ ಪ್ರದೇಶ ಕೇಡರ್‌ನ 1981ರ ಬ್ಯಾಚ್‌ನ ಐಎಎಸ್ ಅಧಿಕಾರಿ ಅಯ್ಯರ್ ಅವರು ನೈರ್ಮಲ್ಯ ತಜ್ಞರಾಗಿದ್ದು, ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಸ್ವಚ್ಛ ಭಾರತ ಮಿಷನ್ ಅನ್ನು 2016ರಿಂದ 2020ರವರೆಗೆ ಮುನ್ನಡೆಸಿದ್ದಾರೆ.

ವಿಶ್ವಸಂಸ್ಥೆಯ ಗ್ರಾಮೀಣ ನೀರು ನೈರ್ಮಲ್ಯದ ಹಿರಿಯ ತಜ್ಞರಾಗಿಯೂ ಅವರು ಕೆಲಸ ಮಾಡಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್ ಡೆಪ್ಯುಟಿ ಗವರ್ನರ್ ಮೈಕೆಲ್ ಪಾತ್ರಾ ಹೇಳಿಕೆ

ಡಿಸೆಂಬರ್ ನಂತರ ಹಣದುಬ್ಬರ ಇಳಿಕೆ

ಮುಖ್ಯಾಂಶಗಳು

- 3 ತ್ರೈಮಾಸಿಕಗಳಲ್ಲಿ ಶೇ6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಹಣದುಬ್ಬರ
- ಹಣದುಬ್ಬರ ತಗ್ಗಿಸಲು ಕ್ರಮ ಅನಿವಾರ್ಯ
- ರೂಪಾಯಿ ಮೌಲ್ಯ ಇಳಿಕೆ



ನವದೆಹಲಿ (ರಾಯಿಟರ್ಸ್): ದೇಶದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಸತತ ಮೂರು ತ್ರೈಮಾಸಿಕಗಳಲ್ಲಿ ಶೇಕಡ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇರುವ ಸಾಧ್ಯತೆ ಇದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಡೆಪ್ಯುಟಿ ಗವರ್ನರ್ ಮೈಕೆಲ್ ಪಾತ್ರಾ ಹೇಳಿದ್ದಾರೆ.

ಹಣದುಬ್ಬರವು ಗರಿಷ್ಠ ಮಟ್ಟವನ್ನು ತಲುಪಿರುವ ಸೂಚನೆಗಳು ಇವೆ ಎಂದೂ ಪಾತ್ರಾ ಅವರು ಶುಕ್ರವಾರ ಹೇಳಿದ್ದಾರೆ.

'ಹಣದುಬ್ಬರ ಪ್ರಮಾಣವು ಸತತ ಮೂರು ತ್ರೈಮಾಸಿಕಗಳವರೆಗೆ ಗರಿಷ್ಠ ಮಿತಿಗಿಂತ ಹೆಚ್ಚಿದ್ದರೆ, ಆರ್‌ಬಿಐ ಕೇಂದ್ರ ಸರ್ಕಾರಕ್ಕೆ ವರದಿಯೊಂದನ್ನು ಸಲ್ಲಿಸಬೇಕು ಎಂದು ಕಾಯ್ದೆ ಹೇಳುತ್ತದೆ. ಹಣದುಬ್ಬರವನ್ನು ನಿಯಂತ್ರಿಸಲು ಏಕೆ ಆಗಲಿಲ್ಲ ಎಂಬುದನ್ನು ಆರ್‌ಬಿಐ ಆ ವರದಿಯಲ್ಲಿ ಹೇಳಬೇಕಾಗುತ್ತದೆ. ಹಣದುಬ್ಬರವು ಸತತ ಮೂರು ತ್ರೈಮಾಸಿಕಗಳವರೆಗೆ ಗರಿಷ್ಠ ಮಿತಿಗಿಂತ ಹೆಚ್ಚಿರುವ ಸಾಧ್ಯತೆ ಜಾಸ್ತಿ ಇದೆ' ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಏಪ್ರಿಲ್ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 7.79ಕ್ಕೆ ತಲುಪಿತ್ತು. ಮೇ ತಿಂಗಳಿನಲ್ಲಿ ಅದು ತುಸು ಕಡಿಮೆ ಆಯಿತು. ಸತತ ಐದು ತಿಂಗಳುಗಳಿಂದ ಹಣದುಬ್ಬರವು ಶೇ6ಕ್ಕಿಂತ ಹೆಚ್ಚಿನ ಮಟ್ಟದಲ್ಲಿದೆ.

ಜಾಗತಿಕ ಮಟ್ಟದಲ್ಲಿ ಹಣದ ಹರಿವಿನ ಮೇಲೆ ಕೈಗೊಂಡಿರುವ ಬಿಗಿ ಕ್ರಮಗಳಿಗೆ ಹೋಲಿಸಿದರೆ, ಆರ್‌ಬಿಐ ಇನ್ನು ಮುಂದೆ ಕೈಗೊಳ್ಳಲಿರುವ ಕ್ರಮಗಳು ಹೆಚ್ಚು ಸೌಮ್ಯವಾಗಿರಲಿವೆ ಎಂದು ಪಾತ್ರಾ ಅವರು ಆಶಾಭಾವ ವ್ಯಕ್ತಪಡಿಸಿದ್ದಾರೆ.

ಹಣದುಬ್ಬರ ಪ್ರಮಾಣವು ಶೇ 6ಕ್ಕಿಂತ ಜಾಸ್ತಿ ಆದಾಗ ಆರ್ಥಿಕ ಬೆಳವಣಿಗೆಯು ತೊಂದರೆಗೆ ಒಳಗಾಗುವುದು ಸ್ಪಷ್ಟ ಎಂಬುದನ್ನು ಆಂತರಿಕ ಸಂಶೋಧನೆಗಳು ತೋರಿಸಿಕೊಟ್ಟಿವೆ. ಹೀಗಾಗಿ, ಹಣದುಬ್ಬರ ತಗ್ಗಿಸಲು ಕ್ರಮ ಕೈಗೊಳ್ಳುವುದು ಅನಿವಾರ್ಯವಾಗುತ್ತದೆ ಎಂದು ಪಾತ್ರಾ ವಿವರಿಸಿದ್ದಾರೆ.

ಹೆಚ್ಚಿನ ಹಣದುಬ್ಬರವು ರೂಪಾಯಿ ಮೌಲ್ಯದ ಮೇಲೆ ಕೂಡ ಕೆಟ್ಟ ಪರಿಣಾಮ ಬೀರಿದೆ. ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದಿದೆ.

(ಪಿಟಿಐ ವರದಿ): ಹಣದುಬ್ಬರ ಪ್ರಮಾಣವು 2023ರ ಜನವರಿ–ಮಾರ್ಚ್ ಅವಧಿಯಲ್ಲಿ ಶೇ 6ಕ್ಕಿಂತ ಕೆಳಗಿನ ಮಟ್ಟಕ್ಕೆ ಬರುವ ನಿರೀಕ್ಷೆ ಇದೆ ಎಂದು ಪಾತ್ರಾ ಹೇಳಿದ್ದಾರೆ. ಮುಂದಿನ ಹಣಕಾಸು ವರ್ಷದಲ್ಲಿ ಹಣದುಬ್ಬರ ಪ್ರಮಾಣವು ಇನ್ನೂ ಕಡಿಮೆ ಆಗಬಹುದು ಎಂದೂ ಅವರು ಹೇಳಿದ್ದಾರೆ.

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಸುಧಾ, ಮಯೂರ ಓದಿ

ಶುಕ್ರವಾರವೂ ಮುಂದುವರಿದ ಸಕಾರಾತ್ಮಕ ವಹಿವಾಟು

2 ದಿನದಲ್ಲಿ ₹5 ಲಕ್ಷ ಕೋಟಿ ವೃದ್ಧಿ



ವಲಯವಾರು ಗಳಿಕೆ (%)

ವಲಯ	ಗಳಿಕೆ (%)
ದೂರಸಂಪರ್ಕ	2.53
ವಾಹನ	1.98
ವಿದ್ಯುತ್	1.73
ಗ್ರಾಹಕ ಬಳಕೆ ವಸ್ತುಗಳು	1.47
ಹಣಕಾಸು	1.40

ಮುಂಬೈ/ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯಲ್ಲಿ ಸತತ ಎರಡನೇ ದಿನವೂ ಸಕಾರಾತ್ಮಕ ವಹಿವಾಟು ನಡೆಯಿತು. ಇದರಿಂದಾಗಿ ಎರಡು ದಿನಗಳಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯ ₹ 5 ಲಕ್ಷ ಕೋಟಿ ಹೆಚ್ಚಾಗಿದೆ. ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ₹ 242.27 ಲಕ್ಷ ಕೋಟಿಗೆ ತಲುಪಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರ 462 ಅಂಶ ಏರಿಕೆ ಕಂಡಿದ್ದು 52,728 ಅಂಶಗಳಿಗೆ ತಲುಪಿದೆ. ಗುರುವಾರ ಸೆನ್ಸೆಕ್ಸ್ 443 ಅಂಶ ಏರಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಶುಕ್ರವಾರ 143 ಅಂಶ ಹೆಚ್ಚಾಗಿ 15,699 ಅಂಶಗಳಿಗೆ ತಲುಪಿತು.

ವಾಹನ, ಬ್ಯಾಂಕಿಂಗ್ ಮತ್ತು ಇಂಧನ ವಲಯದ ಷೇರುಗಳು ಉತ್ತಮ ಖರೀದಿ ವಹಿವಾಟಿಗೆ ಒಳಗಾಗಿದ್ದು ಸೂಚ್ಯಂಕಗಳ ಏರಿಕೆಗೆ ಕಾರಣವಾಯಿತು.

ಜಾಗತಿಕ ಮಾರುಕಟ್ಟೆಗಳಲ್ಲಿ ವಹಿವಾಟು ಸ್ಥಿರವಾಗಿರುವುದು ಹಾಗೂ ಸರಕುಗಳ ದರ ಇಳಿಮುಖ ಆಗಿರುವುದು ದೇಶಿ ಷೇರುಪೇಟೆಗಳಲ್ಲಿ ಸೂಚ್ಯಂಕಗಳ ಏರಿಕೆಗೆ ಕಾರಣವಾಗಿವೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಐ.ಟಿ. ಹೊರತುಪಡಿಸಿ ಉಳಿದೆಲ್ಲ ವಲಯಗಳ ಸೂಚ್ಯಂಕಗಳು ಶುಕ್ರವಾರ ಗಳಿಕೆ ಕಂಡಿವೆ. ಬಿಎಸ್‌ಇ ಸ್ಮಾಲ್ ಕ್ಯಾಪ್ ಶೇ 1.60ರಷ್ಟು ಮತ್ತು ಮಿಡ್ ಕ್ಯಾಪ್ ಶೇ 1.53ರಷ್ಟು ಏರಿಕೆ ಕಂಡಿವೆ.

ಕಚ್ಚಾ ತೈಲ ದರ ಹೆಚ್ಚಳ: ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 1.11ರಷ್ಟು ಹೆಚ್ಚಾಗಿದ್ದು ಒಂದು ಬ್ಯಾರಲ್‌ಗೆ 111.27 ಡಾಲರ್‌ಗೆ ತಲುಪಿತು.

ಉತ್ತರ ಪ್ರದೇಶದ ಕಾಲೇಜು ಕಟ್ಟಡ: ಕೈಯಲ್ಲಿ ತಳ್ಳಿದರೆ ಬೀಳುತ್ತದೆ ಗೋಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉತ್ತರ ಪ್ರದೇಶ ಸರ್ಕಾರವು ನಿರ್ಮಿಸುತ್ತಿರುವ ಎಂಜಿನಿಯರಿಂಗ್ ಕಾಲೇಜಿನ ಕಾಮಗಾರಿ ಅತ್ಯಂತ ಕಳಪೆಯಾಗಿದೆ. ಸಿಮೆಂಟ್ ಬಳಸದೆಯೇ ಇಟ್ಟಿಗೆಗಳನ್ನು ಜೋಡಿಸಲಾಗಿದೆ' ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಆರೋಪಿಸಿದ್ದಾರೆ. ಸಮಾಜವಾದಿ ಪಕ್ಷದ ಶಾಸಕರೊಬ್ಬರು ಬರಿಗೈನಿಂದ ತಳ್ಳಿದಾಗ, ಗೋಡೆ ಕುಸಿದು ಬೀಳುವ ವಿಡಿಯೊವನ್ನು ಅವರು ಟ್ವೀಟ್ ಮಾಡಿದ್ದಾರೆ.

ಉತ್ತರ ಪ್ರದೇಶದ ರಾಣಿಗಂಜ್‌ನಲ್ಲಿ ನಿರ್ಮಿಸಲಾಗುತ್ತಿರುವ ಕಾಲೇಜು ಕಟ್ಟಡದ ಕಾಮಗಾರಿ ಪರಿಶೀಲನೆಗೆ ಸಮಾಜವಾದಿ ಪಕ್ಷದ ಸ್ಥಳೀಯ ಶಾಸಕ ಆರ್‌.ಕೆ.ವರ್ಮಾ ಅವರು ಹೋಗಿದ್ದರು. ನಿರ್ಮಾಣ ಹಂತದಲ್ಲಿರುವ ಕಟ್ಟಡದ ಗೋಡೆಯನ್ನು ಅವರು ಬರಿಗೈನಿಂದ ತಳ್ಳಿದ್ದಾರೆ. ಗೋಡೆ ಕುಸಿದು ಬಿದ್ದಿದೆ. ಕೆಳಗೆ ಬಿದ್ದ ನಂತರ ಎಲ್ಲಾ ಇಟ್ಟಿಗೆಗಳು ಬೇರೆಯಾಗಿವೆ. ಅಖಿಲೇಶ್ ಯಾದವ್ ಅವರು ಒಂದು ವಿಡಿಯೊವನ್ನು ಟ್ವೀಟ್ ಮಾಡಿದ್ದರೆ, ಬೇರೊಂದು ಗೋಡೆಯನ್ನು ಉರುಳಿಸುವ ವಿಡಿಯೊವನ್ನು ವರ್ಮಾ ಟ್ವೀಟ್ ಮಾಡಿದ್ದಾರೆ.



ಅಖಿಲೇಶ್ ಯಾದವ್ ಅವರು ಟ್ವೀಟ್ ಮಾಡಿರುವ ವಿಡಿಯೊದ ಸ್ಕ್ರೀನ್‌ಗ್ರ್ಯಾಬ್

'ಇಂತಹ ಕಳಪೆ ಕಾಮಗಾರಿಯಿಂದ ದೇಶದ ಯುವಕರ ಭವಿಷ್ಯವನ್ನು ಕಟ್ಟಲು ಸಾಧ್ಯವಿಲ್ಲ. ಇಲ್ಲಿ ಅವರ ಸಾವಿಗೆ ಸಿದ್ಧತೆ ನಡೆಸಲಾಗುತ್ತಿದೆ. ರಾಣಿಗಂಜ್ ಎಂಜಿನಿಯರಿಂಗ್ ಕಾಲೇಜಿನ ಕಳಪೆ ಕಾಮಗಾರಿಯು ರಾಜ್ಯ ಸರ್ಕಾರದ ಭ್ರಷ್ಟಾಚಾರವನ್ನು ಜಾಹೀರು ಮಾಡುತ್ತಿದೆ' ಎಂದು ಆರ್‌.ಕೆ.ವರ್ಮಾ ಟ್ವೀಟ್‌ನಲ್ಲಿ ಆರೋಪಿಸಿದ್ದಾರೆ.

'ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ವಿಧಾನಗಳು ಅತ್ಯಂತ ವಿಶಿಷ್ಟವಾದವು' ಎಂದು ಅಖಿಲೇಶ್ ಲೇವಡಿ ಮಾಡಿದ್ದಾರೆ.

ಎನ್‌ಎಂಡಿಸಿ ಹೆಸರಿನಲ್ಲಿ ನೌಕರಿ ಆಮಿಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎನ್‌ಎಂಡಿಸಿ ಲಿಮಿಟೆಡ್‌ನ ದೋಣಿಮಲೆ ಕಾಂಪ್ಲೆಕ್ಸ್‌ನಲ್ಲಿ ಉದ್ಯೋಗ ಕೊಡಿಸುವುದಾಗಿ ಹೇಳಿ ಕೆಲವು ಕಿಡಿಗೇಡಿಗಳು ಹಣಕ್ಕೆ ಬೇಡಿಕೆ ಇರಿಸುತ್ತಿರುವುದು ಗಮನಕ್ಕೆ ಬಂದಿದೆ' ಎಂದು ಕೇಂದ್ರ ಸರ್ಕಾರಿ ಸ್ವಾಮ್ಯದ ಎನ್‌ಎಂಡಿಸಿ ಹೇಳಿದೆ.

ಕಂಪನಿಯು ಇಂತಹ ವ್ಯಕ್ತಿಗಳ ಮೂಲಕ ಉದ್ಯೋಗ ನೀಡುವುದಿಲ್ಲ. ಕಂಪನಿಯಲ್ಲಿ ನೇಮಕ ಪ್ರಕ್ರಿಯೆಯು ಪಾರದರ್ಶಕವಾಗಿ, ವಿವಿಧ ಪರೀಕ್ಷೆಗಳ ಮೂಲಕ ನಡೆಯುತ್ತದೆ. ಫೆಬ್ರುವರಿ 3ರ ನೇಮಕಾತಿ ಅಧಿಸೂಚನೆಗೆ ಸಂಬಂಧಿಸಿದಂತೆ ಲಿಖಿತ ಪರೀಕ್ಷೆಗೆ ಹಾಜರಾಗಿದ್ದವರು ಇಂತಹ ವ್ಯಕ್ತಿಗಳ ವಿಚಾರದಲ್ಲಿ ಎಚ್ಚರಿಕೆಯಿಂದ ಇರಬೇಕು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಬ್ರಿಟನ್: ಆಡಳಿತ ಪಕ್ಷದ ಅಧ್ಯಕ್ಷ ರಾಜೀನಾಮೆ

ಲಂಡನ್ (ಪಿಟಿಐ): ಇತ್ತೀಚೆಗೆ ನಡೆದ ಎರಡು ಪ್ರಮುಖ ಉಪಚುನಾವಣೆಗಳಲ್ಲಿ ಆಡಳಿತಾರೂಢ ಕನ್ಸರ್‌ವೇಟಿವ್ ಪಾರ್ಟಿಗೆ ಹೀನಾಯ ಸೋಲು ಆಗಿದ್ದು, ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರಿಗೆ ಭಾರಿ ಹಿನ್ನಡೆ ಉಂಟಾಗಿದೆ.

ಈ ಸೋಲು, ಜಾನ್ಸನ್ ಅವರ ಆಪ್ತರೂ ಆಗಿರುವ ಪಕ್ಷದ ಅಧ್ಯಕ್ಷ ಆಲಿವರ್ ಡೌಡೆನ್ ರಾಜೀನಾಮೆ ನೀಡುವಂತೆ ಮಾಡಿದೆ. ಅಲ್ಲದೇ, ಬೋರಿಸ್ ಅವರ ನಾಯಕತ್ವವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಉತ್ತರ ಇಂಗ್ಲೆಂಡ್‌ನ ವೇಕ್‌ಫೀಲ್ಡ್, ದಕ್ಷಿಣ ಇಂಗ್ಲೆಂಡಿನ ಟಿವರ್ಟನ್ ಮತ್ತು ಹೊನಿಟನ್ ಕ್ಷೇತ್ರಗಳಲ್ಲಿ ಕನ್ಸರ್ವೆಟಿವ್ ಪಕ್ಷದ ಅಭ್ಯರ್ಥಿಗಳು ಪರಾಭವಗೊಂಡಿದ್ದಾರೆ. ಈ ಉಪಚುನಾವಣೆಗಳ ಫಲಿತಾಂಶವನ್ನು ಬೋರಿಸ್ ಜಾನ್ಸನ್ ಅವರ ಪಕ್ಷದ ನಾಯಕತ್ವಕ್ಕೆ ಸಿಕ್ಕಿರುವ ಜನಾಭಿಪ್ರಾಯ ಎಂದೇ ಅರ್ಥೈಸಲಾಗುತ್ತಿದೆ.

ಸುದ್ದಿ 2 ನಿಮಿಷ

ಕ್ರ್ಯಾಷ್ ಟೆಸ್ಟ್ ಆಧರಿಸಿ ವಾಹನಕ್ಕೆ ರ್‍ಯಾಂಕಿಂಗ್: ಸಚಿವ ಗಡ್ಕರಿ

ನವದೆಹಲಿ (ಪಿಟಿಐ): ಭಾರತದಲ್ಲಿ ವಾಹನಗಳಿಗೆ ಕ್ರ್ಯಾಷ್ ಟೆಸ್ಟ್ ನಡೆಸಿ, ಅದರ ಆಧಾರದಲ್ಲಿ ರ್‍ಯಾಂಕಿಂಗ್ ನೀಡುವ ವ್ಯವಸ್ಥೆ ಜಾರಿಗೆ ಬರಲಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, 'ಭಾರತ್ ನ್ಯೂ ಕಾರ್ ಅಸೆಸ್‌ಮೆಂಟ್ ಪ್ರೋಗ್ರಾಮ್ (ಭಾರತ್ ಎನ್‌ಸಿಎಪಿ) ಗ್ರಾಹಕ ಕೇಂದ್ರಿತ ವೇದಿಕೆಯಾಗಿ ಕೆಲಸ ಮಾಡಲಿದೆ. ಸ್ಟಾರ್ ರೇಟಿಂಗ್ಸ್ ಆಧಾರದ ಮೇಲೆ ಸುರಕ್ಷಿತವಾದ ಕಾರು ಆಯ್ಕೆ ಮಾಡಲು ಗ್ರಾಹಕರಿಗೆ ಅವಕಾಶ ಕಲ್ಪಿಸುತ್ತದೆ. ಸುರಕ್ಷಿತವಾದ ವಾಹನಗಳನ್ನು ತಯಾರಿಸುವಂತೆ ತಯಾರಕರ ಮಧ್ಯೆ ಆರೋಗ್ಯಕರ ಪೈಪೋಟಿಗೂ ಉತ್ತೇಜನ ನೀಡುತ್ತದೆ' ಎಂದು ತಿಳಿಸಿದ್ದಾರೆ.

'ಭಾರತ್ ಎನ್‌ಸಿಎಪಿ ಪರಿಚಯಿಸಲು ಕರಡು ಜಿಎಸ್‌ಆರ್‌ನ ಅಧಿಸೂಚನೆಗೆ ಒಪ್ಪಿಗೆ ನೀಡಿದ್ದೇನೆ. ಅದರಂತೆ, ಕ್ರ್ಯಾಷ್ ಟೆಸ್ಟ್‌ನಲ್ಲಿ ವಾಹನದ ಸಾಮರ್ಥ್ಯವನ್ನು ಆಧರಿಸಿ ಅದಕ್ಕೆ 1ರಿಂದ 5ರವರೆಗೆ ರ್‍ಯಾಂಕಿಂಗ್ ನೀಡಲಾಗುವುದು' ಎಂದು ಹೇಳಿದ್ದಾರೆ.

ಕಾರುಗಳಲ್ಲಿ ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದಷ್ಟೇ ಅಲ್ಲದೆ, ಭಾರತದ ವಾಹನೋದ್ಯಮದ ರಫ್ತು ಯೋಗ್ಯತೆಯನ್ನು ಇನ್ನಷ್ಟು ಹೆಚ್ಚಿಸಲು ಕೂಡ ಈ ವ್ಯವಸ್ಥೆಯು ಬಹಳ ಮುಖ್ಯವಾಗಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಹೇಳಿದೆ.



ಭಾರತ್ ಎನ್‌ಸಿಎಪಿ ಕ್ರ್ಯಾಷ್ ಟೆಸ್ಟ್ ಜಾಗತಿಕ ನಿಯಮಾವಳಿಗೆ ಅನುಗುಣವಾಗಿಯೇ ಇದೆ. ದೇಶದಲ್ಲಿಯೇ ವಾಹನಗಳ ಪರೀಕ್ಷೆ ನಡೆಸಿ ಪ್ರಮಾಣಪತ್ರ ಪಡೆಯಲು ತಯಾರಕರಿಗೆ ಅವಕಾಶ ಲಭ್ಯವಾಗಲಿದೆ ಎಂದು ಗಡ್ಕರಿ ಹೇಳಿದ್ದಾರೆ.

ಕಾರ್ಡ್ ವಿವರ ಸಂಗ್ರಹ: ಗಡುವು ಸೆಪ್ಟೆಂಬರ್ 30ರವರೆಗೆ ವಿಸ್ತರಣೆ

ಮುಂಬೈ (ಪಿಟಿಐ): ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳ ವಿವರಗಳನ್ನು ಪಾವತಿ ವಹಿವಾಟಿನ ಪಾಲುದಾರರು 'ಟೋಕನ್' ರೂಪದಲ್ಲಿ ಮಾತ್ರ ಸಂಗ್ರಹಿಸುವ ವ್ಯವಸ್ಥೆ ಜಾರಿಗೆ ತರಲು ನೀಡಿದ್ದ ಗಡುವನ್ನು ಆರ್‌ಬಿಐ ಸೆಪ್ಟೆಂಬರ್ 30ರವರೆಗೆ ಮುಂದೂಡಿದೆ.

ಉದ್ಯಮ ವಲಯ ಸಲ್ಲಿಸಿದ್ದ ಮನವಿಗಳನ್ನು ಆಧರಿಸಿ ಆರ್‌ಬಿಐ ಈ ತೀರ್ಮಾನ ಕೈಗೊಂಡಿದೆ. ಈ ವ್ಯವಸ್ಥೆಯ ಜಾರಿಗೆ ನೀಡಿದ್ದ ಗಡುವನ್ನು ಆರ್‌ಬಿಐ ಈ ಹಿಂದೆಯೂ ವಿಸ್ತರಿಸಿತ್ತು.

ವ್ಯವಸ್ಥೆಯ ಜಾರಿಯಲ್ಲಿ ಕೆಲವು ಸಮಸ್ಯೆಗಳು ಇವೆ ಎಂದು ಉದ್ಯಮ ವಲಯವು ಹೇಳಿತ್ತು. 'ಕಾರ್ಡ್ ಹೊಂದಿರುವವರಿಗೆ ತೊಂದರೆ ಆಗದಿರಲಿ ಎಂದು ಇವುಗಳನ್ನು ಪರಿಶೀಲಿಸಲಾಗುತ್ತಿದೆ, ಸಂಬಂಧಪಟ್ಟವರ ಜೊತೆ ಸಮಾಲೋಚನೆ ನಡೆಸಲಾಗುತ್ತಿದೆ' ಎಂದು ಆರ್‌ಬಿಐ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	470
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಹೊಸದುರ್ಗ	
ಬಿಳಿಗೋಟು	24399-26099
ಚಾಲಿ	36599-37529
ಕೆಂಪುಗೋಟು	35599-36899
ರಾಶಿ	45509-49919
ಕುಮಟ	
ಚಿಪ್ಪು	26899-31199
ಕೋಕ	18019-30119
ಹೊಸಚಾಲಿ	35999-40669
ಪುತ್ತೂರು	
ಕೋಕ	11000-26000
ಹೊಸತು	30500-43000
ಶಿವಮೊಗ್ಗ	
ಬೆಟ್ಟೆ	50129-53419
ಗೊರಬಲು	19029-37689
ರಾಶಿ	42699-49489
ಸರಕು	54099-79100
ಸಿದ್ದಾಪುರ	
ಬಿಳಿಗೋಟು	26112-33199
ಚಾಲಿ	34909-39699
ಕೋಕ	21699-32899
ಕೆಂಪುಗೋಟು	30612-31569
ರಾಶಿ	44099-48719
ತಟ್ಟಿಬೆಟ್ಟೆ	38899-45099
ಶಿರಸಿ	
ಬೆಟ್ಟೆ	37611-45699
ಬಿಳಿಗೋಟು	23599-33800
ಚಾಲಿ	36541-40671
ರಾಶಿ	40121-50199
ಯಲ್ಲಾಪುರ	
ಬಿಳಿಗೋಟು	26899-33012
ಚಾಲಿ	35665-40399
ಕೋಕ	18899-30212
ಕೆಂಪುಗೋಟು	30828-34769
ರಾಶಿ	46299-52499
ತಟ್ಟಿಬೆಟ್ಟೆ	37499-45000

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	16100	16100	233.20 ಸೆಂಟ್ಸ್
ಎಸಿ	8960	8600	8900	
ಆರ್‌ಪಿ	9750	9850	9975	ಲಂಡನ್
ಆರ್‌ಸಿ	4670	4500	4600	2087 ಡಾಲರ್ಸ್

ಅಫ್ಗಾನ್ ಭೂಕಂಪ: ಮೃತರ ಸಂಖ್ಯೆ 1,155ಕ್ಕೆ ಏರಿಕೆ

ಗಯಾನ್ (ಅಫ್ಗಾನಿಸ್ತಾನ): ಅಫ್ಗಾನಿಸ್ತಾನದಲ್ಲಿ ಶುಕ್ರವಾರವೂ ಸಣ್ಣ ಪ್ರಮಾಣದ ಭೂಕಂಪ ಸಂಭವಿಸಿ ಐದು ಮಂದಿ ಮೃತಪಟ್ಟು, ಹನ್ನೊಂದು ಮಂದಿ ಗಾಯಗೊಂಡಿದ್ದಾರೆ. ಇದರೊಂದಿಗೆ ಮೃತಪಟ್ಟವರ ಸಂಖ್ಯೆ 1,155 ಕ್ಕೇರಿದ್ದು, 1,611ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಸರ್ಕಾರಿ ಮಾಧ್ಯಮಗಳು ಶುಕ್ರವಾರ ವರದಿ ಮಾಡಿವೆ.

6.1 ತೀವ್ರತೆಯ ಭೂಕಂಪದಿಂದಾಗಿ ಸಾವಿರಾರು ಮಂದಿ ನಿರಾಶ್ರಿತರಾಗಿದ್ದು, ಸುಮಾರು 3 ಸಾವಿರ ಮನೆಗಳು ಸಂಪೂರ್ಣ ನಾಶವಾಗಿವೆ. ಗ್ರಾಮಸ್ಥರು ಸತ್ತವರನ್ನು ಹೂಳುತ್ತಿದ್ದಾರೆ. ಬದುಕುಳಿದವರ ಪತ್ತೆ ಹಚ್ಚಲು ಕೈಯಿಂದ ಅವಶೇಷಗಳನ್ನು ಹೊರತೆಗೆಯುತ್ತಿದ್ದಾರೆ.

ನೆರವು: ಭಾರತವು ಅಫ್ಗಾನಿಸ್ತಾನಕ್ಕೆ ಎರಡು ವಿಮಾನಗಳಲ್ಲಿ 27 ಟನ್ ತುರ್ತು ಪರಿಹಾರ ಸಾಮಗ್ರಿಗಳನ್ನು ರವಾನಿಸಿದೆ. 'ಟೆಂಟ್‌ಗಳು, ಹೊದಿಕೆಗಳು ಮತ್ತು ಹಾಸಿಗೆಗಳು ಸೇರಿದಂತೆ ಅಗತ್ಯ ವಸ್ತುಗಳನ್ನು ಕಾಬೂಲ್‌ನಲ್ಲಿರುವ ವಿಶ್ವಸಂಸ್ಥೆ ಕಚೇರಿ ಮತ್ತು ಅಫ್ಗಾನ್ ರೆಡ್ ಕ್ರೆಸೆಂಟ್ ಸೊಸೈಟಿಗೆ ಹಸ್ತಾಂತರಿಸಲಾಗುವುದು' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಅಮೆರಿಕ: ಬಂದೂಕು ನಿಯಂತ್ರಣ ಮಸೂದೆಗೆ ಅನುಮೋದನೆ

ವಾಷಿಂಗ್ಟನ್ (ಎಪಿ): ಬಹುಚರ್ಚಿತ 'ಉಭಯ ಪಕ್ಷೀಯ ಬಂದೂಕು ನಿಯಂತ್ರಣ ಮಸೂದೆ'ಗೆ ಅಮೆರಿಕದ ಸಂಸತ್‌ನಲ್ಲಿ ಶುಕ್ರವಾರ ಅನುಮೋದನೆ ದೊರೆತಿದೆ.

ಈ ಮಸೂದೆಯನ್ನು ಸೆನೆಟ್‌ನಲ್ಲಿ ಮಂಡಿಸಲಾಗಿದ್ದು, 65–33 ಮತಗಳಿಂದ ಅನುಮೋದನೆ ನೀಡಲಾಗಿದೆ. ಸಂಸತ್‌ನ ಕೆಳಮನೆಯಲ್ಲಿ ಮಸೂದೆಗೆ ಅನುಮೋದನೆ ದೊರೆತಿದೆ.

ದೇಶದಲ್ಲಿ ಇತ್ತೀಚೆಗೆ ಬಂದೂಕು ಧಾರಿಗಳು ನಡೆಸಿದ ಸಾಮೂಹಿಕ ಗುಂಡಿನ ದಾಳಿಗಳಲ್ಲಿ ಸಾಕಷ್ಟು ಜನರು ಪ್ರಾಣ ಕಳೆದುಕೊಂಡಿದ್ದರು. ಕಳೆದ ತಿಂಗಳು ಟೆಕ್ಸಾಸ್‌ನ ಯುವಾಲ್ಡೆಯ ಪ್ರಾಥಮಿಕ ಶಾಲೆಯಲ್ಲಿ ಬಂದೂಕು ಧಾರಿಯೊಬ್ಬ ನಡೆಸಿದ್ದ ಗುಂಡಿನ ದಾಳಿಯಲ್ಲಿ 19 ವಿದ್ಯಾರ್ಥಿಗಳು ಹಾಗೂ ಇಬ್ಬರು ಶಿಕ್ಷಕರು ಮೃತಪಟ್ಟಿದ್ದರು. ಈ ಘಟನೆ ನಡೆದ ತಿಂಗಳ ಬಳಿಕ, 13 ಶತಕೋಟಿ ಡಾಲರ್ ಮೊತ್ತದ ಪ್ಯಾಕೇಜ್‌ನ ಈ ಮಸೂದೆಯನ್ನು ಸಿದ್ಧಪಡಿಸಲಾಗಿತ್ತು.

ಶಾಲೆಯ ಸುರಕ್ಷತೆ, ಮಾನಸಿಕ ಆರೋಗ್ಯ ವೃದ್ಧಿ ಮತ್ತು ಹಿಂಸಾಚಾರ ತಡೆಗಟ್ಟುವಿಕೆಗೆ ಸಂಬಂಧಿಸಿ ಸ್ಥಳೀಯವಾಗಿ ಕಾರ್ಯಕ್ರಮಗಳನ್ನು ಆಯೋಜಿಸಲು ಈ ಅನುದಾನ ಒದಗಿಸುವುದು. ಬಂದೂಕು ಖರೀದಿಸುವವರ ವಯೋಮಿತಿಯಲ್ಲಿ ಹೆಚ್ಚಳದಂತಹ ಅಂಶಗಳನ್ನು ಈ ಮಸೂದೆಯು ಒಳಗೊಂಡಿದೆ. ಈ ಮಸೂದೆಯ ಅನುಮೋದನೆಗಾಗಿ 30 ವರ್ಷಗಳಿಂದ ಒತ್ತಾಯ ಕೇಳಿಬರುತ್ತಿತ್ತು.

ಸಂಕ್ಷಿಪ್ತ ಸುದ್ದಿ

ಇಂಟೆಲ್‌ನಿಂದ ಬೆಂಗಳೂರಿನಲ್ಲಿ ಹೊಸ ಎಂಜಿನಿಯರಿಂಗ್ ಕೇಂದ್ರ

ಬೆಂಗಳೂರು: ಇಂಟೆಲ್ ಇಂಡಿಯಾ ಕಂಪನಿಯು ಬೆಂಗಳೂರಿನಲ್ಲಿ ಆಧುನಿಕ ಸೌಲಭ್ಯ ಹೊಂದಿರುವ ಹೊಸ ವಿನ್ಯಾಸ ಮತ್ತು ಎಂಜಿನಿಯರಿಂಗ್ ಕೇಂದ್ರವನ್ನು ಆರಂಭಿಸಿದೆ. ಇದು ಅಮೆರಿಕದಿಂದ ಹೊರಗೆ ಇಂಟೆಲ್ ಸ್ಥಾಪಿಸಿರುವ ಅತಿದೊಡ್ಡ ವಿನ್ಯಾಸ ಹಾಗೂ ಎಂಜಿನಿಯರಿಂಗ್ ಕೇಂದ್ರ ಎಂದು ಕಂಪನಿ ತಿಳಿಸಿದೆ.

ಬೆಳ್ಳಂದೂರು ಬಳಿಯ ಇಕೊಸ್ಪೇಸ್ ಬಿಸಿನೆಸ್ ಪಾರ್ಕ್‌ನಲ್ಲಿ 4.53 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಇದು ನಿರ್ಮಾಣಗೊಂಡಿದೆ. ಡೇಟಾ ಸೆಂಟರ್, ಗ್ರಾಫಿಕ್ಸ್, ಕೃತಕ ಬುದ್ಧಿಮತ್ತೆ ವಲಯಗಳಿಗೆ ಈ ಕೇಂದ್ರವು ನೆರವಾಗಲಿದೆ ಎಂದು ತಿಳಿಸಿದೆ.

ಚಿಪ್ ಕೊರತೆಯು ಇನ್ನು ಎರಡರಿಂದ ಮೂರು ವರ್ಷಗಳಲ್ಲಿ ಸರಿಹೋಗಲಿದೆ ಎಂದು ಇಂಟೆಲ್ ಇಂಡಿಯಾ ಮುಖ್ಯಸ್ಥೆ ನಿವೃತಿ ರಾಯ್ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಈ ಕೇಂದ್ರವನ್ನು ಉದ್ಘಾಟಿಸಿದರು. ರಾಜ್ಯ ಸರ್ಕಾರದ ಐ.ಟಿ., ಬಿ.ಟಿ. ಮತ್ತು ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಇದ್ದರು.

ಬೆಂಗಳೂರಿನಲ್ಲಿ ಇ.ವಿ. ಮೋಟರ್ ಘಟಕ: ಮೆಕ್‌ವಿನ್ ಇಂಡಿಯಾ

ಬೆಂಗಳೂರು (ಪಿಟಿಐ): ವಿದ್ಯುತ್ ಚಾಲಿತ ವಾಹನಗಳನ್ನು ತಯಾರಿಸುವ ನವೋದ್ಯಮ ಮೆಕ್‌ವಿನ್ ಇಂಡಿಯಾ ಬೆಂಗಳೂರಿನಲ್ಲಿ ಇ.ವಿ ಮೋಟರ್ ಮತ್ತು ಕಂಟ್ರೋಲರ್ ತಯಾರಿಕಾ ಘಟಕ ಸ್ಥಾಪಿಸಲು ₹ 50 ಕೋಟಿ ಹೂಡಿಕೆ ಮಾಡುವುದಾಗಿ ಶುಕ್ರವಾರ ತಿಳಿಸಿದೆ.

ಮಿಡ್ ಡ್ರೈವ್ ಮತ್ತು ಹಬ್ ಮೋಟರ್‌ಗಳ ಬೇಡಿಕೆಗಳನ್ನು ಇದು ಪೂರೈಸಲಿದೆ. ಈ ಘಟಕವು ವರ್ಷಾಂತ್ಯದ ವೇಳೆಗೆ ಕಾರ್ಯಾಚರಣೆ ಆರಂಭಿಸಲಿದ್ದು, ಆರಂಭದಲ್ಲಿ ದಿನಕ್ಕೆ 2 ಸಾವಿರ ಮೋಟರ್‌ಗಳನ್ನು ತಯಾರಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಭಾರತದಲ್ಲಿ ಹೈಬ್ರಿಡ್ ಎಸ್‌ಯುವಿ: ಟೊಯೋಟ, ಸುಜುಕಿ ಸಿದ್ಧತೆ

ನವದೆಹಲಿ (ರಾಯಿಟರ್ಸ್): ಟೊಯೋಟ ಮೋಟರ್ ಕಾರ್ಪ್ ಮತ್ತು ಸುಜುಕಿ ಮೋಟರ್ ಕಾರ್ಪ್ ಕಂಪನಿಗಳು ಜೊತೆಗೂಡಿ ಭಾರತದಲ್ಲಿ ಹೈಬ್ರಿಡ್ ವಾಹನ ತಯಾರಿಸಲಿವೆ.

ದಕ್ಷಿಣ ಭಾರತದಲ್ಲಿ ಇರುವ ಟೊಯೋಟ ಘಟಕದಲ್ಲಿ ಸುಜುಕಿ ಅಭಿವೃದ್ಧಿಪಡಿಸಿರುವ ಹೈಬ್ರಿಡ್ ಎಸ್‌ಯುವಿ ತಯಾರಿಕೆಯು ಆಗಸ್ಟ್‌ನಲ್ಲಿ ಆರಂಭ ಆಗಲಿದೆ ಎಂದು ಟೊಯೋಟ ಮತ್ತು ಸುಜುಕಿ ಕಂಪನಿಗಳು ಪ್ರಕಟಣೆಯಲ್ಲಿ ತಿಳಿಸಿವೆ.

ಎರಡೂ ಕಂಪನಿಗಳ ಮಧ್ಯೆ 2017ರಲ್ಲಿ ನಡೆದಿರುವ ಪಾಲುದಾರಿಕೆಯ ಭಾಗವಾಗಿ ಹೈಬ್ರಿಡ್ ವಾಹನವನ್ನು ರೂಪಿಸಲಾಗುತ್ತಿದೆ. ಭಾರತದಲ್ಲಿ ಮಾರಾಟ ಮಾಡುವುದಷ್ಟೇ ಅಲ್ಲದೆ, ಆಫ್ರಿಕಾ ಸೇರಿದಂತೆ ಇತರೆ ಮಾರುಕಟ್ಟೆಗಳಿಗೆ ರಫ್ತು ಮಾಡಲಾಗುತ್ತದೆ.

'ಚಂದ್ರನಿಂದ ತಂದ ದೂಳು ವಾಪಸ್ ಕೊಡಿ'

ಬಾಸ್ಟನ್ (ಎಪಿ): 1969ರಲ್ಲಿ ಕೈಗೊಂಡಿದ್ದ ಬಾಹ್ಯಾಕಾಶ ಕಾರ್ಯಕ್ರಮದಡಿ 'ಅಪೊಲೊ 11' ಗಗನನೌಕೆಯು ಚಂದ್ರನಿಂದ ಸಂಗ್ರಹಿಸಿದ್ದ ದೂಳು ಮತ್ತು ಪ್ರಯೋಗಕ್ಕೆ ಬಳಸಿದ್ದ ಜಿರಳೆಗಳನ್ನು ಮಾರಾಟ ಮಾಡದಂತೆ ಅಮೆರಿಕ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ನಾಸಾ) ಬಾಸ್ಟನ್ ಮೂಲದ ಹರಾಜು ಕಂಪನಿ ಆರ್‌ಆರ್ ಆಕ್ಷನ್‌ಗೆ ಸೂಚಿಸಿದೆ.

ಸುಮಾರು 40 ಮಿಲಿ ಗ್ರಾಂ ಚಂದ್ರನ ದೂಳು ಮತ್ತು ಮೂರು ಮೃತ ಜಿರಳೆಗಳನ್ನು ಹೊಂದಿರುವ ಸೀಸೆ ಸೇರಿದಂತೆ ಪ್ರಯೋಗಕ್ಕೆ ಬಳಸಬೇಕಿದ್ದ ವಸ್ತುಗಳು ಕನಿಷ್ಠ ₹ 3.13 ಕೋಟಿಗೆ ಮಾರಾಟವಾಗುವ ನಿರೀಕ್ಷೆಯಿತ್ತು. ಆದರೆ, ನಾಸಾದ ಸೂಚನೆ ಮೇರೆಗೆ ಅವುಗಳನ್ನು ಹರಾಜಿನಿಂದ ವಾಪಸ್ ಪಡೆಯಲಾಗಿದೆ ಆರ್‌ಆರ್ ಆಕ್ಷನ್ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

24-6-2022

ಜಾವಾ 70/80(ಹೊಸ)	10700-10750
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	9950-10050
ದಪ್ಪ ಗುಜರಾತ್(ಹೊಸ)	10650-10750

ಶೇಂಗಾ ಎಣ್ಣೆ (10 ಕೆಜಿಗೆ)


ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಸೋಯಾ ಕಚ್ಚಾ	1270 (1270)
ಪಾಮ್ ವಾರದ ಡೆಲಿವರಿ	1253 (1263)
ಸೂರ್ಯಕಾಂತಿ ಎಣ್ಣೆ ಕಚ್ಚಾ	1660 (1660)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 50,700 (50,750)

ಬೆಳ್ಳಿ ಕೆ.ಜಿ 59,350 (60,050)

ಆವರಣದಲ್ಲಿ ಹಿಂದಿನ ದಿನದ ಧಾರಣೆ





ಯಶ್, ಶುಭಂ ಶತಕಗಳ ಸೊಬಗು; ಮುಂಬೈ ಪಾಳೆಯದಲ್ಲಿ ಆವರಿಸಿದ ಹತಾಶೆಯ ಛಾಯೆ

ಮುನ್ನಡೆಯ ಹೊಸ್ತಿಲಲ್ಲಿ ಮಧ್ಯಪ್ರದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯಪ್ರದೇಶ ಕ್ರಿಕೆಟ್ ತಂಡದಲ್ಲಿ ಶುಕ್ರವಾರ ಸಂಜೆಯ ವೇಳೆಗೆ ಮೊದಲ ಬಾರಿ ರಣಜಿ ಟ್ರೋಫಿ ಜಯಿಸುವ ಕನಸು ಸಾಕಾರಗೊಳ್ಳುವ ಭರವಸೆ ಮೂಡಿತು. 42ನೇ ಕಿರೀಟ ಧರಿಸುವ ಛಲದಲ್ಲಿರುವ ಮುಂಬೈ ಪಾಳೆಯದಲ್ಲಿ ಒತ್ತಡದ ಛಾಯೆ ಆವರಿಸಿತು.

ಯಶ್ ದುಬೆ (133; 336ಎ) ಮತ್ತು ಶುಭಂ ಶರ್ಮಾ (116; 215ಎ) ಗಳಿಸಿದ ಶತಕಗಳು ಮತ್ತು ದ್ವಿಶತಕದ ಜೊತೆಯಾಟದಿಂದಾಗಿ ಮಧ್ಯಪ್ರದೇಶ ತಂಡವು ಮುಂಬೈ ಎದುರಿನ ಫೈನಲ್ ಪಂದ್ಯದಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಲು ಕೇವಲ ಆರು ರನ್‌ಗಳು ಮಾತ್ರ ಬೇಕಿವೆ.

ಮುಂಬೈ ಗಳಿಸಿದ್ದ 374 ರನ್‌ಗಳಿಗೆ ಉತ್ತರವಾಗಿ ಮೂರನೇ ದಿನದಾಟದ ಮುಕ್ತಾಯಕ್ಕೆ ಮಧ್ಯಪ್ರದೇಶವು 123 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 368 ರನ್ ಗಳಿಸಿದೆ. ಅರ್ಧಶತಕ ಗಳಿಸಿರುವ ರಜತ್ ಪಾಟೀದಾರ್ (ಬ್ಯಾಟಿಂಗ್ 67) ಮತ್ತು ಆದಿತ್ಯ ಶ್ರೀವಾಸ್ತವ (ಬ್ಯಾಟಿಂಗ್ 11) ಕ್ರೀಸ್‌ನಲ್ಲಿದ್ದಾರೆ.

ಮಧ್ಯಪ್ರದೇಶವು ಮೊದಲ ಇನಿಂಗ್ಸ್ ಮುನ್ನಡೆ ಪಡೆಯುವುದು ಬಹುತೇಕ ಖಚಿತವಾಗಿರುವುದರಿಂದ ಉಳಿದಿರುವ ಇನ್ನೆರಡು ದಿನಗಳ ಅವಧಿಯಲ್ಲಿ ಮುಂಬೈ ತಂಡವು ಪಂದ್ಯವನ್ನು ಜಯಿಸಿದರೆ ಮಾತ್ರ ಟ್ರೋಫಿ ಕನಸು ನನಸಾಗಲಿದೆ.

ಶುಕ್ರವಾರ ಮುಂಬೈ ಬೌಲರ್‌ಗಳಿಗೆ ಸಿಕ್ಕ ಫಲ ಅತ್ಯಲ್ಪ. 82 ಓವರ್‌ಗಳನ್ನು ಬೌಲಿಂಗ್ ಮಾಡಿದ ಮುಂಬೈ ತಂಡಕ್ಕೆ ದಕ್ಕಿದ್ದು ಎರಡು ವಿಕೆಟ್ ಮಾತ್ರ. ಆದರೆ, ಶಿಸ್ತು ಮತ್ತು ಯೋಜನಾಬದ್ಧ ಆಟವಾಡಿದ ಮಧ್ಯಪ್ರದೇಶ 245 ರನ್‌ಗಳನ್ನು ದಿನದಾಟದಲ್ಲಿ ಗಳಿಸಿತು.



ಯಶ್ ದುಬೆ ಮತ್ತು ಶುಭಂ ಶರ್ಮಾ– ಪ್ರಜಾವಾಣಿ ಚಿತ್ರ/ಬಿ.ಎಚ್. ಶಿವಕುಮಾರ್

ದ್ವಿಶತಕದ ಜೊತೆಯಾಟ: ಮುಖ್ಯ ಕೋಚ್ ಚಂದ್ರಕಾಂತ್ ಪಂಡಿತ್ ಅವರ ಯೋಜನೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದ ಯಶ್ ಮತ್ತು ಶುಭಂ ಎರಡನೇ ವಿಕೆಟ್ ಜೊತೆಯಾಟದಲ್ಲಿ ಗಳಿಸಿದ 222 ರನ್ ಗಳಿಸಿದರು.

ಆರಂಭಿಕ ಬ್ಯಾಟರ್ ಯಶ್ 234 ಎಸೆತಗಳಲ್ಲಿ ಶತಕ ಪೂರೈಸಿದರು. ತನುಷ್ ಕೋಟ್ಯಾನ್ ಎಸೆತವನ್ನು ಬೌಂಡರಿಗೆರೆ ದಾಟಿಸುವ ಮೂಲಕ ಶತಕದ ಗಡಿ ದಾಟಿದರು. ಕೆ.ಎಲ್. ರಾಹುಲ್ ಶತಕದ ನಂತರ ತಮ್ಮ ಎರಡೂ ಕಿವಿಗಳಿಗೆ ಬೆರಳಿಟ್ಟು ಸಂಭ್ರಮ ಆಚರಿಸುವ ರೀತಿಯಲ್ಲಿಯೇ ಯಶ್ ಕೂಡ ಮಾಡಿದರು. ಜಬಲ್ಪುರದ 23 ವರ್ಷದ ಯಶ್ ಕ್ರಿಕೆಟ್ ಕಾಪಿಪುಸ್ತಕದ ಎಲ್ಲ ಹೊಡೆತಗಳನ್ನೂ ಆಡಿದರು. ತುಸು ವೇಗವಾಗಿ ರನ್ ಗಳಿಸಿದ 28 ವರ್ಷದ ಶುಭಂ ಶರ್ಮಾ 186 ಎಸೆತಗಳಲ್ಲಿ ಶತಕ ಪೂರೈಸಿದರು.

90ನೇ ಓವರ್‌ನಲ್ಲಿ ಮೋಹಿತ್ ಅವಸ್ತಿ ಎಸೆತದಲ್ಲಿ ಶುಭಂ ಔಟಾಗುವ ಮೂಲಕ ಜೊತೆಯಾಟ ಮುರಿಯಿತು. 12 ಓವರ್‌ಗಳ ನಂತರ ಶಮ್ಸ್ ಮಲಾನಿ ಬೌಲಿಂಗ್‌ನಲ್ಲಿ ಯಶ್ ದುಬೆ ಔಟಾದರು.

ಈ ವರ್ಷದ ಟೂರ್ನಿಯಲ್ಲಿ ಶುಭಂ ಶರ್ಮಾ ಶತಕಗಳು

ಸ್ಕೋರ್	ಎದುರಾಳಿ	ಸ್ಥಳ
92 ಮತ್ತು 103	ಗುಜರಾತ್	ರಾಜ್‌ಕೋಟ್
111	ಮೇಘಾಲಯ	ರಾಜ್‌ಕೋಟ್
102	ಪಂಜಾಬ್	ಬೆಂಗಳೂರು
116	ಮುಂಬೈ	ಬೆಂಗಳೂರು

ಅಂಕಿ ಸಂಖ್ಯೆ: ಚನ್ನಗಿರಿ ಕೇಶವಮೂರ್ತಿ

ಆರ್‌ಸಿಬಿ..ರಜತ್..

ಕಳೆದ ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರಿನಲ್ಲಿ ಮಿಂಚಿದ್ದ ರಜತ್ ಪಾಟೀದಾರ್‌ಗೆ ಅದೃಷ್ಟವೂ ಜೊತೆಗೂಡಿತು. ಶುಭಂ ಔಟಾದ ನಂತರ ಕ್ರೀಸ್‌ಗೆ ಬಂದ ಅವರು ಯಶ್ ಜೊತೆಗೆ ಮೂರನೇ ವಿಕೆಟ್‌ಗೆ 72 ರನ್ ಸೇರಿಸಿದರು. ಗ್ಯಾಲರಿಯಲ್ಲಿದ್ದ ಪ್ರೇಕ್ಷಕರು ರಜತ್ ಗೆ ಆರ್‌ಸಿಬಿ, ಆರ್‌ಸಿಬಿ ಎಂದು ಹುರಿದುಂಬಿಸಿದರು. ರಜತ್ ಐಪಿಎಲ್‌ನಲ್ಲಿ ಒಟ್ಟು 333 ರನ್‌ಗಳನ್ನು ಗಳಿಸಿದ್ದರು. ಅದರಲ್ಲಿ ಒಂದು ಶತಕವೂ ಸೇರಿದೆ.

ಆರ್‌ಸಿಬಿಯ ತವರಿನಂಗಳದಲ್ಲಿಯೂ ಅವರು ಉತ್ತಮವಾಗಿ ಆಡಿದರು. 105ನೇ ಓವರ್‌ನಲ್ಲಿ ಶಮ್ಸ್ ಎಸೆತದಲ್ಲಿ ರಜತ್ ಬ್ಯಾಕ್‌ವರ್ಡ್ ಪಾಯಿಂಟ್‌ನಲ್ಲಿದ್ದ ತನುಷ್‌ಗೆ ಕ್ಯಾಚಿತ್ತಿದ್ದರು. ಆದರೆ ಅಂಪೈರ್ ರೆಫರಲ್‌ನಲ್ಲಿ ನೋಬಾಲ್ ಸಾಬೀತಾಯಿತು. ರಜತ್ ಮತ್ತೆ ಕ್ರೀಸ್‌ಗೆ ಮರಳಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಮುಂಬೈ: 374 (127.4 ಓವರ್)
ಮಧ್ಯಪ್ರದೇಶ 3ಕ್ಕೆ368 (123 ಓವರ್) (ಗುರುವಾರ: 41 ಓವರ್‌ಗಳಲ್ಲಿ 1 ವಿಕೆಟ್‌ಗೆ 123)

ಯಶ್ ಸಿ ಹಾರ್ದಿಕ್ ಬಿ ಶಮ್ಸ್ 133 (336ಎ, 4X14), ಶುಭಂ ಸಿ ಹಾರ್ದಿಕ್ ಬಿ ಮೋಹಿತ್ 116 (215ಎ, 4X15, 6X1), ರಜತ್ ಬ್ಯಾಟಿಂಗ್ 67 (106;, 4X13), ಆದಿತ್ಯ ಬ್ಯಾಟಿಂಗ್ 11 (33ಎ, 4X1)

ಇತರೆ: 10 (ಬೈ 6, ಲೆಗ್‌ಬೈ 1, ವೈಡ್ 1, ನೋಬಾಲ್ 2)

ವಿಕೆಟ್ ಪತನ: 2–269 (ಶುಭಂ ಶರ್ಮಾ; 89.4), 3–341 (ಯಶ್ ದುಬೆ; 111.5)

ಬೌಲಿಂಗ್: ಧವಳ್ ಕುಲಕರ್ಣಿ 21–3–51–0, ತುಷಾರ್ ದೇಶಪಾಂಡೆ 24–8–73–1, ಶಮ್ಸ್ ಮಲಾನಿ 40–4–117–1, ಮೋಹಿತ್ ಅವಸ್ತಿ 20–5–53–1, ತನುಷ್ ಕೋಟ್ಯಾನ್ 18–1–67–0

ಈಜು: ಶರಣ್, ಅರ್ಜುನ್‌ಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಶರಣ್ ಶ್ರೀಧರ ಮತ್ತು ಅರ್ಜುನ್ ರಾಘವನ್ ರಾಜ್‌ಕೋಟ್‌ನಲ್ಲಿ ಆರಂಭವಾದ ರಾಷ್ಟ್ರೀಯ ಸಬ್ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದರು.

ಶುಕ್ರವಾರ ನಡೆದ ಬಾಲಕರ ವಿಭಾಗದ 200 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಶರಣ್ 2 ನಿ. 17.68 ಸೆಕೆಂಡುಗಳಲ್ಲಿ ಮೊದಲಿಗರಾಗಿ ಗುರಿತಲುಪಿದರು. ಅರ್ಜುನ್ ಅವರು ಬಾಲಕರ 100 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಅಗ್ರಸ್ಥಾನ ಪಡೆದರು.

4X50 ಮೀ.ಫ್ರೀಸ್ಟೈಲ್ ರಿಲೇ ಸ್ಪರ್ಧೆಯಲ್ಲಿ ಸಮರ್ಥ್ ಆರ್. ಗೌಡ, ಜಸ್ ಸಿಂಗ್, ಎಸ್.ಕ್ರಿಷ್ ಮತ್ತು ಶರಣ್ ಶ್ರೀಧರ ಅವರನ್ನೊಳಗೊಂಡ ಕರ್ನಾಟಕ ತಂಡ 2 ನಿ. 04.45 ಸೆ. ಸಾಧನೆಯೊಂದಿಗೆ ಚಿನ್ನ ಗೆದ್ದಿತು. ಬಾಲಕಿಯರ ವಿಭಾಗದಲ್ಲಿ ಕರ್ನಾಟಕ 2ನೇ ಸ್ಥಾನ ಪಡೆಯಿತಾದರೂ, 3ನೇ ಲೆಗ್‌ನ ಸ್ಪರ್ಧಿ ಬೇಗನೇ ಈಜು ಆರಂಭಿಸಿದ್ದರಿಂದ ಅನರ್ಹಗೊಂಡಿತು.

ಫಲಿತಾಂಶ: ಬಾಲಕರ ವಿಭಾಗ: 200 ಮೀ. ಫ್ರೀಸ್ಟೈಲ್: ಶರಣ್ ಶ್ರೀಧರ (ಕರ್ನಾಟಕ)–1, ಟಿ.ಕಬಿಲನ್ (ತಮಿಳುನಾಡು)–2, ಜಸ್ ಸಿಂಗ್ (ಕರ್ನಾಟಕ)–3. ಕಾಲ: 2 ನಿ. 17.68 ಸೆ. 100 ಮೀ. ಬ್ರೆಸ್ಟ್‌ಸ್ಟ್ರೋಕ್: ಲೈತೊಂಜಮ್ ಲನ್ವೆಂಬಾ (ಮಣಿಪುರ)–1, ತೀರ್ಥಂಕರ್ ಮೊಂಡಲ್ (ಬಂಗಾಳ)–2, ವೈ. ರೇಯಾಂಶ್ ಕಾಂತಿ (ಕರ್ನಾಟಕ)–3. ಕಾಲ: 1 ನಿ. 21.37 ಸೆ. 100 ಮೀ. ಬಟರ್‌ಫ್ಲೈ: ಅರ್ಜುನ್ ರಾಘವನ್ (ಕರ್ನಾಟಕ)–1, ಅಬ್ದುಲ್ ಹಫೀಜ್ (ತಮಿಳುನಾಡು)–2, ಸಹಾಯ ಎಸ್. (ತಮಿಳುನಾಡು)–3. ಕಾಲ: 1 ನಿ. 14.55 ಸೆ. 4X50 ಮೀ. ಫ್ರೀಸ್ಟೈಲ್ ರಿಲೇ: ಕರ್ನಾಟಕ–1, ತಮಿಳುನಾಡು–2, ಉತ್ತರ ಪ್ರದೇಶ–3. ಕಾಲ: 2 ನಿ. 04.45 ಸೆ.

ಬಾಲಕಿಯರ ವಿಭಾಗ: 200 ಮೀ. ಫ್ರೀಸ್ಟೈಲ್: ಆನಿಕಾ ಭಾಟಿಯಾ (ಮಹಾರಾಷ್ಟ್ರ)–1, ಅಲಿಸ್ಸಾ ಸ್ವೀಡಲ್ ರೇಗೊ (ಕರ್ನಾಟಕ)–2, ಎಸ್.ತೃಷಾ ಸಿಧು (ಕರ್ನಾಟಕ)–3. ಕಾಲ: 2 ನಿ. 26.87 ಸೆ. 100 ಮೀ. ಬ್ರೆಸ್ಟ್‌ಸ್ಟ್ರೋಕ್: ಜೀಲ್ ಮಲಾನಿ (ಮಹಾರಾಷ್ಟ್ರ)–1, ಸಾನ್ವಿ ದೇಶ್ವಲ್ (ಮಹಾರಾಷ್ಟ್ರ)–2, ಸಾನ್ವಿ ಮೈಗೂರ್ (ಕರ್ನಾಟಕ)–3. ಕಾಲ: 1 ನಿ. 22.54 ಸೆ.


ಅಭ್ಯಾಸ ಪಂದ್ಯ: ಶಮಿ ಎಸೆತಕ್ಕೆ ಪೂಜಾರ ಬೌಲ್ಡ್!

ಭಾರತದೆದುರು ಪಂತ್ ಅರ್ಧಶತಕ

ಗ್ರೇಸ್ ರೋಡ್, ಇಂಗ್ಲೆಂಡ್: ಮೊಹಮ್ಮದ್ ಶಮಿ ಎಸೆತಕ್ಕೆ ಚೇತೇಶ್ವರ್ ಪೂಜಾರ ಕ್ಲೀನ್‌ಬೌಲ್ಡ್ ಆದರು. ಭಾರತದ ಎದುರು ಅರ್ಧಶತಕ ಹೊಡೆದ ರಿಷಭ್ ಪಂತ್ ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಮೋಡಿಗೆ ಶರಣಾದರು!

ಇಲ್ಲಿ ನಡೆಯುತ್ತಿರುವ ಅಭ್ಯಾಸ ಪಂದ್ಯದ ಎರಡನೇ ದಿನದಾಟದ ಅಂತ್ಯಕ್ಕೆ ಭಾರತ ತಂಡವು ಲೆಸ್ಟರ್‌ಷೈರ್ ಎದುರು 82 ರನ್‌ಗಳ ಮುನ್ನಡೆ ಗಳಿಸಿದೆ. ಎರಡನೇ ಇನಿಂಗ್ಸ್ ಆರಂಭಿಸಿರುವ ಭಾರತ ತಂಡವು 18 ಓವರ್‌ಗಳಲ್ಲಿ ಒಂದು ವಿಕೆಟ್‌ಗೆ 59 ರನ್ ಗಳಿಸಿತು.

ಶುಭಮನ್ ಗಿಲ್ (38) ಉತ್ತಮವಾಗಿ ಬ್ಯಾಟ್ ಬೀಸಿದರು. ಶ್ರೀಕರ್ ಭರತ್ (ಬ್ಯಾಟಿಂಗ್ 31) ಮತ್ತು ಹನುಮ ವಿಹಾರಿ (ಬ್ಯಾಟಿಂಗ್ 9) ಕ್ರೀಸ್ ಕಾಯ್ದುಕೊಂಡಿದ್ದಾರೆ.



ಮೊಹಮ್ಮದ್ ಶಮಿ

ಮೊದಲ ಇನಿಂಗ್ಸ್‌ನಲ್ಲಿ ಭಾರತ ತಂಡವು ಶ್ರೀಕರ್ ಅರ್ಧಶತಕದ ಬಲದಿಂದ 8 ವಿಕೆಟ್‌ಗಳಿಗೆ 246 ರನ್ ಗಳಿಸಿತು. ಅದಕ್ಕುತ್ತರವಾಗಿ ಲೀಸ್ಟರ್‌ಷೈರ್ 57 ಓವರ್‌ಗಳಲ್ಲಿ 244 ರನ್ ಗಳಿಸಿ ಆಲೌಟ್ ಆಯಿತು. ಲೀಸ್ಟರ್ ತಂಡಕ್ಕೆ ರಿಷಭ್ ಪಂತ್ (76; 87ಎ, 4X14, 6X1) ಉತ್ತಮ ಕಾಣಿಕೆ ನೀಡಿದರು. ಆದರೆ, ಪೂಜಾರ ಸೊನ್ನೆ ಸುತ್ತಿದರು. ಶಮಿ ಎಸೆತದಲ್ಲಿ ಪೂಜಾರ ಔಟಾದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಭಾರತ: 60.2 ಓವರ್‌ಗಳಲ್ಲಿ 8ಕ್ಕೆ246 ಡಿಕ್ಲೇರ್, ಲೆಸ್ಟರ್‌ಷೈರ್: 57 ಓವರ್‌ಗಳಲ್ಲಿ 244 (ಲೂಯಿಸ್ ಕಿಂಬರ್ 31, ಜೊಯ್ ಎವಿಸನ್ 22, ರಿಷಭ್ ಪಂತ್ 76, ರಿಷಿ ಪಟೇಲ್ 34, ರೋಮನ್ ವಾಕರ್ 34, ಮೊಹಮ್ಮದ್ ಶಮಿ 42ಕ್ಕೆ3, ಶಾರ್ದೂಲ್ ಠಾಕೂರ್ 72ಕ್ಕೆ2, ಮೊಹಮ್ಮದ್ ಸಿರಾಜ್ 46ಕ್ಕೆ2, ರವೀಂದ್ರ ಜಡೇಜ 28ಕ್ಕೆ3) ಎರಡನೇ ಇನಿಂಗ್ಸ್: ಭಾರತ: 18 ಓವರ್‌ಗಳಲ್ಲಿ 1ಕ್ಕೆ 80 (ಶ್ರೀಕರ್ ಭರತ್ ಬ್ಯಾಟಿಂಗ್ 31, ಶುಭಮನ್ ಗಿಲ್ 38, ಹನುಮ ಬ್ಯಾಟಿಂಗ್ 9)




ಕರ್ನಾಟಕ ಕ್ರಿಕೆಟ್ ತಂಡದ ಮಾಜಿ ನಾಯಕ ಆರ್. ವಿನಯಕುಮಾರ್ ಮತ್ತು ರಿಚಾ ದಂಪತಿಯು ತಮ್ಮ ನವಜಾತ ಹೆಣ್ಣುಮಗುವಿನೊಂದಿಗಿನ ಚಿತ್ರವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ

ವಿಂಬಲ್ಡನ್: ಸೆರೆನಾ ಎದುರಾಳಿ ಹಾರ್ಮನಿ

ವಿಂಬಲ್ಡನ್ (ಎಪಿ): ಅಮೆರಿಕದ ಸೆರೆನಾ ವಿಲಿಯಮ್ಸ್ ಅವರು ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನ ಪಂದ್ಯದಲ್ಲಿ ಫ್ರಾನ್ಸ್‌ನ ಹಾರ್ಮನಿ ಟಾನ್ ಅವರನ್ನು ಎದುರಿಸುವರು.

ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಶುಕ್ರವಾರ ಟೂರ್ನಿಯ 'ಡ್ರಾ' ಎತ್ತಲಾಯಿತು. 24 ವರ್ಷದ ಹಾರ್ಮನಿ ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ 113ನೇ ಸ್ಥಾನದಲ್ಲಿದ್ದಾರೆ.

ಸೆರೆನಾ ಕಳೆದ ವಿಂಬಲ್ಡನ್ ಟೂರ್ನಿಯ ಮೊದಲ ಸುತ್ತಿನ ಪಂದ್ಯದಲ್ಲಿ ಗಾಯಗೊಂಡು ಅರ್ಧದಲ್ಲೇ ಹಿಂದೆ ಸರಿದಿದ್ದರು. ಆ ಬಳಿಕ ಯಾವುದೇ ಟೂರ್ನಿಯಲ್ಲೂ ಆಡಿಲ್ಲ. ಡಬ್ಲ್ಯುಟಿಎ ರ‍್ಯಾಂಕಿಂಗ್‌ನಲ್ಲಿ 1,200 ಸ್ಥಾನಕ್ಕಿಂತಲೂ ಕೆಳಗೆ ಕುಸಿದಿದ್ದರು. ಆದ್ದರಿಂದ ಮೊದಲ ಸುತ್ತಿನಲ್ಲಿ ಅವರ ಎದುರಾಳಿ ಯಾರಾಗುವರು ಎಂಬುದು ಕುತೂಹಲಕ್ಕೆ ಕಾರಣವಾಗಿತ್ತು.



ಸೆರೆನಾ ವಿಲಿಯಮ್ಸ್

ಮೊದಲ ಸುತ್ತಿನಲ್ಲಿ ಗೆದ್ದರೆ, ಎರಡನೇ ಸುತ್ತಿನಲ್ಲಿ ಸಾರಾ ಸೊರಿಬೆಸ್ ಎದುರಾಗುವ ಸಾಧ್ಯತೆಯಿದೆ.

ಮೂರನೇ ಸುತ್ತಿನಲ್ಲಿ ಆರನೇ ಶ್ರೇಯಾಂಕದ ಆಟಗಾರ್ತಿ ಕರೋಲಿನಾ ಪಿಸ್ಕೊವಾ ಎದುರಾಗಬಹುದು. 40 ವರ್ಷದ ಸೆರೆನಾ ಇದುವರೆಗೆ 23 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯಿಸಿದ್ದಾರೆ.

ಆರ್ಚರಿ: ಫೈನಲ್‌ಗೆ ಅಭಿಷೇಕ್–ಜ್ಯೋತಿ

ಪ್ಯಾರಿಸ್ (ಪಿಟಿಐ): ಭಾರತದ ಅಭಿಷೇಕ್ ವರ್ಮಾ ಮತ್ತು ಜ್ಯೋತಿ ಸುರೇಖಾ ವೆನ್ನಂ ಅವರು ಇಲ್ಲಿ ನಡೆಯುತ್ತಿರುವ ವಿಶ್ವಕಪ್ ಆರ್ಚರಿ ಸ್ಟೇಜ್–3 ಚಾಂಪಿಯನ್‌ಷಿಪ್‌ನ ಕಾಂಪೌಂಡ್ ವಿಭಾಗದ ಮಿಶ್ರ ಡಬಲ್ಸ್‌ನಲ್ಲಿ ಫೈನಲ್ ಪ್ರವೇಶಿಸಿದರು.

ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ ಭಾರತದ ಜೋಡಿ 156–151 ರಲ್ಲಿ ಈಸ್ಟೋನಿಯದ ರಾಬಿನ್ ಜಾಟ್ಮ ಮತ್ತು ಲಿಸೆಲ್ ಜಾಟ್ಮ ವಿರುದ್ಧ ಜಯ ಸಾಧಿಸಿತು.

ಶನಿವಾರ ನಡೆಯಲಿರುವ ಫೈನಲ್‌ನಲ್ಲಿ ಅಭಿಷೇಕ್- ಜ್ಯೋತಿ, ಫ್ರಾನ್ಸ್ ತಂಡದ ಸವಾಲು ಎದುರಿಸಲಿದ್ದಾರೆ.

ಭಾರತದ ಜೋಡಿ ಕ್ವಾರ್ಟರ್ ಫೈನಲ್‌ನಲ್ಲಿ ಎಲ್‌ಸಾಲ್ವಡೊರ್‌ನ ಹೆರ್ನಾಂಡೆಜ್– ಸೋಫಿಯಾ ಪಯಾಜ್ ಅವರನ್ನು ಮಣಿಸಿತು. ರಿಕರ್ವ್ ವಿಭಾಗದ ಮಿಶ್ರ ಡಬಲ್ಸ್‌ನಲ್ಲಿ ಭಾರತದ ತರುಣ್‌ದೀಪ್ ರಾಯ್ ಮತ್ತು ಅಂಕಿತಾ ಭಕತ್, ಕಜಕಸ್ತಾನ ಎದುರು ಸೋತರು.

ಜಾನಿ ಬೆಸ್ಟೊ ಶತಕದ ಆಟ

ಲೀಡ್ಸ್ (ಎಎಫ್‌ಪಿ): ಡೆರಿಲ್ ಮಿಚೆಲ್ ಗಳಿಸಿದ ಶತಕ (109) ಮತ್ತು ಟ್ರೆಂಟ್ ಬೌಲ್ಟ್ ಅವರ ಶಿಸ್ತಿನ ಬೌಲಿಂಗ್ ನೆರವಿನಿಂದ ನ್ಯೂಜಿಲೆಂಡ್ ತಂಡ ಇಂಗ್ಲೆಂಡ್ ವಿರುದ್ಧದ ಮೂರನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಉತ್ತಮ ಮೊತ್ತ ಪೇರಿಸಿತು.

2ನೇ ದಿನವಾದ ಶುಕ್ರವಾರ ನ್ಯೂಜಿಲೆಂಡ್ ಮೊದಲ ಇನಿಂಗ್ಸ್‌ನಲ್ಲಿ 329 ರನ್ ಗಳಿಸಿ ಆಲೌಟಾಯಿತು.

ತಿರುಗೇಟು ನೀಡಿರುವ ಇಂಗ್ಲೆಂಡ್ ಶುಕ್ರವಾರದ ಅಂತ್ಯಕ್ಕೆ 6 ವಿಕೆಟ್‌ಗೆ 264 ರನ್ ಗಳಿಸಿದೆ. ಜಾನಿ ಬೆಸ್ಟೊ (ಬ್ಯಾಟಿಂಗ್ 130), ಜೇಮಿ ಒವರ್ಟನ್ (ಬ್ಯಾಟಿಂಗ್ 89) ತಂಡಕ್ಕೆ ಆಸರೆಯಾದರು.

ಬೌಲ್ಟ್ (73ಕ್ಕೆ 3) ಅವರ ದಾಳಿಗೆ ನಲುಗಿದ ಇಂಗ್ಲೆಂಡ್ 55 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿತ್ತು.

ಮಿಚೆಲ್ ದಾಖಲೆ: ಸರಣಿಯಲ್ಲಿ 3ನೇ ಶತಕ ಗಳಿಸಿದ ಮಿಚೆಲ್, ಇಂಗ್ಲೆಂಡ್ ನೆಲದಲ್ಲಿ ಟೆಸ್ಟ್ ಸರಣಿಯೊಂದರಲ್ಲಿ ಅತಿಹೆಚ್ಚು ರನ್ (482) ಗಳಿಸಿದ ನ್ಯೂಜಿಲೆಂಡ್‌ನ ಆಟಗಾರ ಎಂಬ ದಾಖಲೆ ಮಾಡಿದರು. ಮಾರ್ಟಿನ್ ಡೊನೆಲ್ಲಿ (462 ರನ್) 1949ರಲ್ಲಿ ಮಾಡಿದ್ದ ದಾಖಲೆ ಮುರಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ನ್ಯೂಜಿಲೆಂಡ್ 329 (117.3 ಓವರ್) ಡೆರಿಲ್ ಮಿಚೆಲ್ 109, ಟಾಮ್ ಬ್ಲಂಡೆಲ್ 55; ಜಾಕ್ ಲೀಚ್ 100ಕ್ಕೆ 5, ಸ್ಟುವರ್ಟ್ ಬ್ರಾಡ್ 62ಕ್ಕೆ 3). ಇಂಗ್ಲೆಂಡ್ 49 ಓವರ್‌ಗಳಲ್ಲಿ 6ಕ್ಕೆ 264(ಜಾನಿ ಬೆಸ್ಟೊ ಬ್ಯಾಟಿಂಗ್ 130, ಜೇಮಿ ಒವರ್ಟನ್ ಬ್ಯಾಟಿಂಗ್ 89, ಬೌಲ್ಟ್ 73ಕ್ಕೆ3, ನೀಲ್ ವ್ಯಾಗ್ನರ್ 53ಕ್ಕೆ 2)

'ಐಒಎ ಅಧ್ಯಕ್ಷರಾಗಿ ಕೆಲಸ ನಿರ್ವಹಿಸದಿರಿ'

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಅಧ್ಯಕ್ಷರಾಗಿ ಯಾವುದೇ ಕೆಲಸ ನಿರ್ವಹಿಸಬಾರದು ಎಂದು ದೆಹಲಿ ಹೈಕೋರ್ಟ್, ನರೀಂದರ್ ಬಾತ್ರಾ ಅವರಿಗೆ ಸೂಚಿಸಿದೆ.

ಹಾಕಿ ತಂಡದ ಮಾಜಿ ಆಟಗಾರ ಅಸ್ಲಂ ಶೇರ್ ಖಾನ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ದಿನೇಶ್ ಶರ್ಮ ಅವರಿದ್ದ ಪೀಠ ಶುಕ್ರವಾರ ಈ ಆದೇಶ ಹೊರಡಿಸಿದೆ.

'ಬಾತ್ರಾ ಐಒಎ ಅಧ್ಯಕ್ಷರಾಗಿ ಕೆಲಸ ಮುಂದುವರಿಸುವುದನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಕೋರ್ಟ್ ಆದೇಶಿಸಿದೆ' ಎಂದು ಖಾನ್ ಪರ ವಕೀಲ ವಂಶ ದೀಪ್ ದಾಲ್ಮಿಯ ಹೇಳಿದರು. ಮೇ 25ರಂದು ಬಾತ್ರಾ ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾ ಗೊಳಿಸಲಾಗಿತ್ತು.

ಕುಸ್ತಿ: ನಿಂಗಪ್ಪಗೆ ಚಿನ್ನದ ಪದಕ

ಮುಧೋಳ: ಇಲ್ಲಿಯ ನಿಂಗಪ್ಪ ಗೆಣ್ಣೆನ್ನವರ ಕಿರ್ಗಿಸ್ತಾನದಲ್ಲಿ ನಡೆದ 17 ವರ್ಷದೊಳಗಿನವರ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದ್ದಾರೆ.

ಬುಧವಾರ ರಾತ್ರಿ ನಡೆದ ಸ್ಪರ್ಧೆಯಲ್ಲಿ 45 ಕೆ.ಜಿ. ಒಳಗಿನವರ ಫ್ರೀಸ್ಟೈಲ್ ವಿಭಾಗದಲ್ಲಿ ಅವರು ಪ್ರಥಮ ಸ್ಥಾನ ಗಳಿಸಿ ಗೆದ್ದರು.

ಪ್ರಶಸ್ತಿ ಸುತ್ತಿನ ಬೌಟ್‌ನಲ್ಲಿ ನಿಂಗಪ್ಪ 10–7ರಿಂದ ಇರಾನ್ ದೇಶದ ಅಮೀರ್ ಮೊಹಮ್ಮದ್ ಸಲೆಹ ವಿರುದ್ಧ ಜಯಿ ಸಿದರು.



ನಿಂಗಪ್ಪ

ಮುಧೋಳದ ಜೈ ಹನುಮಾನ್ ವ್ಯಾಯಾಮ ಶಾಲೆಯ ಕುಸ್ತಿ ತರಬೇತುದಾರ ಪೈಲ್ವಾನ್ ಅರುಣ ಕುಮಕಾಳೆ ಅವರ ಬಳಿ 10ನೇ ವಯಸ್ಸಿನಿಂದ ತರಬೇತಿ ಪಡೆದಿದ್ದಾರೆ.

ಏಷ್ಯನ್ ಕುಸ್ತಿ: ನರಸಿಂಗ್ ಪಾಟೀಲಗೆ ಕಂಚು

ಬೆಳಗಾವಿ: ಇಲ್ಲಿನ ಮರಾಠ ಲಘು ಪದಾತಿ ದಳದ ಕ್ರೀಡಾಪಟು ನರಸಿಂಗ್ ಪಾಟೀಲ ಅವರು, ಕಿರ್ಗಿಸ್ಥಾನ್‌ದಲ್ಲಿ ಈಚೆಗೆ ನಡೆದ ಕಿರಿಯರ ಏಷಿಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಪಡೆದರು. 51 ಕೆ.ಜಿ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ನರಸಿಂಗ್ ಮಂಗೋಲಿಯಾದ ದಲ್ಯೆಸ್ಟ್ರೇನ್ ಜಾವಖ್ಲಾಂಖು ಅವರನ್ನು 10–0 ಯಿಂದ ಸೋಲಿಸಿದರು.

ಕ್ರಿಕೆಟ್: ಆಸ್ಟ್ರೇಲಿಯಾಕ್ಕೆ ಜಯ

ಕೊಲಂಬೊ: ಬೌಲರ್‌ಗಳ ಮೇಲಾಟ ಕಂಡುಬಂದ ಕೊನೆಯ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡ ಶ್ರೀಲಂಕಾ ವಿರುದ್ಧ 4 ವಿಕೆಟ್‌ಗಳ ಜಯ ಸಾಧಿಸಿತು. ಆದರೆ ಐದು ಪಂದ್ಯಗಳ ಸರಣಿಯನ್ನು ಶ್ರೀಲಂಕಾ 3–2 ರಲ್ಲಿ ಗೆದ್ದುಕೊಂಡಿತು.

ಕೊಲಂಬೊದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಆತಿಥೇಯ ತಂಡ ಬ್ಯಾಟಿಂಗ್ ವೈಫಲ್ಯ ಅನುಭವಿಸಿ 160 ರನ್‌ಗಳಿಗೆ ಆಲೌಟಾಯಿತು. ಅಲ್ಪ ಮೊತ್ತ ಬೆನ್ನಟ್ಟಿದ ಆಸ್ಟ್ರೇಲಿಯಾ 19 ರನ್ ಗಳಿಸುವಷ್ಟರಲ್ಲಿ ಮೂರು ವಿಕೆಟ್ ಕಳೆದುಕೊಂಡು ಕುಸಿತ ಅನುಭವಿಸಿದರೂ, ಮರುಹೋರಾಟ ನಡೆಸಿ ಜಯ ಸಾಧಿಸಿತು.

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ: 160 (43.1 ಓವರ್) ಕುಸಾಲ್ ಮೆಂಡಿಸ್ 26, ಚರಿತ ಅಸಲಂಕಾ 14, ಚಮಿಕ ಕರುಣರತ್ನೆ 75, ಜೋಶ್ ಹ್ಯಾಜೆಲ್‌ವುಡ್ 22ಕ್ಕೆ 2, ಮ್ಯಾಥ್ಯೂ ಕೊನೆಮನ್ 26ಕ್ಕೆ 2, ಪ್ಯಾಟ್ ಕಮಿನ್ಸ್ 22ಕ್ಕೆ 2.

ಆಸ್ಟ್ರೇಲಿಯಾ: 6ಕ್ಕೆ 164 (39.3 ಓವರ್) ಮಾರ್ನಸ್ ಲಾಬುಶೇನ್ 31, ಅಲೆಕ್ಸ್ ಕೇರಿ ಅಜೇಯ 45, ಕ್ಯಾಮೆರನ್ ಗ್ರೀನ್ ಔಟಾಗದೆ 25, ದುನಿತ್ ವೆಲ್ಲಲಗೆ 42ಕ್ಕೆ 3, ಮಹೀಶ್ ತೀಕ್ಷಣ 26ಕ್ಕೆ 2)

ಸಂಕ್ಷಿಪ್ತ ಸುದ್ದಿ

ಜೆಹಾನ್ ಎಫ್1 ಚಾಲನೆ ಯಶಸ್ವಿ

ಮುಂಬೈ (ಪಿಟಿಐ): ಭಾರತದ ಯುವ ಚಾಲಕ ಜೆಹಾನ್ ದಾರೂವಾಲಾ ಅವರು ಫಾರ್ಮುಲಾ–1 ಕಾರಿನ ಪರೀಕ್ಷಾರ್ಥ ಚಾಲನೆಯನ್ನು ಯಶಸ್ವಿಯಾಗಿ ಕೊನೆಗೊಳಿಸಿದ್ದಾರೆ.



ಜೆಹಾನ್

ಇಂಗ್ಲೆಂಡ್‌ನ ಸಿಲ್ವರ್‌ಸ್ಟೋನ್‌ನಲ್ಲಿರುವ ಟ್ರ್ಯಾಕ್‌ನಲ್ಲಿ ಮಂಗಳವಾರ ಮತ್ತು ಬುಧವಾರ ಮೆಕ್‌ಲಾರೆನ್ ತಂಡದ ಎಫ್1 ಕಾರು ಪರೀಕ್ಷಾರ್ಥ ಚಾಲನೆ ಮಾಡುವ ಅವಕಾಶ ಅವರಿಗೆ ದೊರೆತಿತ್ತು.

ವೃತ್ತಿಜೀವನದಲ್ಲಿ ಇದೇ ಮೊದಲ ಬಾರಿಗೆ ಎಫ್1 ಕಾರು ಚಾಲನೆಯ ಅನುಭವವನ್ನು ಅವರು ಪಡೆದುಕೊಂಡರು.

ಸೆಮಿಗೆ ಸ್ಕ್ವಾಷರ್ಸ್

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಸ್ಮ್ಯಾಷಿಂಗ್ ಸ್ಕ್ವಾಷರ್ಸ್ ಮತ್ತು ಫ್ಲೈಯಿಂಗ್ ಡೆವಿಲ್ಸ್ ತಂಡಗಳು ಇಲ್ಲಿ ನಡೆಯುತ್ತಿರುವ ಬೆಂಗಳೂರು ಸ್ಕ್ವಾಷ್ ಲೀಗ್‌ನ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿವೆ.

ಶುಕ್ರವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ ಸ್ಮ್ಯಾಷಿಂಗ್ ಸ್ಕ್ವಾಷರ್ಸ್ 6–1ರಿಂದ ಸ್ಕಾವ್ ಸ್ಟ್ರೈಕರ್ಸ್ ತಂಡವನ್ನು ಸೋಲಿಸಿತು. ಫ್ಲೈಯಿಂಗ್ ಡೆವಿಲ್ಸ್ 6–1ರಿಂದ ರೇಜಿಂಗ್ ರ‍್ಯಾಕೆಟ್ಸ್ ತಂಡಕ್ಕೆ ಸೋಲುಣಿಸಿತು.

ಭಾರತ ಶುಭಾರಂಭ

ನವದೆಹಲಿ (ಪಿಟಿಐ): ಭಾರತ ಮಹಿಳಾ ತಂಡದವರು ಥಾಯ್ಲೆಂಡ್‌ನಲ್ಲಿ ಆರಂಭವಾದ ಪ್ರಿನ್ಸೆಸ್ ಕಪ್ ವಾಲಿಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಶುಕ್ರವಾರ ನಡೆದ ಮೊದಲ ಪಂದ್ಯದಲ್ಲಿ ಭಾರತ 25–16, 25–19, 25–8 ರಲ್ಲಿ ಸಿಂಗಪುರ ತಂಡವನ್ನು ಮಣಿಸಿತು. ತಂಡದ ನಾಯಕಿ ನಿರ್ಮಲ್, ಸೂರ್ಯ ಮತ್ತು ಅನುಶ್ರೀ ಉತ್ತಮ ಪ್ರದರ್ಶನ ನೀಡಿದರು.

ಈಜು: ಚಿನ್ನ ಗೆದ್ದ ಶ್ರೀಹರಿ, ಅನೀಶ್

ಸಿಂಗಪುರ (ಪಿಟಿಐ): ಇಲ್ಲಿ ನಡೆಯುತ್ತಿರುವ ಸಿಂಗಪುರ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಕನ್ನಡಿಗರಾದ ಶ್ರೀಹರಿ ನಟರಾಜ್ ಮತ್ತು ಅನೀಶ್ ಗೌಡ ಮತ್ತೊಮ್ಮೆ ಮಿಂಚಿದರು.



ಶ್ರೀಹರಿ

ಕೂಟದ ಎರಡನೇ ದಿನವಾದ ಶುಕ್ರವಾರ 50 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ (25.69 ಸೆಕೆಂಡು) ಶ್ರೀಹರಿ ಚಿನ್ನ ಜಯಿಸಿದರು. ಅನೀಶ್‌ಗೆ ಎರಡು ಪದಕಗಳು ಒಲಿದವು. 200 ಮೀ. ಫ್ರೀಸ್ಟೈಲ್‌ನಲ್ಲಿ (1 ನಿ. 52.47ಸೆ.) ಚಿನ್ನ ಮತ್ತು ವೈಯಕ್ತಿಕ ಮೆಡ್ಲೆಯಲ್ಲಿ (4 ನಿ. 37.18 ಸೆ.) ಬೆಳ್ಳಿ ಗೆದ್ದರು.

ಸುವನಾ ಭಾಸ್ಕರ್, ಮಹಿಳೆಯರ 50 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಬೆಳ್ಳಿ (29.82 ಸೆ.) ಜಯಿಸಿದರು. ಶ್ರೀಹರಿ, ಎ.ಎಸ್.ಆನಂದ್, ಡಿ.ಆದಿತ್ಯ ಮತ್ತು ಆರ್. ಸಂಭವ್ ಅವರನ್ನೊಳಗೊಂಡ ಭಾರತ ತಂಡಕ್ಕೆ 4X100 ಮೀ. ಫ್ರೀಸ್ಟೈಲ್ ರಿಲೇನಲ್ಲಿ (3 ನಿ. 26.82 ಸೆ.) ಬೆಳ್ಳಿ ಒಲಿಯಿತು.

ಫುಟ್‌ಬಾಲ್: ಒಂದೇ ಗುಂಪಿನಲ್ಲಿ ಭಾರತ, ಬ್ರೆಜಿಲ್

ನವದೆಹಲಿ (ಪಿಟಿಐ): ಭಾರತ ತಂಡವು 17 ವರ್ಷದೊಳಗಿನವರ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಲೀಗ್ ಹಂತದಲ್ಲಿ ಬಲಿಷ್ಠ ಬ್ರೆಜಿಲ್ ಜತೆ ಪೈಪೋಟಿ ನಡೆಸಬೇಕಿದೆ.

ಭಾರತದ ಆತಿಥ್ಯದಲ್ಲಿ ಅ.11 ರಿಂದ 30ರ ವರೆಗೆ ಆಯೋಜನೆಯಾಗಿರುವ ಟೂರ್ನಿಯ 'ಡ್ರಾ' ಶುಕ್ರವಾರ ನಡೆಯಿತು. ಭಾರತವು 'ಎ' ಗುಂಪಿನಲ್ಲಿ ಬ್ರೆಜಿಲ್, ಮೊರೊಕ್ಕೊ ಮತ್ತು ಅಮೆರಿಕ ಜತೆ ಸ್ಥಾನ ಪಡೆದುಕೊಂಡಿದೆ.

ಆತಿಥೇಯ ತಂಡ ಮೊದಲ ಪಂದ್ಯದಲ್ಲಿ ಅ.11 ರಂದು ಅಮೆರಿಕವನ್ನು ಎದುರಿಸಲಿದೆ.

ಡ್ರಾ ಪಂದ್ಯದಲ್ಲಿ ಕಲಬುರಗಿ– ಹಾಸನ

ಬೆಂಗಳೂರು: ಕಲಬುರಗಿ ಮತ್ತು ಹಾಸನ ತಂಡಗಳು ಇಲ್ಲಿ ನಡೆಯುತ್ತಿರುವ ಕೆಎಸ್‌ಎಫ್‌ಎ ಅಂತರ ಜಿಲ್ಲಾ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಸಮಬಲ ಸಾಧಿಸಿದವು.

ಶುಕ್ರವಾರ ನಡೆದ ಬಿ ಗುಂಪಿನ ಹಣಾಹಣಿಯು 2–2ರಿಂದ ಡ್ರಾನಲ್ಲಿ ಕೊನೆಗೊಂಡಿತು. ಕಲಬುರಗಿ ಪರ ಮಿರ್ಜಾ ಸಫ್ದರ್ ಬೇಗ್ (58ನೇ ನಿಮಿಷ) ಮತ್ತು ಮೊಹಮ್ಮದ್ ರೆಹಾನ್ ಖಾನ್ (70 + 1ನೇ ನಿ.) ಗೋಲು ದಾಖಲಿಸಿದರು. ಹಾಸನ ತಂಡಕ್ಕಾಗಿ ಮಣಿ (51ನೇ ನಿ.) ಮತ್ತು ಚಾರ್ಲ್ಸ್ (66ನೇ ನಿ.) ಗೋಲು ಹೊಡೆದರು.

ಮರಳಿದ ವಿಜಯ್

ಚೆನ್ನೈ (ಪಿಟಿಐ): ಭಾರತ ತಂಡದ ಆಟಗಾರ ಮುರಳಿ ವಿಜಯ್ ಎರಡು ವರ್ಷಗಳ ಬಳಿಕ ಕ್ರಿಕೆಟ್‌ಗೆ ಮರಳಿದರು. ತಮಿಳುನಾಡು ಪ್ರೀಮಿಯರ್ ಲೀಗ್‌ನಲ್ಲಿ ರೂಬಿ ತ್ರಿಚಿ ವಾರಿಯರ್ಸ್ ಪರ ಕಣಕ್ಕಿಳಿದ ಅವರು ದಿಂಡಿಗಲ್ ಡ್ರ್ಯಾಗನ್ಸ್ ಎದುರು 13 ಎಸೆತಗಳಲ್ಲಿ ಕೇವಲ 8 ರನ್ ಗಳಿಸಿದರು.

ಈ ಪಂದ್ಯದಲ್ಲಿ ರೂಬಿ ಎಂಟು ವಿಕೆಟ್‌ಗಳಿಂದ ಗೆದ್ದಿತು. 2020ರ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಪರ ಆಡಿದ್ದೇ ವಿಜಯ್ ಅವರ ಕೊನೆಯ ಪಂದ್ಯವಾಗಿತ್ತು.

'ಎಐಎಫ್‌ಎಫ್: ಸೆ.15ರೊಳಗೆ ಚುನಾವಣೆ ನಡೆಸಿ'

ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನಲ್ಲಿ (ಎಐಎಫ್‌ಎಫ್) ತಲೆದೋರಿರುವ ಗೊಂದಲ ಬಗೆಹರಿಸಲು ಫಿಫಾ ಮತ್ತು ಎಎಫ್‌ಸಿ ಗಡುವು ವಿಧಿಸಿದೆ.

'ಎಐಎಫ್‌ಎಫ್‌ಗೆ ಹೊಸದಾಗಿ ನಿಯಮಾವಳಿ ರೂಪಿಸಿ, ಜುಲೈ 31ರ ಒಳಗೆ ಅನುಮೋದನೆ ನೀಡಬೇಕು. ಸೆ.15ರ ಒಳಗಾಗಿ ಚುನಾವಣೆ ನಡೆಸಿ ಹೊಸ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬರಬೇಕು' ಎಂದು ಹೇಳಿದೆ.

ರಾಷ್ಟ್ರೀಯ ಕ್ರೀಡಾ ನೀತಿಯನ್ನು ಜಾರಿಗೊಳಿಸದೇ ಇದ್ದುದ್ದಕ್ಕೆ ಪ್ರಫುಲ್ ಪಟೇಲ್ ಅವರನ್ನು ಎಐಎಫ್‌ಎಫ್ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿ, ಮೂವರು ಸದಸ್ಯರ ಆಡಳಿತ ಸಮಿತಿಯನ್ನು (ಸಿಒಎ) ಸುಪ್ರೀಂ ಕೋರ್ಟ್ ಕಳೆದ ತಿಂಗಳು ನೇಮಕ ಮಾಡಿತ್ತು.

ಎಐಎಫ್‌ಎಫ್‌ನಲ್ಲಿ ತಲೆದೋರಿರುವ ಬಿಕ್ಕಟ್ಟಿನ ಬಗ್ಗೆ ಸಮಗ್ರ ಮಾಹಿತಿ ಕಲೆಹಾಕಲು ಫಿಫಾ ಮತ್ತು ಏಷ್ಯನ್ ಫುಟ್‌ಬಾಲ್ ಕಾನ್ಫೆಡರೇಷನ್ (ಎಎಫ್‌ಸಿ) ನಿಯೋಗ ಭಾರತಕ್ಕೆ ಭೇಟಿ ನೀಡಿತ್ತು. ಎಎಫ್‌ಸಿ ಪ್ರಧಾನ ಕಾರ್ಯದರ್ಶಿ ವಿಂಡ್ಸರ್ ಜಾನ್ ನೇತೃತ್ವದ ನಿಯೋಗ ಮೂರು ದಿನಗಳ ಭೇಟಿಯ ಅವಧಿಯಲ್ಲಿ ಸಿಒಎ ಸದಸ್ಯರು, ಎಐಎಫ್‌ಎಫ್‌ನ ಅಧಿಕಾರಿಗಳು ಮತ್ತು ವಿವಿಧ ರಾಜ್ಯ ಸಂಸ್ಥೆಗಳ ಪ್ರತಿನಿಧಿಗಳ ಜತೆ ಮಾತುಕತೆ ನಡೆಸಿದೆ.

'ಈಗ ವಿಧಿಸಿರುವ ಗಡುವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನಿಯೋಗವು ಸೂಚಿಸಿದೆ. ಇಲ್ಲದಿದ್ದರೆ ಎಐಎಫ್‌ಎಫ್ ಮೇಲೆ ನಿಷೇಧ ವಿಧಿಸುವ ಸಾಧ್ಯತೆಯಿದೆ. 17 ವರ್ಷದೊಳಗಿನ ಮಹಿಳಾ ವಿಶ್ವಕಪ್ ಟೂರ್ನಿಗೆ ಆತಿಥ್ಯ ವಹಿಸುವ ಅವಕಾಶವನ್ನು ಭಾರತ ಕಳೆದುಕೊಳ್ಳಬಹುದು' ಎಂದು ಮೂಲಗಳು ಹೇಳಿವೆ.



ಚಿತ್ರ ದಿಗ್ಗಜರನ್ನು ಒಂದಾಗಿಸಿದ 'ವಿಕ್ರಾಂತ್ ರೋಣ'

2

29ರಂದು ನೃತ್ಯ ನಾಟಕ 'ನಂದನಾರ್ ಚರಿತಂ'


ದೀಪಾ ನಾರಾಯಣನ್ ಶಶೀಂದ್ರನ್

ಬೆಂಗಳೂರಿನ ಮಲ್ಲೇಶ್ವರಂ ಸೇವಾ ಸದನ್ ಆಡಿಟೋರಿಯಂನಲ್ಲಿ ಜೂನ್ 29ರಂದು ಸಂಜೆ 6 ಗಂಟೆಗೆ ಕೂಚಿಪುಡಿಯ ಕಲಾ ಪ್ರಕಾರದ ನೃತ್ಯ ನಾಟಕ 'ನಂದನಾರ್ ಚರಿತಂ' ಪ್ರಸ್ತುಪಡಿಸಲಾಗುತ್ತಿದೆ.

ಕೂಚಿಪುಡಿ ನೃತ್ಯಪಟು ಹಾಗೂ ಕೂಚಿಪುಡಿ ಪರಂಪರಾ ಫೌಂಡೇಷನ್ ಟ್ರಸ್ಟ್‌ನ ಆಜೀವ ಟ್ರಸ್ಟಿ ದೀಪಾ ನಾರಾಯಣನ್ ಶಶೀಂದ್ರನ್ ಅವರ ಪರಿಕಲ್ಪನೆ, ನೃತ್ಯ ಸಂಯೋಜನೆ ಮತ್ತು ನಿರ್ದೇಶನದಲ್ಲಿ ಈ ನೃತ್ಯ ನಾಟಕ ಪ್ರದರ್ಶನಗೊಳ್ಳುತ್ತಿದೆ.

ಬೆಂಗಳೂರಿನ ಕೂಚಿಪುಡಿ ಪರಂಪರಾ ಫೌಂಡೇಷನ್ ಮತ್ತು ನವದೆಹಲಿಯ ಸಂಗೀತ ನಾಟಕ ಅಕಾಡೆಮಿಯ ಸಹಯೋಗದೊಂದಿಗೆ ಈ ಕಾರ್ಯಕ್ರಮ ನಡೆಯುತ್ತಿದೆ.

ವೆಂಕಟ್ ಗಡೇಪಲ್ಲಿ ರಾಜಮಂಡ್ರಿ ಅವರು ತೆಲುಗಿನಲ್ಲಿ ಚಿತ್ರಕಥೆ ಬರೆದಿದ್ದಾರೆ. ಹೈದರಾಬಾದ್‌ನ ಶ್ರೀತಾಪ್ರಸಾದ್ ಸಂಗೀತ ಸಂಯೋಜನೆ ಇದೆ. ಪ್ರವೇಶ ಉಚಿತ.


ಪ್ರಜ್ವಲ್ ದೇವರಾಜ್

ಜೋರಾಗಿದೆ 'ಅಬ್ಬರ'

ನೂರಾರು ಚಿತ್ರಗಳಿಗೆ ಸಾಹಿತ್ಯ ಬರೆದು ಗುರುತಿಸಿ ಕೊಂಡಿರುವ ಕೆ.ರಾಮ್‌ನಾರಾಯಣ್ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ 'ಅಬ್ಬರ' ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಚಿತ್ರದ ಹಾಡೊಂದನ್ನು ಚಿತ್ರತಂಡ ಬಿಡುಗಡೆ ಮಾಡಿದ್ದು, ಮತ್ತೊಂದು ಎಣ್ಣೆ ಹಾಡಿನ ಮುಖಾಂತರ ಯೋಗರಾಜ್ ಭಟ್ ಪ್ರೇಕ್ಷಕರ ನಶೆ ಏರಿಸಿದ್ದಾರೆ.

ಆಕ್ಷನ್, ಫ್ಯಾಮಿಲಿ ಎಂಟರ್‌ಟೈನರ್ ಕಥಾಹಂದರ ಹೊಂದಿರೋ ಈ ಚಿತ್ರದಲ್ಲಿ ನಟ ಪ್ರಜ್ವಲ್ ದೇವರಾಜ್ ನಾಯಕನಾಗಿ ನಟಿಸಿದ್ದಾರೆ. ಪ್ರಜ್ವಲ್‌ಗೆ ಜೋಡಿಯಾಗಿ ರಾಶಿ ಪೊನ್ನಪ್ಪ, ನಿಮಿಕಾ ರತ್ನಾಕರ್, ಲೇಖಾಚಂದ್ರ ಅಭಿನಯಿಸಿದ್ದಾರೆ. ಎಣ್ಣೆ ಹಾಡುಗಳಿಗೆ ಲೇಖನಿಯಾಗಿ ಖ್ಯಾತಿ ಗಳಿಸಿರುವ ಯೋಗರಾಜ್ ಭಟ್ ಇಲ್ಲೂ ವಿಶೇಷವಾದ ಹಾಡೊಂದನ್ನು ರಚಿಸಿದ್ದಾರೆ. ಗಾಯಕ ವಿಜಯ್‌ಪ್ರಕಾಶ್ ಇದಕ್ಕೆ ಧ್ವನಿಯಾಗಿದ್ದಾರೆ. ಸಿ ಆ್ಯಂಡ್ ಎಂ. ಮೂವೀಸ್ ಲಾಂಛನದಲ್ಲಿ ಬಸವರಾಜ್ ಮಂಚಯ್ಯ ಅವರ ನಿರ್ಮಾಣದ ಈ ಚಿತ್ರಕ್ಕೆ ರಾಮನಾರಾಯಣ್ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ನಿರ್ದೇಶಿಸುತ್ತಿದ್ದಾರೆ.

ಖಳನಾಯಕ ರವಿಶಂಕರ್ ಅವರು ಈ ಸಿನಿಮಾದಲ್ಲಿ ಎರಡು ಶೇಡ್‌ಗಳಲ್ಲಿ ಕಾಣಿಸಿಕೊಂಡಿರುವುದು ವಿಶೇಷ ಎಂದಿದೆ ಚಿತ್ರತಂಡ. ಚಿತ್ರದ ಹಾಡುಗಳಿಗೆ ರವಿ ಬಸ್ರೂರು ಸಂಗೀತ ನೀಡಿದ್ದಾರೆ.





ತರಕಾರಿ ಸೂಪ್

ಬೇಕಾಗುವ ಸಾಮಗ್ರಿಗಳು: 1 ಕಪ್ ಹಸಿರು ಬಟಾಣಿ, 1 ಕಪ್ ಸಣ್ಣಗೆ ಹೆಚ್ಚಿದ ಕ್ಯಾಪ್ಸಿಕಂ, ಒಂದು ದಪ್ಪನೆ ಈರುಳ್ಳಿ, 6 ಎಸಳು ಬೆಳ್ಳುಳ್ಳಿ, ಸ್ವಲ್ಪ ಎಣ್ಣೆ, ಕಪ್ಪು ಮೆಣಸು, ಉಪ್ಪು

ತಯಾರಿಸುವ ವಿಧಾನ: ಎಲ್ಲ ತಕಾರಿಗಳನ್ನು ಸಣ್ಣಗೆ ಹೆಚ್ಚಿಕೊಳ್ಳಬೇಕು. ಒಂದು ಪಾತ್ರೆಯನ್ನು ಸ್ಟವ್ ಮೇಲೆ ಬಿಸಿ ಮಾಡಿ. ಅದಕ್ಕೆ ಸ್ವಲ್ಪ ಎಣ್ಣೆ ಹಾಕಿ. ಬಿಸಿಯಾದ ಬಳಿಕ ಈರುಳ್ಳಿ, ಬೆಳ್ಳುಳ್ಳಿ ಹಾಕಿ ಕಂದು ಬಣ್ಣ ಬರುವವರೆಗೂ ಬಾಡಿಸಿ. ಬಳಿಕ ಹೆಚ್ಚಿಟ್ಟುಕೊಂಡ ತರಕಾರಿ ಅಗತ್ಯ ಸಾಸ್‌ಗಳನ್ನು ಹಾಕಿ 5 ನಿಮಿಷ ಚೆನ್ನಾಗಿ ಕುದಿಯಲು ಬಿಡಿ. ಬಳಿಕ ಅಗತ್ಯಕ್ಕೆ ತಕ್ಕಷ್ಟು ನೀರು ಹಾಕಿ ಕುದಿಯಲು ಬಿಡಿ. ಸ್ಟವ್ ಉರಿ ಸಣ್ಣಗೆ ಮಾಡಿ ಮುಚ್ಚಳ ಮುಚ್ಚಿ 10 ನಿಮಿಷ ಕುದಿಯಲು ಬಿಡಿ. ನಂತರ ಕಾಳುಮೆಣಸು ಪುಡಿ, ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಕುದಿಸಿ. ಬಿಸಿ ಇರುವಾಗಲೇ ಸವಿಯಿರಿ.

ಸೂಪ್ ಬಾತ್‌ಚೀತ್

ಸುಮಾ ಬಿ.

'ಸೂಪ್'... ಹೋಟೆಲ್, ರೆಸ್ಟೋರೆಂಟ್‌ಗೆ ಹೋದಾಗ ಬಾಯಲ್ಲಿ ಮೊದಲು ಇಣುಕುವ ಪದವಿದು. ಸೂಪ್ ಇಲ್ಲದೇ ಹೋಟೆಲ್, ರೆಸ್ಟೋರೆಂಟ್ ಊಟ ಅಪೂರ್ಣ ಎಂಬಷ್ಟರಮಟ್ಟಿಗೆ ರುಚಿಮೊಗ್ಗು ಅರಳಿಸುತ್ತದೆ. ಪುಟ್ಟ ಬಟ್ಟಲಲ್ಲಿ ಮೊಗೆದಷ್ಟೂ ರುಚಿ ನೀಡುವ ಸೂಪ್‌ನ ಕರಾಮತ್ತಿಗೆ ಫಿದಾ ಆಗದವರಿಲ್ಲ. ಮಕ್ಕಳಂತೂ ಸೂಪ್ ಕುಡಿಯಲೆಂದೇ ಹಟ ಮಾಡಿ ಹೋಟೆಲ್‌ಗೆ ಪೋಷಕರನ್ನು ಕರೆದುಕೊಂಡು ಹೋಗುತ್ತಾರೆ.

ರುಚಿಕರವಾದ, ಜೀರ್ಣಕ್ರಿಯೆ ಹೆಚ್ಚಿಸುವ, ದೇಹಕ್ಕೆ ಅಗತ್ಯ ಪೋಷಕಾಂಶ ಒದಗಿಸುವ, ಬೊಜ್ಜು ಇಳಿಸಲು ಸಹಕಾರಿಯಾಗುವ ಸೂಪ್‌ನ ರೂಪಗಳು ಹಲವು. ತರಕಾರಿ ಸೂಪ್, ಮಶ್ರೂಮ್, ಪೆಪ್ಪರ್, ಟೊಮೆಟೊ ಸೂಪ್, ಚಿಕನ್, ಮಟನ್ ಸೂಪ್, ಕಾರ್ನ್ ಸೂಪ್ ... ಹೀಗೆ ಹಲವು ರೂಪಗಳು. ತರಕಾರಿ ಸೂಪ್‌ಗಳಲ್ಲಂತೂ ಒಂದೊಂದು ತರಕಾರಿಯಲ್ಲೂ ವಿವಿಧ ಬಗೆಯ ಸೂಪ್ ತಯಾರಿಸಬಹುದು. ಎಲ್ಲವೂ ಭಿನ್ನ ರುಚಿ ನೀಡುವುದರಿಂದ ಇಷ್ಟದ ತರಕಾರಿ ಬಳಸಿ ಸೂಪ್ ಸಿದ್ಧಪಡಿಸಿಕೊಳ್ಳಬಹುದು. ಸೂಪ್‌ಗಳಲ್ಲಿ ಟೊಮೆಟೊ ಸೂಪ್‌ಗೆ ಎಂದಿಗೂ ಅಗ್ರಪಟ್ಟ.

ಮೊದಲೆಲ್ಲ ಹೋಟೆಲ್, ರೆಸ್ಟೋರೆಂಟ್‌ಗಳಿಗೆ ಮಾತ್ರವೇ ಸೀಮಿತವಾಗಿದ್ದ ಸೂಪ್ ಈಚೆಗೆ ಮನೆಯಲ್ಲೂ ತಯಾರಾಗುತ್ತಿದೆ. ಅಡುಗೆ ಹೇಳಿಕೊಡುವ ಯೂಟ್ಯೂಬ್ 'ಗೆಳೆಯ- ಗೆಳತಿಯರು' ಬಂದಮೇಲಂತೂ ಮನೆಯಲ್ಲೇ ಸೂಪ್ ತಯಾರಿಸಿ ಸವಿಯುವವರ ಸಂಖ್ಯೆ ಹೆಚ್ಚಾಗಿದೆ. ಸ್ವಲ್ಪ ಶ್ರಮ ಹಾಕಿದರೆ ಸ್ವಾದಿಷ್ಟ, ಆರೋಗ್ಯಕರ ಸೂಪ್ ತಯಾರಿಸಿ ಸವಿಯಬಹುದು. ಈಗಂತೂ ಇನ್‌ಸ್ಟಂಟ್ ಸೂಪ್ ಪ್ಯಾಕೆಟ್ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಪ್ಯಾಕೆಟ್ ತಂದು ನೀರು ಬೆರೆಸಿ ಬಿಸಿ ಮಾಡಿದರೆ ಸೂಪ್ ರೆಡಿ. ಆದರೆ, ಮನೆಯಲ್ಲೇ ತಾಜಾವಾಗಿ ತಯಾರಿಸಿದ ಸೂಪ್ ಹೆಚ್ಚು ಆರೋಗ್ಯಕರ ಎನ್ನುತ್ತಾರೆ ಆಹಾರ ತಜ್ಞರು.



ಬಾರ್ಲಿ ಸೂಪ್

ಬೇಕಾಗುವ ಸಾಮಾಗ್ರಿಗಳು: ಬಾರ್ಲಿ– 1/4 ಕಪ್, ಮಿಶ್ರ ತರಕಾರಿಗಳು 1/2 ಕಪ್ (ಕ್ಯಾರೆಟ್, ಬೀನ್ಸ್, ಬಟಾಣಿ), ಜೀರಿಗೆ ಪುಡಿ ಚಿಟಿಕೆ, ಅರಿಶಿನ ಚಿಟಿಕೆ, ತುಪ್ಪ ಅಥವಾ ಬೆಣ್ಣೆ 1 ಚಮಚ, ರುಚಿಗೆ ಉಪ್ಪು

ತಯಾರಿಸುವ ವಿಧಾನ: ಬಾರ್ಲಿಯನ್ನು ಎರಡು ಬಾರಿ ಚೆನ್ನಾಗಿ ತೊಳೆಯಿರಿ. ಕನಿಷ್ಠ 2ರಿಂದ 4 ಗಂಟೆ ನೆನೆಸಿಡಿ. ಬಳಿಕ ಕುಕ್ಕರ್‌ಗೆ ನೆನೆಸಿಟ್ಟ ಬಾರ್ಲಿ, ಬೇಕಾದ ತರಕಾರಿ ಹಾಕಿ. ಅದಕ್ಕೆ ಒಂದೂವರೆ ಕಪ್ ನೀರು ಹಾಕಿ ಮೆತ್ತಗೆ ಬೇಯಿಸಿಕೊಳ್ಳಿ. ಬೇಯಿಸಿದ ಬಾರ್ಲಿ ಹಾಗೂ ತರಕಾರಿ ಮಿಶ್ರಣವನ್ನು ಮಿಕ್ಸಿಗೆ ಹಾಕಿ ರುಬ್ಬಿಕೊಳ್ಳಿ. ಬಳಿಕ ಬಾಣಲೆ ಬಿಸಿ ಮಾಡಿ ತುಪ್ಪ ಅಥವಾ ಬೆಣ್ಣೆ ಹಾಕಿ ಜೀರಿಗೆ ಪುಡಿ ಹಾಕಿ. ರುಬ್ಬಿಕೊಂಡ ಮಿಶ್ರಣವನ್ನು ಬಾಣಲೆಗೆ ಹಾಕಿ. ಮಕ್ಕಳು ಇಷ್ಟ ಪಡುವುದಿದ್ದರೆ ಕಾಳುಮೆಣಸಿನ ಪುಡಿ, ಇನ್ನಷ್ಟು ಜೀರಿಗೆ ಪುಡಿ, ಅರಿಶಿನ ಪುಡಿ, ಉಪ್ಪು ಹಾಕಿ ಚೆನ್ನಾಗಿ ಕುದಿಸಿ. ಬಿಸಿ ಇರುವಾಗಲೇ ಸವಿಯಲು ಕೊಡಿ.

ಮಳೆ, ಚಳಿಗಾಲಕ್ಕೆ ಸೂಕ್ತ ಖಾದ್ಯ

ಮಳೆಗಾಲ, ಚಳಿಗಾಲದಲ್ಲಂತೂ ಸೂಪ್‌ಗೆ ಹೆಚ್ಚು ಮಹತ್ವ. ದೇಹವನ್ನು ಬೆಚ್ಚಗಿಡುವ, ಮನಸ್ಸಿಗೆ ತಾಜಾತನ ತಂದು ಕೊಡುವ ಸೂಪ್ ಆರೋಗ್ಯ ವರ್ಧನೆಯೂ ಹೌದು. ಸೂಪ್‌ಗೆ ಬಳಸುವ ಮಸಾಲೆ ಪದಾರ್ಥಗಳು ತಂಪಿನ ಕಾಲದಲ್ಲಿ ದೇಹದ ಉಷ್ಣತೆಯನ್ನು ಸಮತೋಲನದಲ್ಲಿ ಇಡಲು ಸಹಕಾರಿಯಾಗಿತ್ತವೆ.

ಇನ್ನು ಶಿಶುಗಳಿಗೆ ಊಟದ ಅಭ್ಯಾಸ ಮಾಡಿಸಬೇಕೆಂದರೆ ಸೂಪ್‌ನಿಂದಲೇ ಶುರು ಮಾಡಬಹುದು. 8 ತಿಂಗಳು ಪೂರ್ಣಗೊಂಡ ನಂತರ ಶಿಶುಗಳಿಗೆ ಸೂಪ್ ಪರಿಚಯಿಸಬಹುದು. ಬೇಳೆ ಕಟ್ಟನ್ನು ತೆಗೆದು ಸೂಪ್ ರೀತಿ ಕುಡಿಸಬಹುದು. ಕೋಸು, ಅಣಬೆ, ಕ್ಯಾರೆಟ್, ಬೀನ್ಸ್ ಬಳಸಿ ಸೂಪ್ ತಯಾರಿಸಿ ನೀಡುವುದರಿಂದ ಶಕ್ತಿ ವರ್ಧನೆಯಾಗುತ್ತದೆ.

ಸಾಮಾನ್ಯವಾಗಿ ಮಕ್ಕಳು ತರಕಾರಿ ತಿನ್ನಲು ಇಷ್ಟಪಡುವುದಿಲ್ಲ. ಆಗ ತರಕಾರಿ ಸೂಪ್ ಹೆಚ್ಚು ಫಲಕಾರಿ. ಸೂಪ್ ಸವಿದ ಖುಷಿ ಮಕ್ಕಳಿಗಾದರೆ ಪೌಷ್ಟಿಕ ಆಹಾರ ತಿನ್ನಿಸಿದ ತೃಪ್ತಿ ಅಮ್ಮಂದಿರಿಗೆ ಸಿಗುತ್ತದೆ. ನಿಯಮಿತವಾಗಿ ಸೂಪ್ ಕೊಡುವುದರಿಂದ ಮಕ್ಕಳಿಗೆ ಸಾಮಾನ್ಯವಾಗಿ ಕಾಡುವ ಶೀತ, ಕೆಮ್ಮಿನಿಂದ ದೂರವಿಡಬಹುದು.

ತರಕಾರಿ, ದ್ವಿದಳ ಧಾನ್ಯಗಳು, ಅಕ್ಕಿಯಿಂದ ತಯಾರಿಸಿದ ಸೂಪ್ ಆರೋಗ್ಯಕರ ಬೆಳವಣಿಗೆಗೆ ಅಗತ್ಯವಾದ ಖನಿಜಗಳು, ಕ್ಯಾಲ್ಸಿಯಂ, ಪ್ರೊಟೀನ್, ಕಾರ್ಬೊಹೈಡ್ರೇಟ್‌ಗಳನ್ನು ನೀಡುತ್ತವೆ. ಬೆಣ್ಣೆ ಹಾಕಿದ ಸೂಪ್ ಮಕ್ಕಳ ತೂಕ ಹೆಚ್ಚಿಸಲು, ದೇಹದಲ್ಲಿ ನೀರಿನ ಅಂಶ ನಿರ್ವಹಣೆಗೂ ಸಹಕಾರಿ. ಬೆಳಿಗ್ಗೆ ಅಥವಾ ಸಂಜೆ ಲಘು ಉಪಾಹಾರದ ರೀತಿ ಮಕ್ಕಳಿಗೆ ಸೂಪ್ ಕೊಡಬಹುದು.

ಮಳೆಗಾಲ; ಆರೋಗ್ಯ ಜೋಪಾನ

ಮುಂಗಾರು ಮಳೆ ಆರಂಭವಾಗಿದೆ. ಬೇಸಿಗೆ ಮುಗಿದು ಮಳೆಗಾಲ ಆರಂಭವಾಗುವ ಈ ಬದಲಾವಣೆಯ ಕಾಲದಲ್ಲಿ ಆರೋಗ್ಯದಲ್ಲಿ ತುಸು ವ್ಯತ್ಯಾಸವಾಗುವುದು ಸಹಜ. ಇಂಥ ಸಮಯದಲ್ಲಿ ಮನೆಯಲ್ಲಿ ನಿತ್ಯ ಬಳಕೆಯಲ್ಲಿರುವ ವಸ್ತುಗಳನ್ನು ಬಳಸಿ ಆರೋಗ್ಯ ರಕ್ಷಣೆ ಮಾಡಿಕೊಳ್ಳಬಹುದು. ಈ ಕುರಿತ ಟಿಪ್ಸ್ ಇಲ್ಲಿದೆ.

ಆತ್ರೇಯ



- ಮಳೆಗೆ ನೆನೆದಾಗ ನೆಗಡಿ, ಜ್ವರ ಬಾಧಿಸುವುದು ಸಾಮಾನ್ಯ. ನೆಗಡಿಯಾದಾಗ ಅರಿಶಿನದ ಪುಡಿಯನ್ನು ಕೆಂಡದ ಮೇಲೆ ಹಾಕಿ ಅದರ ಹೊಗೆ ತಗೊಳ್ಳಬಹುದು.
- ಒಂದು ಲೋಟ ಬಿಸಿ ಹಾಲು ಅಥವಾ ಬಿಸಿ ನೀರಿಗೆ ಅರಿಶಿನ ಪುಡಿ ಬೆರೆಸಿ, ಸ್ವಲ್ಪ ಬೆಲ್ಲ ಹಾಕಿ ಬೆಳಿಗ್ಗೆ ಹೊತ್ತು ಕುಡಿಯಬಹುದು. ಇದರಿಂದ ನೆಗಡಿ ನಿಯಂತ್ರಣವಾಗುತ್ತದೆ.
- ಥಂಡಿಕಾಲದಲ್ಲಿ ನೆಗಡಿ ಜೊತೆಗೆ ಗಂಟಲು ಕೆರೆತ, ಕೆಮ್ಮು ಬಾಧಿಸುತ್ತದೆ. ಕೆಮ್ಮು ನಿವಾರಣೆಗೆ ಹೀಗೆ ಮಾಡಿ; ಶುಂಠಿ, ಹಿಪ್ಪಲಿ, ಮೆಣಸು ಮೂರು ತಲಾ 10 ಗ್ರಾಂ, ಜೇಷ್ಠಮಧು 30 ಗ್ರಾಂ. ಎಲ್ಲವನ್ನೂ ಕುಟ್ಟಿ ನುಣ್ಣಗೆ ಪುಡಿ ಮಾಡಿ. ಒಂದು ಚಮಚ ಪುಡಿಯನ್ನು ಜೇನುತುಪ್ಪದಲ್ಲಿ ಬೆರೆಸಿ, ದಿನಕ್ಕೆ ಮೂರು ಸಾರಿ ಸೇವಿಸಿ.
- ನೀರು, ಆಹಾರದ ವ್ಯತ್ಯಾಸ, ವಾತಾವರಣದ ಏರುಪೇರಿನ ಕಾರಣಕ್ಕೆ ಮಳೆಗಾಲದಲ್ಲಿ ಗಂಟಲ ನೋವು ಬಾಧಿಸುತ್ತದೆ. ಇದರ ನಿವಾರಣೆಗೆ ಹೀಗೆ ಮಾಡಿ; ದ್ರಾಕ್ಷಿ, ಕಾಳುಮೆಣಸು, ಜೇಷ್ಠ ಮಧು ಇವೆಲ್ಲವನ್ನೂ ಸಮಪ್ರಮಾಣದಲ್ಲಿ ತೆಗೆದುಕೊಂಡು, ಕುಟ್ಟಿ ಮಾತ್ರೆ ಮಾಡಿ. ಅದನ್ನು ಗುಳಿಗೆ ಮಾಡಿ. ದಿನಕ್ಕೆ ಮೂರು ಬಾರಿ ಸೇವಿಸಬಹುದು.
- ಮಳೆಗಾಲದಲ್ಲಿ ನೀರಿನ ಬಗ್ಗೆಯೂ ಎಚ್ಚರವಹಿಸಬೇಕು. ಈ ಸಮಯದಲ್ಲಿ ದೇಹವೂ ತಂಪಾಗಿರುತ್ತದೆ. ಹಾಗಾಗಿ ನೀರು ಕಾಯಿಸಿ ಕುಡಿಯುವುದು ಒಳ್ಳೆಯದು. ನೀರನ್ನು ಕಾಯಿಸುವಾಗ ಚಿಕ್ಕತುಂಡು ಶುಂಠಿ ಅಥವಾ ತುಳಸಿ ಹಾಕಿ. ಹದವಾದ ಬಿಸಿಯಲ್ಲೇ ನೀರು ಕುಡಿಯಿರಿ.
- ಗಂಟಲು ಕಟ್ಟಿ ಧ್ವನಿ ತೊಂದರೆಯಿರುವವರು ಒಂದೆಲಗ, ಬಜೆ ಶುಂಠಿ ಹಿಪ್ಪಲಿ ಸಮಭಾಗ, ಕುಟ್ಟಿ ಪುಡಿ ಮಾಡಿಟ್ಟುಕೊಂಡು ಜೇನುತಪ್ಪದಲ್ಲಿ ಸೇರಿಸಿ, ದಿನಕ್ಕೆ ಎರಡು ಬಾರಿ ಸೇವಿಸಬಹುದು.
- ಥಂಡಿ ವಾತಾವರಣಕ್ಕೆ ಮಂಡಿ ನೋವು, ಸಂದಿವಾತಗಳಂತಹ ನೋವು ಕಾಣಿಸಿ ಕೊಳ್ಳುತ್ತವೆ. ಇದಕ್ಕೆ ಪರಿಹಾರವಾಗಿ, ಹತ್ತು ಗ್ರಾಂನಷ್ಟು ದನಿಯಾ, ಒಣಶುಂಠಿ ಕುಟ್ಟಿ ಪುಡಿ ಮಾಡಿಟ್ಟುಕೊಳ್ಳಿ. ನಾಲ್ಕು ಲೋಟ ನೀರಿಗೆ ಬೆರೆಸಿ ಕಾಯಿಸಿ, ಒಂದು ಲೋಟಕ್ಕೆ ಇಳಿಸಿ. ದಿನಕ್ಕೆ ಎರಡು ಸಾರಿ ಇದನ್ನು ಕುಡಿಯಿರಿ. ಈ ವಾತದ ನೋವು ತಕ್ಕಮಟ್ಟಿಗೆ ಶಮನವಾಗುತ್ತದೆ.
- ಮಳೆಗಾಲದಲ್ಲಿ ಜೀರ್ಣಶಕ್ತಿ ಕಡಿಮೆ ಇರುತ್ತದೆ. ಇಂಥ ಸಮಯದಲ್ಲಿ ನಿತ್ಯದ ತರಕಾರಿ ಸಾಂಬಾರಿನ ಬದಲಿಗೆ, ತೊಗರಿಬೇಳೆ, ಹುರುಳಿಕಟ್ಟಿನ ಸಾರನ್ನು ಬಳಸಿದರೆ, ಜೀರ್ಣಶಕ್ತಿಗೆ ಒಳ್ಳೆಯದು.
- ಮಳೆಗಾಲದಲ್ಲಿ ಮೊಸರು ಬಳಸುವುದು ಬೇಡ. ಮೊಸರು ತಿನ್ನುವುದರಿಂದ ಕೆಲವರಲ್ಲಿ ಕಫವಾಗುತ್ತದೆ. ಜೀರ್ಣಶಕ್ತಿಯೂ ಕಡಿಮೆಯಾಗುತ್ತದೆ. 'ಮೊಸರಿಲ್ಲದಿದ್ದರೆ ಊಟ ಮುಗಿಯುವುದಿಲ್ಲ' ಎನ್ನುವವರು, ಮೊಸರು ಕಡೆದು, ಅದಕ್ಕೆ ಕಾಳುಮೆಣಸಿನ ಪುಡಿ ಮತ್ತು ಉಪ್ಪು(ರುಚಿಗೆ ತಕ್ಕಷ್ಟು) ಬೆರೆಸಿ ಮಿತ ಪ್ರಮಾಣದಲ್ಲಿ ಉಪಯೋಗಿಸಬಹುದು.
- ದಾಳಿಂಬೆ, ಮಾವಿನಕಾಯಿ ಸಾರು, ನೆಲ್ಲಿಕಾಯಿ(ಒಣಗಿದ) ಸಾರು, ನೆಲ್ಲಿಕಾಯಿ ಉಪ್ಪಿನಕಾಯಿ.. ಈ ಎಲ್ಲವೂ ಮಳೆಗಾಲದ ಆರೋಗ್ಯಕ್ಕೆ ಪೂರಕವಾದ ಆಹಾರ ಪದಾರ್ಥಗಳು.
- ಒಂದು ಭಾಗ ಗೋಧಿಹಿಟ್ಟು, ಕಡ್ಲೆಹಿಟ್ಟು, ಓಮ, ಇಂಗು, ತುಪ್ಪ ಹಾಕಿ ಹಿಟ್ಟು ಕಲಸಿ. ರೊಟ್ಟಿ ಲಟ್ಟಿಸಿ. ಕೆಂಡದಲ್ಲಿ ಬೇಯಿಸಬೇಕು. ಮಳೆಗಾಲದಲ್ಲಿ ಈ ಕೆಂಡದ ರೊಟ್ಟಿ ಸೇವನೆಯಿಂದ ವಾತದ ಸಮಸ್ಯೆಯಿರುವವರಿಗೆ ಉತ್ತಮ ಔಷಧ. ಕಫ ನಿವಾರಣೆಗೆ ಉತ್ತಮ ಆಹಾರ. ಜೀರ್ಣಶಕ್ತಿ ಹೆಚ್ಚಾಗುತ್ತದೆ.
- ಹೆಸರುಕಾಳು, ಮಡಕೆ ಕಾಳು ನೆನೆಸಿ ಒಗ್ಗರಣೆ ಹಾಕಿ ಗುಗ್ಗರಿ ಮಾಡಿಕೊಂಡು ತಿನ್ನಬಹುದು. ಇದೂ ಮಳೆಗಾಲದ ಉತ್ತಮ ಆಹಾರ.

ಚರ್ಮದ ಆರೈಕೆ

- ವಾತಾವರಣದಲ್ಲಿ ತೇವಾಂಶ ಹೆಚ್ಚಾದಾಗ, ಚರ್ಮ ಒರಟಾಗುತ್ತದೆ. ಮುಖದ ತ್ವಚೆಯೂ ಬಿರುಸಾಗುತ್ತದೆ. ಇದಕ್ಕೆ ಪರಿಹಾರವಾಗಿ, ಲೋಳೆಸರ/ತಿರುಳು / ಜೆಲ್ ಎರಡು ಚಮಚ, ಒಂದು ಚಮಚ ಬಾದಾಮಿ ಎಣ್ಣೆ, ಬೆಣ್ಣೆ ಅರ್ಧ ಚಮಚ, ಗುಲಾಬಿ ಜಲ(ರೋಸ್‌ವಾಟರ್) ಒಂದು ಚಮಚ. ಇವೆಲ್ಲವನ್ನೂ ಬೆರೆಸಿ, ರಾತ್ರಿ ಮಲಗುವ ಮುನ್ನ ಮುಖಕ್ಕೆ ಹಚ್ಚಿಕೊಂಡರೆ, ಮುಖದ ಕಾಂತಿ ಹೆಚ್ಚುತ್ತದೆ.
- ರಾತ್ರಿ ಮಲಗುವಾಗ ತುಪ್ಪ ಅಥವಾ ಬೆಣ್ಣೆ, ಮಜ್ಜಿಗೆಯನ್ನು ತುಟಿಗೆ ಹಗುರವಾಗಿ ಮಸಾಜ್ ಮಾಡಿಕೊಂಡರೆ, ತುಟಿ ಬಿರಿಯುವುದನ್ನು ತಡೆಯಬಹುದು.

ಪೂರಕ ಮಾಹಿತಿ: ಡಾ. ವಸುಂಧರಾ ಭೂಪತಿ, ಆಯುರ್ವೇದ ತಜ್ಞೆ



ನಗರದ ಬಸವನಗುಡಿಯ ಬುಲ್‌ಟೆಂಪಲ್ ರಸ್ತೆಯಲ್ಲಿನ ಶ್ರೀಧರ್ಮಸ್ಥಳ ಮಂಜುನಾಥ ಸ್ವಾಮಿ ಸಭಾಭವನದಲ್ಲಿ ಇತ್ತೀಚೆಗೆ ಶ್ರೀಸಾಯಿಗೋಲ್ಡ್ ಪ್ಯಾಲೇಸ್ ವತಿಯಿಂದ ನಡೆದ 'ಶ್ರೀಸಾಯಿ ಗೋಲ್ಡ್ ಲಕ್ಕಿ ಡ್ರಾ' ಕಾರ್ಯಕ್ರಮದಲ್ಲಿ ಅವಧೂತ ವಿನಯ ಗುರೂಜಿ, ಸಂಸ್ಥೆಯ ಮಾಲೀಕರಾದ ಟಿ.ಎ. ಶರವಣ, ಚಿತ್ರನಟಿ ರೂಪಿಕಾ ಮತ್ತಿತರರು ಹಾಜರಿದ್ದರು.

ಶ್ರೀ ಸಾಯಿ ಗೋಲ್ಡ್ ಹಬ್ಬದ ಲಕ್ಕಿ ಡ್ರಾ

ಚಿನ್ನಾಭರಣ ಮಾರಾಟದಲ್ಲಿ ಹೆಸರುವಾಸಿಯಾಗಿರುವ ಶ್ರೀಸಾಯಿ ಗೋಲ್ಡ್ ಪ್ಯಾಲೇಸ್‌ವತಿಯಿಂದ ಗುರುವಾರ ಶ್ರೀ ಸಾಯಿ ಗೋಲ್ಡ್ ಹಬ್ಬದ ಲಕ್ಕಿ ಡ್ರಾ ನಡೆಸಲಾಯಿತು.

ಬೆಂಗಳೂರಿನ ಬಸವನಗುಡಿಯ ಬುಲ್‌ಟೆಂಪಲ್ ರಸ್ತೆಯಲ್ಲಿರುವ ಶ್ರೀಧರ್ಮಸ್ಥಳ ಮಂಜುನಾಥ ಸ್ವಾಮಿ ಸಭಾಭವನದಲ್ಲಿ ಇತ್ತೀಚೆಗೆ ನಡೆದ ಈ ಕಾರ್ಯಕ್ರಮದಲ್ಲಿ ಅವಧೂತ ವಿನಯ ಗುರೂಜಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಶ್ರೀಸಾಯಿ ಗೋಲ್ಡ್ ಪ್ಯಾಲೇಸ್ ಮಾಲೀಕರು ಹಾಗೂ ವಿಧಾನಪರಿಷತ್ ಸದಸ್ಯರಾದ ಟಿ.ಎ.ಶರವಣ, ಚಿತ್ರನಟಿ ರೂಪಿಕಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀಸಾಯಿ ಗೋಲ್ಡ್ ಹಬ್ಬದ ಲಕ್ಕಿ ಡ್ರಾನಲ್ಲಿ ಬಹುಮಾನ ಪಡೆದವರ ವಿವರ ಕೆಳಕಂಡಂತಿದೆ.

- ಬಂಪರ್ ಬಹುಮಾನ– ಹುಂಡೈ ವೆನ್ಯೂ ಕಾರು – ಬಹುಮಾನ ಪಡೆದವರ ಸಂಖ್ಯೆ-24566
- ಪ್ರಥಮ ಬಹುಮಾನ – ಡೈಮಂಡ್ ಜ್ಯೂವೆಲರಿ ಸೆಟ್ – ಬಹುಮಾನ ಪಡೆದವರ ಸಂಖ್ಯೆ -51861
- ದ್ವಿತೀಯ ಬಹುಮಾನ–ಚಿನ್ನದ ಸರ – ಸಂಖ್ಯೆ-24015
- ತೃತೀಯ ಬಹುಮಾನ– ಬೆಳ್ಳಿ ಆಭರಣ – ಸಂಖ್ಯೆ 67755 ಬೆಳ್ಳಿ ಅಭರಣ.
- ನಾಲ್ಕನೆಯ ಬಹುಮಾನ ದ್ವಿಚಕ್ರ ವಾಹನ – ಸಂಖ್ಯೆ-31167

ಒಟ್ಟು ಹತ್ತು ಬಹುಮಾನಗಳು, ಜೊತೆಗೆ ಮೂವತ್ತು ಮಂದಿಗೆ ₹5 ಸಾವಿರ, 35 ಮಂದಿಗೆ ₹3 ಸಾವಿರ ಹಾಗೂ 44 ಮಂದಿಗೆ ₹2 ಸಾವಿರ ಸಮಾಧಾನಕರ ಬಹುಮಾನ ಲಭ್ಯವಾಗಿದೆ.

ಬಹುಮಾನ ಪಡೆದ ಅದೃಷ್ಟಶಾಲಿಗಳು ಶ್ರೀಸಾಯಿ ಗೋಲ್ಡ್ ಪ್ಯಾಲೇಸ್ ಚಿನ್ನಾಭರಣ ಮಳಿಗೆಯಲ್ಲಿ ಬಿಲ್, ಕೂಪನ್ ಮತ್ತು ಗುರುತಿನ ಚೀಟಿಯನ್ನು ಸಲ್ಲಿಸಿ, ತಮ್ಮ ಬಹುಮಾನವನ್ನು ಪಡೆಯಬಹುದು ಎಂದು ಸಂಸ್ಥೆಯ ಮಾಲೀಕ ಟಿ.ಎ.ಶರವಣ ತಿಳಿಸಿದ್ದಾರೆ.

ಚಿತ್ರ ದಿಗ್ಗಜರನ್ನು ಒಂದಾಗಿಸಿದ 'ವಿಕ್ರಾಂತ್ ರೋಣ'

ಸಿನಿ ಮಾತು

'ನನ್ನ ಮಗನ ಜಾಗದಲ್ಲಿ ಇರುವವನಿಗೆ ಭಯ ಹೇಗೆ ಬರಬೇಕು? ಅದೆಲ್ಲಾ ಏನೂ ಇಲ್ಲ. ವಿಕ್ರಾಂತ್ ರೋಣದಲ್ಲಿ ಬರೆದ ಸಂಭಾಷಣೆಯ ಪ್ರಕಾರ ಸುದೀಪ್‌ಗೆ ಭಯ ಅನ್ನುವುದು ಇಲ್ಲವೇ ಇಲ್ಲ. ಖಂಡಿತವಾಗಿಯೂ ಈ ಚಿತ್ರ ಗೆಲ್ಲುತ್ತದೆ...'

– ಹೀಗೆಂದು ಸುದೀಪ್ ಬೆನ್ನು ತಟ್ಟಿ ಆತ್ಮವಿಶ್ವಾಸ ತುಂಬಿದವರು ವಿ. ರವಿಚಂದ್ರ. ಇದು 'ವಿಕ್ರಾಂತ್ ರೋಣ' ಚಿತ್ರದ ಟೀಸರ್ ಬಿಡುಗಡೆ ಸಮಾರಂಭದಲ್ಲಿ ಅವರ ನುಡಿ. ಇನ್ನೂ ವಿಶೇಷವೆಂದರೆ ಹಿರಿಯರಿಂದ ಹಿಡಿದು ಇಂದಿನ ಯುವ ತಲೆಮಾರಿನವರೆಗೂ ಎಲ್ಲ ಚಿತ್ರ ನಟ, ನಿರ್ದೇಶಕರು ಹಾಜರಿದ್ದು ವಿಕ್ರಾಂತ್ ರೋಣನಿಗೆ ಶುಭ ಕೋರಿದರು.



ವಿಕ್ರಾಂತ್ ರೋಣ ಸಿನಿಮಾದ ಟೀಸರ್ ಬಿಡುಗಡೆ ಸಮಾರಂಭದಲ್ಲಿ ಚಂದನವನದ ಕಲಾವಿದರ ದಂಡು

ಚಿತ್ರರಂಗದ ಎಲ್ಲ ಪ್ರಮುಖರನ್ನು ಕಂಡು ಖುಷಿಯಾದ ರವಿಚಂದ್ರ, 'ಈ ಒಗ್ಗಟ್ಟು, ಒಳ್ಳೆಯ ವಾತಾವರಣ ಸೃಷ್ಟಿಸಿದೆ. ಅತ್ಯುತ್ತಮ ಚಿತ್ರಗಳನ್ನು ಕೊಡಬೇಕು ಎಂಬ ಕನಸು ಕಾಣುವ ಬಹಳಷ್ಟು ಜನ ನಮ್ಮೊಡನೆ ಇದ್ದಾರೆ. ಎಲ್ಲರೂ ಬೆಳೆಯಬೇಕು. ಚಿತ್ರಮಂದಿರಗಳಿಗೆ ಈಗ ಜನ ಬರುತ್ತಿದ್ದಾರೆ. ಚಿತ್ರಮಂದಿರಗಳೇ ಸಾಲುತ್ತಿಲ್ಲ' ಎಂದರು.

ಸಮಾರಂಭದಲ್ಲಿ ಗಡಂಗ್ ರಕ್ಕಮ್ಮನ್ ಹುಕ್ ಸ್ಟೆಪ್ ಹಾಡಿಗೆ ಎಲ್ಲ ದಿಗ್ಗಜರೂ ಹೆಜ್ಜೆ ಹಾಕಿದರು. ಗಡಂಗ್ ರಕ್ಕಮ್ಮನಾಗಿ ಕಾಣಿಸಿಕೊಂಡಿದ್ದ ಜಾಕ್ವೆಲಿನ್ ಅವರೂ ಹಾಜರಿದ್ದು ಹೆಜ್ಜೆ ಹಾಕಿದ್ದು ಇನ್ನೊಂದು ಆಕರ್ಷಣೆ.

3 ಡಿಯಲ್ಲಿ ಮೂಡಿಬಂದ ಟೀಸರ್ ಹೊಸ ವಿಶ್ವಾಸ ಮೂಡಿಸಿದೆ. ಸಂಭಾಷಣೆ, ಕಥೆಯ ಗಾಂಭೀರ್ಯ, ಫ್ಯಾಂಟಸಿ, ಸಸ್ಪೆನ್ಸ್ ಮತ್ತು ಲಘು ಸನ್ನಿವೇಶಗಳನ್ನೂ ಅಚ್ಚುಕಟ್ಟಾಗಿ ಕಟ್ಟಿಕೊಟ್ಟಿದೆ. ಇಲ್ಲಿ ಕಿಚ್ಚ ಸುದೀಪ್ ಪೊಲೀಸ್ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ಸುಮಾರು ಮೂರು ವರ್ಷಗಳ ಪರಿಶ್ರಮ, ಕೋವಿಡ್ ಕಾಲದಲ್ಲಿಯೂ ಚಿತ್ರೀಕರಣ ನಡೆಸಿದ್ದು, ತಂಡದ, ತಂತ್ರಜ್ಞರ ಪರಿಶ್ರಮವನ್ನು ಸುದೀಪ್ ಮತ್ತು ನಿರ್ಮಾಪಕ ಜಾಕ್ ಮಂಜು, ನಿರ್ದೇಶಕ ಅನೂಪ್ ಭಂಡಾರಿ ಕೊಂಡಾಡಿದರು.

